# ಸಮಾಜ ವಿಜ್ಞಾನ ಅಭ್ಯಾಸ ಕೈಪಿಡಿ

## 10ನೇ ತರಗತಿ



ಸಮಾಜವಿಜ್ಞಾನ

ವ್ಯವಹಾರ ಅಧ್ಯಯನ

ಅರ್ಥಶಾಸ್ತ್ರ

ಭೂಗೋಳಶಾಸ್ತ್ರ

ಸಮಾಜಶಾಸ್ತ್ರ

ರಾಜ್ಯಶಾಸ್ತ್ರ

ಇತಿಹಾಸ



Study Key for Success

ರಚನೆ:ಧನ್ಯಕುಮಾರ ಎನ್. ಸಹಶಿಕ್ಷಕರು
ಸರ್ಕಾರಿ ಪ್ರೌಢಶಾಲೆ ಚಿಕ್ಕಜಾಲ
ಬೆಂಗಳೂರು ಉತ್ತರ ವಲಯ -04

**ಇತಿಹಾಸ**

**ಅಧ್ಯಾಯ-1**

**ಭಾರತಕ್ಕೆ ಯುರೋಪಿಯನ್ನರ ಆಗಮನ**

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

1.1453 ರಲ್ಲಿ ಆಟೋಮನ್ ಟರ್ಕರು ಯಾವ ನಗರವನ್ನು ವಶಪಡಿಸಿ ಕೊಂಡರು? – ಕಾನ್‌ಸ್ಟಾಂಟಿನೋಪಲ್ ನಗರ

2.ಭಾರತ ಹಾಗೂ ಯುರೋಪ್ ನಡುವೆ ಹೊಸ ಜಲಮಾರ್ಗವನ್ನುಯಾರು ಕಂಡುಹಿಡಿದವರು ? –ವಾಸ್ಕೋಡಗಾಮ

3.ಭಾರತದಲ್ಲಿದ್ದ ಫ್ರೆಂಚರ ರಾಜಧಾನಿ ಯಾವುದು? –ಪಾಂಡಿಚೇರಿ / ಪುದುಚೇರಿ

4.ರಾಬರ್ಟ್‌ಕ್ಲೈವನು 1757 ರಲ್ಲಿ ಸಿರಾಜುದ್ದೌಲನ ಮೇಲೆ ಸಾರಿದ ಕದನ ಯಾವುದು? – ಪ್ಲಾಸಿ ಕದನ

5.ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ 'ದಿವಾನಿ'ಹಕ್ಕನ್ನು ನೀಡಿದವರು ಯಾರು? – ಎರಡನೇ ಷಾ ಆಲಂ

6.ಬಂಗಾಳದಲ್ಲಿ 'ದ್ವಿಪ್ರಭುತ್ವವನ್ನು ಜಾರಿಗೆ ತಂದವರು ಯಾರು? – ರಾಬರ್ಟ್‌ಕ್ಲೈವನು

7.ಪೂರ್ವ ರೋಮನ್ ಸಾಮ್ರಾಜ್ಯದ(ಬೈಜಾಂಟಿಯಂ) ರಾಜಧಾನಿ ಯಾವುದು? – ಕಾನ್‌ಸ್ಟಾಂಟಿನೋಪಲ್

8.ಭಾರತದ ಯಾವ ಉತ್ಪನ್ನಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು? –ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು,ಜೀರಿಗೆ,ದಾಲ್ಚಿನ್ನಿ,ಏಲಕ್ಕಿ ಮತ್ತು ಶುಂಠಿ ಮುಂತಾದ ಉತ್ಪನ್ನಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು.

10.ಯುರೋಪಿನ ವ್ಯಾಪಾರದ ಹೆಬ್ಬಾಗಿಲೆಂದು ಪರಿಗಣಿಸಲ್ಪಟ್ಟ ನಗರ ಯಾವುದು? – ಕಾನ್‌ಸ್ಟಾಂಟಿನೋಪಲ್ ನಗರ

11.ಏಷ್ಯಾ ದೇಶಗಳ ವ್ಯಾಪಾರದ ಮೇಲೆ ಯಾರು ಏಕಸ್ವಾಮ್ಯವನ್ನು ಸಾಧಿಸಿದ್ದರು? – ಅರಬ್ಬರು

12.ಯುರೋಪಿನ ದೇಶಗಳ ವ್ಯಾಪಾರದ ಮೇಲೆ ಏಕಸ್ವಾಮ್ಯವನ್ನು ಸಾಧಿಸಿದ್ದವರು ಯಾರು? – ಇಟಲಿಯ ವರ್ತಕರು

13.ಹೊಸ ಸಮುದ್ರ ಮಾರ್ಗಗಳನ್ನು ಹುಡುಕಲು ಸಾಹಸಿ ನಾವಿಕರಿಗೆ ಪ್ರೋತ್ಸಾಹಿಸಿದ ದೇಶಗಳು ಯಾವುವು? – ಸ್ಪೇನ್ ಮತ್ತು ಪೋರ್ಚುಗಲ್

14.ವಾಸ್ಕೋಡಾಗಾಮ ಯಾವ ದೇಶದ ನಾವಿಕ? – ಪೋರ್ಚುಗಲ್ ದೇಶ

15. ವಾಸ್ಕೋಡಾಗಾಮನು ಯಾವ ನಗರಕ್ಕೆ ಬಂದು ತಲುಪಿದನು? – ವಾಸ್ಕೋಡಾಗಾಮನು ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪದ ಕಾಪ್ಪಡ್ ಎಂಬಲ್ಲಿಗೆ ಬಂದು ತಲುಪಿದನು.

16.ವಾಸ್ಕೋಡಾಗಾಮನು ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದಿದ್ದು ಯಾವಾಗ? – 1498 ರಲ್ಲಿ

17.ಜಲಮಾರ್ಗದ ಮೂಲಕ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಮೊದಲ ಯುರೋಪಿಯನ್ನರು ಯಾರು ?– ಪೋರ್ಚುಗೀಸರು

18.ಭಾರತವನ್ನು ತೊರೆದ ಕೊನೆಯ ಯುರೋಪಿಯನ್ನರು ಯಾರು? –ಪೋರ್ಚುಗೀಸರು

19.ಭಾರತಕ್ಕೆ ಬಂದ ಪೋರ್ಚುಗೀಸರ ಮೊಟ್ಟ ಮೊದಲ ವೈಸ್‌ರಾಯ್ ಯಾರು? –ಫ್ರಾನ್ಸಿಸ್ಕೋ ಡಿ ಅಲ್ಮೆಡ

20.ನೀಲಿ ನೀರಿನ ನೀತಿಯನ್ನು ಜಾರಿಗೆ ತಂದವರು ಯಾರು? –ಫ್ರಾನ್ಸಿಸ್ಕೋ ಡಿ ಆಲ್ಮೆಡ

21.ಫ್ರಾನ್ಸಿಸ್ಕೋ ಡಿ ಆಲ್ಮೆಡ 'ನೀಲಿ ನೀರಿನ ನೀತಿಯನ್ನು ಏಕೆ ಜಾರಿಗೆ ತಂದನು?

– ಭೂಮಿಯ ಮೇಲಿನ ಅಧಿಪತ್ಯಕ್ಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸಲು ನೀಲಿ ನೀರಿನ ನೀತಿಯನ್ನು ಜಾರಿಗೆ ತಂದನು.

22.ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ ಎಂದು ಪ್ರಸಿದ್ಧವಾದ ವೈಸ್‌ರಾಯ್ ಯಾರು ? – ಆಲ್ಫೋನ್ಸೊ ಆಲ್ಬುಕರ್ಕ್

23.1510 ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡವರು ಯಾರು? – ಆಲ್ಫೋನ್ಸೊ ಆಲ್ಬುಕರ್ಕ್

24.ಭಾರತದಲ್ಲಿ ಡಚ್ಚರ ವ್ಯಾಪಾರ ಕೋಠಿಗಳು ಯಾವುವು? – ಸೂರತ್,ಬ್ರೋಚ್,ಕ್ಯಾಂಬೆ,ಕೊಚ್ಚಿನ್ ನಾಗಪಟ್ಟಣ,ಮಚಲೀಪಟ್ಟಣ ಚಿನ್ಸೂರು

25.ಡಚ್ಚರು ಸಾಂಬಾರು ದ್ವೀಪಗಳಿಗೆ ಮಾತ್ರ ಸೀಮಿತಗೊಳ್ಳಲು ಕಾರಣವೇನು?

–ಭಾರತಕ್ಕೆ ಬಂದ ಬ್ರಿಟಿಷರು ಮತ್ತು ಫ್ರೆಂಚರ ಪೈಪೋಟಿಯನ್ನು ಹೆದರಿಸಲಾರದೆ ಡಚ್ಚರು ಸಾಂಬಾರು ದ್ವೀಪಗಳಿಗೆ ಮಾತ್ರ ಸೀಮಿತಗೊಂಡರು

26.ಸಾಂಬಾರು ಪ್ರಸಿದ್ಧ ದ್ವೀಪಗಳು ಯಾವುವು?

– ಇಂಡೋನೇಷಿಯಾ ,ಜಾವ ಮತ್ತು ಸುಮಾತ್ರ

27.ಜಹಾಂಗೀರನ ಆಸ್ಥಾನಕ್ಕೆ ಬಂದ ಇಂಗ್ಲೆಂಡಿನ ರಾಜ ಒಂದನೇ ಜೇಮ್ಸ್‌ನ ರಾಯಭಾರಿ ಯಾರು? – ಸರ್.ಥಾಮಸ್ ರೋ

28.ಡೂಪ್ಲೆಯ ಕೋರಿಕೆಯ ಮೇರೆಗೆ ಮಾರಿಷಸ್‌ನಿಂದ ಬಂದ ಫ್ರೆಂಚ್ ಸೇನಾ ಮುಖ್ಯಸ್ಥ ಯಾರು? – ಲಾಬೋರ್ಡಿನಾ

29.ಯುರೋಪಿನಲ್ಲಿ ಮೊದಲ ಕರ್ನಾಟಿಕ್ ಯುದ್ಧದ ಸಂದರ್ಭದಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ನಡುವೆ ಆದ ಒಪ್ಪಂದ ಯಾವುದು?

– ಏಕ್ಸ್–ಲಾ–ಚಾಪೆಲ್

30.ಮೂರನೇ ಕರ್ನಾಟಿಕ್ ಯುದ್ಧದಲ್ಲಿ ಫ್ರೆಂಚರನ್ನು ವಾಂಡಿವಾಷ್

ಕದನದಲ್ಲಿ ಸೋಲಿಸಿದ ಬ್ರಿಟಿಷ್ ಸೇನಾಧಿಕಾರಿ ಯಾರು? –ಸರ್.ಐರ್‌ಕೂಟ್

31.ಬಕ್ಸಾರ್ ಕದನದಲ್ಲಿ ಬ್ರಿಟಿಷ್ ಸೇನೆಯ ನೇತೃತ್ವ ವಹಿಸಿದ್ದವರು ಯಾರು?
– ಹೆಕ್ಟರ್ ಮನ್ರೋ

32.ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದಲ್ಲಿ ಮುಕ್ತ ವ್ಯಾಪಾರ ವನ್ನು ನೆಡಸಲು ದಸ್ತಕ್‌ಗಳನ್ನು ನೀಡಿದವರು ಯಾರು?
– ಮೊಗಲ್ ದೊರೆ ಫಾರೂಕ್ ಶಿಯಾರ್

33.ದಸ್ತಕ್ ಎಂದರೇನು?
– ಮುಕ್ತ ವ್ಯಾಪಾರ ನಡೆಸಲು ಕಂಪನಿಗೆ ನೀಡಿದ್ದ ಪರವಾನಗಿ ಪತ್ರ

34.ಪ್ಲಾಸಿಕದನ ನಡೆದ ವರ್ಷ– 1757

35.ಬಕ್ಸಾರ್ ಕದನ ನಡೆದ ವರ್ಷ –1764

36.ಯನೈಟೆಡ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ(ಡಚ್ಚ್) –1602

37.ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ (ಇಂಗ್ಲೆಂಡಿನಲ್ಲಿ) –1600

38.ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ(ಫ್ರಾನ್ಸ್‌ನಲ್ಲಿ) –1664

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಮಧ್ಯಕಾಲದಲ್ಲಿ ಭಾರತ ಮತ್ತು ಯುರೋಪ್ ನಡುವೆ ವ್ಯಾಪಾರ ಹೇಗೆ ನಡೆಯುತ್ತಿತ್ತು?

- ಪ್ರಾಚೀನ ಕಾಲದಿಂದಲೂ ಭಾರತದ ಸಾಂಭಾರ ಪದಾರ್ಥಗಳಾದ ಮೆಣಸು,ಜೀರಿಗೆ ದಾಲ್ಚಿನ್ನಿ,ಏಲಕ್ಕಿ,ಶುಂಠಿ ಮುಂತಾದ ಉತ್ಪನ್ನಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು.
- ಮಧ್ಯಕಾಲದಲ್ಲಿಯೂ ಯುರೋಪ್,ಭಾರತ ಮತ್ತು ಇತರ ಏಷ್ಯಾದ ದೇಶಗಳ ನಡುವೆ ವ್ಯಾಪಾರ ಮುಂದುವರೆಯಿತು.
- ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ ಸಾಮ್ರಾಜ್ಯದ ರಾಜಧಾನಿ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು.
- ಕಾನ್‌ಸ್ಟಾಂಟಿನೋಪಲ್‌ನಿಂದ ಇಟಲಿ ವರ್ತಕರು ಅವುಗಳನ್ನು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು.

2.ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿರಿ.

- 1453 ರಲ್ಲಿ ಆಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು.
- ಇದರಿಂದಾಗಿ ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗ ಗಳು ಟರ್ಕರ ನಿಯಂತ್ರಣಕ್ಕೆ ಹೋದವು.
- ಹೊಸದಾಗಿ ಸಿಕ್ಕ ಅವಕಾಶದಿಂದ ಟರ್ಕರು ಈ ಮಾರ್ಗದ ವ್ಯಾಪಾರದ ಮೇಲೆ ತೀವ್ರತರದ ತೆರಿಗೆಗಳನ್ನು ವಿಧಿಸತೊಡಗಿದರು. ಪರಿಣಾಮವಾಗಿ ವರ್ತಕರಿಗೆ ಈ ಮಾರ್ಗದ ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ.
- ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಸ್ಪೇನ್, ಪೋರ್ಚುಗಲ್ ಮೊದಲಾದ ಯುರೋಪಿನ ದೇಶಗಳ ರಾಜರು ಹೊಸ ಸಮುದ್ರ ಮಾರ್ಗಗಳನ್ನು ಹುಡುಕಲು ಸಾಹಸಿ ನಾವಿಕರನ್ನು ಪ್ರೋತ್ಸಾಹಿಸ– ಲಾರಂಭಿಸಿದರು.
- ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ,ಆಸ್ಟ್ರೋಲೋಬ್, ಸಿಡಿಮದ್ದು ಮೊದಲಾದವುಗಳು .

3.ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರುಗಳನ್ನು ಪಟ್ಟಿಮಾಡಿ.

1. ಪೋರ್ಚುಗೀಸರು 2.ಡಚ್ಚರು 3.ಇಂಗ್ಲಿಷರು 4. ಫ್ರೆಂಚರು

4.ಎರಡನೇ ಕಾರ್ನಾಟಿಕ್ ಯುದ್ಧವನ್ನು ವಿವರಿಸಿ.

- ಫ್ರೆಂಚರು ಅಸಫ್‌ಜಾನ ಮಗನಾದ ಸಲಾಬತ್‌ಜಂಗನನ್ನು ಹೈದರಾಬಾದಿನ ನಿಜಾಮನನ್ನಾಗಿ ಮಾಡಿದರು. ಅವನ ರಕ್ಷಣೆಗೆ ತಮ್ಮ ಸೈನ್ಯ ಸಹಿತ ಬುಸ್ಸಿ ಎಂಬ ಅಧಿಕಾರಿಯನ್ನು ನೇಮಿಸಿದ್ದರು.
- ಮತ್ತೊಂದು ಕಡೆ ಫ್ರೆಂಚರ ಬೆಂಬಲದಿಂದ ಚಂದಾಸಾಹೇಬನು ಕಾರ್ನಾಟಿಕ್‌ನ ನವಾಬನಾಗಿದ್ದನು.
- ಆದರೆ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿ ರಾಬರ್ಟ್‌ಕ್ಲೈವ್ ಕಾರ್ನಾಟಕದ ರಾಜಧಾನಿ ಆರ್ಕಾಟಿನ ಮೇಲೆ ಆಕ್ರಮಣ ಮಾಡಿ ಫ್ರೆಂಚರು ಮತ್ತು ಚಂದಾಸಾಹೇಬನನ್ನು ಸೋಲಿಸಿದನು.ಅಂತಿಮವಾಗಿ ಈ ಯದ್ಧದಲ್ಲಿ ಚಂದಾಸಾಹೇಬನನ್ನು ಬಂಧಿಸಿ ಹತ್ಯೆಮಾಡಲಾಹಿತು.
- ಅವನ ಸ್ಥಾನಕ್ಕೆ ಬ್ರಿಟಿಷರು ಅನ್ವರುದ್ದೀನನ ಮಗನಾದ ಮಹಮ್ಮದ್ ಅಲಿಯನ್ನು ನವಾಬನಾಗಿ ನೇಮಕ ಮಾಡಿದರು.
- ಕೊನೆಗೆ ಎರಡನೇ ಕಾರ್ನಾಟಿಕ್ ಯುದ್ಧವು 'ಪಾಂಡಿಚೇರಿ ಒಪ್ಪಂದ' ದೊಂದಿಗೆ ಮುಕ್ತಾಯವಾಯಿತು.

5.ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.

ಪ್ಲಾಸಿ ಕದನಕ್ಕೆ ಕಾರಣಗಳು :

- ಕಂಪನಿಯ ವ್ಯಾಪಾರಕ್ಕಾಗಿ ನೀಡಿದ್ದ ದಸ್ತಕ್‌ಗಳನ್ನು ಬ್ರಿಟಿಷ್ ನೌಕರರು ದುರುಪಯೋಗ ಪಡಿಸಿಕೊಂಡದ್ದು
- ಅನುಮತಿಯಿಲ್ಲದೆ ಕೋಟೆಯ ದುರಸ್ಥಿ
- ಕಪ್ಪುಕೋಣೆ ದುರಂತ

ಪ್ಲಾಸಿ ಕದನದ ಪರಿಣಾಮಗಳು :

- ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ,ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
- ಮೀರ್ ಜಾಫರ್ ಬಂಗಾಳದ ನವಾಬನಾದನು.
- ಕಂಪನಿಯು ಬಂಗಾಳದ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು

ಅನಿರ್ಬಂಧಿತ ಹಕ್ಕನ್ನು ಪಡೆಯಿತು.

- ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಪರಿಹಾರವಾಗಿ ಮೀರ್ ಜಾಫರ್‌ನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿ ಗಳನ್ನು ನೀಡಿದನು.

6.ಬಕ್ಸಾರ್ ಕದನದ(1764) ಪರಿಣಾಮಗಳಾವುವು?

- ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ'ಹಕ್ಕನ್ನು ಎರಡನೇ ಷಾ ಆಲಂ ನೀಡಿದನು.
- ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು.
- ಔದ್‌ನ ನವಾಬನಾದ ಷುಜಾ-ಉದ್-ದೌಲನು ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.
- ಮೀರ್‌ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸ ತೊಡಗಿತು.

7.'ದ್ವಿಪ್ರಭುತ್ವ'ವನ್ನು ಕುರಿತು ಬರೆಯಿರಿ./ದ್ವಿಪ್ರಭುತ್ವವನ್ನು ವಿವರಿಸಿ.

- 1765 ರಲ್ಲಿ ರಾಬರ್ಟ್ ಕ್ಲೈವ್‌ನು ಬಂಗಾಳದಲ್ಲಿ 'ದ್ವಿಪ್ರಭುತ್ವ'ವನ್ನು ಜಾರಿಗೆ ತಂದನು.
- ಈ ಪದ್ಧತಿಯಂತೆ ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು.
- ಆದರೆ ನವಾಬನು ಆಡಳಿತ,ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು.

8.ಕಪ್ಪುಕೋಣೆ ದುರಂತವನ್ನು ವಿವರಿಸಿ.

- ಬ್ರಿಟಿಷರು ಅನುಮತಿ ಪಡೆಯದೆ ಕೊಲ್ಕತ್ತಾ ಕೋಟೆಯನ್ನು ದುರಸ್ಥಿ ಮಾಡಿಸಿದರು ಇದರಿಂದ ಆಕ್ರೋಶಗೊಂಡ ಸಿರಾಜುದ್ದೌಲನು ಪೋರ್ಟ್ ವಿಲಿಯಂ ಕೋಟೆಯನ್ನು ಸುಲಭವಾಗಿ ಗೆದ್ದು ಕೆಲವರನ್ನು ಸೆರೆಹಿಡಿದನು.
- ಸಿರಾಜನು ಆಕ್ರಮಣದಲ್ಲಿ ಸೆರೆಸಿಕ್ಕಿದ 146 ಬ್ರಿಟಿಷರನ್ನು ಚಿಕ್ಕ ಕೊಠಡಿಯೊಂದರಲ್ಲಿ ಬಂಧಿಸಿಟ್ಟನು. ಅವರಲ್ಲಿ 123 ಮಂದಿ ಅಸುನೀಗಿದರು ಇದನ್ನು ಕಪ್ಪು ಕೋಣೆಯ ದುರಂತ ಎನ್ನಲಾಗಿದೆ.

9.ಮೊದಲ ಕಾರ್ನಾಟಿಕ್ ಯುದ್ಧವನ್ನು ವಿವರಿಸಿ.

- ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು ಬ್ರಿಟಿಷರಿಂದ ಮದ್ರಾಸನ್ನು ವಶಪಡಿಸಿಕೊಂಡನು.
- ಅಸಹಾಯಕರಾದ ಬ್ರಿಟಿಷರು ಕಾರ್ನಾಟಿಕ್ ನವಾಬನಾದ ಅನ್ವರುದ್ದೀನನಲ್ಲಿ ಮೊರೆ ಇಟ್ಟರು.
- ಮದ್ರಾಸ್‌ನಿಂದ ಫ್ರೆಂಚರನ್ನು ಹೊರಗಟ್ಟಲು ಅನ್ವರುದ್ದೀನ್ ಕಳುಹಿಸಿಕೊಟ್ಟ ಸೇನೆಯು ಸೋತಿತು.
- ಕೊನೆಗೆ ಲಾಬೋರ್ಡಿನನು ಡೂಪ್ಲೆಗೆ ತಿಳಿಸದೆ ಬ್ರಿಟಿಷರಿಂದ ಹಣಪಡೆದು ಮದ್ರಾಸನ್ನು ಬಿಟ್ಟುಕೊಟ್ಟು ಮಾರಿಷಸ್‌ಗೆ ಹೊರಟುಹೋದನು.
- ಇದರಿಂದ ಕೋಪಗೊಂಡ ಡೂಪ್ಲೆಯು ಮದ್ರಾಸನ್ನು ಮತ್ತೆ ಪಡೆಯಲು ವಿಫಲ ಪ್ರಯತ್ನ ನಡೆಸಿದನು.
- ಅಂತಿಮವಾಗಿ ಈ ಯುದ್ಧವು ಯುರೋಪಿನಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡ್ ನಡುವೆ ಆದ ಏಕ್ಸ್-ಲಾ-ಚಾಪೆಲ್ ಒಪ್ಪಂದದೊಂದಿಗೆ ಮುಕ್ತಾಯವಾಯಿತು.

10.ಬಕ್ಸಾರ್ ಕದನಕ್ಕೆ ಕಾರಣಗಳನ್ನು ತಿಳಿಸಿ.

- ಮೀರ್ ಖಾಸಿಂ ಒಬ್ಬ ಸಮರ್ಥ ಆಡಳಿತಗಾರ.ಈತನು ಆರಂಭದಲ್ಲಿ ಕಂಪನಿಗೆ ನಿಷ್ಠೆಯಿಂದಿದ್ದನು.ಆದರೆ ಶೀಘ್ರವೇ ಮೀರ್ ಖಾಸಿಂ ತನ್ನನ್ನು ಸ್ವತಂತ್ರ ರಾಜನೆಂದು ಭಾವಿಸಿದನು
- ದಸ್ತಕ್‌ನ ದುರ್ಬಳಕೆಯನ್ನು ಪರಿಶೀಲಿಸಿ ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕಮುಕ್ತ ಎಂದು ಘೋಷಿಸಿದನು.ಇದರಿಂದಾಗಿ ಭಾರತೀಯರು ಸುಂಕವಿಲ್ಲದೆ ವ್ಯಾಪಾರ ನಡೆಸುವ ಮೂಲಕ ಬ್ರಿಟಿಷರೊಡನೆ ನೇರ ಸ್ಪರ್ಧಿಗಿಳಿದರು.
- ಇದರಿಂದ ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಒಡೆತ ಬಿದ್ದಿತು.ಇದರಿಂದ ಮೀರ್ ಖಾಸಿಂನನ್ನು ಇಳಿಸಿ ಮತ್ತೆ ಮೀರ್ ಜಾಫರ್‌ನನ್ನು ನವಾಬನಾಗಿ ಮಾಡಿದರು.
- ಬ್ರಿಟಿಷರ ಕುಟಿಲತೆಯನ್ನು ಅರಿತಿದ್ದ ಮೀರ್ ಖಾಸಿಂ ಬ್ರಿಟಿಷರ ವಿರುದ್ಧ ಸಂಘಟನಾತ್ಮಕ ಹೋರಾಟಕ್ಕೆ ಮುಂದಾದನು.
- ಮೊಗಲ್ ದೊರೆ 2 ನೇ ಷಾಆಲಂ ಮತ್ತು ಔದ್‌ನ ನವಾಬ ಷುಜಾಉದ್ದೌಲ ರೊಂದಿಗೆ ಒಪ್ಪಂದ ಮಾಡಿಕೊಂಡನು.

## ಅಧ್ಯಾಯ-2
## ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

**I.ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1.ಬ್ರಿಟಿಷರು ಪ್ಲಾಸಿ ಮತ್ತು ಬಕ್ಸಾರ್ ಕದನಗಳ ಮೂಲಕ ಯಾವ ಪ್ರಾಂತ್ಯದ ಮೇಲೆ ಸಂಪೂರ್ಣ ರಾಜಕೀಯ ನಿಯಂತ್ರಣ ಸಾಧಿಸಿದರು?

- ಬಂಗಾಳ ಪ್ರಾಂತ್ಯ

2.ಮೊದಲ ಆಂಗ್ಲೋ-ಮರಾಠ ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? - ಸಾಲ್‌ಬಾಯ್ ಒಪ್ಪಂದ

3.ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು ಯಾರು?

– ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು ಲಾರ್ಡ್ ವೆಲ್ಲಸ್ಲಿ

4.ಸಹಾಯಕ ಸೈನ್ಯ ಪದ್ಧತಿಯನ್ನು ವೆಲ್ಲೆಸ್ಲಿಯು ಯಾವಾಗ ಜಾರಿಗೆ ತಂದನು

– 1798 ರಲ್ಲಿ ಜಾರಿಗೆ ತಂದನು.

5.ಲಾರ್ಡ್ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಏಕೆ ಜಾರಿಗೆ ತಂದನು?

– ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಸಲುವಾಗಿ ವೆಲ್ಲಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದನು.

6.ಸಹಾಯಕ ಸೈನ್ಯ ಪದ್ಧತಿ ಎಂದರೇನು?

– ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದವಾಗಿದೆ.

7.ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ರಾಜ್ಯ ಯಾವುದು?

– ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ರಾಜ್ಯ ಹೈದರಾಬಾದ್ ಸಂಸ್ಥಾನ.

8.ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟ ರಾಜ್ಯಗಳು ಯಾವುವು?

– ಹೈದರಾಬಾದ್ ಸಂಸ್ತಾನ,ಮೈಸೂರು,ಔದ್, ತಂಜಾವೂರು, ಮರಾಠ. ಪೂನಾ, ಆರ್ಕಾಟ್,ಬಿರಾರ್,ಮತ್ತು ಗ್ವಾಲಿಯರ್

9.ಬೆಸ್ಸಿನ್ ಒಪ್ಪಂದ ಯಾರ ನಡುವೆ ನಡೆಯಿತು?

– ಲಾರ್ಡ್ ವೆಲ್ಲೆಸ್ಲಿ ಮತ್ತು ಮರಾಠ ಪೇಶ್ವೆ ಎರಡನೇ ಬಾಜಿರಾವ್ ನಡುವೆ.

10.ಲಾಹೋರ್ ಮತ್ತು ಮುಲ್ತಾನ್‌ಗಳಲ್ಲಿ ಬ್ರಿಟಿಷರ ವಿರುದ್ಧ ಪ್ರತಿಭಟನೆಗಳಲ್ಲಿ ನೇತೃತ್ವವನ್ನು ವಹಿಸಿದ್ದವರು ಯಾರು?

–ಲಾಹೋರ್ ಮತ್ತು ಮುಲ್ತಾನ್‌ಗಳಲ್ಲಿ ಬ್ರಿಟಿಷರ ವಿರುದ್ಧ ಪ್ರತಿಭಟನೆಗಳಲ್ಲಿ ನೇತೃತ್ವವನ್ನು ವಹಿಸಿದ್ದವರು ಚಟ್ಟಾರ್ ಸಿಂಗ್ ಅಟ್ಟಾರಿವಾಲ ಮತ್ತು ಮೂಲರಾಜ್.

11.ಮರಾಠರ ಪೇಶ್ವೆ ಪದವಿಯನ್ನು ರದ್ದುಗೊಳಿಸಿದವರು ಯಾರು?

– ಬ್ರಿಟಿಷರು.

12. ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದವರುಯಾರು?

–ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದವರು ಲಾರ್ಡ್ ಡಾಲ್‌ಹೌಸಿ

13.ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಜಾರಿಗೆ ತಂದವರು ಯಾರು?

– ಲಾರ್ಡ್ ಡಾಲ್ ಹೌಸಿ

14.ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಯಾವಾಗ ಜಾರಿಗೆ ತರಲಾಯಿತು? – ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು 1848 ರಲ್ಲಿ ಜಾರಿಗೆ ತರಲಾಯಿತು.

15.ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಒಳಪಟ್ಟ ರಾಜ್ಯಗಳು ಯಾವುವು?

– ಸತಾರ,ಜೈಪುರ,ಸಂಬಲ್‌ಪುರ್,ಉದಯಪುರ್,ಝಾನ್ಸಿ ನಾಗಪುರ .

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಮೊದಲನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣಗಳನ್ನು ವಿವರಿಸಿ.

- ಬಕ್ಸಾರ್ ಕದನದಲ್ಲಿ ಸೋತು ಬ್ರಿಟಿಷರ ಆಶ್ರಯದಲ್ಲಿದ್ದ ಮೊಗಲ್ ಚಕ್ರವರ್ತಿ ಎರಡನೇ ಷಾ ಆಲಂನನ್ನು ಮರಾಠರು ಕರೆತಂದು ಮತ್ತೆ ದೆಹಲಿಯ ಸಿಂಹಾಸನದಲ್ಲಿ ಕೂರಿಸಿದರು.
- ಚಕ್ರವರ್ತಿಯು ಮೊದಲು ಬ್ರಿಟಿಷರಿಗೆ ನೀಡಿದ್ದ ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟನು.
- ಇದರಿಂದ ಮರಾಠರು ಮತ್ತು ಬ್ರಿಟಿಷರ ನಡುವೆ ವೈರತ್ವವು ಬೆಳೆಯಿತು.
- ಪೇಶ್ವೆ ಮಾದವರಾವ್ ಮರಣ ನಂತರ ಪೇಶ್ವೆಯ ಸ್ಥಾನಕ್ಕೆ ಅವನ ತಮ್ಮ ನಾರಾಯಣರಾಯನು ಬಂದನಾದರೂ ಅವನ ಚಿಕ್ಕಪ್ಪ ರಘೋಬನು ಕೊಲೆಮಾಡಿದನು.ಇದರಿಂದ ಪೇಶ್ವೆಯ ಸ್ಥಾನಕ್ಕೆ ಕಲಹ ಏರ್ಪಟ್ಟಿತು.
- ನಾನಾ ಫಡ್ನವೀಸ್ ನೇತೃತ್ವದಲ್ಲಿ ಪೇಶ್ವೆ ಸ್ಥಾನಾಕಾಂಕ್ಷಿಯಾದ ರಘೋಬನ ಬದಲು ನಾರಾಯಣರಾಯನ ಮಗ ಎರಡನೇ ಮಾಧವರಾವ್‌ಗೆ ಮರಾಠ ಒಕ್ಕೂಟವು ಪಟ್ಟಕಟ್ಟಿತು.
- ಮರಾಠ ಮನೆತನಗಳಿಂದ ನಿರೀಕ್ಷಿತ ಬೆಂಬಲ ಸಿಗದ ರಘೋಬನು ಬ್ರಿಟಿಷರ ಬೆಂಬಲ ಕೋರಿದನು.
- ಬ್ರಿಟಿಷರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಯೋಚಿಸಿದರು.
- ಬ್ರಿಟಿಷರು ಮತ್ತು ಮರಾಠ ಒಕ್ಕೂಟಗಳ ನಡುವೆ ಯುದ್ಧ ಸಂಭವಿಸಿತು.

2.ಲಾರ್ಡ್ ವೆಲ್ಲೆಸ್ಲಿಯು ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಯನ್ನು ಸಾಧಿಸಲು ಅನುಸರಿಸಿದ ವಿಧಾನಗಳನ್ನು ತಿಳಿಸಿ.

- ಸಹಾಯಕ ಸೈನ್ಯಪದ್ಧತಿ
- ಹೊಸ ರಾಜ್ಯಗಳ ಮೇಲೆ ಯುದ್ಧಗಳು
- ಈಗಾಗಲೇ ಕಂಪನಿಯ ಅಧೀನಕ್ಕೆ ಒಳಪಟ್ಟಿರುವ ರಾಜ್ಯಗಳನ್ನು ನೇರ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವುದು

3.ಸಹಾಯಕ ಸೈನ್ಯಪದ್ಧತಿಯ ನಿಬಂಧನೆಗಳಾವುವು? ವಿವರಿಸಿ. ಅಥವಾ ಸಹಾಯಕ ಸೈನ್ಯ ಪದ್ಧತಿಯು ಭಾರತೀಯ ಸಂಸ್ಥಾನಗಳನ್ನು ಹೇಗೆ ನಿಯಂತ್ರಿಸಿತು?

- ಸಹಾಯಕ ಸೈನ್ಯ ಪದ್ಧತಿಗೆ ಒಳಗಾದ ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
- ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು.ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು

ಬಿಟ್ಟುಕೊಡಬೇಕು.

- ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
- ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.
- ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.
- ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

4.ಎರಡನೇ ಆಂಗ್ಲೋ–ಮರಾಠ ಯುದ್ಧವನ್ನು ವಿವರಿಸಿ.

- ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ಈ ಯುದ್ಧಕ್ಕೆ ಕಾರಣವಾಯಿತು.
- ಹೋಳ್ಕರ್ ಮನೆತನದ ಯಶವಂತರಾವ್ ಒಂದು ಕಡೆಯಾದರೆ ಸಿಂಧಿಯಾ ಮನೆತನದ ದೌಲತ್ ರಾವ್ ಹಾಗೂ ಪೇಶ್ವೆ ಎರಡನೇ ಬಾಜಿರಾವ್ ಇನ್ನೊಂದು ಕಡೆಗಿದ್ದರು.
- ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿದನು
- ಪೇಶ್ವೆಯು ಬ್ರಿಟಿಷರ ಸಹಾಯ ಯಾಚಿಸಿದರು.ವೆಲ್ಲೆಸ್ಲಿಗೆ ಮರಾಠರ ಆಂತರಿಕ ವಿಚಾರದಲ್ಲಿ ಪ್ರವೇಶಿಸಲು ಅವಕಾಶ ಸಿಕ್ಕಿತು.
- ಪೇಶ್ವೆಯು ಬೆಸ್ಸಿನ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು.
- ಪೇಶ್ವೆ ಸಹಾಯಕ ಸೈನ್ಯಪದ್ಧತಿಯನ್ನು ಒಪ್ಪಿದ್ದನ್ನು ವಿರೋಧಿಸಿ ಹೋಳ್ಕರ್, ಭೋಂಸ್ಲೆ,ಸಿಂಧಿಯಾ ಮೊದಲಾದ ಮರಾಠ ಮನೆತನಗಳು ಒಗ್ಗೂಡಿದವು.
- ವೆಲ್ಲೆಸ್ಲಿಯು ಈ ಮನೆತನಗಳ ಸೇನೆಯನ್ನು ಅನೇಕ ಯುದ್ಧಗಳಲ್ಲಿ
- ಮಣಿಸಿದನು.

5.ಮೂರನೇ ಆಂಗ್ಲೋ–ಮರಾಠ ಯುದ್ಧವನ್ನು ವಿವರಿಸಿ.

- ಮರಾಠ ಮನೆತನಗಳು ತಮ್ಮ ಘನತೆ ಮತ್ತು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ನಡೆಸಿದವು.
- ಪೇಶ್ವೆ ಕೂಡ ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳ್ಳಲು ಹವಣಿಸುತ್ತಿದ್ದನು.
- 1817 ರಲ್ಲಿ ಪೇಶ್ವೆಯು ಪೂನಾದಲ್ಲಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿ ಸುಟ್ಟನು.
- ನಾಗಪುರದ ಅಪ್ಪಾಸಾಹೇಬ ಮತ್ತು ಮಲ್ಹಾರರಾವ್ ಹೋಳ್ಕರ್ ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು
- ಅಂತಿಮವಾಗಿ ಪೇಶ್ವೆ ಎರಡನೇ ಬಾಜಿರಾಯನು ಬ್ರಿಟಿಷರ ವಿರುದ್ಧ 1818 ರಲ್ಲಿ ಕೋರೇಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು.
- ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ ಬಾಜಿರಾಯನಿಗೆ ವಿಶ್ರಾಂತಿ ವೇತನ ನೀಡಿದರು.

6.ಬ್ರಿಟಿಷರ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ಹೇಗೆ ಸಹಕಾರಿಯಾಯಿತು?

1.ಡಾಲ್ ಹೌಸಿಯು ತನ್ನ ವಿಸ್ತರಣಾ ನೀತಿಯನ್ನು ದತ್ತು ಮಕ್ಕಳಿಗೆ ಹಕ್ಕಿಲ್ಲಿ ಎಂಬ ನೀತಿಯ ಮೂಲಕ ಸಾಧಿಸಿದನು. 2. ಈ ನೀತಿಯ ಪ್ರಕಾರ ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದು ಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ 3.ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿ ಕೊಳ್ಳಲಾಗುತ್ತಿತ್ತು. 4.ಸತಾರ, ಝಾನ್ಸಿ, ಜೈಪುರ, ಸಂಬಲ್‌ಪುರ್, ಉದಯಪುರ, ನಾಗಪುರ ಮೊದಲಾದವು ಈ ನೀತಿಯಿಂದ ಬ್ರಿಟಿಷರ ವಶವಾದವು.

## ಅಧ್ಯಾಯ–3
## ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

**I.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1.ದಿವಾನಿ ಅದಾಲತ್ ಎಂಬ ನಾಗರಿಕ ನ್ಯಾಯಾಲಯವನ್ನು ಸ್ಥಾಪಿಸಿದವರು ಯಾರು? – ವಾರನ್ ಹೇಸ್ಟಿಂಗ್ಸ್

2.ಸೂಪರಿಡೆಂಟೆಂಟ್ ಆಫ್ ಪೊಲೀಸ್ ಹುದ್ದೆಯನ್ನು ಸೃಷ್ಟಿಸಿದವರು ಯಾರು?– ಲಾರ್ಡ್ ಕಾರ್ನ್‌ವಾಲೀಸ್

3.ಖಾಯಂ ಜಮೀನ್ದಾರಿ ಪದ್ಧತಿಯನ್ನು ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಯಾವಾಗ ಜಾರಿಗೆ ಬಂದಿತು? – 1793 ರಲ್ಲಿ.

4.ಅಲೆಕ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ಧತಿ ಯಾವುದು? – ರೈತವಾರಿ ಪದ್ಧತಿ

5.ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟಿಷ್ ಅಧಿಕಾರಿ ಯಾರು? – ವಾರನ್ ಹೇಸ್ಟಿಂಗ್ಸ್

6.ರೆಗ್ಯುಲೇಟಿಂಗ್ ಕಾಯ್ದೆ ಯಾವಾಗ ಜಾರಿಗೆ ಬಂದಿತು? – 1773 ರಲ್ಲಿ

7.ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದವರು ಯಾರು? – ಲಾರ್ಡ್ ಕಾರ್ನ್‌ವಾಲೀಸ್

8.ದಿವಾನಿ ಅದಾಲತ್ ಎಂದರೇನು? – ನಾಗರಿಕ ನ್ಯಾಯಾಲಯ

9.ಫೌಜದಾರಿ ಅದಾಲತ್ ಎಂದರೇನು? – ಅಪರಾಧ ನ್ಯಾಯಾಲಯ

10.ಮೊದಲು/ಪ್ರಥಮತಃ ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದವರು ಯಾರು? – ಲಾರ್ಡ್ ಕಾರ್ನ್‌ವಾಲೀಸ್

11.ಮಹಲ್ವಾರಿ ಪದ್ಧತಿಯನ್ನು ಜಾರಿಗೆ ತಂದವರು ಯಾರು?

– ಆರ್.ಎಂ.ಬರ್ಡ್ ಮತ್ತು ಜೇಮ್ಸ್ ಥಾಮ್ಸನ್

12.ಮಹಲ್ ಎಂದರೇನು? – ತಾಲ್ಲೂಕು ಎಂದು ಅರ್ಥ.

13.ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟ್ ಸ್ಥಾಪನೆಗೆ ಅವಕಾಶ ಕಲ್ಪಿಸಿದ ಶಾಸನ ಯಾವುದು? – 1773 ರ ರೆಗ್ಯುಲೇಟಿಂಗ್ ಶಾಸನ

14.ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಗೆ ಅವಕಾಶ ಕೊಟ್ಟ ಶಾಸನ ಯಾವುದು? – 1909 ರ ಭಾರತ ಪರಿಷತ್ ಕಾಯ್ದೆ/ ಮಿಂಟೋ ಮಾರ್ಲೆ ಸುಧಾರಣಾ ಕಾಯ್ದೆ

15.ಭಾರತದಲ್ಲಿ ಫೆಡರಲ್ ಕೋರ್ಟ್ ಸ್ಥಾಪನೆಗೆ ಅವಕಾಶ ನೀಡಿದ ಶಾಸನ ಯಾವುದು? – 1935 ರ ಭಾರತ ಸರ್ಕಾರದ ಕಾಯ್ದೆ

16.ಭಾರತದ ವೈಸರಾಯ್ ಆಗಿ ನೇಮಕಗೊಂಡ ಮೊದಲಿಗರು ಯಾರು? – ಲಾರ್ಡ್ ಕ್ಯಾನಿಂಗ್

17.ಬ್ರಿಟಿಷರ ಭೂ ಕಂದಾಯ ನೀತಿಗಳಿಂದ ಭಾರತದ ರೈತರು ಸಾಲದಲ್ಲೇ ಹುಟ್ಟಿ,ಸಾಲದಲ್ಲೇ ಬದುಕಿ,ಸಾಲದಲ್ಲೇ ಸತ್ತರು ಎಂದು ಹೇಳಿದವರು ಯಾರು? – ಚಾರ್ಲ್ಸ್ ಮೆಟಕಾಫ್

18.ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ಕಲ್ಪಿಸಿದ ಶಾಸನ ಯಾವುದು? – 1935 ರ ಭಾರತ ಸರ್ಕಾರದ ಕಾಯ್ದೆ

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಈಸ್ಟ್ ಇಂಡಿಯಾ ಕಂಪನಿ ಮೂಲಕ ದೇಶದಲ್ಲಿ ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿಶ್ಲೇಷಿಸಿ.

- ವಾರನ್ ಹೇಸ್ಟಿಂಗ್ಸ್ ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು.
- ಅವುಗಳೆಂದರೆ, ದಿವಾನಿ ಅದಾಲತ್ ಎಂಬ ನಾಗರೀಕ ನ್ಯಾಯಾಲಯಗಳು ಮತ್ತು ಫೌಜದಾರಿ ಅದಾಲತ್ ಎಂಬ ಅಪರಾಧ ನ್ಯಾಯಾಲಯಗಳು.
- ನಾಗರೀಕ ನ್ಯಾಯದಾನದ ಸಂದರ್ಭದಲ್ಲಿ ಹಿಂದೂಗಳಿಗೆ ಹಿಂದೂ ಶಾಸ್ತ್ರ ಗ್ರಂಥಗಳ ಪ್ರಕಾರ ಮತ್ತು ಮುಸ್ಲಿಮರಿಗೆ ಷರಿಯತ್ ಕಾನೂನುಗಳ ಪ್ರಕಾರ ನ್ಯಾಯದಾನ ನೀಡಲಾಗುತ್ತಿತ್ತು.
- ಅಪರಾಧ ಪ್ರಕರಣಗಳಿಗೆ ಬಂದಾಗ ಎಲ್ಲರಿಗೂ ಇಸ್ಲಾಂ ಕಾನೂನುಗಳ ಅನುಸಾರ ವಿಚಾರಣೆ ನಡೆಸಲಾಗುತ್ತಿತ್ತು.
- ಕ್ರಮೇಣ ಬ್ರಿಟಿಷ್ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಅಪರಾಧ ಕಾನೂನುಗಳಲ್ಲಿ ಬದಲಾವಣೆ ತರಲಾಯಿತು.
- ನಾಗರೀಕ ನ್ಯಾಯಾಲಯಗಳು ಯುರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

  ಅಪರಾಧನ್ಯಾಯಾಲಯಗಳು ಕಾಜಿಗಳ ಅಧೀನದಲ್ಲಿದ್ದರೂ ಯುರೋಪಿಯನ್ನರ ಮೇಲ್ವಿಚಾರಣೆ ಯಲ್ಲಿಯೇ ಕಾರ್ಯನಿರ್ವಹಿಸಬೇಕಿತ್ತು.

2.ಬ್ರಿಟಿಷ್‌ರ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು?

- ಲಾರ್ಡ್ ಕಾರ್ನ್‌ವಾಲೀಸನು ಮೊದಲು ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು. ಇವನು 'ಸೂಪರಿಡೆಂಟೆಂಟ್ ಆಫ್ ಪೊಲೀಸ್' ಎನ್ನುವ ಹುದ್ದೆಯನ್ನು ಸೃಷ್ಟಿಸಿದನು.
- ಪ್ರತಿ ಜಿಲ್ಲೆಗಳನ್ನು ಠಾಣೆಗಳನ್ನಾಗಿ ವಿಭಜಿಸಿ ಪ್ರತಿ ಠಾಣೆಯನ್ನು 'ಕೊತ್ವಾಲ'ರ ಅಧೀನದಲ್ಲೂ, ಹಳ್ಳಿಗಳು ಚೌಕಿದಾರರ ಅಧೀನದಲ್ಲೂ ಇರುವಂತೆ ಮಾಡಿದನು.
- ಕೊತ್ವಾಲರು ಹಳ್ಳಿಗಳ ಮಟ್ಟದಲ್ಲಿ ಕಳ್ಳತನ, ಅಪರಾಧಗಳು,ದರೋಡೆಗಳ ನಿಯಂತ್ರಣದ ಜವಾಬ್ದಾರಿಗಳನ್ನು ಹೊತ್ತಿದ್ದರು.
- 1781 ರಲ್ಲಿ ಬ್ರಿಟಿಷ್ ಮ್ಯಾಜಿಸ್ಟ್ರೇಟ್‌ಗಳನ್ನು ನೇಮಕ ಮಾಡುವ ಪದ್ಧತಿ ಜಾರಿಗೊಂಡಿತು.ಪೊಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್‌ಗಳ ಅಧೀನಕ್ಕೆ ಒಳಪಟ್ಟರು.
- 1902 ರ ಪೊಲೀಸ್ ಕಮಿಷನ್ ಕಾಯ್ದೆಯು ವಿದ್ಯಾರ್ಹತೆಯನ್ನು ಪಡೆದವರನ್ನು ಅಧಿಕಾರಿ ಹುದ್ದೆಗೆ ನೇಮಿಸುವ ಅವಕಾಶವನ್ನು ಕಲ್ಪಿಸಿತು.

3.ಖಾಯಂ ಜಮೀನ್ದಾರಿ ಪದ್ಧತಿಯು ರೈತರನ್ನು 'ಸಾಲದಲ್ಲೇ ಹುಟ್ಟಿ ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ' ಮಾಡಿತು.ಹೇಗೆ? ವಿಮರ್ಶಿಸಿ.

- ಖಾಯಂ ಜಮೀನ್ದಾರಿ ಪದ್ಧತಿಯಲ್ಲಿ ಜಮೀನ್ದಾರನು ಭೂಮಾಲೀಕನಾದನು.ಈ ಪದ್ಧತಿಯಂತೆ ಜಮೀನ್ದಾರನು ಪ್ರತಿ ವರ್ಷವೂ ನಿರ್ದಿಷ್ಟ ದಿನಕ್ಕೆ ಮೊದಲೇ ಅವನು ಒಪ್ಪಿಕೊಂಡಿದ್ದ ಕಂದಾಯದ ಮೊತ್ತವನ್ನು ಸಲ್ಲಿಸಬೇಕಿತ್ತು.
- ಭೂಮಾಲೀಕನಿಗೆ ಈ ಪದ್ಧತಿಯಿಂದ ಹೆಚ್ಚಿನ ಲಾಭವಾಯಿತು. ಏಕೆಂದರೆ ಸರಕಾರಕ್ಕೆ ಸಲ್ಲಿಸಬೇಕಾದ ಹಣದ ಮೊತ್ತಕ್ಕಿಂತ ಹೆಚ್ಚಿಗೆ ವಸೂಲು ಮಾಡಿದ ಹಣವನ್ನು ಅವನೇ ಇಟ್ಟುಕೊಳ್ಳಬಹುದಾಗಿತ್ತು.
- ಬರಗಾಲ ಅಥವಾ ವಿಪರೀತ ಮಳೆ ಅತಿವೃಷ್ಟಿಯ ಕಾರಣದಿಂದ ಕಂದಾಯವನ್ನು ವಸೂಲಿ ಮಾಡಲು ಸಾಧ್ಯವಾಗದೆ ಸರ್ಕಾರಕ್ಕೆ ಸಲ್ಲಿಸಬೇಕಾದ ಹಣದ ಮೊತ್ತವನ್ನು ಸಲ್ಲಿಸಲಾಗದಿದ್ದರೆ, ಬ್ರಿಟಿಷ್ ಸರಕಾರವು ಭೂಮಿಯ ಒಡೆತನವನ್ನು ಅವನಿಂದ ಕಸಿದುಕೊಳ್ಳುತ್ತಿತ್ತು.

- ಈ ಪದ್ಧತಿಯಿಂದ ಬ್ರಿಟಿಷರಿಗೆ ಮತ್ತು ಜಮೀನ್ದಾರರಿಗೆ ಲಾಭವಾಯಿತೇ ವಿನಃ ರೈತರಿಗಾಗಲಿಲ್ಲ.
- ರೈತರು,ರೈತ ಕೂಲಿಕಾರ್ಮಿಕರು ಜಮೀನ್ದಾರರ ಭೂಮಿಯಲ್ಲಿ ಕೆಲಸ ಮಾಡಲು ನಿರಂತರ ಅವಕಾಶಗಳೂ ಸಿಗದೆ ಬಹುಮುಖಿ ಶೋಷಣೆಗೆ ಒಳಗಾದರು.ಅತಂತ್ರ ಸ್ಥಿತಿಯಲ್ಲೇ ಬದುಕನ್ನು ಕಳೆಯತೊಡಗಿದರು.

4.ರೈತವಾರಿ ಪದ್ಧತಿಯು ಒಳಗೊಂಡಿದ್ದ ಪ್ರಮುಖಾಂಶಗಳು ಯಾವುವು?

- ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಬಾರಮಹಲ್ ಪ್ರಾಂತ್ಯದಲ್ಲಿ 1792 ರಲ್ಲಿ ಅಲೆಕ್ಸಾಂಡರ್ ರೀಡ್ ಜಾರಿಗೊಳಿಸಿದನು. ನಂತರ ಥಾಮಸ್ ಮನ್ರೋ ಮದರಾಸು ಮತ್ತು ಮೈಸೂರು ಪ್ರಾಂತಗಳಲ್ಲಿ 1801 ರಲ್ಲಿ ಜಾರಿಗೊಳಿಸಿದನು.
- ಈ ಪದ್ಧತಿಯಲ್ಲಿ ಸರಕಾರ ಮತ್ತು ರೈತರ ನಡುವೆ ನೇರ ಸಂಪರ್ಕವನ್ನು ಕಲ್ಪಿಸಲಾಯಿತು.
- ಭೂಮಿ ಉಳಿಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯಮಾಡಿತು.
- ರೈತನೇ ನೇರವಾಗಿ ತಾನು ಕೃಷಿ ಭೂಮಿಯಲ್ಲಿ ಪಡೆದ ಉತ್ಪನ್ನದ ಶೇಕಡ 50 ರಷ್ಟು ಭಾಗವನ್ನು ಕಂದಾಯದ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕಾಯಿತು.
- ಕಂದಾಯವನ್ನು 30 ವರ್ಷಗಳ ಅವಧಿಗೆ ಎಂದು ನಿರ್ಧರಿಸಲಾಯಿತು. ನಂತರ ಅದನ್ನು ಪರಾಮರ್ಶೆಗೂ ಒಳಪಡಿಸಬಹುದಿತ್ತು.

5.ಬ್ರಿಟಿಷರ ಕಂದಾಯ ನೀತಿಗಳಿಂದ ಉಂಟಾದ ಪರಿಣಾಮಗಳಾವುವು?

- ನಿಜವಾದ ರೈತರನ್ನು ಶೋಷಿಸುವ ಹೊಸ ಸಾಮಾಜಿಕ ವರ್ಗವಾದ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು.
- ಜಮೀನ್ದಾರರ ಶೋಷಣೆಗೆ ಒಳಗಾದ ರೈತರು ವಿವಿಧ ಬಗೆಯ ಸಂಕಷ್ಟಗಳಿಗೆ ಒಳಗಾದರು.ಕ್ರಮೇಣ ನಿರ್ಗತಿಕರಾದರು
- ಭೂಮಿ ಮಾರಾಟದ ವಸ್ತುವಾಯಿತು.ಇದನ್ನು ಪರಭಾರೆ ಮಾಡಿ ಹಣವನ್ನು ಸಾಲವಾಗಿ ಪಡೆಯಬಹುದಾಗಿತ್ತು.
- ಅನೇಕ ಜಮೀನ್ದಾರರೂ ಕೂಡ ಕಂದಾಯವನ್ನು ಸಲ್ಲಿಸುವ ಸಲುವಾಗಿ ತಮ್ಮ ಜಮೀನನ್ನು ಪರಭಾರೆ ಮಾಡಿದರು.
- ಕೃಷಿ ಕ್ಷೇತ್ರವು ವಾಣಿಜ್ಯೀಕರಣಗೊಂಡು, ಇಂಗ್ಲೆಂಡಿನಲ್ಲಾದ ಕೈಗಾರಿಕೀಕರಣದಿಂದ ಅಲ್ಲಿನ ಕೈಗಾರಿಕೆಗಳಿಗೆ ಬೇಡಿದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.
- ಹಣದ ಲೇವಾದೇವಿಗಾರರು ಬಲಿಷ್ಠರಾಗತೊಡಗಿದರು.

6.ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ಪಟ್ಟಿ ಮಾಡಿ. ಅಥವಾ ಬ್ರಿಟಿಷ್ ಶಿಕ್ಷಣ ವ್ಯವಸ್ಥೆಯು ಅಭಿವೃದ್ಧಿಶೀಲ ಆಲೋಚನೆಗಳನ್ನೊಳಗೊಂಡ ಒಂದು ಹೊಸ ತಲೆಮಾರನ್ನು ಸೃಷ್ಟಿಸಿತು.ಸಮರ್ಥಿಸಿ.

- ಭಾರತೀಯರು ಆಧುನಿಕತೆ,ಜಾತ್ಯತೀತತೆ,ಪ್ರಜಾಪ್ರಭುತ್ವ, ವೈಜ್ಞಾನಿಕ ಆಲೋಚನಾ ಕ್ರಮದ ಜೊತೆಗೆ ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.
- ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗಳಿಗೆ ಪ್ರೋತ್ಸಾಹ ದೊರೆಯಿತು.ಇದರಿಂದ ವಿದ್ವಾಂಸ ವರ್ಗದ ಆಲೋಚನಾ ಕ್ರಮದಲ್ಲೂ ಏಕತೆಯ ಸ್ವರೂಪವನ್ನು ಕಾಣುತ್ತೇವೆ
- ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯ ತೊಡಗಿದವು.
- ವೃತ್ತ ಪತ್ರಿಕೆಗಳಲ್ಲಿ ಸರ್ಕಾರದ ನೀತಿಗಳನ್ನು ವಿಮರ್ಶಿಸುವ ಮೂಲಕ ಭಾರತೀಯರಲ್ಲಿ ಬ್ರಿಟಿಷರ ಆಡಳಿತದ ಬಗ್ಗೆ ವಿಮರ್ಶಾತ್ಮಕವಾಗಿ ಅಭಿಪ್ರಾಯ ಬೆಳೆಯಲು ಸಾಧ್ಯವಾಯಿತು.
- ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು ಹುಟ್ಟಿಕೊಂಡವು.
- ಜೆ.ಎಸ್.ಮಿಲ್,ರೂಸೋ,ಮಾಂಟೆಸ್ಕ್ಯೂ ಮುಂತಾದವರ ಚಿಂತನೆಗಳು ಭಾರತೀಯ ವಿದ್ವಾಂಸರ ಆಲೋಚನಾ ಕ್ರಮದಲ್ಲಿ ನಾವಿನ್ಯತೆಯನ್ನು ತಂದವು.
- ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.
- ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು.

7.ರೆಗ್ಯುಲೇಟಿಂಗ್ ಕಾಯ್ದೆ ಹೊಂದಿದ್ದ ನಿಬಂಧನೆಗಳಾವುವು?

- ಬಂಗಾಳದ ಪ್ರೆಸಿಡೆನ್ಸಿಯು ಉಳಿದ ಎರಡು (ಮುಂಬಯಿ,ಮದರಾಸು) ಪ್ರಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.
- ಬಂಗಾಳದ ಗವರ್ನರನು ಮೂರು ಪ್ರೆಸಿಡೆನ್ಸಿಗಳಿಗೆ ಗವರ್ನರ್ ಜನರಲ್ ಆದನು.
- ಗವರ್ನರ್ ಜನರಲ್ಲನಿಗೆ ಬಾಂಬೆ ಮತ್ತು ಮದರಾಸು ಪ್ರೆಸಿಡೆನ್ಸಿಗಳಿಗೆ ನಿರ್ದೇಶಿಸುವ,ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರ ವನ್ನು ಈ ಕಾನೂನು ನೀಡಿತು.
- ಬಂಗಾಳ ಸರ್ಕಾರದ ಮತ್ತು ಇಂಗ್ಲೆಂಡಿನ ನಿರ್ದೇಶಕ ಮಂಡಳಿಯ ಪೂರ್ವಾನುಮತಿಯಿಲ್ಲದೆ ಬಾಂಬೆ ಮತ್ತು ಮದರಾಸು ಸರ್ಕಾರಗಳು ಯಾರ ಮೇಲೂ ಯುದ್ಧ ಘೋಷಿಸುವಂತಿಲ್ಲ ಅಥವಾ ಶಾಂತಿ ಸಂಧಾನ ನಡೆಸುವಂತಿಲ್ಲ.

- ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟ್ ಅನ್ನು ಸ್ಥಾಪಿಸಲಾಯಿತು.

8. 1858 ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖ ಅಂಶಗಳಾವುವು?

- ಈಸ್ಟ್ ಇಂಡಿಯಾ ಕಂಪನಿಯ ಮಾನ್ಯತೆ ರದ್ದುಗೊಳಿಸಿ, ಭಾರತವನ್ನು ರಾಣಿಯವರ ಆಡಳಿತಕ್ಕೆ ವರ್ಗಾಯಿಸಲಾಯಿತು.
- ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ ವೈಸರಾಯ್ ಎಂಬ ಪದನಾಮವನ್ನು ನೀಡಿದರು.
- ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ (ಭಾರತದ ವ್ಯವಹಾರಗಳ ಕಾರ್ಯದರ್ಶಿ) ಸ್ಥಾನವನ್ನು ಬ್ರಿಟಿಷ್ ಸರ್ಕಾರ ಸೃಷ್ಟಿಸಿತು. ಬ್ರಿಟಿಷ್ ಮಂತ್ರಿ ಮಂಡಲದ ಸದಸ್ಯರಾಗಿದ್ದ ಇವರು ಭಾರತದ ಆಡಳಿತವನ್ನು ನೋಡಿಕೊಳ್ಳುವ ಜವಾಬ್ದಾರಿ ಹೊಂದಿದರು.
- ಇವರಿಗೆ ಸಹಾಯ ಮಾಡಲು 15 ಸದಸ್ಯರನ್ನೊಳಗೊಂಡ ಭಾರತ ಮಂಡಲಿ ಅಸ್ತಿತ್ವಕ್ಕೆ ಬಂದಿತು.

9. 1935 ರ ಭಾರತ ಸರ್ಕಾರದ ಕಾಯ್ದೆ 'ಭಾರತ ಸಂವಿಧಾನದ ಬುನಾದಿ' ಸಮರ್ಥಿಸಿ

- ಭಾರತದ ಸಂವಿಧಾನದ ರಚನೆಗೆ 1935 ರ ಕಾಯ್ದೆಯು ಬುನಾದಿಯಾಗಿದೆ.
- ಬ್ರಿಟಿಷ್ ಪ್ರಾಂತ್ಯಗಳ, ದೇಶೀಯ ಸಂಸ್ಥಾನಗಳು ಹಾಗೂ ಆಶ್ರಿತ ರಾಜರನ್ನೊಳಗೊಂಡ ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.
- ಕೇಂದ್ರದಲ್ಲಿ 'ದ್ವಿ ಸರಕಾರ'ವನ್ನು ಸ್ಥಾಪಿಸಲಾಯಿತು.
- ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.
- ಪ್ರಾಂತ್ಯಗಳಲ್ಲಿ ದ್ವಿ ಸರಕಾರ ಪದ್ಧತಿಯನ್ನು ರದ್ದುಗೊಳಿಸಿ, ಪ್ರಾಂತಗಳಿಗೆ ಸ್ವಾಯತ್ತತೆ ನೀಡಲಾಯಿತು.
- ಭಾರತದಲ್ಲಿ 'ಫೆಡರಲ್ ಕೋರ್ಟ್' ಸ್ಥಾಪನೆಗೆ ಅವಕಾಶ ನೀಡಲಾಯಿತು.

10. 1919 ರ ಕಾಯ್ದೆಯ / ಮಾಂಟೆಗೋ–ಚೇಮ್ಸ್‌ಫರ್ಡ್ ಸುಧಾರಣೆಗಳ ಪ್ರಮುಖಾಂಶಗಳು ಯಾವುವು?

- ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ ರಚನೆಗೆ ಅವಕಾಶ ನೀಡಲಾಯಿತು. ಅವುಗಳೆಂದರೆ, ಶಾಸಕಾಂಗ ಸಭೆ(ಕೆಳಮನೆ)ಮತ್ತು ರಾಜ್ಯಗಳ ಪರಿಷತ್ತು (ಮೇಲ್ಮನೆ)ರಚಿಸಲಾಯಿತು.
- ಪ್ರಾಂತ್ಯಗಳಲ್ಲಿ ದ್ವಿಸರಕಾರ ಪದ್ಧತಿಗೆ ಅವಕಾಶ ನೀಡಲಾಯಿತು.
- ಭಾರತಕ್ಕೆ ಒಬ್ಬ ಹೈಕಮಿಷನರ್‌ರನ್ನು ನೇಮಕ ಮಾಡಲಾಯಿತು.
- ಸ್ವಯಂ ಆಡಳಿತವುಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ ನೀಡಲಾಯಿತು.
- ಕೇಂದ್ರದ ಬಜೆಟ್‌ನಿಂದ ಪ್ರಾಂತ್ಯಗಳ ಬಜೆಟನ್ನು ಬೇರ್ಪಡಿಸಲಾಯಿತು.
- ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಮುಸ್ಲಿಂ,ಸಿಖ್,ಆಂಗ್ಲೋ ಭಾರತೀಯರು ಮತ್ತು ಯುರೋಪಿಯನ್ನರಿಗೆ ವಿಸ್ತರಿಸಲಾಯಿತು.

11. 1909 ರ ಭಾರತೀಯರ ಪರಿಷತ್ ಕಾಯ್ದೆಯ / ಮಿಂಟೋ–ಮಾರ್ಲೆ ಸುಧಾರಣೆಯ ಮುಖ್ಯಾಂಶಗಳೇನು?

- ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆಯನ್ನು 16 ರಿಂದ 60 ಕ್ಕೆ ಹೆಚ್ಚಿಸಲಾಯಿತು.
- ಪ್ರಾಂತ್ಯಗಳಲ್ಲೂ ಶಾಸನ ಸಭೆಗಳ ಸದಸ್ಯರ ಸ್ಥಾನಗಳನ್ನು ಹೆಚ್ಚಿಸಲಾಯಿತು.
- ಮೊದಲ ಬಾರಿಗೆ ಚುನಾವಣೆ ಮೂಲಕ ಶಾಸನ ಸಭೆಗೆ ಆಯ್ಕೆಯಾಗಲು ಅವಕಾಶ ನೀಡಲಾಯಿತು.
- ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.

12. ಮಹಲ್ವಾರಿ ಪದ್ಧತಿಯನ್ನು ವಿವರಿಸಿ.

- ಉತ್ತರ ಪ್ರದೇಶ,ಮಧ್ಯಪ್ರದೇಶದ ಅನೇಕ ಭಾಗಗಳು ಪಂಜಾಬ್ ಮತ್ತು ದೆಹಲಿ ಪ್ರಾಂತ್ಯಗಳಲ್ಲಿ ಮಹಲ್ಲುಗಳೇ ಸಾಮೂಹಿಕ ಒಪ್ಪಂದಗಳನ್ನು ಮಾಡಿಕೊಂಡು, ಸರಕಾರಕ್ಕೆ ತೆರಿಗೆಯನ್ನು ಸಲ್ಲಿಸುವ ಪದ್ಧತಿಯನ್ನು ಜಾರಿಗೆ ತರಲಾಯಿತು.
- ಈ ಪದ್ಧತಿಯನ್ನು ಆರ್.ಎಂ.ಬರ್ಡ್ ಮತ್ತು ಜೇಮ್ಸ್ ಥಾಮ್ಸನ್ ಪ್ರಯೋಗಿಸಿದರು.
- ಮಹಲ್ ಎಂದರೆ ತಾಲ್ಲೂಕು ಎಂದರ್ಥ.
- ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಈ ಪದ್ಧತಿಯ ಅನುಷ್ಠಾನದಲ್ಲಿ ವ್ಯತ್ಯಾಸಗಳಿದ್ದವು.
- ದೊಡ್ಡ ಮತ್ತು ಸಣ್ಣ ಪ್ರಮಾಣದ ಜಮೀನ್ದಾರರು ಈ ಪದ್ಧತಿಯ ಭಾಗವಾಗಿದ್ದರು.
- ಕಂಪನಿ ಸರ್ಕಾರದ ಅಧಿಕಾರಿಗಳು ಜಮೀನಿನಲ್ಲಿ ಆಗುವ ಉತ್ಪಾದನೆಗಿಂತಲೂ ಹೆಚ್ಚಿನ ಮೊತ್ತದ ವಾರ್ಷಿಕ ಪಾವತಿಗಳನ್ನು ನಿರ್ಧರಿಸಿದ್ದರಿಂದ ಅನೇಕ ಜಮೀನ್ದಾರರು ತಮ್ಮ ಭೂಮಾಲಿಕತ್ವವನ್ನು ಕಳೆದುಕೊಂಡರು.
- ಅವರನ್ನೆ ನೆಚ್ಚಿ ಬದುಕುತ್ತಿದ್ದ ಸಣ್ಣ ಕೃಷಿಕರು, ಕೃಷಿ ಕೂಲಿಕಾರರು ನಿರ್ಗತಿಕರಾದರು.

13. ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ತಂದ ಸುಧಾರಣೆಗಳು ಯಾವುವು?

- ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ ವಾರನ್ ಹೇಸ್ಟಿಂಗ್ಸ್. 1781 ರಲ್ಲಿ ಅವನು ಕಲ್ಕತ್ತಾದಲ್ಲಿ

ಮದರಸಾವನ್ನು ಪ್ರಾರಂಭಿಸಿದನು.

- ಜೊನಾಥನ್ ಡಂಕನ್ ಎಂಬ ಮತ್ತೊಬ್ಬ ಬ್ರಿಟಿಷ್ ವ್ಯಕ್ತಿಯು 1792 ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು.
- ಬ್ರಿಟಿಷ್ ಶಿಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದವನು ಚಾರ್ಲ್ಸ್ ಗ್ರಾಂಟ್.
- ವಿಲಿಯಂ ಬೆಂಟಿಂಕನು ಗವರ್ನರ್ ಜನರಲ್ ಆಗಿ ನೇಮಕಗೊಂಡ ನಂತರ ಬ್ರಿಟಿಷ್ ಶಿಕ್ಷಣದ ವಿಸ್ತರಣೆಗೆ ಮತ್ತಷ್ಟು ವಿಶೇಷ ಪ್ರೋತ್ಸಾಹ ದೊರೆಯಿತು.
- 1835 ರಲ್ಲಿ ಇಂಗ್ಲಿಷ್ ಶಿಕ್ಷಣ ಸಂಬಂಧಿಸಿದಂತೆ ಮೆಕಾಲೆ ಕೊಟ್ಟ ವರದಿಯೆ ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು.
- ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ,ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾಲಯಗಳನ್ನು 1857 ರಲ್ಲಿ ಸ್ಥಾಪಿಸಿದನು.

## ಅಧ್ಯಾಯ-4
## ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

### I.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1.ಮೊದಲನೆಯ ಆಂಗ್ಲೋ ಮೈಸೂರು ಯುದ್ಧ ಯಾರ ನಡುವೆ ನಡೆಯಿತು? - ಹೈದರಾಲಿ ಮತ್ತು ಬ್ರಿಟಿಷರು

2.ಎರಡನೆಯ ಆಂಗ್ಲೋ ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? -1784 ರ ಮಂಗಳೂರು ಒಪ್ಪಂದ

3.ಕಿತ್ತೂರು ಚೆನ್ನಮ್ಮ ಯಾರನ್ನು ದತ್ತು ಪಡೆದಿದ್ದಳು?- ಶಿವಲಿಂಗಪ್ಪ

4.ಸುರಪುರ ಈಗಿನ ಯಾವ ಜಿಲ್ಲೆಯಲ್ಲಿದೆ? - ಯಾದಗಿರಿ ಜಿಲ್ಲೆ.

5.ಮೊದಲನೇ ಆಂಗ್ಲೋ ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? - 1769 ರ ಮದ್ರಾಸ್ ಒಪ್ಪಂದ

6.ಮೂರನೆ ಆಂಗ್ಲೋ ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? - 1792 ರ ಶ್ರೀರಂಗ ಪಟ್ಟಣ ಒಪ್ಪಂದ

7.ಸಂಗೊಳ್ಳಿ ರಾಯಣ್ಣನನ್ನು ಗಲ್ಲಿಗೇರಿಸಿದ ಸ್ಥಳ ಯಾವುದು? - ನಂದಗಡ

8.ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ಏಕೆ ಸಿಡಿದೆದ್ದರು(ದಂಗೆಎದ್ದರು) - ಬ್ರಿಟಿಷರು ಶಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನನ್ನು ಜಾರಿಗೆ ತಂದರು. ಇದನ್ನು ಹಲಗಲಿಯ ಬೇಡರಿಗೂ ಸಹ ಅನ್ವಯಿಸಿದರು. ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶಕ್ಕೆ ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ಧರಿರಲಿಲ್ಲ.ಬೇಡರು ಪರಂಪರಾನುಗತವಾದ ಹಕ್ಕನ್ನು ಉಳಿಸಿಕೊಳ್ಳವ ಉದ್ದೇಶದಿಂದ ಬ್ರಿಟಿಷರ ವಿರುದ್ಧ ಸಿಡಿದೆದ್ದರು.

### II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1.ಹೈದರಾಲಿಯು ಹೇಗೆ ಅಧಿಕಾರಕ್ಕೆ ಬಂದನು?

- ಹೈದಲಾಲಿಯು ಒಬ್ಬ ಸಾಮಾನ್ಯ ಸೈನಿಕನಾಗಿ ಮೈಸೂರು ರಾಜ್ಯದ ಸೇವೆಗೆ ಸೇರಿ ತನ್ನ ಚಾಣಾಕ್ಷ ರಾಜಕೀಯ ನಡೆಗೆ ಹೆಸರಾಗಿದ್ದನು.
- ಮೈಸೂರಿನ ರಾಜಕೀಯ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಇವನು ದೇವನಹಳ್ಳಿ ಮುತ್ತಿಗೆ ಸಂದರ್ಭ ಮತ್ತು ಆರ್ಕಾಟಿನ ನಿಜಾಮನ ವಿಷಯಕ್ಕೆ ಸಂಬಂಧಿಸಿದ ಸೈನಿಕ ಕಾರ್ಯಚರಣೆಯಲ್ಲಿ ಪ್ರವರ್ಧಮಾನಕ್ಕೆ ಬಂದನು.
- ಸೈನಿಕರನ್ನು ತನ್ನ ವಿಶ್ವಾಸಕ್ಕೆ ಪಡೆದುಕೊಳ್ಳುವಲ್ಲಿ ಸಫಲನಾದನು.
- ಬಹುಬೇಗನೆ ನವಾಬ್ ಹೈದರಾಲಿಖಾನ್ ಎಂದೂ ಹೆಸರಾದನು.
- ಶಸ್ತ್ರಗಳ ಉಪಯೋಗ ಮತ್ತು ಪ್ರಯೋಗಗಳಲ್ಲಿ ಖ್ಯಾತಿಗಳಿಸಿದನು.
- ಚುರುಕಿನ ಸೈನಿಕ ಕಾರ್ಯಾಚರಣೆಗಳ ಮೂಲಕ ದಳವಾಯಿಗಳ ಬಲ ಕುಂದಿಸಿದನು.
- ಅರಸರಾಗಿದ್ದ ಕೃಷ್ಣರಾಜ ಒಡೆಯರನ್ನು ಮೂಲೆಗುಂಪಾಗಿಸಿ ಅಧಿಕಾರದ ಮೇಲೆ ತನ್ನ ಸ್ವಾಮ್ಯವನ್ನು ಸ್ಥಾಪಿಸಿದನು.

2.ಎರಡನೇ ಆಂಗ್ಲೋ-ಮೈಸೂರು ಯುದ್ಧದಿಂದ ಉಂಟಾದ ಪರಿಣಾಮಗಳು ಯಾವುವು?

- ಟಿಪ್ಪು ಮಂಗಳೂರು ಮತ್ತು ಕರಾವಳಿ ತೀರ ಪ್ರದೇಶದ ಮೇಲೆ ಹತೋಟಿ ಸಾಧಿಸುವುದು ಸೂಕ್ತವೆಂದು ಯೋಚಿಸಿ ಮಂಗಳೂರಿನತ್ತ ಮುನ್ನಡೆದು ಬ್ರಿಟಿಷರ ಸೈನ್ಯವನ್ನು ಸೋಲಿಸಿದನು.
- ಬ್ರಿಟಿಷರು 1784 ರಲ್ಲಿ ಟಿಪ್ಪುವಿನೊಂದಿಗೆ ಮಂಗಳೂರು ಒಪ್ಪಂದವನ್ನು ಮಾಡಿಕೊಂಡರು.

3.ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳಾವುವು?

- ಟಿಪ್ಪು ತನ್ನ ಅರ್ಧರಾಜ್ಯವನ್ನು ಬಿಟ್ಟಕೊಡುವುದು.
- ಮೂರು ಕೋಟಿ ರೂಪಾಯಿಗಳನ್ನು ಯುದ್ಧನಷ್ಟ ಭರ್ತಿಯಾಗಿ ಕೊಡುವುದು.
- ಯುದ್ಧನಷ್ಟ ಭರ್ತಿಗೆ ಗ್ಯಾರಂಟಿಯಾಗಿ ತನ್ನ ಇಬ್ಬರು ಗಂಡು ಮಕ್ಕಳನ್ನು ಒತ್ತೆಯಾಗಿ ನೀಡುವುದು.
- ಯುದ್ಧದ ಸಂದರ್ಭದಲ್ಲಿ ಸೆರೆ ಹಿಡಿಯಲಾಗಿದ್ದ ಸೈನಿಕರನ್ನು ಬಿಡುಗಡೆ ಗೊಳಿಸುವುದು.

4.ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧವು ಬ್ರಿಟಿಷರನ್ನು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು.ವಿಮರ್ಶಿಸಿ. ಅಥವಾ ( 4 ನೇ ಆಂಗ್ಲೋ-ಮೈಸೂರು ಯುದ್ಧದ ಪರಿಣಾಮಗಳನ್ನು ತಿಳಿಸಿ.)

- ಟಿಪ್ಪು ತನ್ನ ಸೈನ್ಯವನ್ನು ಹುರಿದುಂಬಿಸುತ್ತಾ ಹೋರಾಡಿ 1799 ರಲ್ಲಿ ಯುದ್ಧದಲ್ಲಿ ಹತನಾದನು.

- ಟಿಪ್ಪುವಿನ ಮರಣವು ಬ್ರಿಟಿಷರಿಗೆ ಇಡೀ ಭಾರತವೇ ತಮ್ಮ ಕೈವಶವಾದ ಸಂತೋಷವನ್ನು ತಂದಿತು.
- ನಂತರ ಬ್ರಿಟಿಷರು ಟಿಪ್ಪುವಿನ ಹತೋಟಿಯಲ್ಲಿದ್ದ ಭೌಗೋಳಿಕ ಪ್ರದೇಶಗಳನ್ನು ಮರಾಠರು ಮತ್ತು ನಿಜಾಮನೊಂದಿಗೆ ಹಂಚಿಕೊಂಡರು.
- ಒಂದು ಸಣ್ಣ ಭೌಗೋಳಿಕ ಪ್ರದೇಶವನ್ನು ಮೈಸೂರು ಒಡೆಯರ ರಾಜವಂಶದ ಪ್ರತಿನಿಧಿಗೆ ವರ್ಗಾಯಿಸಲ್ಪಟ್ಟಿತು. ಈ ಪ್ರದೇಶವೇ ಮೈಸೂರು ಸಂಸ್ಥಾನವೆಂದು ಹೆಸರಾಯಿತು.

5.ದೋಂಡಿಯಾ ವಾಘ್ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಹೋರಾಡಿದ ಕ್ರಮಗಳನ್ನು ವಿಶ್ಲೇಷಿಸಿ

- ದೋಂಡಿಯಾ ವಾಘ್ ಒಂದು ಸೈನ್ಯವನ್ನು ಸಂಘಟಿಸಿ ಸೈನಿಕ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದನು.
- ಅವನು ಟಿಪ್ಪುವಿನ ಸೈನ್ಯದಲ್ಲಿದ್ದ ಅತೃಪ್ತ ಸೈನಿಕರು, ಅಧಿಕಾರದಿಂದ ಮುಕ್ತಗೊಳಿಸಲ್ಪಟ್ಟ ಪಾಳೇಯಗಾರರು ಮೊದಲಾದವರನ್ನು ಸಂಘಟಿಸಿ ಒಂದು ಸೈನ್ಯವನ್ನು ಸುಸಜ್ಜಿತಗೊಳಿಸಿ ಬಂಡಾಯದ ಬಾವುಟ ಹಾರಿಸಿದನು.
- ಶಿವಮೊಗ್ಗ ಮತ್ತು ಬಿದನೂರಿನ ಕೋಟೆಗಳನ್ನು ವಶಪಡಿಸಿಕೊಂಡನು.
- ಚಿತ್ರದುರ್ಗದ ಕೋಟೆಯನ್ನು ವಶಪಡಿಸಿಕೊಳ್ಳಲು ವಿಫಲ ಪ್ರಯತ್ನಗಳನ್ನು ನಡೆಸಿದನು. ಗವರ್ನರ್ ಜನರಲ್ ಲಾರ್ಡ್ ವೆಲ್ಲೆಸ್ಲಿಯು ಬಂಡಾಯವನ್ನು ಹತ್ತಿಕ್ಕಲು ಪ್ರಾರಂಭಿಸಿದನು.
- ದೋಂಡಿಯಾ ವಾಘನ ನಿಯಂತ್ರಣದಲ್ಲಿದ್ದ ಶಿವಮೊಗ್ಗ,ಹೊನ್ನಾಳಿ, ಹರಿಹರ ಮೊದಲಾದವುಗಳ ಮೇಲೆ ಬ್ರಿಟಿಷ್ ಸರ್ಕಾರಆಕ್ರಮಣ ನಡೆಸಿತು ದೋಂಡಿಯಾ ತನ್ನ ನೆಲೆಗಳನ್ನು ಕಳೆದುಕೊಂಡನು.
- ಶಿಕಾರಿಪುರವನ್ನು ಬ್ರಿಟಿಷರು ವಶಪಡಿಸಿಕೊಂಡ ನಂತರ ದೋಂಡಿಯಾ ನಿಜಾಮನ ಹತೋಟಿಯಲ್ಲಿದ್ದ ಗುತ್ತಿಯ ಕಡೆಗೆ ಪಲಾಯನಗೈದನು.
- ನಿಜಾಮನು ಗುತ್ತಿಯನ್ನು ಮುತ್ತಿದಾಗ ಮರಾಠರ ಪ್ರದೇಶಕ್ಕೆ ತೆರಳಿದನು. ಮರಾಠ ಸೈನ್ಯ ಅವನನ್ನು ಸೋಲಿಸಿದರೂ ತನ್ನ ಹೋರಾಟವನ್ನು ಮುಂದುವರಿಸಿದನು.
- ಅತೃಪ್ತ ಪಾಳೇಗಾರರು, ಮಲಬಾರಿನ ಮಾಹೆಯಲ್ಲಿದ್ದ ಫ್ರೆಂಚರು ದೋಂಡಿಯಾಗೆ ಸಹಾಯ ನೀಡಿದರು.
- ಶಿಕಾರಿಪುರಕೋಟೆಯನ್ನು ಪುನಃ ಗೆದ್ದುಕೊಂಡ ದೋಂಡಿಯಾನ ಸೈನ್ಯವನ್ನು ಬ್ರಿಟಿಷ್ ಸೈನ್ಯ ಚದುರಿಸಿತು.
- ತುಂಗಭದ್ರಾ ಮತ್ತು ಮಲಪ್ರಭಾ ನದಿಗಳ ನಡುವಿನ ಪ್ರದೇಶದ ವಿಶಾಲ ಪ್ರದೇಶದಲ್ಲಿ ಸಂಚರಿಸುತ್ತಿದ್ದ ದೋಂಡಿಯಾನ ಸೈನ್ಯವನ್ನು ಸೋಲಿಸಲು ಬ್ರಿಟಿಷರು ಪ್ರಯತ್ನಿಸಿದರು.
- ಬ್ರಿಟಿಷರು ಯಾಪಲಪರವಿ ಎಂಬ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿ ಕೋನ್‌ಗಲ್ ಎಂಬ ಸ್ಥಳದಲ್ಲಿ ದೋಂಡಿಯಾನನ್ನು ಹತ್ಯೆಗೈದರು.

6.ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ

- ರಾಯಣ್ಣ ವೀರಯೋಧ ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ತನ್ನ ತನ್ನ ಆಧ್ಯ ಕರ್ತವ್ಯವೆಂದು ಭಾವಿಸಿದ್ದನು.
- ಸಂಗೊಳ್ಳಿ ರಾಯಣ್ಣನು ಕಿತ್ತೂರಿನ ಯುದ್ಧದಲ್ಲಿ ಚೆನ್ನಮ್ಮನ ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದನು. ಯುದ್ಧದಲ್ಲಿ ಸೆರೆಯಾಳಾಗಿ ಬಂಧಿಸಲ್ಪಟ್ಟು ತರುವಾಯ ಬಿಡುಗಡೆಗೊಂಡನು.
- ರಾಯಣ್ಣನು ಸೈನಿಕರನ್ನು ಸಂಘಟಿಸುತ್ತಾ ಸ್ವಾತಂತ್ರ್ಯದ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡನು.
- ಭೌಗೋಳಿಕವಾಗಿ ಆಯಕಟ್ಟಿನ ಸ್ಥಳಗಳಲ್ಲಿ ಗುಪ್ತ ಸಭೆಗಳನ್ನು ನಡೆಸುವ ಮೂಲಕ ತನ್ನ ಮುಂದಿನ ಯೋಜನೆಗಳನ್ನು ರೂಪಿಸಿಕೊಂಡನು.
- ರಾಯಣ್ಣನ ತಕ್ಷಣದ ಉದ್ದೇಶಗಳು ಬ್ರಿಟಿಷರ ಆಡಳಿತಯಂತ್ರದ ಪ್ರಮುಖ ಅಂಗವಾಗಿದ್ದ ತಾಲ್ಲೂಕು ಕಛೇರಿಗಳು ಮತ್ತು ಖಜಾನೆಗಳನ್ನು ಲೂಟಿ ಮಾಡುವುದು.
- ಮೊದಲು ನಂದಗಡ ಮತ್ತು ಖಾನಾಪುರ ನಂತರ ಸಂಪಗಾವಿ ಆತನ ಕಾರ್ಯಾಚರಣೆಗಳ ಸ್ಥಳಗಳಾದವು.
- ರಾಯಣ್ಣನನ್ನು ಸೆರೆಹಿಡಿಯಲು ಬ್ರಿಟಿಷರು ಒಂದು ಸಂಚನ್ನು ರೂಪಿಸಿದರು. ಕಿತ್ತೂರಿನ ರಾಣಿಯನ್ನು ವಿರೋಧಿಸುತ್ತಿದ್ದ ದೇಸಾಯಿಗಳನ್ನು ಪ್ರಚೋದಿಸಿದರು.
- ಅಮಲ್ದಾರನಾಗಿದ್ದ ಕೃಷ್ಣರಾಯ ಈ ಸಂಚಿಗೆ ಕೈಜೋಡಿಸಿದನು. ಸಂಚಿಗೆ ಬಲಿಯಾದ ರಾಯಣ್ಣನನ್ನು ಇಂಗ್ಲಿಷರ ಸೈನ್ಯ ಬಂಧಿಸಿ ಧಾರವಾಡಕ್ಕೆ ತಂದಿತು. ರಾಯಣ್ಣನನ್ನು ಮುಖ್ಯ ಅಪರಾಧಿ ಎಂದು ಘೋಷಿಸಿ 1831 ರಲ್ಲಿ ನಂದಗಡದಲ್ಲಿ ಗಲ್ಲಿಗೇರಿಸಲಾಯಿತು.

7.ಸ್ವಾತಂತ್ರ್ಯ ಹೋರಾಟದಲ್ಲಿ ಕೊಡಗಿನ ಪ್ರಾಂತ್ಯದಿಂದ ಪುಟ್ಟಬಸಪ್ಪನ ಪಾತ್ರವನ್ನು ವಿವರಿಸಿ

- ಪುಟ್ಟ ಬಸಪ್ಪ ಕೊಡಗಿನ ಬಂಡಾಯದ ನಾಯಕತ್ವವನ್ನು ವಹಿಸಿಕೊಂಡು, ಬಂಡುಕೋರರನ್ನು ಸಂಘಟಿಸಿ ಜನರನ್ನು ಸಂತೈಸಿದನು.
- ಬಂಡುಕೋರರ ಸರಕಾರ ಸ್ಥಾಪನೆಯ ನಂತರ ತಂಬಾಕು ಮತ್ತು ಉಪ್ಪಿನ ಮೇಲಿನ ಸುಂಕವನ್ನು ರದ್ದು ಮಾಡಲಾಗುವುದು ಎಂದೂ

ಘೋಷಿಸಿದನು

- ಶ್ರೀಮಂತ ರೈತರು, ಪಾರುಪತ್ತೆಗಾರರು, ಭೂಹಿಡುವಳಿದಾರರಿಗೆ ಆಶ್ವಾಸನೆಗಳನ್ನು ನೀಡಲಾಯಿತು.
- ಸರ್ಕಾರಿ ಕಛೇರಿಗಳನ್ನು ವಶಪಡಿಸಿಕೊಂಡು ಸರ್ಕಾರಿ ಅಧಿಕಾರಿಗಳನ್ನು ಬಂಧಿಸಿದ್ದು ಬಂಡಾಯದ ಪ್ರಥಮ ಹೆಜ್ಜೆಯಾಯಿತು.
- ಸುಳ್ಯ ಮತ್ತು ಆಸುಪಾಸಿನಲ್ಲಿ ಸಾಮಾನ್ಯ ಜನರಿಗೆ ಕಿರುಕುಳ ನೀಡುತ್ತಿದ್ದ ಅಮಲ್ದಾರನ ಹತ್ಯೆ ಪುಟ್ಟಬಸಪ್ಪನ ಜನಪ್ರಿಯತೆಯನ್ನು ಹೆಚ್ಚಿಸಿತು. ಇದರಿಂದಾಗಿ ಬಂಡಾಯ ವ್ಯಾಪಕ ಪ್ರಚಾರ ಮತ್ತು ಬೆಂಬಲವನ್ನು ಪಡೆದುಕೊಂಡಿತು.

8.ಸುರಪುರದ ದಂಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

- ವೆಂಕಟಪ್ಪನಾಯಕನ ಕಾಲದಲ್ಲಿ ಸುರಪುರ ಬ್ರಿಟಿಷ್ ವಿರೋಧಿ ಬಂಡಾಯದ ಕಿಚ್ಚನ್ನು ಗಳಿಸಿಕೊಂಡಿತು.
- ಬ್ರಿಟಿಷ್ ಸರ್ಕಾರವು ಸುರಪುರದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿತ್ತು.
- 1857 ರಲ್ಲಿ ಪ್ರಾರಂಭದ ಹೋರಾಟದಲ್ಲಿನ ನಾನಾಸಾಹೇಬನ ಪ್ರತಿನಿಧಿಗಳು ಸುರಪುರದಲ್ಲಿದ್ದಾರೆ ಎಂಬ ಪುಕಾರು ಕಂಡುಬಂದಿತು.
- ಇದರಿಂದಾಗಿ ಬ್ರಿಟಿಷರು ರಾಜನನ್ನು ಸಂಶಯದಿಂದ ಕಾಣುವಂತಾಯಿತು.
- ರಾಜನ ಅವಧಿಯಲ್ಲಿನ ಆಡಳಿತದ ಬಗ್ಗೆ ವರದಿ ನೀಡಲು ಬ್ರಿಟಿಷ್ ಸರ್ಕಾರ ಕ್ಯಾಪ್‌ಬೆಲ್ ಎಂಬ ಅಧಿಕಾರಿಯನ್ನು ನೇಮಿಸಿತು. ಇವನು ರಾಜನು ಆಡಳಿತ ದುರ್ವ್ಯವಹಾರಗಳಲ್ಲಿ ನಿರತನಾಗಿದ್ದಾನೆ ಎಂಬ ಅಂಶವನ್ನು ವರದಿಯಲ್ಲಿ ಕಾಣಿಸಿ ಹೈದರಾಬಾದಿನ ರೆಸಿಡೆಂಟ್‌ನಿಗೆ ಸಲ್ಲಿಸಿದನು.
- 1858 ರಲ್ಲಿ ಬ್ರಿಟಿಷ್ ಸೈನ್ಯ ಸುರಪುರವನ್ನು ಆಕ್ರಮಿಸಿತು.ಬ್ರಿಟಿಷರು ಸುರಪುರ ಕೋಟೆಯನ್ನು ವಶಪಡಿಸಿಕೊಂಡರು.

9.ಮೊದಲನೇ ಆಂಗ್ಲೋ-ಮೈಸೂರು ಯುದ್ಧಕ್ಕೆ ಕಾರಣಗಳೇನು?

- ದಕ್ಷಿಣ ಭಾರತದಲ್ಲಿ ಹೈದರಾಲಿ ಗಳಿಸುತ್ತಿದ್ದ ರಾಜಕೀಯ ಪ್ರಾಬಲ್ಯ ಬ್ರಿಟಿಷರು,ಹೈದರಾಬಾದಿನ ನಿಜಾಮ ಮತ್ತು ಮರಾಠರಲ್ಲಿ ಅಸಹನೆ ಮೂಡಿಸಿತು.
- ಬ್ರಿಟಿಷರು ತಮ್ಮ ಸಾಮ್ರಾಜ್ಯಷಾಯಿ ಧೋರಣೆಗೆ ಮುಳ್ಳಾಗಿ ಪರಿಣಮಿಸಿದ್ದ ಹೈದರಾಲಿಯನ್ನು ರಾಜಕೀಯವಾಗಿ ಹಣಿಯಲು ತಂತ್ರಗಳನ್ನು ಮಾಡಲಾರಂಭಿಸಿದರು
- ಹೈದರಾಲಿಯ ವಿರುದ್ಧ ಬ್ರಿಟಿಷರು, ಮರಾಠರು ಮತ್ತು ನಿಜಾಮನೊಂದಿಗೆ ಒಪ್ಪಂದ ಮಾಡಿಕೊಂಡು ತ್ರಿಪಕ್ಷ ಒಕ್ಕೂಟ ರಚಿಸಿದರು.
- ಆದರೆ ಹೈದರಾಲಿ ತನ್ನ ಚಾಣಾಕ್ಷ್ಯ ರಾಜಕೀಯ ತಂತ್ರಗಳನ್ನು ಪ್ರಯೋಗಿಸುವ ಮೂಲಕ ತನ್ನ ವಿರುದ್ಧ ರಚನೆಯಾಗಿದ್ದ ಮಿತ್ರಕೂಟವನ್ನು ಒಡೆದು ಮರಾಠರು ಮತ್ತು ನಿಜಾಮನನ್ನು ಬ್ರಿಟಿಷರ ವಿರುದ್ಧ ಎತ್ತಿಕಟ್ಟುವಲ್ಲಿ ಯಶಸ್ವಿಯಾದನು.

10.ಎರಡನೇ ಆಂಗ್ಲೋ-ಮೈಸೂರು ಯುದ್ಧಕ್ಕೆ ಕಾರಣಗಳನ್ನು ತಿಳಿಸಿ.

- ತಿರುವಾಂಕೂರು ಮತ್ತು ತಂಜಾವೂರು ರಾಜ್ಯಗಳಲ್ಲಿನ ರಾಜಕೀಯ ಸನ್ನಿವೇಶಗಳು ಈ ಯುದ್ಧಕ್ಕೆ ಕಾರಣಗಳಾದವು.
- ಬ್ರಿಟಿಷರು ಮದ್ರಾಸ್ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಲು ಯತ್ನಿಸಿದರು.
- ಮರಾಠರು ಮಾಧವರಾಯನ ನೇತೃತ್ವದಲ್ಲಿ ಸೈನ್ಯವನ್ನು ಮುನ್ನಡೆಸಿ ಶ್ರೀರಂಗಪಟ್ಟಣದ ಕಡೆ ನುಗ್ಗಿದಾಗ ಹೈದರ್ ಬ್ರಿಟಿಷರ ಸಹಾಯವನ್ನು ಅಪೇಕ್ಷಿಸಿದನು.ಆದರೆ ಬ್ರಿಟಿಷರು ಇದನ್ನು ತಿರಸ್ಕರಿಸಿ ಮದರಾಸು ಒಪ್ಪಂದಕ್ಕೆ ವಿರುದ್ಧವಾಗಿ ನಡೆದು ಕೊಂಡರು.
- ಮಾಹೆಯು ಫ್ರೆಂಚರ ವಸಾಹತುವಾಗಿದ್ದು ಹೈದರಾಲಿಯ ನಿಯಂತ್ರಣಕ್ಕೆ ಒಳಪಟ್ಟಿತ್ತು.ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡಿದ್ದು ಎರಡನೇ ಮೈಸೂರು ಯುದ್ಧಕ್ಕೆ ಕಾರಣವಾಯಿತು.

11.ಮೂರನೇ ಆಂಗ್ಲೋ-ಮೈಸೂರು ಯುದ್ಧಕ್ಕೆ ಕಾರಣಗಳೇನು?

- ಈ ಯುದ್ಧಕ್ಕೆ ನೇರ ಕಾರಣ ತಿರುವಾಂಕೂರು ರಾಜಕಾರಣಕ್ಕೆ ಸಂಬಂಧಿಸಿದ ಪ್ರಶ್ನೆ
- ತಿರುವಾಂಕೂರಿನ ರಾಜ ನೆರೆಯ ಕೊಚ್ಚಿ ಸಂಸ್ಥಾನದಲ್ಲಿ ಬ್ರಿಟಿಷರ ಬೆಂಬಲದಿಂದ ಕೋಟೆಯನ್ನು ನಿರ್ಮಿಸಿದನು.ಹಾಗೂ ಡಚ್ಚರಿಂದ ಆಯಕೋಟಾ ಮತ್ತು ಕಾಂಗನೂರು ಕೋಟೆಗಳನ್ನು ಪಡೆದು ಕೊಂಡಿದ್ದನು. ಇದು ಮಂಗಳೂರು ಷರತ್ತುಗಳ ಉಲ್ಲಂಘನೆಯಾಗಿತ್ತು.

12.ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧಕ್ಕೆ ಕಾರಣಗಳೇನು?

- ಟಿಪ್ಪು ಮೂರನೇ ಆಂಗ್ಲೋ-ಮೈಸೂರುಯುದ್ಧದನ ಸೋಲನ್ನು ವೈಯಕ್ತಿಕವಾಗಿ ಸ್ವೀಕರಿಸಿ ಅದನ್ನು ಸವಾಲೆಂದು ಪರಿಗಣಿಸಿದ್ದನು.
- ಟಿಪ್ಪು ಬ್ರಿಟಿಷರ ಅಧೀನದಲ್ಲಿದ್ದ ಮಲೆಯಾಳಂ ಮಾತನಾಡುವ ಭೂಪ್ರದೇಶಗಳು ನ್ಯಾಯಯುತವಾಗಿ ತನಗೇ ಸೇರಬೇಕೆಂದು ವಾದಿಸಿದನು.ಆದರೆ ಬ್ರಿಟಿಷರು ಅದನ್ನು ಪುಷ್ಟೀಕರಿಸಲಿಲ್ಲ.
- ಟಿಪ್ಪು ಭಾರತೀಯ ರಾಜರ ಒಕ್ಕೂಟವನ್ನು ತನ್ನೆಡೆಗೆ ಸೆಳೆಯಲು ಮಾಡುತ್ತಿದ್ದ ಪ್ರಯತ್ನಗಳು ಹಾಗೂ ತಮ್ಮ ಬದ್ಧ ವೈರಿಗಳಾದ ಫ್ರೆಂಚರೊಂದಿಗೆ ಟಿಪ್ಪು ಹೊಂದಿದ್ದ ಸಂಬಂಧಗಳು ವೆಲ್ಲೆಸ್ಲಿಯಲ್ಲಿ ದ್ವೇಷ

ಭಾವನೆಗಳನ್ನು ಬೆಳೆಸಿದವು.

- ಟಿಪ್ಪು ಬ್ರಿಟಿಷರ ವಿರುದ್ಧವಾಗಿದ್ದ ಫ್ರೆಂಚರ ಸಹಕಾರ ಪಡೆಯಲು ಪ್ರಯತ್ನಿಸಿ ರಾಯಭಾರಿಯನ್ನು ಕಳುಹಿಸಿದ್ದನು. ಇದು ಬ್ರಿಟಿಷರ ಅಸಮಾಧಾನಕ್ಕೆ ಕಾರಣವಾಯಿತು.
- ಹೊಸ ಷರತ್ತುಗಳನ್ನು ಒಳಗೊಂಡಿರುವ ಒಂದು ಒಪ್ಪಂದವನ್ನು ಟಿಪ್ಪುವಿನ ಮೇಲೆ ಹೇರಲಾಯಿತು.ಆದರೆ ಟಿಪ್ಪು ಅಮಾನವೀಯ ಮತ್ತು ಅಸಮಾನ ಷರತ್ತುಗಳನ್ನು ಒಳಗೊಂಡಿದ್ದ ಇದನ್ನು ನಿರಾಕರಿಸಿದನು.ಇದು ಯುದ್ಧಕ್ಕೆ ಕಾರಣವಾಯಿತು.

13.ಬ್ರಿಟಿಷರ ವಿರುದ್ಧದ ಹಲಗಲಿಯ ಬೇಡರ ದಂಗೆಯನ್ನು ವಿವರಿಸಿ.

- ಹಲಗಲಿ ಎಂಬುದು ಬಾಗಲಕೋಟೆ ಜಿಲ್ಲೆಯ ಮುದೋಳ ತಾಲ್ಲೂಕಿನ ಒಂದು ಪುಟ್ಟಗ್ರಾಮ.
- ಇದು ಮುದೋಳ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿತ್ತು.
- 1857 ರ ಬಂಡಾಯದ ಸಂದರ್ಭದಲ್ಲಿ ಬ್ರಿಟಿಷರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಶಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನೊಂದನ್ನು ಜಾರಿಗೆ ತಂದರು.
- ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶಕ್ಕೆ ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ಧರಿರಲಿಲ್ಲ.
- ಬೇಡರು ತಮ್ಮ ಪರಂಪರಾನುಗತವಾದ ಹಕ್ಕನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಬ್ರಿಟಿಷರ ವಿರುದ್ಧ ಸಿಡಿದೆದ್ದರು.
- ಈ ಹೋರಾಟದಲ್ಲಿ ಹಲಗಲಿಯ ಸುತ್ತಮುತ್ತಲಿನ ಪ್ರದೇಶಗಳಾದ ಮಂಟೂರು,ಬೋದಾನಿ,ಆಲಗುಂಡಿಯ ಬೇಡರು ಹಲಗಲಿಯ ಬೇಡರೊಂದಿಗೆ ಸೇರಿಕೊಂಡರು.
- ಈ ದಂಗೆಯನ್ನು ಬ್ರಿಟಿಷರು ನಿಷ್ಕಾರುಣ್ಯವಾಗಿ ಹತ್ತಿಕ್ಕಿದರು.

14.ಭಾರತದ ಚರಿತ್ರೆಯಲ್ಲಿ 18 ನೇ ಶತಮಾನವನ್ನು 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದು ಕರೆಯಲಾಗಿದೆ ಸಮರ್ಥಿಸಿ.

- ಫ್ರೆಂಚರು ಮತ್ತು ಇಗ್ಲಿಷರು ಭಾರತದ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ
- ಮೊಘಲ್ ಚಕ್ರವರ್ತಿ ಔರಂಗಜೇಬನ ಮರಣ
- ಔರಂಗಜೇಬನ ಮರಣದಿಂದ ಮೊಘಲರ ರಾಜಕೀಯ ಸಾರ್ವಭೌಮತ್ವ ಕುಗ್ಗಿತು.
- ದಕ್ಷಿಣ ಭಾರತದಲ್ಲಿ ಮೊಘಲರ ರಾಜಕೀಯ ಹತೋಟಿ ತಪ್ಪಿತು.
- ಕರ್ನಾಟಿಕ್ ಪ್ರದೇಶದಲ್ಲಿ ಅಧಿಕಾರಕ್ಕಾಗಿ ಕಿತ್ತಾಟಗಳು ಆರಂಭವಾದವು.
- 1704 ರಲ್ಲಿ ಸಂಭವಿಸಿದ ಚಿಕ್ಕದೇವರಾಜ ಒಡೆಯರ ಮರಣ ಮೈಸೂರು ರಾಜ್ಯದ ರಾಜಕೀಯ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರಿತು.
- ಮೈಸೂರಿನಲ್ಲಿ ಉತ್ತರಾಧಿಕಾರತ್ವದ ಸಮಸ್ಯೆ ಉಂಟಾಯಿತು.
- ಮರಾಠರು,ಹೈದರಾಬಾದಿನ ನಿಜಾಮ ಮತ್ತು ಆರ್ಕಾಟಿನ ನವಾಬರ ನಡುವೆ ಹೋರಾಟಗಳು
- ಆಂಗ್ಲೋ-ಮೈಸೂರು ಯುದ್ಧಗಳು ಈ ಅವಧಿಯಲ್ಲಿ ಸಂಭವಿಸಿದವು.

## ಅಧ್ಯಾಯ-5
## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು

**I.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1.19 ನೇ ಶತಮಾನವನ್ನು ಏನೆಂದು ಕರೆಯುವರು?
- ನವೋದಯದ ಕಾಲ

2.ರಾಜಾರಾಮ್ ಮೋಹನರಾಯರು ಪ್ರಾರಂಭಿಸಿದ ಪತ್ರಿಕೆ
- ಸಂವಾದ ಕೌಮುದಿ.(ಬಂಗಾಳಿ ಭಾಷೆಯ ಪತ್ರಿಕೆ)

3.ಪ್ರಾರ್ಥನಾ ಸಮಾಜದ ಸ್ಥಾಪಕರು- ಡಾ.ಆತ್ಮರಾಮ್ ಪಾಂಡುರಂಗ

4.ಯುವ ಬಂಗಾಳಿ ಚಳುವಳಿಯನ್ನು ಆರಂಭಿಸಿದವರು
-ಹೆನ್ರಿ ವಿವಿಯನ್ ಡಿರೋಜಿಯೋ

5.ಸ್ವಾಮಿ ವಿವೇಕಾನಂದರ ಗುರುಗಳಾಗಿದ್ದವರು- ರಾಮಕೃಷ್ಣ ಪರಮ ಹಂಸರು

6.ಆಂಗ್ಲೋ ಓರಿಯಂಟಲ್ ಕಾಲೇಜನ್ನು 1875 ರಲ್ಲಿ ಸ್ಥಾಪಿಸಿದ ಸ್ಥಳ ಯಾವುದು? - ಆಲಿಘರ್

7.ರಾಜಾ ರಾಮಮೋಹನ್‌ರಾಯರನ್ನು ಆಧುನಿಕ ಭಾರತದ ಹರಿಕಾರ, ಭಾರತದ ಪುನರುಜ್ಜೀವನದ ಜನಕ ಮತ್ತು ಭಾರತೀಯ ರಾಷ್ಟ್ರೀಯತೆಯ ಪ್ರವಾದಿ ಎಂದು ಹೇಳಿದವರು ಯಾರು?
- ರವೀಂದ್ರನಾಥ ಠಾಗೂರ್‌ರವರು.

8.ವೇದಗಳಿಗೆ ಮರಳಿ ಎಂದು ಕರೆನೀಡಿದವರು ಯಾರು?
- ದಯಾನಂದ ಸರಸ್ವತಿ

9.ದಯಾನಂದ ಸರಸ್ವತಿಯವರು ಗ್ರಂಥ ಯಾವುದು? - ಸತ್ಯಾರ್ಥ ಪ್ರಕಾಶ

10.ಸತ್ಯಶೋಧಕ ಸಮಾಜದ ಸ್ಥಾಪಕರು ಯಾರು? - ಜ್ಯೋತಿಭಾ ಫುಲೆ

11.ಜ್ಯೋತಿಭಾ ಫುಲೆ ಯವರ ಗ್ರಂಥ ಯಾವುದು?
- ಗುಲಾಮಗಿರಿ (ಶೇಟ್ಕಾರ್ಯಚಾ ಅಸೂದ್)

12.ಆಲಿಘರ್ ಸುಧಾರಣಾ ಚಳುವಳಿಯನ್ನು ಆರಂಭಿಸಿದವರು ಯಾರು?
- ಸರ್ ಸಯ್ಯದ್ ಅಹಮದ್ ಖಾನ್

13.ರಾಮಕೃಷ್ಣ ಮಿಷನ್ ಸ್ಥಾಪಿಸಿದವರು ಯಾರು?
- ಸ್ವಾಮಿ ವಿವೇಕಾನಂದರು

14.1897 ರಲ್ಲಿ ವಿವೇಕಾನಂದರು ರಾಮಕೃಷ್ಣ ಆಶ್ರಮವನ್ನು ಎಲ್ಲಿ ಸ್ಥಾಪಿಸಿದರು?

– ಕಲ್ಕತ್ತಾದ ಬಳಿಯ ಬೇಲೂರಿನಲ್ಲಿ ರಾಮಕೃಷ್ಣ ಆಶ್ರಮವನ್ನು ಸ್ಥಾಪಿಸಿದರು.

15.ಥಿಯೋಸಾಫಿಕಲ್ ಸೊಸೈಟಿಯನ್ನು ಸ್ಥಾಪಿಸಿದವರು ಯಾರು?

–ಮೇಡಂ ಬ್ಲವಾಟ್ಸ್ಕೆ ಮತ್ತು ಅಮೆರಿಕನ್ನರಾದ ಕರ್ನಲ್ ಹೆಚ್.ಎಸ್. ಅಲ್ಕಾಟ್

16.ಭಾರತದಲ್ಲಿ ಥಿಯೋಸಾಫಿಕಲ್ ಸೊಸೈಟಿಯ ಕೇಂದ್ರ ಕಛೇರಿ ಎಲ್ಲಿದೆ?

– ಮದರಾಸಿನ ಹತ್ತಿರದ ಅಡ್ಯಾರ್ ನಲ್ಲಿದೆ.

17.ಅನಿಬೆಸೆಂಟರು ಪ್ರಾರಂಭಿಸಿದ ಪತ್ರಿಕೆಗಳು ಯಾವುವು?

– ನ್ಯೂ ಇಂಡಿಯಾ ಮತ್ತು ಕಾಮನ್ ವ್ಹೀಲ್

18.ಸತಿ ಪದ್ಧತಿಯನ್ನು 1829 ರಲ್ಲಿ ನಿಷೇಧಿಸಿದವರು ಯಾರು?

– ವಿಲಿಯಂ ಬೆಂಟಿಂಗ್

19.ಶ್ವೇತ ಸರಸ್ವತಿ ಎಂದು ಯಾರನ್ನು ಕರೆಯುವರು?–ಅನಿಬೇಸೆಂಟ್

20.ಅನಿಬೇಸೆಂಟವರನ್ನು ಶ್ವೇತ ಸರಸ್ವತಿ ಎಂದು ಏಕೆ ಕರೆಯುವರು?

–ಇವರು ಭಗವದ್ಗೀತೆಯನ್ನು ಇಂಗ್ಲಿಷ್‌ಗೆ ಅನುವಾದ ಮಾಡಿದರು ಆದ್ದರಿಂದ

21.ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ ಸಂಘಟನೆಯನ್ನು ಆರಂಭಿಸಿದವರು ಯಾರು? –ಶ್ರೀ ನಾರಾಯಣಗುರು

22.ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ ಸಂಘಟನೆಯ ಪ್ರಮುಖ ಉದ್ದೇಶವೇನು?

–ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯಗಳ ಸಬಲೀಕರಣ.

23.1924 ರಲ್ಲಿ ವೈಕಂ ಸತ್ಯಾಗ್ರಹವೆಂಬ ದೇವಾಲಯ ಪ್ರವೇಶ ಚಳುವಳಿಯನ್ನು ನಡೆಸಿದವರು ಯಾರು?

– ಶ್ರೀ ನಾರಾಯಣಗುರು ಮತ್ತು ಅವರ ಅನುಯಾಯಿಗಳು

24. “ಮಾನವ ಕುಲಕ್ಕೆ ಒಂದೇ ಜಾತಿ,ಒಂದೇ ಧರ್ಮ ಮತ್ತು ಒಬ್ಬನೇ ದೇವರು" ಎಂಬುದು ಯಾರ ಆಶಯವಾಗಿತ್ತು?

– ಶ್ರೀ ನಾರಾಯಣಗುರು

25.ದ್ರಾವಿಡ ಕಳಗಂ ಎಂಬ ಸಂಘಟನೆಯನ್ನು ಹುಟ್ಟುಹಾಕಿದವರುಯಾರು?

– ಇ.ವಿ.ರಾಮಸ್ವಾಮಿ ನಾಯ್ಕರ್ (ಪೆರಿಯಾರ್)

26.ಪೆರಿಯಾರ್ ಆರಂಭಿಸಿದ ಪತ್ರಿಕೆ ಯಾವುದು? ಜಸ್ಟೀಸ್ ಪತ್ರಿಕೆ

27.ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟ ಮೊದಲ ಮಹಿಳಾ ಅಧ್ಯಕ್ಷರು ಯಾರು? – ಅನಿಬೆಸೆಂಟ್ ರವರು

28.ದಯಾನಂದ ಸರಸ್ವತಿಯವರ ತಂದೆ ತಾಯಿ ಯಾರು?

– ದಯಾನಂದ ಸರಸ್ವತಿಯವರ ತಂದೆ ಅಂಬಾಶಂಕರ ತಿವಾರಿ ಮತ್ತು ತಾಯಿ ಅಮೃತಾಬಾಯಿ.

29.ಶುದ್ಧಿ ಚಳುವಳಿಯನ್ನು ಏಕೆ ಆರಂಭಿಸಲಾಯಿತು?

– ಹಿಂದೂ ಧರ್ಮದಿಂದ ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರ ಗೊಂಡವರನ್ನು ಮತ್ತೆ ಹಿಂದೂಧರ್ಮಕ್ಕೆ ಸೇರಿಸಿಕೊಳ್ಳಲು ಈ ಚಳುವಳಿ ಯನ್ನು ಆರಂಭಿಸಲಾಯಿತು

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಬ್ರಹ್ಮ ಸಮಾಜದ ಬೋಧನೆಗಳಾವುವು? / ಬ್ರಹ್ಮ ಸಮಾಜ ಪ್ರತಿಪಾದಿಸಿದ ತತ್ವಗಳೇನು?

- ಏಕದೇವತಾರಾಧನೆಯ ಪ್ರತಿಪಾದನೆ
- ಅರ್ಥಹೀನ ಆಚರಣೆಗಳನ್ನು ವಿರೋಧಿಸುವುದು.
- ಪ್ರತಿಯೊಬ್ಬ ವ್ಯಕ್ತಿಯು ಘನತೆಯಿಂದ ಬಾಳಬೇಕು ಮತ್ತು ಯಾವ ನಿಯಮ ಮತ್ತು ಆಚರಣೆಗಳು ಇದಕ್ಕೆ ಕೇಡುಂಟು ಮಾಡಬಾರದು ಎನ್ನುವುದು ಅವರ ನಿಲುವಾಗಿತ್ತು.
- ಬಹು ಪತ್ನಿತ್ವ ಪದ್ಧತಿಯನ್ನು ವಿರೋಧಿಸುವ ಮೂಲಕಸ್ತ್ರೀಯರಿಗೆ ಸಮಾನತೆ ದೊರಕಬೇಕೆಂದು ಬ್ರಹ್ಮ ಸಮಾಜ ಆಶಿಸಿತು.
- ವಿಧವೆಯರಿಗೆ ಆಸ್ತಿಯ ಪಾಲು ಇರಬೇಕೆಂದು ಪ್ರತಿಪಾದಿಸಿತು.
- ಒಳ್ಳೆಯದು ಎಲ್ಲಿದ್ದರೂ ಅದನ್ನು ಸ್ವೀಕರಿಸಬಹುದು ಎಂದು ಬ್ರಹ್ಮ ಸಮಾಜ ಸಾರಿತು.
- ವೇದಾಂತ ಮತ್ತು ಉಪನಿಷತ್ತುಗಳು ಈ ಆಶಯವನ್ನು ಬೋಧಿಸುತ್ತವೆಂದು ಸಾರಿದರು.
- ಪಶ್ಚಿಮದ ನಾಗರಿಕತೆಯಲ್ಲಿ ಒಳ್ಳೆಯದಿದ್ದರೆ ಅದೂ ಕೂಡ ಸ್ವೀಕಾರಾರ್ಹ ಎಂದು ಹೇಳಿದರು. ಇಂಗ್ಲಿಷ್ ಶಿಕ್ಷಣಕ್ಕೆ ಒತ್ತು ನೀಡಿದರು.

2.ದಯಾನಂದ ಸರಸ್ವತಿಯವರ 'ವೇದಗಳಿಗೆ ಹಿಂದಿರುಗಿ' ಎನ್ನುವ ಘೋಷಣೆ ಯನ್ನು ವಿಶ್ಲೇಷಿಸಿ.

- ದಯಾನಂದ ಸರಸ್ವತಿಯವರು ವೇದಗಳ ಅಧ್ಯಯನದಿಂದ ಕಂಡುಕೊಂಡ ಅಂಶವೆಂದರೆ ಆಧುನಿಕ ಭಾರತದ ಸಮಸ್ಯೆಗಳಿಗೆ ಪರಿಹಾರಗಳು ವೇದಗಳಲ್ಲಿವೆ ಎಂಬುದಾಗಿತ್ತು.
- ಈ ಹಿನ್ನೆಲೆಯಲ್ಲಿ ಅವರು ಘೋಷಿಸಿದ ವಾಕ್ಯ 'ವೇದಗಳಿಗೆ ಮರಳಿ' (ಹಿಂತಿರುಗಿ)'ಎಂಬುದಾಗಿತ್ತು.
- ಆದ್ದರಿಂದ ಇವರು ಸುಧಾರಣಾವಾದಿಯೆಂಬುದಕ್ಕಿಂತ ಪುನರುತ್ಥಾನ ವಾದಿ ಎಂದೆನಿಸಿಕೊಂಡರು.
- ವೇದಗಳು ಮಾತ್ರ ಪ್ರಾಮಾಣೀಕೃತ ಎಂದು ಸಾರಿದರು

3.ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ.

- ಸತ್ಯಶೋಧಕ ಸಮಾಜವನ್ನು ಜ್ಯೋತಿಭಾ ಫುಲೆಯವರು ಸ್ಥಾಪಿಸಿದರು.
- ಸತ್ಯಶೋಧಕ ಸಮಾಜವು ಬ್ರಾಹ್ಮಣೇತರ ವರ್ಗಗಳಿಗೆ ಮತ್ತು

ಸ್ತ್ರೀಯರಿಗೆ ಸಮಾನತೆಯ ಹಕ್ಕುಗಳನ್ನು ದೊರಕಿಸಿಕೊಡುವ ಚಳುವಳಿಯನ್ನು ಪ್ರಾರಂಭಿಸಿತು.

- ಶಾಲೆಗಳನ್ನು ಪ್ರಾರಂಭಿಸಿ ಶೂದ್ರರಿಗೆ ಮತ್ತು ಹೆಣ್ಣು ಮಕ್ಕಳಿಗೆ ವಿದ್ಯೆಯನ್ನು ನೀಡಿದರು.
- ಮಾಲಿ ಸಮುದಾಯಕ್ಕೆ ಸೇರಿದ ಫುಲೆಯವರು ತಮ್ಮ ಬಾವಿಯಲ್ಲಿ ಅಸ್ಪೃಶ್ಯರು ಮತ್ತು ಎಲ್ಲ ಜಾತಿಯವರಿಗೂ ನೀರು ಸೇದಿಕೊಳ್ಳಲು ಅವಕಾಶ ಕೊಟ್ಟರು.
- ಫುಲೆಯವರ ಈ ಪ್ರಯತ್ನದಲ್ಲಿ ಅವರ ಪತ್ನಿ ಸಾವಿತ್ರಿಬಾಯಿ ಫುಲೆಯವರು ಒತ್ತಾಸೆಯಾಗಿದ್ದರು.
- ಇವರ ಪ್ರಯತ್ನದಿಂದ ಹೆಣ್ಣು ಮಕ್ಕಳಿಗೆ ವಸತಿ ನಿಲಯವನ್ನು ಸ್ಥಾಪಿಸಲಾಯಿತು.
- ಸಮಾನತೆಯ ಆಶಯದ ತಳಹದಿಯ ಮೇಲೆ ಹೊಸ ಸಮಾಜವನ್ನು ನಿರ್ಮಿಸುವ ಆಧುನಿಕ ಕಾಲಘಟ್ಟದ ಪ್ರಯತ್ನಗಳಲ್ಲಿ ಇವರು ಶ್ರಮಿಸಿದರು.

4.ಆಲಿಘರ್ ಚಳುವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ.

- 19 ನೇ ಶತಮಾನದ ಕೊನೆಯಲ್ಲಿ ಮುಸ್ಲಿಂ ಸಮಾಜದಲ್ಲಿ ಹೊಸ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣಾ ಅಲೆಯು ಪ್ರಾರಂಭವಾಯಿತು.
- ಬ್ರಿಟಿಷ್ ವಿರೋಧಿ ಮನೋಧರ್ಮದಿಂದ ಮುಸ್ಲಿಂ ಸಮುದಾಯ ಇಂಗ್ಲೀಷ್ ಶಿಕ್ಷಣದಿಂದ ದೂರವಾಗಿ ಶಿಕ್ಷಣದ ಅರ್ಹತೆಯಿಂದ ದೊರೆಯ ಬಹುದಾದ ಅವಕಾಶಗಳನ್ನು ಕಳೆದುಕೊಂಡರು. ಇಂತಹ ಸಂದರ್ಭದಲ್ಲಿ ಸರ್ ಸಯ್ಯದ್ ಅಹಮ್ಮದ್ ಖಾನ್ ಹೊಸ ಚಳುವಳಿ ರೂಪಿಸಿದರು.
- ಮಹಮದನ್ ಲಿಬರ್ಟಿ ಸೊಸೈಟಿಯು ಧಾರ್ಮಿಕ,ಸಾಮಾಜಿಕ ಮತ್ತು ರಾಜಕೀಯ ವಿಷಯಗಳಿಗೆ ಸಂಬಂಧಿಸಿದ ಚರ್ಚೆ ಮಾಡತೊಡಗಿತು.
- ಸಂಪ್ರದಾಯ ,ಮೌಢ್ಯತೆ,ಅಜ್ಞಾನ ಮತ್ತು ಅವೈಜ್ಞಾನಿಕ ಮನೋಧರ್ಮದ ವಿರುದ್ಧ ಹೋರಾಡುವುದು.
- ಪಾಶ್ಚಿಮಾತ್ಯ ವಿಜ್ಞಾನ ಮತ್ತು ಸಂಸ್ಕೃತಿ ಕುರಿತು ಚಿಂತನೆಗಳನ್ನು ಹರಡುವ ಮೂಲಕ ವೈಜ್ಞಾನಿಕತೆ ಬೆಳೆಸುವುದು.

5.ರಾಮಕೃಷ್ಣ ಮಿಷನ್‌ನ ದೃಷ್ಟಿಕೋನವನ್ನು ವಿವರಿಸಿ.

- ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್ ಅನ್ನು ಸ್ಥಾಪಿಸಿದ ಉದ್ದೇಶ ಅವರ ಗುರುಗಳಾದ ರಾಮಕೃಷ್ಣ ಪರಮಹಂಸರ ಚಿಂತನೆ ಮತ್ತು ಆಶಯಗಳನ್ನು ಜನರಿಗೆ ತಲುಪಿಸುವುದು.
- ರಾಮಕೃಷ್ಣ ಪರಮಹಂಸರು ಕಾಳಿಕಾ ಮಾತೆಯ ಆರಾಧಕರು ಮತ್ತು ಕಲ್ಕತ್ತಾದ ಕಾಳಿಮಂದಿರದಲ್ಲಿ ಅರ್ಚಕರಾಗಿದ್ದರು.
- ಸನ್ಯಾಸ,ಧ್ಯಾನ ಮತ್ತು ಭಕ್ತಿಯ ಮೂಲಕ ಆಧ್ಯಾತ್ಮಿಕ ಮುಕ್ತಿಯನ್ನು ಪಡೆಯಬೇಕೆಂದು ತಮ್ಮ ಬದುಕಿನ ಉದಾಹರಣೆಯ ಮೂಲಕ ತೋರಿಸಿಕೊಟ್ಟರು.
- ಎಲ್ಲಾ ಧರ್ಮಗಳ ಆಶಯವು ಇದೇ ಎಂದ ಭಾವಿಸಿದ್ದರು.ದೇವರನ್ನು ಮತ್ತು ಮುಕ್ತಿಯನ್ನು ತಲುಪಲು ಅನೇಕ ಮಾರ್ಗಗಳಿವೆ ಎಂದು ನಂಬಿದ್ದರು. ಜತೆಗೆ ಮೂರ್ತಿಪೂಜೆ ಅವಶ್ಯಕವೆಂದರು.

6.ಸ್ವಾಮಿ ವಿವೇಕಾನಂದರು ಯುವಶಕ್ತಿಯ ಪ್ರೇರಕರಾಗಿದ್ದರು.ಹೇಗೆ ಎಂಬುದನ್ನು ವಿವರಿಸಿ.

- ಸ್ವಾಮಿ ವಿವೇಕಾನಂದರು ಭಾರತ ಮತ್ತು ಪಾಶ್ಚಿಮಾತ್ಯ ಚಿಂತನಧಾರೆಗಳನ್ನು ಅಭ್ಯಸಿಸಿದರು.
- ಭಾರತದ ದಾರ್ಶನಿಕತೆಯ ವಿವಿಧ ದೃಷ್ಟಿಕೋನಗಳನ್ನು ಆಳವಾಗಿ ಅಧ್ಯಯನ ಮಾಡಿದ ನಂತರ ಅವುಗಳ ಮಹೋನ್ನತಿಯನ್ನು ಭಾರತೀಯರಿಗೆ ಮತ್ತು ಪಾಶ್ಚಿಮಾತ್ಯರಿಗೆ ತಿಳಿಸುವ ಕಾರ್ಯ ಮಾಡಿದರು.
- ಜಾತಿವ್ಯವಸ್ಥೆ ಮತ್ತು ಅದರ ಶೋಷಣೆಯ ಮುಖಗಳು,ಬಡತನ, ಅಜ್ಞಾನ, ಅನಕ್ಷರತೆ ಮುಂತಾದ ಒಡಕುಗಳಿಂದ ತುಂಬಿದ ಭಾರತದ ಸಮಾಜಕ್ಕೆ ಹೊಸ ಶೋಷಣೆ ಮುಕ್ತ ರೂಪವನ್ನು ಕೊಡಬೇಕೆಂದು ಅವಿರತ ಪ್ರಯತ್ನ ಮಾಡಿದರು.
- ಸಮಾಜದ ಸುಧಾರಣೆಗೆ, ಮೊದಲು ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕು ಮತ್ತು ಆ ಮೂಲಕ ಅವರೇ ಸುಧಾರಣೆಯನ್ನು ಬಯಸುತ್ತಾರೆಂಬುದು ಅವರ ಆಶಯವಾಗಿತ್ತು.
- ಪಾಶ್ಚಿಮಾತ್ಯರ ಅಂಧಾನುಕರಣೆಯನ್ನು ಬಿಡಬೇಕೆಂದರು.
- ಧರ್ಮದ ಕರ್ತವ್ಯವೆಂದರೆ ಕತ್ತಲಲ್ಲಿರುವವರಿಗೆ ಬೆಳಕು ನೀಡಬೇಕು. ಇಲ್ಲದಿದ್ದರೆ ಅದು ಧರ್ಮವೇ ಅಲ್ಲ ಎಂದರು.
- ಇವರು 1893 ರಲ್ಲಿ ಅಮೆರಿಕಾದ ಚಿಕಾಗೊ ವಿಶ್ವಧಾರ್ಮಿಕ ಸಮ್ಮೇಳನದಲ್ಲಿ ಭಾರತೀಯ ಸಾಂಸ್ಕೃತಿಕ ಹಿರಿಮೆಯನ್ನು ಪರಿಚಯಿಸಿದರು.
- ಸ್ವಾತಂತ್ರ್ಯ ಹೋರಾಟಕ್ಕೆ ಇವರ ಆಲೋಚನೆಗಳು ಶಕ್ತಿಯನ್ನು ತುಂಬಿ ಸ್ವಾತಂತ್ರ್ಯವೆಂದರೆ ಅದು ಸಾಮಾಜಿಕ ಸಮಾನತೆಯೂ ಹೌದು ಎನ್ನುವುದನ್ನು ಸಾರಿದವು. – ಹೀಗೆ ಸ್ವಾಮಿ ವಿವೇಕಾನಂದರು ಯುವಶಕ್ತಿಯ ಪ್ರೇರಕರಾಗಿದ್ದರು.

7.ಅನಿಬೆಸೆಂಟರ ಸುಧಾರಣಾ ಕ್ರಮಗಳಾವುವು?

- ಅನಿಬೆಸೆಂಟರು ಥಿಯೋಸಾಫಿಕಲ್ ಸೊಸೈಟಿಯ ಅನುಯಾಯಿಯಾಗಿ ಭಾರತಕ್ಕೆ ಬಂದರು.

- ಇವರು ವೇದಾಂತಶಾಸ್ತ್ರದ ಬಗೆಗೆ ವಿಶೇಷ ಜ್ಞಾನವನ್ನು ಹೊಂದಿದ್ದರು.
- ಐಹಿಕ ಸಂಪತ್ತಿನ ಮೇಲೆ ನಿಂತಿರುವ ಪಶ್ಚಿಮದ ಸಂಸ್ಕೃತಿಗಿಂತ ಆಧ್ಯಾತ್ಮಿಕ ಶಕ್ತಿಯ ಮೇಲೆ ನಿಂತಿರುವ ಭಾರತದ ಸಂಸ್ಕೃತಿ ಶ್ರೇಷ್ಠವಾದದ್ದೆಂದು ಪ್ರತಿಪಾದಿಸಿದರು.
- ಇವರು ಹಿಂದೂ ಮತ್ತು ಬೌದ್ಧ ಧರ್ಮಗಳ ತುಲನಾತ್ಮಕ ಅಧ್ಯಯನ ಮಾಡಿದ್ದರು. ಇವರು ಭಗವದ್ಗೀತೆಯನ್ನು ಇಂಗ್ಲಿಷಿಗೆ ಅನುವಾದ ಮಾಡಿ ಶ್ವೇತ ಸರಸ್ವತಿ ಎನಿಸಿಕೊಂಡರು.
- ಎಲ್ಲಾ ವರ್ಗಗಳಿಗೆ ಶಿಕ್ಷಣ ಸಿಗಬೇಕೆಂಬುದು ಇವರ ಆಶಯವಾಗಿತ್ತು. 1898 ರಲ್ಲಿ ಸೆಂಟ್ರಲ್ ಹಿಂದೂ ಕಾಲೇಜನ್ನು ಬನಾರಸ್‌ನಲ್ಲಿ ಪ್ರಾರಂಭಿಸಿದರು.
- ಇವರು ನ್ಯೂ ಇಂಡಿಯಾ ಮತ್ತು ಕಾಮನ್ ವ್ಹೀಲ್ ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದರು.
- ಇವರು ಹೋಮ್ ರೂಲ್‌ಲೀಗ್ ಆರಂಭಿಸಿ ಸ್ವಾತಂತ್ರ್ಯ ಚಳುವಳಿಗೆ ಚಾಲನೆ ನೀಡಿದರು.

8.ನಾರಾಯಣಗುರು ಧರ್ಮಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ.

- ಶ್ರೀ ನಾರಾಯಣಗುರು ಅವರು ಈ ಸುಧಾರಣಾ ಸಂಘಟನೆಯನ್ನು ಆರಂಭಿಸಿದರು.ಈ ಸಂಘಟನೆಯ ಉದ್ದೇಶ ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯಗಳ ಸಬಲೀಕರಣ.
- ಮನುಷ್ಯ ಘನತೆಯಿಂದ ಬದುಕುವ ಸಮಾಜದ ನಿರ್ಮಾಣವೇ ಈ ಸಂಘಟನೆಯ ಉದ್ದೇಶವಾಗಿತ್ತು. ಇದನ್ನು ಸಾಧಿಸಲು ಶಿಕ್ಷಣವೇ ಮಾರ್ಗವೆಂದು ಸಾರಿದರು.
- ಕೆಳ ಸಮುದಾಯಗಳ ಪ್ರವೇಶ ನಿರಾಕರಿಸುತ್ತಿದ್ದ ದೇವಾಲಯಗಳಿಗೆ ಪರ್ಯಾಯ ದೇವಾಲಯಗಳನ್ನು ಕಟ್ಟಿದರು.

9.ಪೆರಿಯಾರ್ ಚಳುವಳಿಯ ಮುಖ್ಯಾಂಶಗಳನ್ನು ಪಟ್ಟಿಮಾಡಿ.

- ಬ್ರಾಹ್ಮಣೇತರರಿಗೆ ದೊರೆಯ ಬೇಕಾದ ಅವಕಾಶಗಳಿಗಾಗಿ ನಡೆದ ಚಳುವಳಿಯೇ ಪೆರಿಯಾರ್ ಚಳುವಳಿಯಾಗಿದೆ.ಇದು ಇ.ವಿ.ರಾಮಸ್ವಾಮಿ ನಾಯ್ಕರ್ ಅವರ ನೇತೃತ್ವದಲ್ಲಿ ಆರಂಭಗೊಂಡ 'ಆತ್ಮ ಗೌರವ ಚಳುವಳಿ'
- ಇವರನ್ನು ಜನರು ಪ್ರೀತಿಯಿಂದ ಪೆರಿಯಾರ್ (ಹಿರಿಯರು) ಎಂದು ಕರೆದರು.
- ಇವರು ವರ್ಣಾಶ್ರಮ ಧರ್ಮದ ಪರವಾಗಿ ಕಾಂಗ್ರೆಸ್ ಇದೆ ಎಂದು ಅದಕ್ಕೆ ಪರ್ಯಾಯವಾದ ದ್ರಾವಿಡ ಚಳುವಳಿಯೆಂಬ ಜನಾಂಗೀಯ ಪರಿಕಲ್ಪನೆ ಕೇಂದ್ರಿತ ಚಳುವಳಿಯನ್ನು ರೂಪಿಸ ತೊಡಗಿದರು.
- ಆರ್ಯ, ಬ್ರಾಹ್ಮಣ ಎನ್ನುವ ಜನಾಂಗೀಯ ಶ್ರೇಷ್ಠತೆಯನ್ನು ಸಾರುವ ಆಲೋಚನೆಗಳನ್ನು ಇಡಿಯಾಗಿ ತಿರಸ್ಕರಿಸಿದರು.
- ತಮಿಳು ಭಾಷೆಯನ್ನು ದ್ರಾವಿಡ ಭಾಷೆಯೆಂದರು.ಸಂಸ್ಕೃತ ಭಾಷೆ ಮತ್ತು ಸಾಹಿತ್ಯವನ್ನು ವಿರೋಧಿಸಿದರು.
- ರಾಮಾಯಣ ಮಹಾಕಾವ್ಯದಲ್ಲಿ ಬರುವ ರಾವಣನನ್ನು ದ್ರಾವಿಡರ ನಾಯಕನೆಂದು ಬಿಂಬಿಸಿ,ರಾಮನ್ನು ವೈದಿಕ ಧರ್ಮದ ದೇವರೆಂದು ತಿರಸ್ಕರಿಸಿದರು.
- ಬನಾರಸ್ಸಿನಲ್ಲಿ ಆದ ಕಹಿ ಅನುಭವಗಳಿಂದ ಮತ್ತಷ್ಟು ವ್ಯಗ್ರರಾದ ಪೆರಿಯಾರ್ ಸಂಸ್ಕೃತ ಭಾಷೆ ಮತ್ತು ರಾಮಾಯಣದ ರಾಮ ಮತ್ತು ರಾವಣರನ್ನು ಸಾಂಸ್ಕೃತಿಕ ಸಂಕೇತಗಳನ್ನಾಗಿ ಪರಿವರ್ತಿಸಿ,ರಾವಣ ಪರಂಪರೆಯನ್ನು ವೈಭವೀಕರಿಸಿದರು.
- ಜಾತಿ ಮತ್ತು ಲಿಂಗ ತಾರತಮ್ಯಗಳನ್ನು ವಿರೋಧಿಸಿ ಸಮಾನತೆಯ ಆಶಯಗಳನ್ನು ಎತ್ತಿಹಿಡಿದರು.

10.ಆರ್ಯ ಸಮಾಜದ ಉದ್ದೇಶಗಳೇನು?

- ಎಲ್ಲ ಹಿಂದುಗಳು ರೂಪವಿಲ್ಲದ ಒಬ್ಬನೇ ದೇವರಲ್ಲಿ ನಂಬಿಕೆಯಿಡಬೇಕು.
- ಹುಟ್ಟಿನಿಂದ ಯಾರೂ ಶೂದ್ರರೂ ಅಲ್ಲ ಅಥವಾ ಬ್ರಾಹ್ಮಣರೂ ಅಲ್ಲವೆಂದು ಜಾತಿ ಆಧಾರವನ್ನು ತಿರಸ್ಕರಿಸಿತು.
- ಅಂತರ್ಜಾತೀಯ ವಿವಾಹಗಳನ್ನು ಪ್ರೋತ್ಸಾಹಿಸುವುದು.
- ಬಹು ಪತ್ನಿತ್ವ ಮತ್ತು ಬಾಲ್ಯವಿವಾಹ ಪದ್ಧತಿಯನ್ನು ತಿರಸ್ಕರಿಸುವುದು.
- ಸ್ತ್ರೀ ಮತ್ತು ಪುರುಷರು ಸಮಾನರು
- ವೇದಗಳು ಮಾತ್ರ ಶ್ರೇಷ್ಠ ಪ್ರಾಚೀನ ಪವಿತ್ರ ಗ್ರಂಥಗಳನ್ನು ಅಧ್ಯಯನ ಮಾಡಬೇಕು ಮತ್ತು ಬೋಧಿಸಬೇಕು.

11.ಯುವ ಬಂಗಾಳಿ ಚಳುವಳಿಯನ್ನು ಕುರಿತು ವಿವರಿಸಿ.

- ಯುವಬಂಗಾಳಿ ಚಳುವಳಿಯನ್ನು ಪ್ರಾರಂಭಿಸಿದವರು ಹೆನ್ರಿ ವಿವಿಯನ್ ಡಿರೇಜಿಯೋ.
- ಯುವಬಂಗಾಳಿ ಚಳುವಳಿಯು ಪ್ರಕೃತಿ,ಮಾನವೀಯತೆ,ದೇವರು ಮುಂತಾದ ವಿಷಯಗಳನ್ನು ಕುರಿತು ಚರ್ಚೆ ಮತ್ತು ಸಂವಾದಗಳನ್ನು ನಡೆಸಿತು.
- ಮೂಢನಂಬಿಕೆಗಳಿಂದ ತುಂಬಿದ್ದ ಸಾಮಾಜಿಕ ಮೌಢ್ಯಚಾರಗಳಲ್ಲೇ ಮುಳುಗಿದ್ದ ಸಮಾಜಕ್ಕೆ ಪರಿಹಾರವಿರುವುದು ಎಲ್ಲರೂ ವೈಜ್ಞಾನಿಕ ದೃಷ್ಟಿಕೋನ ಬೆಳಸಿಕೊಂಡಾಗ ಮಾತ್ರವೆಂದು ಡಿರೇಜಿಯೋ ಪ್ರಚುರ ಪಡಿಸಿದರು.
- ಮಹಿಳಾ ಹಕ್ಕುಗಳ ಪ್ರತಿಪಾದನೆ ಮಾಡಿದರು ಮತ್ತು ಜಾತಿ ಪ್ರೇರಿತ ಶೋಷಣೆಯನ್ನು ವಿರೋಧಿಸಿದರು.

12. ಥಿಯೋಸಾಫಿಕಲ್ ಸೊಸೈಟಿಯ ಗುರಿ/ಉದ್ದೇಶಗಳೇನು?

- ವಿವಿಧ ಧರ್ಮಗಳು, ದರ್ಶನಗಳ ಮತ್ತು ವಿಜ್ಞಾನಗಳ ತುಲನಾತ್ಮಕ ಅಧ್ಯಯನ ಮಾಡುವುದು.
- ಮನುಷ್ಯನ ಆಂತರ್ಯದಲ್ಲಿರುವ ಅದಮ್ಯ ಶಕ್ತಿಯನ್ನು ಕಂಡು ಕೊಳ್ಳಲು ಪ್ರಯತ್ನಿಸುವುದು.
- ಮನುಷ್ಯನಿಗೆ 'ವಿಶ್ವಭ್ರಾತೃತ್ವ' ಪ್ರಜ್ಞೆಯನ್ನು ಘೋಷಿಸುವುದು.

## ಅಧ್ಯಾಯ-6
## ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ 1857

**I.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1.ಬ್ರಿಟಿಷರು ಮೊಘಲ್ ಚಕ್ರವರ್ತಿ ಮತ್ತು ಔದ್‌ನ ನವಾಬನನ್ನು ಅಧಿಕಾರದಿಂದ ಪದಚ್ಯುತಗೊಳಿಸಿದ್ದರ ಪರಿಣಾಮವೇನು?
– ಇವರನ್ನು ಅವಲಂಬಿಸಿದ್ದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

2.ಬ್ರಿಟಿಷರು ಇನಾಂ ಆಯೋಗವನ್ನು ನೇಮಿಸಿ,ಇನಾಂ ಭೂಮಿಯನ್ನು ಹಿಂಪಡೆದ ಪರಿಣಾಮವೇನು? –ಇದರಿಂದಾಗಿ ಕೃಷಿಕರು ತೀವ್ರವಾಗಿ ಅವಮಾನ ಮತ್ತು ಆರ್ಥಿಕ ಸಂಕಷ್ಟ ಅನುಭವಿಸಿದರು.

3.ಬ್ರಿಟಿಷರ ಸೈನ್ಯದಲ್ಲಿದ್ದ ಭಾರತೀಯ ಸಿಪಾಯಿಗಳ ಸ್ಥಿತಿ ಗಂಭೀರವಾಗಿತ್ತು. ಹೇಗೆ?
–ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ,ವೇತನ,ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ.

4.1857 ರ ದಂಗೆ ಮೊದಲು ಆರಂಭವಾಗಿದ್ದು ಎಲ್ಲಿ? –ಬ್ಯಾರಕ್‌ಪುರದಲ್ಲಿ

5.ಬ್ರಿಟಿಷ್ ಸೈನ್ಯದ ಅಧಿಕಾರಿಯನ್ನು ಕೊಂದ ಭಾರತೀಯ ಸಿಪಾಯಿ ಯಾರು? –ಮಂಗಲಪಾಂಡೆ.

6.ಭಾರತೀಯ ಸೈನಿಕರು ರಾಯಲ್ ಎನ್‌ಫೀಲ್ಡ್ ಬಂದೂಕುಗಳನ್ನು ಬಳಸಲು ನಿರಾಕರಿಸಿದರು.ಏಕೆ?
– ಈ ಬಂದೂಕುಗಳಿಗೆ ಉಪಯೋಗಿಸುತ್ತಿದ್ದ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದರಿಂದ

7.ಬ್ರಿಟಿಷರ ನ್ಯಾಯದಾನವು ಪಕ್ಷಪಾತದಿಂದ ಕೂಡಿತ್ತೆಂದು ಹೇಗೆಹೇಳುವಿರಿ?
–ಇಂಗ್ಲಿಷ್ ನ್ಯಾಯಧೀಶರು ಬಹುತೇಕವಾಗಿ ಇಂಗ್ಲಿಷರ ಪರವಾಗಿ ನ್ಯಾಯದಾನ ನೀಡುತ್ತಿದ್ದರು.

8.ಧಾರ್ಮಿಕವಾಗಿ ಭಾರತೀಯ ಸೈನಿಕರನ್ನು ಪ್ರಚೋದಿಸಿದ ಅಂಶ ಯಾವುದು?
–ಬ್ರಿಟಿಷರು ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು , ಧಾರ್ಮಿಕವಾಗಿ ಸೈನಿಕರನ್ನುಪ್ರಚೋದಿಸಿತು.

9.ಝಾನ್ಸಿ ರಾಣಿಯು ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ ವಶಕ್ಕೆ ಪಡೆದ ಸ್ಥಳ ಯಾವುದು? – ಗ್ವಾಲಿಯರ್

10.1857 ರ ದಂಗೆಯಲ್ಲಿ ಸಿಪಾಯಿಗಳು ಜನರ ವಿಶ್ವಾಸ ಕಳೆದುಕೊಂಡರು ಏಕೆ?
–ಸಿಪಾಯಿಗಳು ಮಾಡಿದಂತಹ ಲೂಟಿ, ದರೋಡೆ ಮೊದಲಾದ ಗಂಭೀರ ತಪ್ಪುಗಳಿಂದಾಗಿ ಜನರ ವಿಶ್ವಾಸವನ್ನು ಕಳೆದುಕೊಂಡರು.

11.ಝಾನ್ಸಿ ರಾಣಿ ಲಕ್ಷ್ಮೀಬಾಯಿ ಇಂಗ್ಲಿಷರ ವಿರುದ್ಧ ಯುದ್ಧ ಸಾರಲು ಕಾರಣವೇನು? – ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ

12.ಡಾಲ್‌ಹೌಸಿ ಜಾರಿಗೆ ತಂದ ನೀತಿ –ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಕೀಯ ಅಂಶಗಳು ಹೇಗೆ ಪ್ರೇರಕವಾದವು? ಅಥವಾ 1857 ರ ದಂಗೆಗೆ ರಾಜಕೀಯ ಕಾರಣಗಳೇನು? ಅಥವಾ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯ ಪರಿಣಾಮಗಳು ಯಾವುವು ?

- ಬ್ರಿಟಿಷರು ಜಾರಿಗೆ ತಂದಿದ್ದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ಹಲವು ದೇಶೀಯ ಸಂಸ್ಥಾನಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು.
- ಈ ನೀತಿಯಿಂದಾಗಿ ಸತಾರ,ಜೈಪುರ,ಝಾನ್ಸಿ,ಉದಯಪುರ ಮೊದಲಾದ ಸಂಸ್ಥಾನಗಳು ಬ್ರಿಟಿಷರ ವಶವಾದವು.
- ಡಾಲ್ ಹೌಸಿ ಯು ತಂಜಾವೂರು ಮತ್ತು ಕರ್ನಾಟಿಕ್ ನವಾಬರಿಗಿದ್ದ ರಾಜ ಪದವಿಗಳನ್ನು ರದ್ದು ಪಡಿಸಿದನು.
- ಮೊಘಲ್ ಚಕ್ರವರ್ತಿ, ಔದ್ ನ ನವಾಬ ಮೊದಲಾದ ರಾಜರುಗಳನ್ನು ಬ್ರಿಟಿಷರು ಪದಚ್ಯುತಗೊಳಿಸಿದರು ಇದರಿಂದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

2.1857 ರ ದಂಗೆ/ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳೇನು?ಅಥವಾ 1857 ರ ದಂಗೆಯು ಯಶಸ್ವಿಯಾಗಲಿಲ್ಲ. ಸಮರ್ಥಿಸಿ.

- 1857 ರ ದಂಗೆಯು ಇಡೀ ಭಾರತವನ್ನು ವ್ಯಾಪಿಸಿದ ದಂಗೆ ಯಾಗಿರಲಿಲ್ಲ.
- ಇದು ದೇಶದ ಬಿಡುಗಡೆಗಾಗಿ ನಡೆದದ್ದಕ್ಕಿಂತ ಅವರವರ ಸ್ವಹಿತಾಸಕ್ತಿ, ಹಕ್ಕುಗಳಿಗಾಗಿ ನಡೆದಿತ್ತು. ಇದು ಯೋಜಿತ ದಂಗೆಯಾಗಿರದೆ ಅನಿರೀಕ್ಷಿತ ಕಾರಣಗಳಿಂದ ಪ್ರೇರೇಪಿತವಾಗಿತ್ತು.
- ಬ್ರಿಟಿಷ್ ಸೈನಿಕರಲ್ಲಿದ್ದ ಒಗ್ಗಟ್ಟು ಭಾರತೀಯ ಸೈನಿಕರಲ್ಲಿರಲಿಲ್ಲ.
- ದಂಗೆಗೆ ಸೂಕ್ತ ಮಾರ್ಗದರ್ಶನ ಮತ್ತು ವ್ಯವಸ್ಥಿತ ಸಂಘಟನೆಯ ಕೊರತೆ ಇತ್ತು.
- ಯುದ್ಧ ತಂತ್ರ,ಸೈನಿಕ ಪರಿಣಿತಿ,ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತಿನ ಕೊರತೆ

- ಹೋರಾಟಗಾರರಲ್ಲಿ ನಿಶ್ಚಿತ ಗುರಿಯಿರಲಿಲ್ಲ.
- ಹಲವಾರು ದೇಶೀಯ ಸಂಸ್ಥಾನಗಳ ರಾಜರು ಬ್ರಿಟಿಷರಿಗೆ ನಿಷ್ಠರಾಗಿದ್ದರು
- ಸಿಪಾಯಿಗಳು ಮಾಡಿದ ಲೂಟಿ,ದರೋಡೆಗಳಿಂದ ಜನರ ವಿಶ್ವಾಸ ಕಳೆದುಕೊಂಡರು.

3.ಆರ್ಥಿಕ ಬದಲಾವಣೆಗಳು 1857 ರ ದಂಗೆಗೆ ಹೇಗೆ ಕಾರಣವಾದವು? ಅಥವಾ 1857 ರ ದಂಗೆಗೆ ಆರ್ಥಿಕ ಕಾರಣಗಳೇನು?

- ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು.
- ಭಾರತದಲ್ಲಿದ್ದಂತಹ ಕರಕುಶಲಗಾರರು ನಿರುದ್ಯೋಗಿಗಳಾದರು.
- ವಿಶೇಷವಾಗಿ ಬಟ್ಟೆ ಮತ್ತು ಉಣ್ಣೆ ಕೈಗಾರಿಕೆಗಳು ಅವನತಿ ಹೊಂದಿ ನೇಕಾರಿಕೆ ವೃತ್ತಿಯವರೂ ಉದ್ಯೋಗ ಕಳೆದುಕೊಂಡರು.
- ಗೃಹ ಕೈಗಾರಿಕೆಗಳು ತೀವ್ರ ಆರ್ಥಿಕನಷ್ಟ ಅನುಭವಿಸಿ ಶಿಥಿಲಗೊಂಡವು.
- ಬ್ರಿಟಿಷರು ಭಾರತದ ವಸ್ತುಗಳನ್ನು ಇಂಗ್ಲೆಂಡಿಲ್ಲಿ ಮಾರಲು ದುಬಾರಿ ಸುಂಕವನ್ನು ಹೇರಿದರು.
- ಜಮೀನ್ದಾರಿ ಪದ್ಧತಿಯಿಂದಾಗಿ ಸರ್ಕಾರ ಮತ್ತು ರೈತರ ಮಧ್ಯೆ ಇದ್ದ ಮಧ್ಯವರ್ತಿ ಜಮೀನ್ದಾರರು ಕೃಷಿಕರನ್ನು ಶೋಷಿಸುತ್ತಿದ್ದರು.
- ಕಂದಾಯ ವಸೂಲಿ ಮಾಡಲು ತಾಲ್ಲೂಕುದಾರರಿಗಿದ್ದ ಹಕ್ಕುಗಳನ್ನು ಹಿಂಪಡೆಯಲಾಯಿತು.
- ಇನಾಂ ಆಯೋಗ ನೇಮಿಸಿ ಇನಾಂ ಭೂಮಿಯನ್ನು ವಾಪಸ್ ಪಡೆಯಲಾಯಿತು. ಇದರಿಂದಾಗಿ ಕೃಷಿಕರು ತೀವ್ರವಾಗಿ ಅವಮಾನ ಮತ್ತು ಆರ್ಥಿಕ ಸಂಕಷ್ಟ ಅನುಭವಿಸಿದರು.

4.1857 ರ ದಂಗೆಗೆ ಆಡಳಿತಾತ್ಮಕ ಅಂಶಗಳು ಹೇಗೆ ಕಾರಣವಾದವು? ಅಥವಾ ಬ್ರಿಟಿಷರು ತಂದ ಆಢಳಿತಾತ್ಮಕ ಸುಧಾರಣೆಗಳು 1857 ರ ದಂಗೆಗೆ ಕಾರಣವಾದವು ವಿಶ್ಲೇಷಿಸಿ.

- ಬ್ರಿಟಿಷರು ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಜಾರಿಗೆ ತಂದರು.
- ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ದವು.
- ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಗಿತ್ತು.
- ಇಂಗ್ಲಿಷ್ ನ್ಯಾಯಾಧೀಶರು ಬಹುತೇಕವಾಗಿ ಇಂಗ್ಲಿಷರ ಪರವಾಗಿ ನ್ಯಾಯ ನೀಡುತ್ತಿದ್ದರು.
- ಹೊಸ ಕಾನೂನಿನ ಆಶಯಗಳು ಜನರಿಗೆ ಅರಿವಾಗಲಿಲ್ಲ.

5.1858 ರ ಮಹಾರಾಣಿಯ ಘೋಷಣೆಯ ಮೂಲಕ ಬ್ರಿಟಿಷರು ಭಾರತೀಯರನ್ನು ಸಂತೈಸಲು ಹೇಗೆ ಪ್ರಯತ್ನಿಸಿದರು? ಅಥವಾ 1857 ರ ಕ್ರಾಂತಿಯ ಪರಿಣಾಮಗಳೇನು?

- ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡು ಬ್ರಿಟಿಷ್ ಸರ್ಕಾರ ನೇರವಾಗಿ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡಿತು.
- ಭಾರತದ ವ್ಯವಹಾರವನ್ನು ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು.
- 1858 ರಲ್ಲಿ ಬ್ರಿಟನ್ ರಾಣಿಯು ಘೋಷಣೆಯನ್ನು ಹೊರಡಿಸುವ ಮೂಲಕ ಭಾರತೀಯರಿಗೆ ಸುಭದ್ರ ಸರ್ಕಾರ ನೀಡುವ ಆಶ್ವಾಸನೆ ನೀಡಿದಳು.
- ಕಂಪನಿಯು ದೇಶೀ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
- ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
- ಕಾನೂನಿನ ಮುಂದೆ ಸಮಾನತೆ. ಧಾರ್ಮಿಕ ಸಹಿಷ್ಣುತೆಯೊಂದಿಗೆ, ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ವೆಂದು ರಾಣಿ ಭರವಸೆ ನೀಡಿದಳು.
- ಭಾರತೀಯರ ಪ್ರೀತಿ,ಬೆಂಬಲ,ವಿಶ್ವಾಸವಿಲ್ಲದಿದ್ದರೆ ಶಾಂತಿಯಿಂದ ಆಳ್ವಿಕೆ ಮಾಡಲು ಸಾಧ್ಯವಿಲ್ಲವೆಂಬುದನ್ನು ಬ್ರಿಟಿಷರುಅರಿತರು.
- ಇದುಭಾರತೀಯರ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿಯನ್ನು ನೀಡಿತು.

6.1857 ರ ದಂಗೆಗೆ ಸೈನಿಕ ಕಾರಣಗಳೇನು?

- ಬ್ರಿಟಿಷ್ ಸೈನ್ಯದಲ್ಲಿದ್ದ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರ ವಾಗಿತ್ತು
- ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ,ವೇತನ,ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ.
- ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು, ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.

7.1857 ರ ದಂಗೆಯ ಆರಂಭಕ್ಕೆ ಬ್ಯಾರಕ್‌ಪುರ ಹೇಗೆ ಕಾರಣವಾಯಿತು?

- ಬ್ಯಾರಕ್‌ಪುರದಲ್ಲಿನ ಸೈನಿಕ ಪಡೆಯಲ್ಲಿ ಬ್ರಿಟಿಷರು ರಾಯಲ್ ಎನ್‌ಫೀಲ್ಡ್ ಎಂಬ ನವೀನ ಬಂದೂಕುಗಳಿಗೆ ಉಪಯೋಗಿಸುತ್ತಿದ್ದ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆ ಎಂಬ ವದಂತಿಯು ತೀವ್ರ ಅಸಮಧಾನಕ್ಕೆ ಕಾರಣವಾಯಿತು.
- ಸೈನಿಕರಿಗೆ ತುಪಾಕಿಯನ್ನು ಹಲ್ಲಿನಿಂದ ಕಚ್ಚಿ ತೆಗೆಯುವಂತೆ ಇಂಗ್ಲಿಷರು ಆದೇಶಿಸಿದಾಗ ಇದನ್ನು ತಿರಸ್ಕರಿಸಿ ಮೇಲಾಧಿಕಾರಿಗಳ ವಿರುದ್ಧ ಬ್ಯಾರಕ್‌ಪುರದ ಸೈನಿಕರು ಬಂಡಾಯವೆದ್ದರು.

- ಈ ಸಂದರ್ಭದಲ್ಲಿ ಮಂಗಲಪಾಂಡೆ ಎಂಬ ಸೈನಿಕನು ಬ್ರಿಟಿಷ್ ಸೈನ್ಯದ ಅಧಿಕಾರಿಯೊಬ್ಬನನ್ನು ಕೊಂದನು. ಇದರಿಂದ ಮಂಗಲಪಾಂಡೆ ಯನ್ನು ಬಂಧಿಸಿ ಗಲ್ಲಿಗೇರಿಸಲಾಯಿತು.

8.ಬ್ರಿಟಿಷ್ ಸೈನ್ಯದಲ್ಲಿದ್ದ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರ ವಾಗಿತ್ತು.ಎಂದು ಹೇಗೆ ಹೇಳುವಿರಿ.

- ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ,ವೇತನ,ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ.
- ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು, ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.

## ಅಧ್ಯಾಯ-7
## ಸ್ವಾತಂತ್ರ್ಯ ಹೋರಾಟ

**I.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1.ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದ ವರ್ಷ -1885

2.ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧ್ಯಕ್ಷರು - W.C.ಬ್ಯಾನರ್ಜಿ

3.ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪಕರು ಯಾರು?

- ನಿವೃತ್ತ ಬ್ರಿಟಿಷ್ ನಾಗರೀಕ ಸೇವಾಧಿಕಾರಿ ಎ.ಓ.ಹ್ಯೂಮ್

4.ದಾದಾಬಾಯಿ ನವರೋಜಿಯವರು ಪ್ರತಿಪಾದಿಸಿದ ಸಿದ್ಧಾಂತ ಯಾವುದು?- ಸಂಪತ್ತಿನ ಸೋರುವಿಕೆ ಸಿದ್ಧಾಂತ

5.ಮಂದಗಾಮಿಗಳು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಅನುಸರಿಸುತ್ತಿದ್ದ ಮಾರ್ಗಗಳು - ಪ್ರಾರ್ಥನೆ ಮತ್ತು ಮನವಿಗಳು

6.ವರ್ನಾಕ್ಯೂಲರ್ ಪ್ರೆಸ್ ಕಾಯಿದೆಯನ್ನು ಬ್ರಿಷರು ಜಾರಿಗೆ ತರಲು ಕಾರಣ ವೇನು?

- ಪತ್ರಿಕೆಗಳು ಬ್ರಿಟಿಷ್ ಸರ್ಕಾರದ ಧೋರಣೆಗಳನ್ನು ವಿರೋಧಿಸತೊಡಗಿದವು ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಉದ್ದೇಶದಿಂದ ವರ್ನಾಕ್ಯೂಲರ್ ಪ್ರೆಸ್ ಕಾಯಿದೆಯನ್ನು ಬ್ರಿಷರು ಜಾರಿಗೆ ತಂದರು.

7.ವರ್ನಾಕ್ಯೂಲರ್ ಪ್ರೆಸ್ ಕಾಯಿದೆಯನ್ನು ಜಾರಿಗೆ ತಂದ ಬ್ರಿಟಿಷ್ ವೈಸರಾಯ್ ಯಾರು ? -ಲಾರ್ಡ್ ಲಿಟ್ಟನ್

8.ಉದಾರ ರಾಷ್ಟ್ರವಾದದ ಕಾಲವೆಂದು ಯಾರ ಕಾಲವನ್ನು ಕರೆಯಲಾಗಿದೆ?

-ಮಂದಗಾಮಿಗಳ ಕಾಲ

9.ತೀವ್ರಗಾಮಿಗಳು ಮಂದಗಾಮಿಗಳನ್ನು ರಾಜಕೀಯ ಭಿಕ್ಷುಕರು ಎಂದು ಕರೆಯಲು ಕಾರಣವೇನು?

-ಮಂದಗಾಮಿಗಳ ಬ್ರಿಟಿಷರ ಬಗೆಗಿನ ಮೃದುಧೋರಣೆಯಿಂದಾಗಿ ರಾಜಕೀಯ ಭಿಕ್ಷುಕರು ಎಂದು ಕರೆದರು.

10.1905 ರಲ್ಲಿ ಬಂಗಾಳವನ್ನು ವಿಭಜಿಸಿದ ವೈಸ್‌ರಾಯ್ ಯಾರು?

-ಲಾರ್ಡ್ ಕರ್ಜನ್

11.ಲಾರ್ಡ್ ಕರ್ಜನ್ ಬಂಗಾಳದ ವಿಭಜನೆಯ ಯೋಜನೆಯನ್ನು ರೂಪಿಸಲು ಮುಖ್ಯ ಕಾರಣವೇನು?

-ಬಂಗಾಳವು ತೀವ್ರ ಸ್ವರೂಪದ ಬ್ರಿಟಿಷ್ ವಿರೋಧಿ ಭಾವನೆ ಮತ್ತು ಚಟುವಟಿಕೆಗಳ ಕೇಂದ್ರವಾಗಿತ್ತು.

12.ಮುಸ್ಲಿಂ ಲೀಗ್ ಸ್ಥಾಪನೆಯಾದ ವರ್ಷ – 1906

13.ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ ಎಂದು ಹೇಳಿದವರು? -ಬಾಲಗಂಗಾಧರ ತಿಲಕರು

14.ತಿಲಕರು ಪ್ರಕಟಿಸಿದ ಪತ್ರಿಕೆಗಳು ಯಾವುವು?

-ಮರಾಠಿ ಭಾಷೆಯ ಕೇಸರಿ ಪತ್ರಿಕೆ ಮತ್ತು ಇಂಗ್ಲಿಷ್ ಭಾಷೆಯ ಮರಾಠ ಪತ್ರಿಕೆ.

15.ಬಾಲಗಂಗಾಧರ ತಿಲಕರು ರಚಿಸಿದ ಗ್ರಂಥ-ಗೀತಾರಹಸ್ಯ

16.ಇಂಗ್ಲೆಂಡಿನಲ್ಲಿ ಹುಟ್ಟಿದ ಗುಪ್ತ ಸಂಘಟನೆ ಯಾವುದು?

-ಲೋಟಸ್ ಮತ್ತು ಡಾಗರ್

17.ತಿಲಕರು ಗಣೇಶ,ಶಿವಾಜಿ,ದುರ್ಗಾ ಮುಂತಾದ ಉತ್ಸವಗಳನ್ನು ಆರಂಭಿಸಿದ ಉದ್ದೇಶವೇನು? -ಜನರನ್ನು ಹೋರಾಟಕ್ಕೆಪ್ರೇರೇಪಿಸಲು

18.ಕ್ರಾಂತಿಕಾರಿಗಳು ತಮ್ಮ ಗುರಿ ಸಾಧನೆಗೆ ಬಳಸಿದ ತಂತ್ರವೇನು ?

- ಬಾಂಬುಗಳು ಮತ್ತು ಬಂದೂಕುಗಳ ಪ್ರಯೋಗ ಮಾಡಿದರು

19.ಮಂದಗಾಮಿಯುಗ ಎಂದರೇನು?

-ಸಾಂಪ್ರದಾಯಿಕವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು ಮಂದಗಾಮಿ ಯುಗ ಎನ್ನವರು.

20.ಸಂಪತ್ತಿನ ಸೋರುವಿಕೆಯ ಸಿದ್ಧಾಂತ ಎಂದರೇನು?

-ಭಾರತದ ಸಂಪತ್ತು ಯಾವ ರೀತಿಯಲ್ಲಿ ಇಂಗ್ಲೆಂಡಿಗೆ ಸೋರಿ ಹೋಗುತ್ತಿದೆ ಎಂಬುದನ್ನು ಅಂಕಿ ಅಂಶಗಳೊಂದಿಗೆ ದಾದಾಬಾಯಿ ನವರೋಜಿಯವರು ವಿವರಿಸಿದರು ಇದನ್ನು ಸಂಪತ್ತಿನ ಸೋರುವಿಕೆಯ ಸಿದ್ಧಾಂತ ಎನ್ನುವರು.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ಮುಂಚಿತವಾಗಿ ಇದ್ದ ಸಂಸ್ಥೆ/ ಸಂಘಟನೆಗಳನ್ನು ತಿಳಿಸಿ.

- 1.ದ ಹಿಂದೂ ಮೇಳ 2.ದ ಈಸ್ಟ್ ಇಂಡಿಯನ್‌ಅಸೋಸಿಯೇಷನ್
  3.ಪೂನಾ ಸಾರ್ವಜನಿಕ ಸಭಾ
  4.ದ ಇಂಡಿಯನ್ ಅಸೋಸಿಯೇಷನ್

2.ಬ್ರಿಟಿಷ್ ಸರ್ಕಾರದ ಮುಂದಿಟ್ಟ ಮಂದಗಾಮಿಗಳ ಬೇಡಿಕೆಗಳಾವುವು?

- ದೇಶದ ಕೈಗಾರಿಕೆಗಳ ಅಭಿವೃದ್ಧಿ
- ಸೈನಿಕ ವೆಚ್ಚ ಕಡಿಮೆ ಮಾಡುವುದು.

- ಉತ್ತಮ ಶಿಕ್ಷಣವನ್ನು ಕೊಡುವುದು
- ಬಡತನದ ಬಗ್ಗೆ ಅಧ್ಯಯನ ಮತ್ತು ಪರಿಹಾರ ಕ್ರಮಗಳನ್ನು ಬ್ರಿಟಿಷ್ ಸರ್ಕಾರ ಕೈಗೊಳ್ಳಬೇಕೆಂದು ಒತ್ತಾಯಿಸುವುದು.

3.ಸಂಪತ್ತಿನ ಸೋರಿಕೆಯ ಸಿದ್ಧಾಂತವನ್ನು ವಿವರಿಸಿ.

- ಭಾರತದ ಸಂಪತ್ತು ಯಾವ ರೀತಿಯಲ್ಲಿ ಇಂಗ್ಲೆಂಡಿಗೆ ಸೋರಿ ಹೋಗುತ್ತಿದೆ ಎಂಬುದನ್ನು ಅಂಕಿ ಆಂಶಗಳೊಂದಿಗೆ ವಿವರಿಸಿದ್ದನ್ನು ದಾದಾಬಾಯಿ ನವರೋಜಿಯವರು ಸಂಪತ್ತಿನ ಸೋರಿಕೆಯ ಸಿದ್ಧಾಂತ ಎಂದು ಕರೆದರು.
- ಆಮದನ್ನು ಹೆಚ್ಚಿಸಿ ರಫ್ತನ್ನು ಕಡಿಮೆ ಮಾಡಿದ್ದರಿಂದ ಪ್ರತಿಕೂಲ ಸಂದಾಯ ಉಂಟಾಗಿ ದೇಶದ ಸಂಪತ್ತು ಇಂಗ್ಲೆಂಡಿಗೆ ಹರಿಯಲು ಕಾರಣವಾಯಿತು.
- ಬ್ರಿಟಿಷ್ ಅಧಿಕಾರಿಗಳಿಗೆ ನೀಡುತ್ತಿದ್ದ ವೇತನ, ನಿವೃತ್ತಿ ವೇತನ ಮತ್ತು ಆಡಳಿತಾತ್ಮಕ ವೆಚ್ಚವನ್ನು ಭಾರತವೇ ಭರಿಸಬೇಕಾದ ಹಿನ್ನೆಲೆಯಲ್ಲಿ ಅಪಾರವಾದ ಸಂಪತ್ತು ಬ್ರಿಟನ್ನಿಗೆ ಪರೋಕ್ಷವಾಗಿ ಹರಿದು ಹೋಗುತ್ತಿತ್ತು ಎಂಬುದನ್ನು ನವರೋಜಿಯವರು ವಿವರವಾಗಿ ವಿಶ್ಲೇಷಿಸಿ ಜನರ ಮುಂದಿಟ್ಟರು.

4.ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿನ ಕ್ರಾತಿಕಾರಿಗಳನ್ನು ಹೆಸರಿಸಿ

–ವಿ.ಡಿ.ಸಾವರ್ಕರ್,ಅರಬಿಂದೋ ಘೋಷ್,ಅಶ್ವಿನಿಕುಮಾರದತ್ತ, ರಾಜಗುರು, ರಾಜನಾರಾಯಣ ಬೋಸ್, ಚಾಕ್ಸಿಕರ್ ಸಹೋದರರು, ವಿಷ್ಣುಶ್ಶಾಸ್ತ್ರಿ, ಚಂಪೂಕರ್, ಶ್ಯಾಮಾಜಿ ಕೃಷ್ಣವರ್ಮ,ರಾಸ್ ಬಿಹಾರಿ ಬೋಸ್,ಮೇಡಮ್ ಕಾಮಾ,ಜತಿನ್‌ದಾಸ್, ಖುದಿರಾಮ್‌ಬೋಸ್, ರಾಮ್‌ಪ್ರಸಾದ್ ಬಿಸ್ಮಿಲ್,ಅಶ್ವಖುಲ್ಲಾಖಾನ್,ಭಗತ್ ಸಿಂಗ್, ಚಂದ್ರಶೇಖರ್ ಅಜಾದ್,ಮುಂತಾದವರು.

5.ಸ್ವಾತಂತ್ರ್ಯ ಚಳವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ ( ಅಥವಾ ಸ್ವಾತಂತ್ರ್ಯ ಚಳವಳಿಯಲ್ಲಿ ತೀವ್ರಗಾಮಿಗಳ ಪಾತ್ರವೇನು? ವಿವರಿಸಿ)

- ಬಾಲಗಂಗಾಧರ ತಿಲಕರು 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು;ಅದನ್ನು ಪಡೆದೇ ತೀರುವೆ' ಎಂದು ಘೋಷಿಸುವ ಮೂಲಕ ಬಹುಸಂಖ್ಯಾತ ಭಾರತೀಯರ ಮನದಾಳದ ಭಾವನೆಯನ್ನು ಹೊರಹಾಕಿದರು.
- ಪೂರ್ಣ ಸ್ವರಾಜ್ಯವನ್ನು ಪಡೆಯುವುದು ಇವರ ಗುರಿಯಾಗಿತ್ತು.
- ಇವರು ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸುವ ಪ್ರಯತ್ನ ಮಾಡಿದರು.
- ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಲು ಗಣೇಶ, ಶಿವಾಜಿ,ದುರ್ಗಾ ಮುಂತಾದ ಉತ್ಸವಗಳ ಮೂಲಕ ಹೋರಾಟಕ್ಕೆ ಪ್ರೇರೇಪಿಸಿದರು.
- ತಿಲಕರು ಮರಾಠಿ ಭಾಷೆಯಲ್ಲಿ ಕೇಸರಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಮರಾಠ ಪತ್ರಿಕೆಗಳನ್ನು ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಬಳಸಿಕೊಂಡರು
- ಈ ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆಪ್ರೇರೇಪಿಸಿದರು.ಇವರ ಬರವಣಿಗೆಗಳು ಜನರನ್ನು ಕೆರಳಿಸಿತು.
- ಈ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರವು ತಿಲಕರನ್ನು ಬಂಧಿಸಿತು.
- ಜೈಲಿನಲ್ಲಿಯ ಸಂದರ್ಭದಲ್ಲಿ ತಿಲಕರು 'ಗೀತಾರಹಸ್ಯ' ಎಂಬ ಗ್ರಂಥವನ್ನು ರಚಿಸುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಮತ್ತಷ್ಟು ತೀವ್ರತೆಯನ್ನು ತಂದು ಕೊಟ್ಟರು.

6.ಬಂಗಾಳದ ವಿಭಜನೆಯನ್ನು ಹಿಂಪಡೆಯಲು ಕಾರಣಗಳೇನು?

- ಬ್ರಿಟಿಷರ ಒಡೆದು ಆಳುವ ನೀತಿಯ ಪ್ರತೀಕವಾಗಿದ್ದ 1905ರ ಬಂಗಾಳದ ವಿಭಜನೆಯನ್ನು ಭಾರತೀಯ ರಾಷ್ಟ್ರೀಯ ಕಾಂಗ್ರಸ್ ವಿರೋಧಿಸಿತು.
- ಆದರೆ ಬಂಗಾಳಿ ಭಾಷೆಯು ಮುಸ್ಲಿಂ ಮತ್ತು ಹಿಂದೂ ಸಮುದಾಯಗಳ ಒಗ್ಗೂಡಿಸುವ ಶಕ್ತಿಯಾಗಿ ಪರಿಣಮಿಸಿತು.
- ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಭಾವೈಕ್ಯತೆಯನ್ನು ಸಾಧಿಸಲು ರಕ್ಷಾಬಂಧನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.
- ಬಂಗಾಳದ ವಿಭಜನೆಯ ವಿರುದ್ಧ ದೇಶದಾದ್ಯಂತ ಪ್ರತಿರೋಧಗಳು ವ್ಯಕ್ತವಾದವು.
- ಸ್ವದೇಶಿ ಚಳುವಳಿಯನ್ನು ಪ್ರಾರಂಭಿಸಲಾಯಿತು.
- ವಿದೇಶಿ ವಸ್ತುಗಳು ಮತ್ತು ಅದನ್ನು ಪ್ರೋತ್ಸಾಹಿಸುವ ಸಂಸ್ಥೆಗಳನ್ನು ಬಹಿಷ್ಕರಿಸಲು ಸ್ವದೇಶಿ ಆಂದೋಲನಕ್ಕೆ ಕರೆ ನೀಡಿದರು.
- ಭಾರತೀಯರ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಬಂಗಾಳದ ವಿಭಜನೆಯನ್ನು 1911ರಲ್ಲಿ ಬ್ರಿಟಿಷ್ ಸರ್ಕಾರವು ಹಿಂಪಡೆಯಿತು.

7.ಮಂದಗಾಮಿಗಳ ಹೋರಾಟದ ವಿಧಾನವನ್ನು ವಿವರಿಸಿ .

- ಮಂದಗಾಮಿಗಳಲ್ಲಿ W.C.ಬ್ಯಾನರ್ಜಿ,ಎಂ.ಜಿ.ರಾನಡೆ, ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ಪ್ರಮುಖರು.
- ಮಂದಗಾಮಿಗಳು ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ ಇಟ್ಟಿದ್ದರು.
- ಸಾಂವಿಧಾನಿಕ ಚೌಕಟ್ಟಿನೊಳಗೆ ಪ್ರಾರ್ಥನೆ ಮತ್ತು ಮನವಿಗಳ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದರು.
- ಇವರು ಜನರಲ್ಲಿ ರಾಜಕೀಯ ಎಚ್ಚರವನ್ನು ತರುವ ಪ್ರಯತ್ನವನ್ನು ಮಾಡಿದರು.

- ಇವರು ಭಾರತೀಯರಿಗೆ ಸಲ್ಲಬೇಕಾದ ನ್ಯಾಯವನ್ನು ಕುರಿತು ಸಭೆಗಳನ್ನು ನಡೆಸಿ, ಚರ್ಚಿಸಿ, ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದರು.
- ದೇಶದ ಕೈಗಾರಿಕೆಗಳ ಅಭಿವೃದ್ಧಿ, ಸೈನಿಕ ವೆಚ್ಚ ಕಡಿಮೆಮಾಡುವುದು, ಉತ್ತಮ ಶಿಕ್ಷಣ ಕೊಡುವುದು, ಬಡತನದ ಬಗ್ಗೆ ಅಧ್ಯಯನ ಮತ್ತು ಪರಿಹಾರ ಕಾರ್ಯಕ್ರಮಗಳನ್ನು ಬ್ರಿಟಿಷ್ ಸರ್ಕಾರ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

8.ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಹೋರಾಟದ ವಿಧಾನವನ್ನು ವಿವರಿಸಿ.

- ಕ್ರಾಂತಿಕಾರಿಗಳು ಪೂರ್ಣ ಸ್ವಾತಂತ್ರ್ಯದ ಕನಸನ್ನು ಕಂಡಿದ್ದರು
- ಭಾರತೀಯರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಮಾತ್ರ ಭಾರತದಿಂದ ಓಡಿಸಬಹುದೆಂದು ಅವರು ಬಲವಾಗಿ ನಂಬಿದ್ದರು
- ಇವರು ರಹಸ್ಯಸಂಘಗಳ ಮೂಲಕ ಭಾರತದಲ್ಲಿ ಮತ್ತು ವಿದೇಶಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿ ಹಣಕಾಸು, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಕಾರ್ಯದೊಂದಿಗೆ ಕ್ರಾಂತಿಕಾರಿಗಳಿಗೆ ತರಬೇತಿ ನೀಡಿದರು.
- ಇವರು ತಮ್ಮ ಗುರಿ ಸಾಧನೆಗಾಗಿ ಬಾಂಬುಗಳು ಮತ್ತು ಬಂದೂಕುಗಳ ಪ್ರಯೋಗ ಮಾಡಿದರು.

9. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹುಟ್ಟಿಕೊಂಡ ಪ್ರಮುಖ ಕ್ರಾಂತಿಕಾರಿ ಗುಪ್ತ/ ರಹಸ್ಯ ಸಂಘಟನೆಗಳನ್ನು ತಿಳಿಸಿ.

- ಇಂಗ್ಲೆಂಡಿನಲ್ಲಿ ಲೋಟಸ್ ಮತ್ತು ಡಾಗರ್ ಗುಪ್ತ ಸಂಘಟನೆಹುಟ್ಟಿತ್ತು.
- ಅಮೆರಿಕಾದಲ್ಲಿ 'ಗದ' ಕ್ರಾಂತಿಕಾರಿ ಸಂಘಟನೆ ಆರಂಭ
- ಭಾರತದಲ್ಲಿ ಅನುಶೀಲನ ಸಮಿತಿ ಮತ್ತು ಅಭಿನವ ಭಾರತ ರಹಸ್ಯ ಸಂಘಟನೆಗಳು ಮುಖ್ಯವಾದವುಗಳು.

## ಅಧ್ಯಾಯ-8
## ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ

**I.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1.ಗಾಂಧೀಜಿಯವರು ಜನಿಸಿದ ಸ್ಥಳ –ಗುಜರಾತ್‌ನ ಕಾಥೇವಾಡ ಜಿಲ್ಲೆಯ ಪೋರ್‌ಬಂದರ್ (1869 ಅಕ್ಟೋಬರ್ 2)

2.ಜಲಿಯನ್ ವಾಲಾಭಾಗ್ ಹತ್ಯಾಕಾಂಡವು ಯಾವ ಕಾಯ್ದೆಗೆ ವಿರುದ್ಧ ನಡೆದ ಹೋರಾಟದ ಪರಿಣಾಮ?– ರೌಲತ್ ಕಾಯ್ದೆ

3.ಅಲಿ ಸಹೋದರರು ನಡೆಸಿದ ಚಳವಳಿ – ಖಿಲಾಪತ್ ಚಳವಳಿ

4.ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು ಮಂಡಿಸಿದವರು ಯಾರು? – ಮಹಮದ್ ಅಲಿ ಜಿನ್ನಾ

5.1929 ರಲ್ಲಿ ಲಾಹೋರ್‌ನಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರಸ್‌ನ ಅಧವೇಶನದ ಅಧ್ಯಕ್ಷರಾಗಿದ್ದವರು – ಜವಾಹರಲಾಲ್ ನೆಹರು

6.ಮಹದ್ ಮತ್ತು ಕಾಲಾರಂ ದೇವಾಲಯ ಚಳವಳಿಯನ್ನು ರೂಪಿಸಿದವರು – ಡಾ. ಬಿ.ಆರ್. ಅಂಬೇಡ್ಕರ್

7. ಭಾರತೀಯ ರಾಷ್ಟ್ರೀಯ ಸೇನೆಯ ಝಾನ್ಸಿ ರೆಜಿಮೆಂಟಿನ ನೇತೃತ್ವವನ್ನು ವಹಿಸಿದ್ದವರು ಯಾರು? – ಲಕ್ಷ್ಮಿ ಸಹಗಲ್

8.ಉಪ್ಪಿನ ಸತ್ಯಾಗ್ರಹವನ್ನು ಗಾಂಧೀಜಿಯವರು ನಡೆಸಿದ ಸ್ಥಳ- ದಂಡಿ

9.ಕ್ವಿಟ್ ಇಂಡಿಯಾ ಚಳವಳಿ ನಡೆದ ವರ್ಷ –1942

10.ಮೊದಲನೇ ದುಂಡು ಮೇಜಿನ ಪರಿಷತ್ ಸಮಾವೇಶ ನಡೆದ ವರ್ಷ –1930

11.ಸ್ವರಾಜ್ ಪಕ್ಷ ಸ್ಥಾಪನೆಯಾದ ವರ್ಷ–1923 ಸೆಪ್ಟೆಂಬರ್

12.ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದ ಅಧ್ಯಕ್ಷರು – ಸುಭಾಷ್‌ಚಂದ್ರಬೋಸ್

13.ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತರಾಗಿದ್ದವರು ?ಯಾ – ಸರ್ದಾರ್ ವಲ್ಲಭ ಭಾಯಿ ಪಟೇಲ್

14.ಮುಸ್ಲಿಂ ಲೀಗ್ ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ ನೇರ ಕಾರ್ಯಾಚರಣೆ ದಿನಕ್ಕೆ ಕರೆ ನೀಡಿದ್ದು ಯಾವಾಗ? – 1946 ಆಗಸ್ಟ್ 16 ರಂದು ನೇರ ಕಾರ್ಯಾಚರಣೆ ದಿನಕ್ಕೆ ಕರೆ ನೀಡಿತು.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಗಾಂಧೀಜಿಯವರ ಹೋರಾಟದ ಅಂತಃಸತ್ವದ ಸಾಧನಗಳಾವುವು?

- ಸತ್ಯಾಗ್ರಹ
- ಅಹಿಂಸೆ
- ಹಿಂದೂ–ಮುಸ್ಲಿಂ ಏಕತೆ

2.ಅಸಹಕಾರ ಚಳುವಳಿಯ ಕಾರ್ಯಕ್ರಮಗಳನ್ನು ಪಟ್ಟಿಮಾಡಿ /ತಿಳಿಸಿ.

- ಶಾಲಾ ಕಾಲೇಜುಗಳನ್ನು ಮತ್ತು ನ್ಯಾಯಾಲಯಗಳನ್ನು ಬಹಿಷ್ಕರಿಸುವುದು
- 1919 ರ ಕಾಯಿದೆಯನ್ವಯ ಪ್ರಾಂತೀಯ ಶಾಸನ ಸಭೆಗಳಿಗೆ ನಡೆಯುವ ಚುನಾವಣೆಯನ್ನು ಬಹಿಷ್ಕರಿಸುವುದು.
- ಬ್ರಿಟಿಷರು ನೀಡಿರುವ ಗೌರವ ಪದವಿಗಳನ್ನು ಮತ್ತು ಸ್ಥಾನಗಳನ್ನು ವಾಪಸ್ಸು ಮಾಡುವುದು.
- ಸ್ಥಳೀಯ ಸಭೆಗಳಿಗೆ ನಾಮನಿರ್ದೇಶನಗೊಂಡ ಸದಸ್ಯರು ರಾಜೀನಾಮೆ ನೀಡುವುದು.
- ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸದೆ ಬಹಿಷ್ಕರಿಸುವುದು
- ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು.
- ಕೈಮಗ್ಗದ ನೇಕಾರಿಕೆಯನ್ನು ಉತ್ತೇಜಿಸುವುದು ಮತ್ತು ಖಾದಿಯನ್ನು ತಯಾರಿಸುವುದು.
- ರಾಷ್ಟ್ರೀಯ ಶಾಲೆಗಳನ್ನು ತೆರೆಯುವುದು.

- ಹಿಂದೂ–ಮುಸ್ಲಿಮರ ನಡುವೆ ಐಕ್ಯತೆಯನ್ನು ಸಾಧಿಸುವುದು.
- ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು ಮತ್ತು ಮಹಿಳೆಯರನ್ನು ಶೋಚನೀಯ ಸ್ಥಿತಿಯಿಂದ ಪಾರುಮಾಡಿ ಅವರಲ್ಲಿ ಸಬಲೀಕರಣವನ್ನು ತರುವುದು.

3.ಚೌರಿ ಚೌರ ಘಟನೆಯನ್ನು ವಿವರಿಸಿ.

- ಫೆಬ್ರವರಿ 5,1922 ರಂದು ಉತ್ತರ ಪ್ರದೇಶದ ಗೋರಕ್‌ಪುರ ಜಿಲ್ಲೆಯ ಚೌರಿ ಚೌರ ಎಂಬಲ್ಲಿ ಸುಮಾರು 3000 ರೈತರ ನ್ನೊಳಗೊಂಡ ದೊಡ್ಡ ಗುಂಪು ಪೊಲೀಸ್ ಸ್ಟೇಷನ್ನಿನ ಮುಂದೆ ಸೇರಿತು.
- ಅವರ ಮುಖ್ಯ ಉದ್ದೇಶ ಮದ್ಯದ ಅಂಗಡಿಯ ಮುಂದೆ ಮುಷ್ಕರ ನಡೆಸುತ್ತಿದ್ದ ಕಾಂಗ್ರೆಸ್ ಹೋರಾಟಗಾರರನ್ನು ತಳಿಸಿದ ಪೊಲೀಸ್ ಅಧಿಕಾರಿ ಯ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸುವುದು.
- ಇದನ್ನು ಸಹಿಸದ ಪೊಲೀಸರು ಅಲ್ಲಿ ನೆರೆದಿದ್ದವರ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದರು.
- ಇದು ಜನರನ್ನು ಕೆರಳಿಸಿತು.ಅವರು ಪೊಲೀಸ್ ಸ್ಟೇಷನ್ನಿಗೆ ಬೆಂಕಿ ಇಟ್ಟರು.
- ಇದರಿಂದಾಗಿ ಒಳಗಡೆ ಇದ್ದ 22 ಪೊಲೀಸರು ಸಜೀವವಾಗಿ ಸುಟ್ಟುಹೋದರು. ಬೇರೆ ಕಡೆಗಳಲ್ಲಿಯೂ ಈ ಬಗೆಯ ಹಿಂಸಾತ್ಮಕ ಘಟನೆಗಳು ನಡೆದವು.ಇದರಿಂದಾಗಿ ಗಾಂಧೀಜಿಯವರು ಅಸಹಕಾರ ಹೋರಾಟವನ್ನು ಹಿಂತೆಗೆದುಕೊಂಡರು.

4.ಉಪ್ಪಿನ ಸತ್ಯಾಗ್ರಹವನ್ನು ವಿವರಿಸಿ ಅಥವಾ ಸವಿನಯ ಕಾನೂನುಭಂಗ ಚಳವಳಿ ಯನ್ನು ವಿವರಿಸಿ.

- ಗಾಂಧೀಜಿಯವರು ಮಾರ್ಚ್ 2, 1930 ರಂದು 11 ಅಂಶಗಳ ಬೇಡಿಕೆಗಳ ಪತ್ರವನ್ನು ವೈಸರಾಯ್‌ಗೆ ಬರೆದರು
- ಆದರೆ ವೈಸರಾಯ್ ಈ ಪತ್ರದ ಮನವಿಗಳನ್ನು ತಿರಸ್ಕರಿಸಿದ ಕಾರಣದಿಂದ 1930 ಮಾರ್ಚ್ 12 ರಂದು ಅನುಯಾಯಿ –ಗಳೊಂದಿಗೆ ಸಬರಮತಿ ಆಶ್ರಮದಿಂದ ಗುಜರಾತ್‌ನ ಕಡಲತೀರ ದಂಡಿಯ ವರೆಗೆ ಸುಮಾರು 375 ಕಿ.ಮೀ.ದೂರವನ್ನು ಕ್ರಮಿಸಿದರು
- ಏಪ್ರಿಲ್ 6 ರಂದು ಗಾಂಧೀಜಿ ದಂಡಿಯನ್ನು ತಲುಪಿ ಉಪ್ಪನ್ನು ತಯಾರಿಸುವ ಮೂಲಕ ಉಪ್ಪಿನ ಕಾನೂನನ್ನು ಮುರಿದರು.
- ಚರಕ ಈ ಚಳುವಳಿಯಲ್ಲಿ ಬಹಳ ಪ್ರಸಿದ್ಧವಾಯಿತು.
- ಸಾವಿರಾರು ಜನರು ಗಾಂಧೀಜಿಯವರ ಕರೆಗೆ ಸ್ಪಂದಿಸಿ, ಚಳವಳಿಯಲ್ಲಿ ಭಾಗವಹಿಸಿದರು.
- ಉಪ್ಪಿನ ಸತ್ಯಾಗ್ರಹ/ ಕಾನೂನುಭಂಗ ಚಳುವಳಿಯಲ್ಲಿ ಗಾಂಧೀಜಿಯವ ರೊಂದಿಗೆ ಭಾಗವಹಿಸಿದ ವಿಜಯಲಕ್ಷ್ಮಿ ಪಂಡಿತ್, ಕಮಲಾ ನೆಹರು, ವಲ್ಲಭಭಾಯಿ ಪಟೇಲ್,ರಾಜಗೋಪಾಲಚಾರಿ, ಬಾಬು ರಾಜೇಂದ್ರ ಪ್ರಸಾದ್ ಮೊದಲುಗೊಂಡು ಸಾವಿರಾರು ಜನರನ್ನು ಬ್ರಿಟಿಷರು ಬಂಧಿಸಿದರು.

5.ಕ್ವಿಟ್ ಇಂಡಿಯಾ ಚಳುವಳಿಯು ವಿಫಲವಾಗಲು ಕಾರಣಗಳೇನು?

- ಗಾಂಧೀಜಿಯವರು ದೇಶಬಾಂಧವರಿಗೆ 'ಮಾಡು ಇಲ್ಲವೆ ಮಡಿ' ಎನ್ನುವ ಕರೆಯನ್ನು ನೀಡಿದರು.
- ಈ ಕರೆ ನೀಡಿದ ಹಿನ್ನೆಲೆಯಲ್ಲಿ ಗಾಂಧೀಜಿ,ನೆಹರು,ರಾಜೇಂದ್ರ ಪ್ರಸಾದ್, ಅಬುಲ್ ಕಲಾಂ ಅಜಾದ್,ಸರ್ದಾರ್ ವಲ್ಲಭಭಾಯಿ ಪಟೇಲ್ ಆಚಾರ್ಯ ಕೃಪಲಾನಿ,ಕಸ್ತೂರಬಾ ಗಾಂಧಿ ಮೊದಲಾದ ನಾಯಕರನ್ನು ಬ್ರಿಟಿಷ್ ಸರ್ಕಾರ ಬಂಧಿಸಿ ಜೈಲಿನಲ್ಲಿಟ್ಟಿತು.
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಹುತೇಕ ನಾಯಕರು ಬಂಧನದಲ್ಲಿದ್ದ ಕಾರಣ ಭಾರತೀಯ ಕಾಂಗ್ರೆಸ್ಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು.
- ಸೂಕ್ತವಾದ ನಾಯಕತ್ವದ ಕೊರತೆ ಹಾಗೂ ಚಳವಳಿಯ ನೇತೃತ್ವದ ನಾಯಕರ ಬಂಧನವು ಈ ಚಳವಳಿಯ ವಿಫಲತೆಗೆ ಕಾರಣ ವಾಯಿತು.

6. ಎರಡನೇ ದುಂಡು ಮೇಜಿನ ಪರಿಷತ್ತಿನ ಸಮಾವೇಶದ ಫಲಿತಾಂಶವೇನು?

- ಎರಡನೇ ದುಂಡು ಮೇಜಿನ ಸಮಾವೇಶದಲ್ಲಿ ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವ ಪ್ರಸ್ತಾಪಮುಂದಿಟ್ಟರು
- ಈ ಪ್ರಸ್ತಾಪವನ್ನು ಗಾಂಧೀಜಿ ಒಪ್ಪಲಿಲ್ಲ.
- ಇದರಿಂದಾಗಿ ಗಾಂಧೀಜಿ ಮತ್ತು ಅಂಬೇಡ್ಕರ್‌ರ ನಡುವೆ ತಾತ್ವಿಕ ಭಿನ್ನಾಭಿಪ್ರಾಯ ಉಂಟಾಯಿತು.
- ಹೀಗಾಗಿ ಎರಡನೇ ದುಂಡು ಮೇಜಿನ ಪರಿಷತ್ತಿನ ಸಮಾವೇಶ ಯಾವುದೇ ತೀರ್ಮಾನವಿಲ್ಲದೆ ಮುಕ್ತಾಯಗೊಂಡಿತು.
- ಆದರೆ ಬ್ರಿಟಿಷ್ ಸರ್ಕಾರವು ಅಸ್ಪೃಶ್ಯರನ್ನು ಪ್ರತ್ಯೇಕ ಮತಕ್ಷೇತ್ರವಾಗಿ ಪರಿಗಣಿಸುವುದಾಗಿ ಘೋಷಿಸಿತು.

7.ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್‌ರವರ ಸಾಧನೆ/ ಪಾತ್ರವನ್ನು ವಿವರಿಸಿ

- ಸುಭಾಷ್‌ಚಂದ್ರಬೋಸ್ ರವರು ನೇತಾಜಿ ಎಂದು ಜನಪ್ರಿಯ ರಾದರು.
- ಗಾಂಧೀಜಿಯವ ಸೌಮ್ಯ ಹೋರಾಟಕ್ಕೆ ಪರ್ಯಾಯವಾಗಿ 30 ರ ದಶಕದ ಪ್ರಾರಂಭದಲ್ಲಿ ವಿದೇಶದಲ್ಲಿ ನೆಲೆಗೊಂಡ ಭಾರತೀಯರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಡುವ ಪ್ರಯತ್ನದಲ್ಲಿದ್ದರು.

- ಇವರು ವಿವಿಧ ದೇಶಗಳ ನಗರಗಳಾದ ವಿಯೆನ್ನಾ,ಬರ್ಲಿನ್, ರೋಮ್, ಇಸ್ತಾಂಬುಲ್ ಮುಂತಾದ ಕಡೆಗಳಲ್ಲಿ ಪ್ರವಾಸ ಬೆಳೆಸಿ ತಾಯ್ನಾಡಿಗೆ ಬೆಂಬಲ ನೀಡಲು ಪ್ರೇರೇಪಿಸಿದರು.
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದಲ್ಲಿ ಗಾಂಧೀಜಿ ಬೆಂಬಲದೊಂದಿಗೆ ಇವರು ಅಧ್ಯಕ್ಷರಾದರು.
- ಬ್ರಿಟಿಷರ ಯುದ್ಧನೀತಿ ತಯಾರಿಗೆ ಸಂಬಂಧಿಸಿದಂತೆ ಮೃದು ಧೋರಣೆ ಹೊಂದಿದ್ದ ಗಾಂಧೀಜಿ ಮತ್ತು ಬ್ರಿಟಿಷರ ವಿರುದ್ಧ ಕಠಿಣ ಧೋರಣೆ ಹೊಂದಿದ್ದ ಸುಭಾಷರ ಬಾಂಧವ್ಯದಲ್ಲಿ ಬಿರುಕು ಮೂಡಿತು.
- ಸುಭಾಷರ ಕಾರ್ಯ ಚಟುವಟಿಕೆಗಳಿಗೆ ಹಿನ್ನೆಡೆಯಾಯಿತು, ಇವರು ಕಾಂಗ್ರೆಸ್‌ನಿಂದ ಹೊರಬಂದು ಫಾರ್ವರ್ಡ್ ಬ್ಲಾಕ್ ಎಂಬ ಹೊಸ ಪಕ್ಷವನ್ನು ಕಟ್ಟಿದರು.
- ಬ್ರಿಟಿಷರ ಯುದ್ಧ ತಯಾರಿಯನ್ನು ಹಾಗೂ ಜಾಗತಿಕ ಯುದ್ಧದಲ್ಲಿ ಭಾರತದ ಪಾಲ್ಗೊಳ್ಳುವಿಕೆಯನ್ನು ವಿರೋಧಿಸಿದ್ದರಿಂದ ಬ್ರಿಟಿಷ್ ಸರ್ಕಾರ ಸುಭಾಷರನ್ನು ಬಂಧಿಸಿತು.
- ನಂತರ ಅವರು ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು
- ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್‌ನ ಸಹಾಯ ಕೋರಿದರು ಮತ್ತು ಜರ್ಮನಿಯಲ್ಲಿ ಭಾರತೀಯ ಯುದ್ಧ ಕೈದಿಗಳನ್ನು ಸಂಘಟಿಸಿದರು.
- ಅಜಾದ್ ಹಿಂದ್ ರೇಡಿಯೋ ಮೂಲಕ ತಮ್ಮ ಭಾಷಣಗಳನ್ನು ಭಾರತೀಯರಿಗೆ ಪ್ರಸರಣ ಮಾಡಿದರು.
- ನಂತರ ರಾಸ್ ಬಿಹಾರಿ ಬೋಸರ ಜೊತೆಗೆ ಸುಭಾಷರು ಕೈಜೋಡಿಸಿ ಭಾರತೀಯ ರಾಷ್ಟ್ರೀಯ ಸೇನೆಯ (INA)ಮುಖಂಡತ್ವವನ್ನು ವಹಿಸಿಕೊಂಡರು.
- ದೆಹಲಿ ಚಲೋಗೆ ಕರೆನೀಡಿದರು.
- 'ನನಗೆ ರಕ್ತಕೊಡಿ,ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ' ಎಂದು ಕರೆಯನ್ನಿತ್ತರು.
- ಬ್ರಿಟಿಷರು ಮತ್ತು ಐ.ಎನ್.ಎ. ನಡುವೆ ತೀವ್ರವಾದಂತಹ ಯುದ್ಧ ನಡೆದಿದ್ದ ಸಂದರ್ಭದಲ್ಲಿ ಸಭಾಷರು ಆಕಸ್ಮಿಕ ವಿಮಾನ ಅಪಘಾತಕ್ಕೊಳಗಾದರು.

8.ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ವರ್ಗಗಳ ಬಂಡಾಯ ಗಳನ್ನು ವಿವರಿಸಿ.

- ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿ ಜಾರಿಗೆ ತಂದ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ಬುಡಕಟ್ಟುಗಳ ದಂಗೆಗೆ ನೇರವಾಗಿ ಪ್ರೇರಣೆಯಾದವು.
- ಬುಡಕಟ್ಟು ಬಂಡಾಯಗಳಲ್ಲಿ ಸಂತಾಲರ ದಂಗೆ,ಕೋಲರ ದಂಗೆ ಮತ್ತು ಮುಂಡ ಚಳವಳಿ ಪ್ರಮುಖವಾಗಿವೆ.ಕರ್ನಾಟಕದಲ್ಲಿ ಹಲಗಲಿಯ ಬೇಡರ ಬಂಡಾಯವು ಸಹ ಗಮನಾರ್ಹವಾದುದಾಗಿದೆ.
- ಸಂತಾಲ ಬುಡಕಟ್ಟು ದಂಗೆಯನ್ನು ಭಾರತದ ಆದ್ಯ ಹೋರಾಟ ಎಂದು ಗುರುತಿಸಲಾಗಿದೆ.ಈ ಬುಡಕಟ್ಟು ಜನರನ್ನು ಬಂಗಾಳಿ ಮತ್ತು ಒರಿಸ್ಸಾದ ಗುಡ್ಡಗಾಡು ಪ್ರದೇಶಗಳಲ್ಲಿ ಗುರುತಿಸಬಹುದು.
- ಬ್ರಿಟಿಷರು ಜಾರಿಗೆ ತಂದ ಖಾಯಂ ಜಮೀನ್ದಾರಿ ಪದ್ಧತಿಯಿಂದ ಈ ಬುಡಕಟ್ಟು ಜನರು ನಿರ್ಗತಿಕರಾದರು.
- ತಾವು ಶ್ರಮಪಟ್ಟು ಕೃಷಿಯೋಗ್ಯವನ್ನಾಗಿ ಪರಿವರ್ತಿಸಿದ ಭೂಮಿ ಬುಡಕಟ್ಟು ಜನರಿಂದ ಜಮೀನ್ದಾರರ ಕೈಸೇರಿತು.
- ಬಂಗಾಳಿ ಜಮೀನ್ದಾರರು, ಲೇವಾದೇವಿಗಾರರು ಮತ್ತು ಕಂಪನಿ ಸರ್ಕಾರ ಸಂತಾಲರ ನೇರ ಶೋಷಣೆಗೆ ಕಾರಣರಾದರು.
- ಸಂತಾಲರ ಶಾಂತಿಪ್ರಿಯತೆ ಮತ್ತು ಸಭ್ಯತೆಯನ್ನು ಕಂಪನಿ ಸರ್ಕಾರವು ಶೋಷಣೆಗೆ ಉಪಯೋಗಿಸಿಕೊಂಡಿತು.
- ಇದರಿಂದ ಅಸಮಾಧಾನಗೊಂಡ ಸಂತಾಲರು ರಹಸ್ಯ ಸಭೆಗಳನ್ನು ನಡೆಸಿ ಜಮೀನ್ದಾರರು ಮತ್ತು ಲೇವಾದೇವಿಗಾರರನ್ನು ಲೂಟಿಮಾಡಲು ನಿರ್ಧರಿಸಿದರು.
- ದಂಗೆಯು ಬಾರಹತ್,ಬಾಗತ್‌ಪುರ್ ಮತ್ತು ರಾಜಮಹಲ್‌ಗಳಲ್ಲಿ ತೀವ್ರವಾಯಿತು.ಪರಿಣಾಮವಾಗಿ ಬುಡಕಟ್ಟು ಜನರು ಅವರ ಶತ್ರುಗಳನ್ನು ಹತ್ಯೆ ಮಾಡಿದರು.
- ಇದರಿಂದ ಜಮೀನ್ದಾರರು ಮತ್ತು ಲೇವಾದೇವಿಗಾರರು ಪಲಾಯನ ಮಾಡಿದರು.ಸಂತಾಲರ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರು ಸೈನ್ಯವನ್ನು ಬಳಸಿಕೊಂಡರು.
- ಸಂತಾಲರ ದಂಗೆಯಿಂದ ಸ್ಫೂರ್ತಿ ಪಡೆದ ಕೋಲರು ಮತ್ತು ಮುಂಡರು ಬ್ರಿಟಿಷರು ಮತ್ತು ಜಮೀನ್ದಾರರ ವಿರುದ್ಧ ಹೋರಾಟಗಳನ್ನು ಮಾಡಿದರು.

9.ನೆಹರುರವರು ಪ್ರಧಾನಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ.

- ಕೈಗಾರಿಕೀಕರಣ ಮತ್ತು ನವಭಾರತದ ಶಿಲ್ಪಿಯಾಗಿ ಭಾರತದ ಮೊದಲ ಪ್ರಧಾನ ಮಂತ್ರಿಯಾಗಿದ್ದ ನೆಹರುರವರನ್ನು ನಾವು ಕಾಣುತ್ತೇವೆ.
- 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದ ಭಾರತದ ಮೊದಲ ಗೃಹ ಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭಬಾಯಿ ಪಟೇಲ್‌ರವರ

ನೇತೃತ್ವದಲ್ಲಿ ಭಾರತದ ಅನೇಕ ದೇಶೀ ಸಂಸ್ಥಾನಗಳ ವಿಲೀನಿಕರಣಕ್ಕೆ ನೆಹರು ಕಾರಣರಾದರು.

- ಭಾಷಾವಾರು ಪ್ರಾಂತಗಳ ರಚನೆಯ ಮೂಲಕ ಭಾರತಕ್ಕೆ ವಿವಿಧತೆಯನ್ನು ಒಪ್ಪುವ ತಾತ್ವಿಕ ತಳಹದಿಯನ್ನು ಹಾಕಿದರು.
- ಬಂಡವಾಳ ಮತ್ತು ಸಮಾಜವಾದಿ ತತ್ವಗಳನ್ನೊಳಗೊಂಡ ಮಿಶ್ರ ಆರ್ಥಿಕ ನೀತಿಯು ನೆಹರುರವರ ಆಧುನಿಕ ಭಾರತದ ಅಭಿವೃದ್ಧಿಯ ಮೈಲುಗಲ್ಲಾಯಿತು.
- ಬೃಹತ್ ಕೈಗಾರಿಕೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯವೆಂದು ಅವರು ನಂಬಿದ್ದರು.
- ಸ್ವಾತಂತ್ರ್ಯ ನಂತರ ಪಂಚವಾರ್ಷಿಕ ಯೋಜನೆಗಳ ಮೂಲಕ ಮೂಲಭೂತ ಮತ್ತು ಬೃಹತ್ ಕೈಗಾರಿಕೀಕರಣಕ್ಕೆ ಚಾಲನೆಯನ್ನು ನೀಡಿದರು.
- ಭಾರತವು ಅಣುಶಕ್ತಿಯನ್ನು ಹೊಂದಬೇಕೆನ್ನುವ ಆಶಯದಿಂದ ಎಚ್.ಜೆ. ಬಾಬಾ ಅವರ ನೇತೃತ್ವದಲ್ಲಿ ಭದ್ರ ತಳಹದಿಯನ್ನು ರೂಪಿಸಿದರು.
- ವಿದೇಶಾಂಗ ನೀತಿಯಲ್ಲಿ ಅಲಿಪ್ತನೀತಿಯನ್ನು ಪ್ರತಿಪಾದಿಸಿದರು.
- ಪಂಚಶೀಲ ತತ್ವಗಳ ಆಧಾರದ ಮೇಲೆ ಶಕ್ತಿ ರಾಜಕಾರಣದಿಂದ ದೂರವೇ ಉಳಿದು ಶಾಂತಿ ಸಹಬಾಳ್ವೆಯ ಸೂತ್ರಗಳನ್ನು ಅನುಷ್ಠಾನಕ್ಕೆ ತರಲು ಕಾರಣರಾದರು.

10. ಡಾ.ಬಿ.ಆರ್.ಅಂಬೇಡ್ಕರ್‌ರವರ ಸಾಧನೆಗಳನ್ನು ವಿವರಿಸಿ. ಅಥವಾ ಸಾಮಾಜಿಕ ಸಮಾನತೆಯನ್ನು ಸಾಧಿಸುವಲ್ಲಿ ಅಂಬೇಡ್ಕರ್‌ರವರ ಪಾತ್ರವೇನು?

- ಸಾಮಾಜಿಕ ಸಮಾನತೆಯಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ಅಂಬೇಡ್ಕರ್‌ರವರು ಬಲವಾಗಿ ನಂಬಿದ್ದರು.
- ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿರುವ ಕಟ್ಟಕಡೆಯ ಮನುಷ್ಯನಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ,ಅದು ಕೇವಲ ಮರಿಚೀಕೆಯಾಗಿ ಉಳಿಯುತ್ತದೆ ಎಂದು ಅವರು ತಿಳಿದಿದ್ದರು.
- ಅವರು ಭಾರತವನ್ನು ಕೇವಲ ಒಂದು ರಾಜಕೀಯ ಪರಿಕಲ್ಪನೆಯಾಗಿ ಕಾಣದೆ ಅದರ ಒಟ್ಟಾರೆ ಮುಖವನ್ನು ಪರಿಚಯಿಸಿದರು.
- ಇವರು ಜಾತಿವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಅದರ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು.
- ಅಸ್ಪೃಶ್ಯರು ಕನಿಷ್ಟ ಮಟ್ಟದ ಅವಕಾಶಗಳಿಂದಲೂ ವಂಚಿತರಾಗಿರುವುದನ್ನು ನಿರೂಪಿಸಲು ಮಹದ್ ಕೆರೆ ಮತ್ತು ಕಾಲಾರಾಂ ದೇವಾಲಯ ಚಳವಳಿಗಳನ್ನು ರೂಪಿಸಿದರು.
- ಮೂರೂ ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳಲ್ಲಿ ಭಾಗವಹಿಸಿ ನಿಮ್ನ ವರ್ಗಗಳು ವಿವಿಧ ಬಗೆಯ ಸಂಕೋಲೆಗಳಿಂದ ಬಿಡುಗಡೆ ಪಡೆಯಲು ಬೇಕಾದ ಅಮೂಲ್ಯ ಲಹೆ ಸೂಚನೆಗಳನ್ನು ನೀಡಿದರು.
- ಹರಿಜನೋದ್ಧಾರ ಮತ್ತು ಅಸ್ಪೃಶ್ಯರ ಮುಖಂಡತ್ವಕ್ಕೆ ಸಂಬಂಧಿಸಿದಂತೆ ಗಾಂಧೀಜಿ ಮತ್ತು ಅಂಬೇಡ್ಕರ್‌ರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದವು.
- ಅಂಬೇಡ್ಕರ್‌ರವರು ಕಾಂಗ್ರೆಸ್ ಪಕ್ಷವನ್ನು ಸೇರದೆ ಬಹಿಷ್ಕೃತ ಹಿತಕಾರಣಿ ಸಭಾ ಎಂಬ ಸಂಘಟನೆಯನ್ನು ಹಾಗೂ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸ್ಥಾಪಿಸಿದರು.
- ಪ್ರಬುದ್ಧ ಭಾರತ, ಜನತಾ,ಮೂಕನಾಯಕ, ಬಹಿಷ್ಕೃತ ಭಾರತ ಎಂಬ ಪತ್ರಿಕೆಗಳನ್ನು ಹೊರಡಿಸಿದರು.
- ಸ್ವಾತಂತ್ರ್ಯ ಭಾರತದ ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು.

11. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಹೋರಾಟವನ್ನು ವಿವರಿಸಿ ಅಥವಾ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತರು ಸಂಘಟಿಸಿದ ಪ್ರತಿಭಟನೆಗಳು ಪ್ರಮುಖವಾಗಿದ್ದವೆಂಬುದನ್ನು ವಿವರಿಸಿ.

- ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತ ಕಾರ್ಮಿಕರ ಪ್ರತಿಭಟನೆಗಳು ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮಾರ್ಕ್ಸ್‌ವಾದದಿಂದ ಪ್ರಭಾವಿತವಾಗಿದ್ದವು.
- ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಜಮೀನ್ದಾರರು ಮತ್ತು ಯುರೋಪಿಯನ್ ಪ್ಲಾಂಟರ್‌ಗಳ ವಿರುದ್ಧ ರೈತರು ಹಲವಾರು ಕಡೆ ದಂಗೆ ನಡೆಸಿದರು.
- ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು.
- ಭೂ ಕಂದಾಯದ ವಿರುದ್ಧ ಹರತಾಳ ನಡೆಸಿದರು.
- ರಾಷ್ಟ್ರೀಯ ಹೋರಾಟದ ಭಾಗವಾಗಿ ರೈತರನ್ನು ಸಂಘಟಿಸುವ ಪ್ರಯತ್ನವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮಾಡಿತು.
- ಚಂಪಾರಣ್ಯ,ಖೇಡಾ ಮೊದಲಾದ ಪ್ರದೇಶಗಳ ರೈತರ ಕಾರ್ಯಚಟುವಟಿಕೆ ಗಳಲ್ಲಿ ಗಾಂಧೀಜಿಯವರ ಪ್ರಭಾವವಿತ್ತು.
- ತೇಭಾಗ,ಮಲಬಾರ್ ಮೊದಲಾದೆಡೆ ಶೋಷಣೆಗೊಳಗಾಗಿದ್ದ ರೈತರು ತೀವ್ರವಾಗಿ ಜಮೀನ್ದಾರರು ಹಾಗೂ ಬ್ರಿಟಿಷರ ವಿರುದ್ಧ ಬಂಡೆದ್ದರು.
- ಅಸಹಕಾರ ಆಂದೋಲನ,ಕರನಿರಾಕರಣೆ,ಕ್ವಿಟ್ ಇಂಡಿಯಾ ಚಳವಳಿಗಳಲ್ಲಿ ರೈತರ ಸಮಸ್ಯೆಗಳು ಬೆರೆತವು.
- ಹಲವಾರು ಹೋರಾಟಗಳು ಎಡಪಂಥೀಯ ವಿಚಾರಧಾರೆಗಳಿಂದ

ರಚನೆಗೊಂಡ ಕಿಸಾನ್ ಸಭಾದಡಿಯಲ್ಲಿ ಸಂಘಟಿತವಾದವು.

- ತೆಲಂಗಾಣದ ರೈತರ ಹೋರಾಟವು ಜಮೀನ್ದಾರರು ಹಾಗೂ ನಿಜಾಮನ ರಜಾಕರ ವಿರುದ್ಧ ಪ್ರತಿಭಟಿಸಿತು.
- ಬಂಗಾಳದ ರೈತರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆಎದ್ದರು.
- ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳವಳಿ ನಡೆಸಿದರು.

12.ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕರ ಬಂಡಾಯಗಳನ್ನು ವಿವರಿಸಿ.

- ಕಾರ್ಮಿಕರ ಹೋರಾಟವು 1827 ರಲ್ಲಿ ಕಲ್ಕತ್ತದಲ್ಲಿ ಆರಂಭ ವಾಯಿತು.
- ಸೆಣಬು,ಬಟ್ಟೆಗಿರಣಿ ಕಾರ್ಮಿಕರು,ರೈಲ್ವೆ ಕೂಲಿಗಳು ತಮ್ಮ ಬೇಡಿಕೆ ಗಳಿಗಾಗಿ ಸಂಘಟಿತರಾಗತೊಡಗಿದರು.
- ರೈಲ್ವೆ ಕೂಲಿಗಳು ನಿಲ್ದಾಣದಲ್ಲಿ ಮುಷ್ಕರ ನಡೆಸಿ ಹೆಚ್ಚಿನ ಕೂಲಿಗಾಗಿ ಬ್ರಿಟಿಷ್ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.
- ಕಲ್ಕತ್ತಾದಲ್ಲಿ ಪ್ರಿಂಟರ್ಸ್ ಯೂನಿಯನ್‌ನವರು ಮತ್ತು ಬಾಂಬೆ ಬಟ್ಟೆ ಗಿರಣಿಯ ಕಾರ್ಮಿಕರು ರಾಷ್ಟ್ರೀಯ ಜಾಗೃತಿ ಉಂಟುಮಾಡಿದರು.
- ಮದ್ರಾಸ್‌ನಲ್ಲಿ ಲೇಬರ್ ಯೂನಿಯನ್ ಸ್ಥಾಪನೆಗೊಂಡಿತು.
- ನಂತರದಲ್ಲಿ ಕಾರ್ಮಿಕ ಸಂಘಟನೆಗಳು ಸ್ಥಾಪನೆಗೊಂಡವು.
- ಕಾಂಗ್ರೆಸ್, ಕಾರ್ಮಿಕ ಸಂಘಟನೆಗಳ ಇಂತಹ ಚಳವಳಿಗೆ ಬೆಂಬಲ ನೀಡಿತು.
- ಸ್ವಾತಂತ್ರ್ಯ ಚಳವಳಿಯಲ್ಲಿ ಕಾರ್ಮಿಕರ ಪಾತ್ರವು ಅನನ್ಯವಾದದ್ದು

13.ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧೀಜಿಯವರ ಪಾತ್ರವನ್ನು ವಿವರಿಸಿ.

- ಮಹಾತ್ಮ ಗಾಂಧೀಜಿಯವರ ಪ್ರವೇಶದಿಂದಾಗಿ ಸ್ವಾತಂತ್ರ್ಯ ಚಳುವಳಿ ಯು ಹೊಸ ಆಯಾಮವನ್ನು ಪಡೆಯಿತು.
- ಇವರು ತಮ್ಮ ಹೋರಾಟದಲ್ಲಿ ಪರೋಕ್ಷ ಪ್ರತಿರೋಧ, ಅಹಿಂಸೆ ಮತ್ತು ಸತ್ಯಾಗ್ರಹವನ್ನುಪ್ರಮುಖ ತಂತ್ರವನ್ನಾಗಿ ಬಳಸಿಕೊಂಡರು
- 1917 ರಲ್ಲಿ ಬಿಹಾರದ ಚಂಪಾರಣ್‌ನಲ್ಲಿ ನೀಲಿ ಬೆಳೆಯಿಂದ ಸಂತ್ರಸ್ತರಾದ ರೈತರ ಪರವಾಗಿ ಚಂಪಾರಣ್ ಚಳವಳಿ ಆರಂಭಿಸಿ ಬ್ರಿಟಿಷ್ ಸರ್ಕಾರ ಮಣಿಯುವಂತೆ ಮಾಡಿದರು.
- 1919 ರ ರೌಲತ್ ಕಾಯಿದೆಯನ್ನು ವಿರೋಧಿಸಿದರು.
- ಖಿಲಾಪತ್ ಚಳವಳಿಗೆ ಬೆಂಬಲವನ್ನು ನೀಡಿದರು.
- 1920 ರಲ್ಲಿ ಜಲಿಯನ್ ವಾಲಾಭಾಗ್ ಹತ್ಯಾಕಾಂಡವನ್ನು ಖಂಡಿಸಿ ಅಸಹಕಾರ ಚಳವಳಿಗೆ ಕರೆನೀಡಿದರು.
- ಚೌರಿ ಚೌರ ಘಟನೆಯಿಂದ ಮನನೊಂದ ಗಾಂಧೀಜಿಯವರು 1922 ರಲ್ಲಿ ಅಸಹಕಾರ ಚಳವಳಿಯನ್ನು ಹಿಂಪಡೆದರು.
- 1930 ರಲ್ಲಿ ದಂಡಿ ಉಪ್ಪಿನ ಸತ್ಯಾಗ್ರಹವನ್ನು ನಡೆಸಿದರು.
- 1942 ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯ ನಾಯಕತ್ವವನ್ನು ವಹಿಸಿಕೊಂಡರು.
- ದೇಶಬಾಂಧವರಿಗೆ ಮಾಡು ಇಲ್ಲವೇ ಮಡಿ ಎನ್ನುವ ಕರೆಯನ್ನು ನೀಡಿದರು.
- ಇವರ ಶ್ರಮದ ಫಲವಾಗಿ 1947 ರಂದು ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು.

14.ಕ್ವಿಟ್ ಇಂಡಿಯಾ ಚಳವಳಿಯನ್ನು ವಿವರಿಸಿ.

- ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಈ ಚಳವಳಿಯ ಆಶಯವಾಗಿತ್ತು.
- ಗಾಂಧೀಜಿಯವರು ಜನರಿಗೆ ಮಾಡು ಇಲ್ಲವೇ ಮಡಿ ಎನ್ನುವ ಕರೆ ನೀಡಿದರು.
- ಈ ಕರೆಯ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರವು ಗಾಂಧೀಜಿ, ನೆಹರು, ರಾಜೇಂದ್ರ ಪ್ರಸಾದ್, ಅಬುಲ್ ಕಲಾಂ ಅಜಾದ್,ಸರ್ದಾರ್ ವಲ್ಲಭಭಾಯಿ ಪಟೇಲ್ ಆಚಾರ್ಯ ಕೃಪಲಾನಿ,ಕಸ್ತೂರಬಾ ಗಾಂಧಿ ಮೊದಲಾದ ನಾಯಕರನ್ನು ಬಂಧಿಸಿ ಜೈಲಿನಲ್ಲಿಟ್ಟಿತು.
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಹುತೇಕ ನಾಯಕರು ಬಂಧನದಲ್ಲಿದ್ದ ಕಾರಣ ಭಾರತೀಯ ಕಾಂಗ್ರೆಸ್ಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು.
- ಈ ಸಂದರ್ಭದಲ್ಲಿ ಚಳವಳಿಯ ನೇತೃತ್ವವನ್ನು ಜಯಪ್ರಕಾಶ ನಾರಾಯಣ ವಹಿಸಿಕೊಂಡರು.
- ಇವರು ತಮ್ಮ ಬೆಂಬಲಿಗರೊಡನೆ ವಿವಿಧ ಕಡೆಯಲ್ಲಿ ಕ್ರಾಂತಿಕಾರಕ ಚಟುವಟಿಕೆಯಲ್ಲಿ ತೊಡಗಿದರು.
- ದಿ ಫ್ರೀಡಂಸ್ಟ್ರಗಲ್ ಫ್ರಾಂಟ್ ಎಂಬ ದಾಖಲೆಯ ಮೂಲಕ ತಮ್ಮ ಕಾರ್ಯತಂತ್ರವನ್ನು ಅನುಷ್ಠಾನಕ್ಕೆ ತಂದರು
- ಜನತೆ ಹೋರಾಟದಲ್ಲಿ ಭಾಗವಹಿಸಲು ಕರೆನೀಡಿದರು.

## ಅಧ್ಯಾಯ-9
## ಸ್ವಾತಂತ್ರ್ಯೋತ್ತರ ಭಾರತ

**I.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1.ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತಿಯಾಗಿದ್ದ ಭಾರತದ ಪ್ರಥಮ ಗೃಹಮಂತ್ರಿ– –ಸರ್ದಾರ್ ವಲ್ಲಭಭಾಯಿ ಪಟೇಲ್

2.ಸ್ವತಂತ್ರ ಭಾರತದ ಮೊದಲ ಪ್ರಧಾನ ಮಂತ್ರಿ –ನೆಹರು

3.ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರು?

–ಡಾ.ಬಾಬು ರಾಜೇಂದ್ರ ಪ್ರಸಾದ್

4.ಭಾರತಕ್ಕೆ ಸ್ವತಂತ್ರ ದೊರೆತಾಗ/ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ಇದ್ದ ಸಂಸ್ಥಾನಗಳೆಷ್ಟು? –562 ಸಂಸ್ಥಾನಗಳು

5.ನಮ್ಮ ಸಂವಿಧಾನಕ್ಕೆ ಜಾತ್ಯಾತೀತ ಮತ್ತು ಸಮಾಜವಾದಿ ಎಂಬ ಎರಡು ಅಂಶಗಳನ್ನು ಸೇರಿಸಿದ್ದು –42 ನೇ ತಿದ್ದುಪಡಿ

6.ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ರಾಷ್ಟ್ರಗಳ ಅಸ್ತಿತ್ವಕ್ಕೆ ಕಾರಣವಾದ ಘೋಷಣೆ ಯಾವುದು?

–ಮೌಂಟ್ ಬ್ಯಾಟನ್ ವರದಿಯನ್ನಾಧರಿಸಿ 1947 ರ ಜೂನ್ 3 ರಂದು ಬ್ರಿಟಿಷ್ ಸರ್ಕಾರ ಮಾಡಿದ ಘೋಷಣೆ.

7.ಸರ್ದಾರ್ ವಲ್ಲಭಭಾಯಿ ಪಟೇಲ್ ಭಾರತದ ಉಕ್ಕಿನ ಮನುಷ್ಯ ಎಂದು ಕರೆಯುತ್ತಾರೆ.ಏಕೆ? –ಭಾರತದ ಸಂಸ್ಥಾನಗಳನ್ನು ಒಟ್ಟುಗೂಡಿಸಿದ್ದರಿಂದ

8.ಸಂಸ್ಥಾನಗಳಿಗೆ ನೀಡುತ್ತಿದ್ದ ರಾಜಧನ ಮತ್ತು ಇತರ ಸ್ಥಾನಮಾನಗಳನ್ನು ಸರ್ಕಾರ ಯಾವಾಗ ರದ್ದು ಮಾಡಿತು? –1969 ರಲ್ಲಿ

9.ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿದ್ದ ನವಾಬ ಯಾರು?

–ಜುನಾಗಢ್ ನವಾಬ

10.ಹೈದರಾಬಾದಿನ ನಿಜಾಮ ಭಾರತದ ಒಕ್ಕೂಟದೊಂದಿಗೆ ಸೇರಲು ಒಪ್ಪಲಿಲ್ಲ.ಏಕೆ?

– ಹೈದರಾಬಾದಿನ ನಿಜಾಮನು ಸ್ವತಂತ್ರವಾಗುಳಿಯುವ ಉದ್ದೇಶದಿಂದಾಗಿ ಭಾರತದ ಒಕ್ಕೂಟದೊಂದಿಗೆ ಸೇರಲುಒಪ್ಪಲಿಲ್ಲ.

11.ಭಾರತದ ಒಕ್ಕೂಟಕ್ಕೆ ಸೇರದೆ ಸ್ವತಂತ್ರವಾಗಿ ಉಳಿಯಲು ನಿರ್ಧರಿಸಿದ್ದ ಜಮ್ಮು ಕಾಶ್ಮೀರದ ರಾಜ –ಹರಿಸಿಂಗ್

12.ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ವಾಯುವ್ಯ ಪ್ರದೇಶವನ್ನು ಈ ರೀತಿ ಕರೆಯುವರು – ಪಾಕ್ ಆಕ್ರಮಿತ ಪ್ರದೇಶ

13.ಸ್ವಾತಂತ್ರ್ಯದ ನಂತರ ಭಾರತದಲ್ಲಿಯ ಫ್ರೆಂಚ್ ವಸಾಹತುಗಳು

–ಪಾಂಡಿಚೇರಿ,ಕಾರೈಕಲ್,ಮಾಹೆ ಮತ್ತು ಚಂದ್ರನಗರ್

14.ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಗಿ ಸೇರಿದ್ದು ಯಾವಾಗ? – 1963

15.ಪೋರ್ಚುಗೀಸರ ವಸಾಹತುವಾಗಿದ್ದ ಗೋವಾವಿಮೋಚನೆಗೊಂಡ ವರ್ಷ –1961

16.ಭಾಷಾವಾರು ರಾಜ್ಯಗಳ ವಿಂಗಡಣೆಗೆ ಆಯೋಗ ರಚಿಸಿದ್ದು ಯಾವಾಗ?

–1953

17.ಫಜಲ್ ಅಲಿ ಆಯೋಗದ ಉದ್ದೇಶವೇನು?

–ಭಾಷಾವಾರು ರಾಜ್ಯಗಳ ಪುನರ್ವಿಂಗಡಣೆಗೆ ಮಾಡುವುದು.

18.1953 ರಲ್ಲಿ ರಚಿಸಿದ ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಯಾರು?

– ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರು ಫಜಲ್ ಅಲಿ.ಸದಸ್ಯರು ಕೆ.ಎಂ.ಫಣಿಕ್ಕರ್ ಮತ್ತುಹೆಚ್.ಎನ್.ಕುಂಜ್ರು.

19.ಮೊದಲು ಭಾಷಾವಾರುರಾಜ್ಯವಾಗಿ ನಿರ್ಮಾಣವಾದ ರಾಜ್ಯ ಯಾವುದು

– ಆಂಧ್ರಪ್ರದೇಶ

20.ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದದ್ದು ಯಾವಾಗ?

–1956 ರಲ್ಲಿ.

21.ಮೈಸೂರು ರಾಜ್ಯವು'ಅಸ್ತಿತ್ವಕ್ಕೆ ಬಂದದ್ದು ಯಾವಾಗ ?

–1956 ನವೆಂಬರ್ 1 ರಂದು.

22.ವಿಶಾಲ ಮೈಸೂರು ರಾಜ್ಯಕ್ಕೆ 'ಕರ್ನಾಟಕ'ಎಂದು ಮರುನಾಮಕರಣ ಮಾಡಿದ್ದು –ನವೆಂಬರ್–1–1973 ರಲ್ಲಿ.

23.ವಿಶಾಲ ಆಂಧ್ರಪ್ರದೇಶ ರಚನೆಗಾಗಿ 1952 ರಲ್ಲಿ 58 ದಿನಗಳ ಕಾಲ ಉಪವಾಸ ಸತ್ಯಾಗ್ರಹ ನಡೆಸಿ ಅಸುನೀಗಿದವರು ಯಾರು ?

–ಪೊಟ್ಟಿಶ್ರೀರಾಮುಲು ರವರು .

24.ಭಾರತದ ಪ್ರದೇಶವೊಂದರ ಮೇಲೆ ಸುದೀರ್ಘ ಅವಧಿಯವರಗೆ ಆಳ್ವಿಕೆ ಮಾಡಿದ ಯುರೋಪಿನ ದೇಶ ಯಾವುದು?(ಯುರೋಪಿಯನ್ನರು ಯಾರು?) –ಪೋರ್ಚುಗಲ್ (ಪೋರ್ಚುಗೀಸರು)

25.ಸರ್ಕಾರವು ಟಿಬೆಟಿಯನ್ ನಿರಾಶ್ರಿತರ ಸಮಸ್ಯೆಯನ್ನು ಹೇಗೆ ಪರಿಹರಿಸಿತು?

–ಸರ್ಕಾರವು ಮೈಸೂರು ಜಿಲ್ಲೆಯ ಬೈಲಕುಪ್ಪೆ ಎಂಬಲಿ ಟಿಬೆಟಿಯನ್ ನಿರಾಶ್ರಿತರಿಗಾಗಿ ಸುಮಾರು 3000 ಎಕರೆಗಳ ಜಮೀನನ್ನು ಮಂಜೂರು ಮಾಡಿತು.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಭಾರತವು ಸ್ವಾತಂತ್ರ್ಯಗಳಿಸಿದ ಸಮಯದಲ್ಲಿ ಎದುರಿಸಿದಸಮಸ್ಯೆಗಳಾವುವು ?

- ಮತೀಯ ಗಲಭೆಗಳು
- ನಿರಾಶ್ರಿತರ ಸಮಸ್ಯೆ
- ದೇಶೀಯ ಸಂಸ್ಥಾನಗಳ ವಿಲೀನೀಕರಣ
- ಸರ್ಕಾರ ರಚನೆಯ ಸಮಸ್ಯೆ
- ಭಾಷಾವಾರು ರಾಜ್ಯಗಳ ರಚನೆ

- ದೇಶದ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುವುದು.

2.ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?

- ಪಶ್ಚಿಮ ಪಾಕಿಸ್ತಾನದಿಂದ ಬಂದ ನಿರಾಶ್ರಿತರ ಸಮಸ್ಯೆಗಳನ್ನು ಬಹುತೇಕ 1951 ರ ವೇಳೆಗೆ ಪರಿಹರಿಸಲಾಯಿತು.
- ಪೂರ್ವ ಪಾಕಿಸ್ತಾನ/ಬಾಂಗ್ಲಾದೇಶದಿಂದ ಬಂದ ನಿರಾಶ್ರಿತರಿಗೆ ಭಾರತ ಸರ್ಕಾರ ಮತ್ತು ಪಶ್ಚಿಮ ಬಂಗಾಳ,ಅಸ್ಸಾಂ, ಮೇಘಾಲಯ ಮತ್ತು ತ್ರಿಪುರ ರಾಜ್ಯ ಸರ್ಕಾರಗಳು ಆಶ್ರಯ ನೀಡಿದವು.
- ಟಿಬೆಟ್‌ನಿಂದ ಬಂದವರಿಗೆ ವಿವಿಧ ರಾಜ್ಯಗಳಲ್ಲಿ ಆಶ್ರಯ ಕಲ್ಪಿಸಲಾಯಿತು.
- ಮೈಸೂರು ಜಿಲ್ಲೆಯ ಬೈಲಕುಪ್ಪೆ ಎಂಬಲ್ಲಿ ಟಿಬೆಟಿಯನ್ ನಿರಾಶ್ರಿತರಿಗಾಗಿ ಸುಮಾರು 3000 ಎಕರೆಗಳ ಜಮೀನನ್ನು ನೀಡಲಾಯಿತು.

3.ಪಾಂಡಿಚೇರಿಯನ್ನು ಫ್ರೆಂಚರಿಂದ ವಿಮುಕ್ತಿಗೊಳಿಸಿದ ರೀತಿಯನ್ನು ವಿವರಿಸಿ.

- ಸ್ವಾತಂತ್ರ್ಯದ ನಂತರದಲ್ಲಿ ಫ್ರೆಂಚ್‌ರು ತಮ್ಮ ವಸಾಹತುಗಳಾದ ಪಾಂಡಿಚೇರಿ , ಕಾರೈಕಲ್,ಮಾಹೆ ಮತ್ತು ಚಂದ್ರನಗರ್‌ಗಳ ಮೇಲಿನ ಹಿಡಿತವನ್ನು ಮುಂದುವರಿಸಿದರು.
- ಇವು ಭಾರತಕ್ಕೆ ಸೇರಬೇಕೆಂದು ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ 1954 ರಲ್ಲಿ ಈ ಪ್ರದೇಶಗಳು ಭಾರತಕ್ಕೆ ಸೇರಿಕೊಂಡವು.
- 1963 ರಲ್ಲಿ ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶ ವಾಯಿತು.

4. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು? ಅಥವಾ  ಗೋವಾವನ್ನು ಹೇಗೆ ಭಾರತದಲ್ಲಿ ವಿಲೀನಗೊಳಿಸಲಾಯಿತು?

- ಪೋರ್ಚುಗೀಸರ ವಸಾಹತುವಾಗಿ ಮುಂದುವರಿದ ಗೋವಾವನ್ನು ಭಾರತಕ್ಕೆ ಸೇರಿಸಬೇಕೆಂದು ನಿರಂತರವಾದ ಚಳವಳಿ ನಡೆಯಿತು.
- ಗೋವಾವನ್ನು ತೆರವುಗೊಳಿಸಬೇಕೆಂದು ಆದೇಶ ನೀಡಿದರೂ ಬಗ್ಗದ ಪೋರ್ಚುಗೀಸರು, ಆಫ್ರಿಕಾ ಮತ್ತು ಯುರೋಪಿನಿಂದ ಹೆಚ್ಚಿನ ಸೈನ್ಯವನ್ನು ತರಿಸಿಕೊಂಡು ಚಳವಳಿಯನ್ನು ದಮನ ಮಾಡಿ ಅಧಿಕಾರ ವನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸಿದರು.
- 1955 ರಲ್ಲಿ ಭಾರತದ ವಿವಿಧ ಭಾಗಗಳಿಂದ ಸತ್ಯಾಗ್ರಹಿಗಳು ಬಂದು ಗೋವಾದಿಂದ ವಸಾಹತುಶಾಹಿಗಳು ತೊಲಗಬೇಕೆಂದು ವಿಮೋಚನಾ ಹೋರಾಟವನ್ನು ಪ್ರಾರಂಭಿಸಿದರು.
- 1961 ರಲ್ಲಿ ಭಾರತದ ಸೈನ್ಯ ಮಧ್ಯೆಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು.

5.ಭಾಷಾವಾರು ಪ್ರಾಂತ್ಯಗಳ ವಿಂಗಡಣಾ ಕ್ರಮವನ್ನು ಕುರಿತು ಬರೆಯಿರಿ

- ಸ್ವಾತಂತ್ರ್ಯ ನಂತರ ದೇಶಾದ್ಯಂತ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು ತೀವ್ರವಾಯಿತು.
- ವಿಶಾಲಾಂಧ್ರ ರಾಜ್ಯ ರಚಿಸಬೇಕೆಂದು ಆಂಧ್ರಮಹಾಸಭಾದ ನೇತೃತ್ವದಲ್ಲಿ 1952 ರಲ್ಲಿ ಪೊಟ್ಟಿ ಶ್ರೀರಾಮುಲು 58 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಅಸುನೀಗಿದರು.
- ಇದರ ಪರಿಣಾಮವಾಗಿ ಮೊದಲ ಭಾಷಾವಾರು ರಾಜ್ಯವಾಗಿ 1953 ರಲ್ಲಿ ಆಂಧ್ರಪ್ರದೇಶ ರಚನೆಯಾಯಿತು.
- 1953 ರಲ್ಲಿ ಸರ್ಕಾರವು ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ರಚಿಸಿತು.
- ಇದರಲ್ಲಿ ಫಜಲ್ ಅಲಿ ಅಧ್ಯಕ್ಷರಾಗಿ ಕೆ.ಎಂ.ಫಣಿಕ್ಕರ್ ಮತ್ತು ಹೆಚ್.ಎನ್. ಕುಂಜ್ರು ಸದಸ್ಯರಾಗಿದ್ದರು.
- ಈ ಆಯೋಗದ ವರದಿಯಂತೆ 1956 ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದಿತು. ಈ ಕಾನೂನಿನ ಪ್ರಕಾರ ದೇಶದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು.

6.ಭಾರತದ ಒಕ್ಕೂಟಕ್ಕೆ ಹೈದರಾಬಾದ್‌ಸಂಸ್ಥಾನ ಹೇಗೆ ಸೇರ್ಪಡೆಯಾಯಿತು? ಅಥವಾ ಭಾರತದ ಒಕ್ಕೂಟಕ್ಕೆ ಹೈದರಾಬಾದನ್ನು ಸರ್ದಾರ್ ವಲ್ಲಭಭಾಯಿ ಪಟೇಲರು ಹೇಗೆ ಸೇರ್ಪಡೆಗೊಳಿಸಿದರು?

- ಹೈದರಾಬಾದ್ ಸಂಸ್ಥಾನವು ನಿಜಾಮನ ಅಧೀನದಲ್ಲಿತ್ತು.
- ಈತನು ಸ್ವತಂತ್ರವಾಗುಳಿಯುವ ಉದ್ದೇಶದಿಂದ ಭಾರತಕ್ಕೆ ಸೇರಲು ನಿರಾಕರಿಸಿದನು.
- ಇದೇ ಸಂದರ್ಭದಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ತೆಲಂಗಾಣ ರೈತರ ಸಶಸ್ತ್ರ ಹೋರಾಟವು ನಿಜಾಮ ಮತ್ತು ಜಮೀನ್ದಾರರ ವಿರುದ್ಧ ನಡೆಯುತ್ತಿತ್ತು
- ನಿಜಾಮನ ಕ್ರೂರ ಪಡೆಯಾದ ರಜಾಕರ ಬಗೆಗೆ ಜನತೆಯಲ್ಲಿ ವ್ಯಾಪಕ ಪ್ರತಿರೋಧವಿತ್ತು.
- ಈ ಸಂದರ್ಭದಲ್ಲಿ ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ನಿಜಾಮ ನನ್ನು ಸೋಲಿಸಿ ಹೈದರಾಬಾದ್ ಸಂಸ್ಥಾನವನ್ನು 1948 ರಲ್ಲಿ ಭಾರತದೊಂದಿಗೆ ವಲೀನಗೊಳಿಸಲಾಯಿತು.

7.ಜುನಾಘಡ ಸಂಸ್ಥಾನವು ಭಾರತದ ಒಕ್ಕೂಟಕ್ಕೆ ಹೇಗೆ ಸೇರ್ಪಡೆಯಾಯಿತು?

- ಜುನಾಘಡದ ನವಾಬನು ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಚಿಸಿದ್ದನು.
- ಪ್ರಜೆಗಳು ನವಾಬನ ವಿರುದ್ಧ ಬೀದಿಗಿಳಿದರು,ಇದನ್ನು

ಎದುರಿಸಲಾಗದೆ ನವಾಬನು ರಾಜ್ಯ ಬಿಟ್ಟು ಪಲಾಯನ ಮಾಡಿದನು.

- ಅಲ್ಲಿನ ದಿವಾನ ಭಾರತ ಸರ್ಕಾರಕ್ಕೆ ಮಾಡಿದ ಮನವಿಯನ್ನು ಆಧರಿಸಿ ಸೈನ್ಯವನ್ನು ಕಳುಹಿಸಿ ಶಾಂತಿ ಸ್ಥಾಪನೆ ಮಾಡಲಾಯಿತು.
- 1949 ರಲ್ಲಿ ಜುನಾಘಡ್ ಭಾರತ ಒಕ್ಕೂಟಕ್ಕೆಸೇರ್ಪಡೆಯಾಯಿತು.

8.ಜಮು ಮತ್ತು ಕಾಶ್ಮೀರ ಭಾರತದ ಒಕ್ಕೂಟಕ್ಕೆ ಸೇರಿದ್ದು ಹೇಗೆ? ಅಥವಾ ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಜಮ್ಮು-ಕಾಶ್ಮೀರದ ವಿಲೀನವು ವಿಶಿಷ್ಟ ವಾಗಿದೆ. ಹೇಗೆ?

- ಜಮ್ಮು-ಕಾಶ್ಮೀರಿನ ರಾಜನಾಗಿದ್ದ ಹರಿಸಿಂಗ್‌ನು ಸ್ವತಂತ್ರವಾಗುಳಿಯಲು ನಿರ್ಧರಿಸಿದ್ದನು.
- ಜಮ್ಮು-ಕಾಶ್ಮೀರವು ಭಾರತಕ್ಕೆ ಸೇರಿಬಿಡಬಹುದೆಂಬ ಆತಂಕದಿಂದ ಪಾಕಿಸ್ತಾನವು ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರನ್ನು ದಾಳಿ ಮಾಡುವಂತೆ ಪ್ರಚೋದಿಸಿತು.
- ಪಾಕಿಸ್ತಾನ ಸೇನೆಯ ಬೆಂಬಲಿತ ಪಠಾಣ ಬುಡಕಟ್ಟು ಜನಾಂಗವು ಭಾರತ ಪ್ರದೇಶಕ್ಕೆ ನುಗ್ಗಲು ಪ್ರಯತ್ನಿಸಿ ಸಾಕಷ್ಟು ಪ್ರದೇಶಗಳನ್ನು ಆಕ್ರಮಿಸಿತು
- ರಾಜ ಹರಿಸಿಂಗ್‌ನು ಅಕ್ಟೋಬರ್ 1947 ರಲ್ಲಿ ಭಾರತದಲ್ಲಿ ಕಾಶ್ಮೀರವನ್ನು ವಿಲೀನಗೊಳಿಸಲು ಸಹಿ ಹಾಕಿದನು.
- ನಂತರ ಭಾರತದ ಸೇನೆಯು ಪಾಕಿಸ್ತಾನ ಬೆಂಬಲಿತ ಪಡೆಯನ್ನು ಹಿಮ್ಮೆಟ್ಟಿಸಿತು.
- ಈ ವಿಷಯವನ್ನು ವಿಶ್ವಸಂಸ್ಥೆಗೆ ಕೊಂಡೊಯ್ಯಲಾಯಿತು. ಆದರೆ ಕಾಶ್ಮೀರದ ಒಂದು ಭಾಗ ಪಾಕಿಸ್ತಾನದ ವಶದಲ್ಲಿ ಉಳಿಯಿತು. ಇದರ ವಿರುದ್ಧ ಭಾರತವು ವಿಶ್ವಸಂಸ್ಥೆಗೆ ದೂರು ಸಲ್ಲಿಸಿತು.
- ವಿಶ್ವಸಂಸ್ಥೆಯು ಕದನ ವಿರಾಮ ಆದೇಶವನ್ನು ಜನವರಿ 1, 1949 ರಂದು ನೀಡಿತು.
- ಪಾಕಿಸ್ತಾನ ಆಕ್ರಮಿಸಿರುವ ಕಾಸ್ಮೀರದ ವಾಯುವ್ಯ ಪ್ರದೇಶವನ್ನು 'ಪಾಕ್ ಆಕ್ರಮಿತ ಪ್ರದೇಶ'ವೆಂದು ಈಗಲೂ ಕರೆಯಲಾಗುತ್ತದೆ.

## ಅಧ್ಯಾಯ-10
## 20ನೇ ಶತಮಾನದ ರಾಜಕೀಯ ಆಯಾಮಗಳು

**I.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1.ಕದನ ಬಾಂಧವ್ಯತ್ರಯ ಮೈತ್ರಿಕೂಟದಲ್ಲಿದ್ದ ದೇಶಗಳು ಯಾವುವು?
-ಬ್ರಿಟನ್,ಫ್ರಾನ್ಸ್ ಮತ್ತು ರಷ್ಯಾ

2.ಕದನ ಸೌಹಾರ್ದತ್ರಯ ಮೈತ್ರಿಕೂಟದ ಸದಸ್ಯ ರಾಷ್ಟಗಳು ಯಾವುವು?
-ಜರ್ಮನಿ.ಆಸ್ಟ್ರಿಯಾ-ಹಂಗೇರಿ,ಇಟಲಿ

3.ಮೊದಲ ಮಹಾಯುದ್ಧಕ್ಕೆ ತತ್ ಕ್ಷಣದ ಕಾರಣವೇನು?
-ಜುಲೈ 28 ರಂದು ಆಸ್ಟ್ರಿಯಾದ ರಾಜಕುಮಾರ ಆರ್ಕ್ ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್ ನ ಹತ್ಯೆಯಾಯಿತು. ಈ ಘಟನೆಯು ಆಸ್ಟ್ರಿಯಾ ಮತ್ತು ಸರ್ಬಿಯಾ ದೇಶಗಳ ನಡುವೆ ಬಿಕ್ಕಟ್ಟಿಗೆ ಕಾರಣವಾಯಿತು. ಇದು ಮೊದಲ ಮಹಾಯುದ್ಧಕ್ಕೆ ತತ್ ಕ್ಷಣದ ಕಾರಣವಾಯಿತು.

4.ಮೊದಲ ಮಹಾಯುದ್ಧ ಕೊನೆಗೊಂಡಿದ್ದು ಯಾವ ಒಪ್ಪಂದದಿಂದ ?
-1919 ರ ವರ್ಸೈಲ್ಸ್ ಒಪ್ಪಂದದಿಂದ

5.1905 ರಲ್ಲಿ ರಷ್ಯಾವನ್ನು ಸೋಲಿಸಿದ ಏಷ್ಯಾದ ಪುಟ್ಟ ದೇಶ ಯಾವುದು?
- ಜಪಾನ್

6.ರಷ್ಯಾದ ಕೊನೆಯ ಝಾರ್ ದೊರೆ ಯಾರು?-ಎರಡನೆ ನಿಕೋಲಸ್

7.ರಷ್ಯಾದ 1917 ರ 'ಫೆಬ್ರವರಿ ಕ್ರಾಂತಿ'ಯ ನೇತೃತ್ವವಹಿಸಿದ ಪಕ್ಷ ಯಾವುದು? - ಮೆನ್ಷವಿಕ್ ಪಕ್ಷ

8.ರಷ್ಯಾದ 1917 ರ 'ಅಕ್ಟೋಬರ್ ಕ್ರಾಂತಿ'ಯ ನೇತೃತ್ವವಹಿಸಿದ ಪಕ್ಷ
-ಬೊಲ್ಷವಿಕ್ ಪಕ್ಷ

9.ರಷ್ಯಾದ ಜನರಿಗೆ 'ಶಾಂತಿ, ಆಹಾರ, ಭೂಮಿ' ಎಂಬ ಜನಪರ ಘೋಷಣೆಯನ್ನು ನೀಡಿದವರು ಯಾರು? -ಲೆನಿನ್

10.ರಷ್ಯಾದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ಸ್ಥಾಪಿಸಿದವರು ಯಾರು ?
-ಲೆನಿನ್

11.ಜರ್ಮನಿಯಲ್ಲಿ ನಾಜಿ ಪಕ್ಷದ ನಾಯಕರಾಗಿದ್ದವರು -ಹಿಟ್ಲರ್.

12.ಹೊಲೊಕಾಸ್ಟ್ ಎಂದರೇನು?
-ಹಿಟ್ಲರ್ 6 ಮಿಲಿಯನ್ ಯೆಹೂದಿಗಳನ್ನು, ಕೋಟಿಗೂ ಹೆಚ್ಚು ಇತರೆ ಜನರನ್ನು ಕೊಲ್ಲಿಸಿದನು. ಇವನು ನಡೆಸಿದ ಸಾಮೂಹಿಕ ಕಗ್ಗೊಲೆಗಳನ್ನು ಹೊಲೊಕಾಸ್ಟ್ ಎಂದು ಕರೆಯುವರು.

13.ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷವನ್ನು ಇಟಲಿಯಲ್ಲಿ ಸ್ಥಾಪಿಸಿದವರು ಯಾರು?
- ಮುಸೋಲಿನಿ.

14.ಕಾರ್ಲ್ ಮಾರ್ಕ್ಸ್ ನ ವೈಜ್ಞಾನಿಕ ಸಮಾಜವಾದದ ಚಿಂತನೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತಂದವರು. -ಲೆನಿನ್

15.ಎರಡನೆಯ ಮಹಾಯುದ್ಧದಲ್ಲಿ ಶತ್ರುಬಣದ(Axis) ದೇಶಗಳು ಯಾವುವು? - ಜರ್ಮನಿ, ಇಟಲಿ, ಜಪಾನ್

16.ಎರಡನೆ ಮಹಾಯುದ್ಧ ಆರಂಭವಾಗಿದ್ದು ಯಾವಾಗ?
-1939 ಸೆಪ್ಟಂಬರ್ 1 ರಂದು ನಾಜಿ ಜರ್ಮನಿಯು ಪೋಲೆಂಡಿನ ಮೇಲೆ ದಾಳಿ ಮಾಡುವುದರೊಂದಿಗೆ ಆರಂಭ ವಾಯಿತು.

17.ಎರಡನೆಯ ಮಹಾಯುದ್ಧದಲ್ಲಿ ಮಿತ್ರಬಣದ(Allies) ದೇಶಗಳು
-ಬ್ರಿಟನ್,ಫ್ರಾನ್ಸ್,ರಷ್ಯಾ.

18.ಅಮೆರಿಕಾವು ಎರಡನೆಯ ಮಹಾಯುದ್ಧ ಪ್ರವೇಶ ಪಡೆಯಲು ಕಾರಣ ವಾದ ಅಂಶವೇನು?

–ಜಪಾನ್ ಅಮೇರಿಕಾದ ನೌಕಾನೆಲೆ ಪರ್ಲ್ ಹಾರ್ಬರ್ ಮೇಲೆ ದಾಳಿ ಮಾಡಿದ್ದರಿಂದ ಅಮೇರಿಕಾವು 2 ನೆಯ ಮಹಾಯುದ್ಧದಲ್ಲಿ ಪ್ರವೇಶಿಸಿತು.

19.ಜಗತ್ತಿನ ಮೊಟ್ಟ ಮೊದಲ ಅಣುಬಾಂಬಿಗೆ ಒಳಗಾದ ಜಪಾನಿನ ನಗರಗಳು – ಹಿರೋಷಿಮಾ ಮತ್ತು ನಾಗಸಾಕಿ.

20.ಚೀನಾದಲ್ಲಿ ಕಮ್ಯುನಿಸ್ಟ್‌ರ ದೀರ್ಘ ಪಯಣದ ನೇತೃತ್ವ ವಹಿಸಿದವರು ಯಾರು? – ಮಾವೋತ್ಸೆತುಂಗ್

21.ಶೀತಲ ಸಮರ ಎಂದರೇನು?

–ಅಮೇರಿಕಾ ಸಂಯುಕ್ತ ಸಂಸ್ಥಾನದ ಬಂಡವಾಳಶಾಹಿ ದೇಶಗಳ ಬಣ ಮತ್ತು ಸೋವಿಯತ್ ರಷ್ಯಾದ ಸಮಾಜವಾದಿ ದೇಶಗಳ ಬಣಗಳ ನಡುವಿನ ಅಘೋಷಿತ ಸಮರವೇ ಶೀತಲ ಸಮರ.

22.ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಆರಂಭಿಸಿದವರು ಯಾರು? – ಸ್ಟಾಲಿನ್

23.ಚೀನಾದಲ್ಲಿ ನಡೆದ ಈ ಘಟನೆಯನ್ನು ಜಗತ್ತಿನ ಮಿಲಿಟರಿ ಕಾರ್ಯವ್ಯೂಹದಲ್ಲಿಯೇ ಅತ್ಯಂತ ವಿಶಿಷ್ಟ ಪ್ರಯೋಗವೆಂದು ಪರಿಗಣಿಸಿದೆ.

–ಕಮ್ಯುನಿಸ್ಟರ ದೀರ್ಘ ಪಯಣ

24.ಅಮೇರಿಕಾದಲ್ಲಿ ಮೊದಲನೆಯ ಮಹಾಯುದ್ಧದ ನಂತರ ಕೃಷಿಉತ್ಪಾದನೆ ಕುಸಿಯಿತು.ಏಕೆ?

– ಆರ್ಥಿಕ ಮಹಾಕುಸಿತದಿಂದಾಗಿ ಅಮೇರಿಕಾದ ಆರ್ಥಿಕ ಬೆಳವಣಿಗೆಯು ಕುಂಠಿತ ಗೊಂಡಿದುದರ ಪರಿಣಾಮವಾಗಿ.

25.ಹಿಟ್ಲರ್ ಗೋಬೆಲ್ಸ್ ಎಂಬ ವಿಶೇಷವಾದ ಮಂತ್ರಿಯನ್ನು ಏಕೆ ನೇಮಕ ಮಾಡಿದನು? – ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು

26.ಹಿಟ್ಲರ್ ಬೂದು ಅಂಗಿದಳ ಎಂಬ ಕ್ರೌರ್ಯಪಡೆಯನ್ನು ರಚಿಸಿದ ಉದ್ದೇಶವೇನು? –ಗಲಭೆಗಳನ್ನು ಮಾಡಿ ಜನರಲ್ಲಿ ಭೀತಿಯನ್ನು ಹುಟ್ಟಿಸಲು

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ರಷ್ಯಾ ಕ್ರಾಂತಿಯಲ್ಲಿ ಲೆನಿನ್‌ನ ಪಾತ್ರವನ್ನು ವಿವರಿಸಿ

- ಲೆನಿನ್ ರೈತರು ಮತ್ತು ಕಾರ್ಮಿಕರಿಗೆ ಕ್ರಾಂತಿಕಾರಿ ಮಾರ್ಗದರ್ಶನ ವನ್ನು ನೀಡಿದರು.
- ಇದರಿಂದಾಗಿ ದುಡಿಯುವ ಜನ ಹೋರಾಟಗಳಲ್ಲಿ ಹೆಚ್ಚೆಚ್ಚು ತೊಡಗಿಸಿಕೊಂಡರು.ಇದೇ ಸಂದರ್ಭದಲ್ಲಿ ಲೆನಿನ್ ದೇಶ ಭ್ರಷ್ಟ ನಾಗಿದ್ದನು.
- 1917 ರ ಫೆಬ್ರವರಿ ಕ್ರಾಂತಿಯ ನಂತರ ಲೆನಿನ್ ರಷ್ಯಾಗೆ ಬಂದು ಜನರಿಗೆ 'ಶಾಂತಿ,ಆಹಾರ,ಭೂಮಿ' ಎಂಬ ಜನಪರ ಘೋಷಣೆಗಳ ನ್ನು ನೀಡಿದನು.
- ಇದಕ್ಕೆ ಕಾರ್ಮಿಕರು ಮತ್ತು ಗ್ರಾಮೀಣ ಬಡವರು ವ್ಯಾಪಕವಾಗಿ ಸ್ಪಂದಿಸಿದರು.
- ದುಡಿಮೆಗಾರರ ಪಕ್ಷದವರಾದ 'ಬೋಲ್ಷವಿಕ್‌'ರ ನೇತೃತ್ವದಲ್ಲಿ 1917 ರ ಅಕ್ಟೋಬರ್‌ನಲ್ಲಿ ಕ್ರಾಂತಿ ಸಂಭವಿಸಿತು.ಲೆನಿನ್ ಕ್ರಾಂತಿ ಪಡೆಯನ್ನು ಸೇರಿ ಅಕ್ಟೋಬರ್7 ರಂದು ರಷ್ಯಾವನ್ನು ಸಮಾಜವಾದಿ ಗಣರಾಜ್ಯ ಎಂದು ಘೋಷಣೆ ಮಾಡಿದನು.ಇದನ್ನು ಅಕ್ಟೋಬರ್ ಕ್ರಾಂತಿ ಎನ್ನುವರು. ನಂತರ ಲೆನಿನ್ ರಷ್ಯನ್ ಸರ್ಕಾರ ಅಧ್ಯಕ್ಷರಾದರು.

2. 'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು'ಹೇಗೆ? ವಿವರಿಸಿ.

- ಹಿಟ್ಲರ್‌ನು ಜರ್ಮನಿಯಲ್ಲಿ ನಾಜಿ ಸಿದ್ಧಾಂತವನ್ನು ಹರಡಿದನು.
- ಜಗತ್ತಿನಲ್ಲಿ ಶ್ರೇಷ್ಟವಾದ ಜನಾಂಗವೆಂದರೆ ಆರ್ಯ ಜರ್ಮನ್ ಜನಾಂಗ.
- ಜಗತ್ತನ್ನು ಆಳ್ವಿಕೆ ಮಾಡಲು ಕೇವಲ ಜರ್ಮನ್ನರು ಮಾತ್ರ ಯೋಗ್ಯರು ಉಳಿದ ಜನಾಂಗಗಳು ಕೇವಲ ಆಳಿಸಿಕೊಳ್ಳಲು ಮಾತ್ರ ಯೋಗ್ಯರು
- ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೆ ಯೆಹೂದಿಗಳೇ ಕಾರಣ.ಇವರ ಜೊತೆಗೆ ಕಮ್ಯುನಿಸ್ಟರು,ಕ್ಯಾಥೋಲಿಕರು,ಸೋಷಿಯಲಿಸ್ಟರು ಕೂಡಾ ಕಾರಣ.ಇವರು ಬದುಕಲು ಯೋಗ್ಯರಲ್ಲ.ಈ ರೀತಿಯಾಗಿ ರೂಪುಗೊಂಡ ಉಗ್ರ ರಾಷ್ಟ್ರೀಯವಾದವು ಅತ್ಯಂತ ಅಮಾನುಷ ವಾಗಿ ಜಾರಿಗೆ ಬಂದಿತು.
- ಈ ನಿಟ್ಟಿನಲ್ಲಿ ಹಿಟ್ಲರ್ ನಡೆಸಿದ ಸಾಮೂಹಿಕ ಕೊಲೆಗಳು ಮತ್ತು ನರಮೇಧಗಳು ಚರಿತ್ರೆಯಲ್ಲಿ ಅತ್ಯಂತ ಕುಖ್ಯಾತಿಯನ್ನು ಪಡೆದವು.
- ಹಿಟ್ಲರ್‌ನ ನಾಜಿ ಸಿದ್ಧಾಂತವೇ ಎರಡನೇ ಮಹಾಯುದ್ಧಕ್ಕೆ ಕಾರಣವಾಗಿ, ಈ ಯುದ್ಧದಲ್ಲಿ ಜರ್ಮನಿ ಸೋಲುವ ಮೂಲಕ ಇದು ಜರ್ಮನಿಯ ಅದೋಗತಿಗೆ ಕಾರಣವಾಯಿತು.

3.ಎರಡನೇ ಮಹಾಯುದ್ಧಕ್ಕೆ ಕಾರಣಗಳೇನು?

- ಶ್ರೀಮಂತ ದೇಶಗಳು ಮೊದಲನೇ ಮಹಾಯುದ್ಧದಲ್ಲಿ ಹಣ ವ್ಯಯ ಮಾಡಿದ್ದರ ಪರಿಣಾಮವಾಗಿ ಮಹಾನ್ ಆರ್ಥಿಕ ಕುಸಿತ ಉಂಟಾಯಿತು.
- ಇದರಿಂದಾಗಿ ಯುರೋಪ್ ಮತ್ತು ಅಮೇರಿಕಾದಲ್ಲಿ ಸಂಕಷ್ಟ ಪರಿಸ್ಥಿತಿ ಉಂಟಾಯಿತು.
- ಜನರ ಜೀವನ ಮಟ್ಟ ಕುಸಿಯಿತು,ಕೈಗಾರಿಕೆ ಮತ್ತು ಕೃಷಿ ಬೆಳವಣಿಗೆ ಸ್ಥಗಿತವಾಯಿತು.ನಿರುದ್ಯೋಗ ವಿಪರೀತವಾಯಿತು.
- ಮೊದಲ ಮಹಾಯುದ್ಧದ ಸೋಲು, ಅವಮಾನಕರ ಒಪ್ಪಂದಗಳು, ಅಪಾರವಾದ ನಷ್ಟಗಳ ಹಿನ್ನೆಲೆಯಲ್ಲಿ ಜರ್ಮನಿ ಮತ್ತು ಯುರೋಪಿನ ಹಲವು ದೇಶಗಳಲ್ಲಿ ರಾಷ್ಟ್ರೀಯವಾದದ ಉಗ್ರತೆ ತೀವ್ರಗೊಂಡಿತು
- ಜರ್ಮನಿಯಲ್ಲಿ ಹಿಟ್ಲರ್ ಮತ್ತು ಇಟಲಿಯಲ್ಲಿ ಮುಸೋಲಿನಿ ಯಂತಹ ಸರ್ವಾಧಿಕಾರಿಗಳು ಬೆಳೆದರು. – ಇವು 2 ನೇ ಮಹಾಯುದ್ಧಕ್ಕೆ ಕಾರಣವಾದವು.

4.ಚೀನಾಕ್ರಾಂತಿಯ ಪರಿಣಾಮಗಳಾವುವು? ಅಥವಾ ಚೀನಾ ಕ್ರಾಂತಿಯ ನಂತರ ಹೇಗೆ ಅಭಿವೃದ್ಧಿ ಸಾಧಿಸಿತು?

- ಕ್ರಾಂತಿಯ ನಂತರ ಚೀನಾದಲ್ಲಿ ಸಾಮೂಹಿಕ ಕೃಷಿ ಪದ್ಧತಿಯನ್ನು ಜಾರಿಗೊಳಿಸಿದರು.
- ಎಲ್ಲರಿಗೂ ಉಚಿತ ಶಿಕ್ಷಣ, ಆರೋಗ್ಯ, ಮೊದಲಾದ ಸೌಲಭ್ಯಗಳನ್ನು ನೀಡಿದರು.
- ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಲು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ತುಂಬಾ ಮಹತ್ವ ನೀಡಿದರು
- ಮುನ್ನಡೆಯ ಮಹಾಜಿಗಿತ ಯೋಜನೆಯನ್ನು ಜಾರಿಗೊಳಿಸಲಾಯಿತು.
- ಖಾಸಗಿ ಆಸ್ತಿಯನ್ನು ಸಮಾಜದ ಆಸ್ತಿಯಾಗಿ ಪರಿವರ್ತಿಸಿದರು.

5.ಅಮೆರಿಕಾವು ಆರ್ಥಿಕ ಮಹಾಕುಸಿತದಿಂದ ಹೇಗೆ ಹೊರ ಬಂದಿತು? ವಿವರಿಸಿ.

- ರೂಸ್‌ವೆಲ್ಟ್‌ರು ಜನತೆಯನ್ನು ಸೈನ್ಯವಾಗಿ ಸನ್ನದ್ಧಗೊಳಿಸಿದರು.
- ಮಹಿಳೆಯರಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯಲು ಪ್ರೋತ್ಸಾಹಿಸಿದನು.
- ಅಮೆರಿಕಾ ದ್ವಿತೀಯ ಮಹಾಯುದ್ಧದಲ್ಲಿ ಜಯಗಳಿಸಿತು.
- ದ್ವಿತೀಯ ಮಹಾಯುದ್ಧ ನಡೆಯುತ್ತಿರುವಾಗಲೇ ವಿಶ್ವಸಂಸ್ಥೆಯ ಸ್ಥಾಪನೆಗೆ ಸಹಕರಿಸಿತು.
- ನಂತರ ಅಮೆರಿಕಾ ಜಗತ್ತಿನ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಿದೆ.

6.ಮೊದಲನೇ ಮಹಾಯುದ್ಧಕ್ಕೆ ಕಾರಣಗಳೇನು?

- ವಸಾಹತುಗಳ ಸ್ಥಾಪನೆಗಾಗಿ ತೀವ್ರ ಪೈಪೋಟಿ
- ಅತ್ಯುಗ್ರ ರಾಷ್ಟ್ರೀಯತೆಯ ಬೆಳವಣಿಗೆ
- ಮಿಲಿಟರಿ ಮೈತ್ರಿಕೂಟಗಳ ರಚನೆ
- ಸಾಮ್ರಾಜ್ಯವಾದದ ನೀತಿಯ ಬಲವರ್ಧನೆ

7.ರಷ್ಯಾ ಕ್ರಾಂತಿಗೆ ಕಾರಣಗಳೇನು? ಅಥವಾ ರಷ್ಯಾದ ಜನರು ಝಾರ್ ದೊರೆಗಳ ವಿರುದ್ಧ ದಂಗೆಯೇಳಲು ಕಾರಣಗಳೇನು?

- 19 ನೇ ಶತಮಾನದಲ್ಲಿ ರಷ್ಯಾವನ್ನು ಝಾರ್ ದೊರೆಗಳು ಆಳುತ್ತಿದ್ದರು.
- ಈ ದೊರೆಗಳು ತಮ್ಮ ಕೆಳಗಿನ ಕುಲೀನರು, ಜಮೀನ್ದಾರರು ರೈತರನ್ನು ಮತ್ತು ಬಡವರನ್ನು ತೀವ್ರವಾಗಿ ಶೋಷಿಸುತ್ತಿದ್ದರು.
- ಝಾರ್‌ಚಕ್ರವರ್ತಿಗಳ ಆಳ್ವಿಕೆಯಿಂದ ಜನರು ತುಂಬಾ ಬೇಸತ್ತಿದ್ದರು
- ಝಾರ್‌ಶಾಹಿಯನ್ನು ರಾಷ್ಟ್ರೀಯತೆಯ ಜೈಲು ಎಂದು ಕರೆಯಲಾಗುತ್ತಿತ್ತು.
- 1905 ರಲ್ಲಿ ಜಪಾನ್‌ನಂತಹ ಪುಟ್ಟ ದೇಶ ರಷ್ಯಾವನ್ನು ಸೋಲಿಸಿತು.
- ಇದರಿಂದಾಗಿ ದೇಶದೊಳಗೆ ಝಾರ್ ದೊರೆಗಳ ವಿರುದ್ಧ ವ್ಯಾಪಕ ಪ್ರತಿರೋಧ ವ್ಯಕ್ತವಾಗಿಯಿತು.ಇದು ದಂಗೆಗೆ ಕಾರಣವಾಯಿತು.

8.ರಷ್ಯಾದ ಅಧ್ಯಕ್ಷರಾಗಿ ಲೆನಿನ್‌ರವರ ಸಾಧನೆಗಳೇನು?

- ಲೆನಿನ್ ಅಧ್ಯಕ್ಷರಾದ ಕೂಡಲೇ ಎಲ್ಲಾ ಭೂಮಿ ರೈತರಿಗೆ ಸೇರಿದ್ದು ಎಂದು ಘೋಷಿಸಿದರು.
- ಎಲ್ಲಾ ರಷ್ಯನ್ನರಿಗೂ ಉಚಿತ ಶಿಕ್ಷಣ, ಕ್ರೀಡೆ, ಆರೋಗ್ಯ, ವಸತಿ ಒದಗಿಸಿದರು.
- ಹೊಸ ಆರ್ಥಿಕ ಮತ್ತು ರಾಜಕೀಯ ನೀತಿಗಳನ್ನು ಜಾರಿ ಮಾಡಿದರು
- ವೈಜ್ಞಾನಿಕ ಸಮಾಜವಾದದ ಚಿಂತನೆಗಳನ್ನು ಪ್ರಯೋಗಿಕವಾಗಿ ಜಾರಿಗೆ ತಂದರು.

9.ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣಾ ಕ್ರಮಗಳಾವುವು?

- ಸ್ಟಾಲಿನ್ ರಷ್ಯಾವನ್ನು ಅಮೆರಿಕಾಕ್ಕೆ ಸವಾಲಾಗುವಂತೆ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರು
- ಸ್ಟಾಲಿನ್ ಜಾರಿಗೊಳಿಸಿದ ಪಂಚವಾರ್ಷಿಕ ಯೋಜನೆಗಳು ರಷ್ಯಾದ ಅಭಿವೃದ್ಧಿಯ ಪಥವನ್ನೇ ಬದಲಾಯಿಸಿತು.
- ರಷ್ಯಾ ಬಾಹ್ಯಾಕಾಶ ವಿಜ್ಞಾನದಲ್ಲಿ ವಿಶ್ವದ ಮೊದಲ ಮಾನವ ಸಹಿತ ಉಪಗ್ರಹವನ್ನು ಉಡಾವಣೆ ಮಾಡಿತು.
- ಎರಡನೇ ಮಹಾಯುದ್ಧದ ನಂತರ ಸಮಾಜವಾದಿ ದೇಶಗಳ ಬಣದ ನಾಯಕತ್ವ ವಹಿಸಿತು.

10.ಫ್ಯಾಸಿಸ್ಟ್‌ವಾದದ ಲಕ್ಷಣಗಳೇನು?

- ಉಗ್ರ ರಾಷ್ಟ್ರೀಯವಾದ
- ಪರಕೀಯ ಶಕ್ತಿಗಳ ನಾಶ
- ಹಿಂಸೆಯ ವೈಭವೀಕರಣ
- ಜನಾಂಗೀಯ ಶ್ರೇಷ್ಠತೆ
- ಸಾಮ್ರಾಜ್ಯವಾದದ ವಿಸ್ತರಣೆ
- ನರಮೇಧಗಳಿಗೆ ಬೆಂಬಲ

11.ವರ್ಸೈಲ್ಸ್ ಒಪ್ಪಂದದ ಪರಿಣಾಮಗಳೇನು?
(ಅಥವಾ ಮೊದಲನೇ ಮಹಾಯುದ್ಧದ ಪರಿಣಾಮಗಳೇನು?)

- ಆಸ್ಟ್ರೋ-ಹಂಗೇರಿ ಮತ್ತು ಆಟೋಮನ್ ಸಾಮ್ರಾಜ್ಯಗಳು ತಮ್ಮ ಅಸ್ತಿತ್ವ ಕಳೆದು ಕೊಂಡವು.
- ಜರ್ಮನಿ ತನ್ನ ಹೆಚ್ಚಿನ ಪ್ರದೇಶಗಳನ್ನು ಕಳೆದುಕೊಂಡಿತು.
- ಯುರೋಪಿನ ಭೂಪಟವೇ ಬದಲಾಗಿ ಹೋಯಿತು.
- ಹಲವಾರು ಸಣ್ಣ ಸ್ವತಂತ್ರ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದವು
- ಯುದ್ಧಗಳನ್ನು ತಡೆಯಲು ರಾಷ್ಟ್ರಸಂಘವು 1919 ರಲ್ಲಿ ಅಸ್ತಿತ್ವಕ್ಕೆ ಬಂದಿತು.

12.ಎರಡನೇ ಮಹಾಯುದ್ಧದ ಪರಿಣಾಮಗಳೇನು?

- ಎರಡನೇ ಮಹಾಯುದ್ಧವು ಜಗತ್ತಿನ ರಾಜಕೀಯ ಮತ್ತು ಸಾಮಾಜಿಕ ಸಂರಚನೆಯನ್ನು ಬದಲಾವಣೆ ಮಾಡಿತು.
- ರಾಷ್ಟ್ರಸಂಘದ ಜಾಗದಲ್ಲಿ ಶಾಂತಿ ನೆಲೆಸುವಂತೆ ಮಾಡಲು ವಿಶ್ವಸಂಸ್ಥೆ ರಚನೆಯಾಯಿತು.
- ಸೋವಿಯತ್ ರಷ್ಯಾ ಮತ್ತು ಅಮೆರಿಕಾ ಪರಸ್ಪರ ವಿರೋಧಿಯಾದ ಶಕ್ತಿಶಾಲಿ ದೇಶಗಳಾಗಿ ಶೀತಲ ಸಮರಕ್ಕೆ ನಾಂದಿಯಾಯಿತು.
- ಈ ಯುದ್ಧದಿಂದಾಗಿ ಅಪಾರ ಸಾವುನೋವುಗಳು ಸಂಭವಿಸಿದವು.

13.ಶೀತಲ ಸಮರವು ಸೃಷ್ಟಿಸಿದ ಆತಂಕದ ಪರಿಸ್ಥಿತಿಗಳು ಯಾವುವು?
(OR ಶೀತಲ ಸಮರವು ಹಲವು ಆತಂಕದ ಪರಿಸ್ಥಿತಿಗಳನ್ನು ಸೃಷ್ಟಿಸಿತು.ಹೇಗೆ?)

- ಕೋರಿಯನ್ ಯುದ್ಧ
- ವಿಯೆಟ್ನಾಂ ಯುದ್ಧ
- 1956 ರ ಸೂಯೆಜ್ ಕಾಲುವೆ ಬಿಕ್ಕಟ್ಟು
- 1961 ರ ಬರ್ಲಿನ್ ಬಿಕ್ಕಟ್ಟು
- 1962 ರ ಕ್ಯೂಬನ್ ಕ್ಷಿಪಣಿ ಬಿಕ್ಕಟ್ಟು

14.ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಗಲು ಕಾರಣವೇನು?

- ಸೋವಿಯತ್ ಒಕ್ಕೂಟದ ಅಧ್ಯಕ್ಷರಾದ ಗೋರ್ಬಚೆವ್ ಜಾರಿಗೆ ತಂದ ಗ್ಲಾಸ್‌ನೋಸ್ತ್ (ಮುಕ್ತತೆ) ಮತ್ತು ಪೆರೆಸ್ಟ್ರೋಯಿಕ (ಪುನರ್ ಸಂಘಟನೆ) ಎಂಬ ಸುಧಾರಣೆಗಳು ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಗಲು ಕಾರಣವಾದವು.

*****

## ರಾಜ್ಯಶಾಸ್ತ್ರ

### ಅಧ್ಯಾಯ-1
### ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

1.ನಿರುದ್ಯೋಗ ಎಂದರೇನು?
–ಕೆಲಸ ಮಾಡುವ ಸಾಮರ್ಥ್ಯ ಇರುವ ವ್ಯಕ್ತಿಗೆ ಉದ್ಯೋಗದ ಲಭ್ಯತೆ ಇಲ್ಲದಿರುವ ಪರಿಸ್ಥಿತಿಯನ್ನು ನಿರುದ್ಯೋಗ ಎಂದು ಕರೆಯುವರು.

2.2011 ರ ಜನಗಣತಿಯ ಪ್ರಕಾರ ಭಾರತದ ಬಡತನದ ದರ ಎಷ್ಟು?
–2011 ರ ಜನಗಣತಿಯ ಪ್ರಕಾರ ಭಾರತದ ಬಡತನದ ದರ ಶೇಕಡಾ21.9

3.ಭ್ರಷ್ಟಾಚಾರ ಎಂದರೇನು?
– ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರ ಕ್ರಮಕ್ಕೆ ಪ್ರಚೋದನೆ ನೀಡುವುದನ್ನು ಭ್ರಷ್ಟಾಚಾರ ಎನ್ನುವರು.
ಅಥವಾ ಸಾರ್ವಜನಿಕ ಜೀವನದ ಅಧಿಕಾರ ಹಾಗೂ ವರ್ಚಸ್ಸನ್ನು ಸ್ವಾರ್ಥ ಹಾಗೂ ತಪ್ಪು ವಿಧಾನದ ದುರ್ಬಳಕೆ ಮಾಡಿಕೊಳ್ಳುವುದನ್ನು ಭ್ರಷ್ಟಾಚಾರ ಎನ್ನುವರು.

4.ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಯಂತ್ರಿಸಲು ಯಾವ ಸಂಸ್ಥೆ ಅಸ್ತಿತ್ವದಲ್ಲಿದೆ?
– ಲೋಕಾಯುಕ್ತ ಸಂಸ್ಥೆ

5.ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡುವ ಉದ್ದೇಶದಿಂದ ಭಾರತದ ಸಂವಿಧಾನದ 371 ನೇ ವಿಧಿಗೆ ಯಾವ ತಿದ್ದುಪಡಿಗಳ ಮೂಲಕ ಸೇರ್ಪಡೆ ಮಾಡಲಾಗಿದೆ? – A ಯಿಂದ J ವರೆಗೆ ತಿದ್ದುಪಡಿಗಳ ಮೂಲಕ

6.ಕರ್ನಾಟಕದಲ್ಲಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಿದ ಸಂವಿಧಾನದ ವಿಧಿ ಯಾವುದು? – 371 (ಜೆ)ವಿಧಿ

7.2001 ರಲ್ಲಿ ಡಿ.ಎಂ.ನಂಜುಂಡಪ್ಪ ಸಮಿತಿಯನ್ನು ಏಕೆನೇಮಿಸಲಾಯಿತು?
–ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸುವ ಉದ್ದೇಶದಿಂದ 2001 ರಲ್ಲಿ ಡಿ.ಎಂ.ನಂಜುಂಡಪ್ಪ ಸಮಿತಿಯನ್ನು ನೇಮಿಸಲಾಯಿತು.

8.ಪ್ರಾದೇಶಿಕವಾದ/ಪ್ರಾಂತೀಯತೆ ಎಂದರೇನು?
–ತಾವು ವಾಸಿಸುವ ಪ್ರದೇಶದ ಬಗ್ಗೆ ಅತ್ಯಂತ ಗಾಢವಾದ ಅಭಿಮಾನ ಬೆಳೆಸಿಕೊಂಡಿರುವುದನ್ನು ಪ್ರಾಂತೀಯತೆ ಎಂದು ಕರೆಯುವರು.

9.ಕೋಮುವಾದ ಅಥವಾ ಮತೀಯವಾದ ಎಂದರೇನು?
– ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವುದನ್ನು ಕೋಮುವಾದ ಅಥವಾ ಮತೀಯವಾದ ಎನ್ನುವರು.

10.ಕರ್ನಾಟಕ ಸರ್ಕಾರವು 'ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮವನ್ನು ಏಕೆ ರೂಪಿಸಿದೆ ?

–ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಕರ್ನಾಟಕ ಸರ್ಕಾರವು 'ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮವನ್ನು ರೂಪಿಸಿದೆ.

11.'ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮದ ಉದ್ದೇಶವೇನು?

– ಗ್ರಾಮಾಂತರ ಮಹಿಳೆಯರ ವಿಕಾಸ

12.ಭಯೋತ್ಪಾದಕತೆ ಎಂದರೇನು?

–ಉಗ್ರಗಾಮಿ ಸಂಘಟನೆಗಳ ಉದ್ದೇಶ ಈಡೇರಿಕೆಗಾಗಿ ಹಾಗೂ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆಯನ್ನು ಭಯೋತ್ಪಾದಕತೆ ಎನ್ನುವರು.

13.ಕಾರ್ಪೋರೇಟ್ ತಂತ್ರಗಾರಿಕೆ ಎಂದರೇನು?

– ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧಾರಿತ ಗುರಿಗಳನ್ನು ತಲುಪಲು ಕಂಪನಿಯು (ಸಂಘಟನೆಯು)ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನಗಳನ್ನು ಕಾರ್ಪೋರೇಟ್ ತಂತ್ರಗಾರಿಕೆ ಎನ್ನುವರು

14. ಕಾರ್ಪೋರೇಟ್ ತಂತ್ರಗಾರಿಕೆಯ ಮುಖ್ಯ ಉದ್ದೇಶವೇನು?

– ಕಾರ್ಪೋರೇಟ್ ತಂತ್ರಗಾರಿಕೆಯ ಮುಖ್ಯ ಉದ್ದೇಶ ಲಾಭವನ್ನು ಪಡೆಯುವುದು

15.ಭಾರತದ ಸಾರ್ವಜನಿಕ ಜೀವನದಲ್ಲಿ ಯಾವುದು ಒಂದು ಮುಖ್ಯ ಪಿಡುಗು? – ಭ್ರಷ್ಟಾಚಾರ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ನಿರುದ್ಯೋಗ ಸಮಸ್ಯೆಗೆ ಕಾರಣಗಳೇನು?

- ಮಿತಿ ಮೀರಿದ ಜನಸಂಖ್ಯೆ
- ಹೆಚ್ಚಾದ ತಂತ್ರಜ್ಞಾನದ ಬಳಕೆ
- ನೈಸರ್ಗಿಕ ಸಂಪನ್ಮೂಲಗಳ ಕೊರತೆ
- ಕೃಷಿಯ ಮೇಲಿನ ಅಧಿಕ ಅವಲಂಬನೆ
- ಗೃಹ ಕೈಗಾರಿಕೆಗಳ ನಾಶ
- ಕೌಶಲ್ಯ ಆಧಾರಿತ ಶಿಕ್ಷಣದ ಕೊರತೆ.

2.ನಿರುದ್ಯೋಗ ನಿವಾರಣೆಗೆ ಕೈಗೊಂಡ ಕ್ರಮಗಳು ಯಾವುವು?

- ಜನತೆಗೆ ಉದ್ಯೋಗ ಮಾಡಲು ಅಗತ್ಯವಿರುವ ಕೌಶಲ್ಯ ಆಧಾರಿತ ಗುಣಮಟ್ಟದ ಶಿಕ್ಷಣ ನೀಡಿಕೆ
- ಸ್ವಯಂ ಉದ್ಯೋಗ ಕೈಗೊಳ್ಳಲು ಅಗತ್ಯವಿರುವ ಮೂಲ ಬಂಡವಾಳವನ್ನು ಸಾಲದ ರೂಪದಲ್ಲಿ ನೀಡುವುದು.
- ಸಾಧ್ಯವಾದಷ್ಟು ಸಹಾಯಧನ ನೀಡುವ ಮೂಲಕ ಸ್ವಯಂ ಉದ್ಯೋಗಗಳನ್ನು ಪ್ರೋತ್ಸಾಹಿಸುವ ಪ್ರಯತ್ನವನ್ನು ಕೈಗೊಳ್ಳಲಾಗಿದೆ.
- ಆಧುನಿಕ ಮಾರುಕಟ್ಟೆಯಲ್ಲಿ ಸ್ಪರ್ಧಿಸಿ ಉದ್ಯೋಗ ಪಡೆಯುವಂತಹ ಸಾಮರ್ಥ್ಯವನ್ನು ವೃದ್ಧಿಸಲು ಪೂರಕವಾದ ಗುಣಮಟ್ಟದ ತಾಂತ್ರಿಕ ಶಿಕ್ಷಣ ನೀಡುವುದು.
- ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲಾ ಒಂದು ವೃತ್ತಿಯಲ್ಲಿ ತೊಡಗುವಂತೆ ಪ್ರೇರೇಪಿಸುವ ಸಾಮಾಜಿಕ ಬದಲಾವಣೆಯನ್ನು ಮಾಡುವ ವೃತ್ತಿ ಶಿಕ್ಷಣವನ್ನು ನೀಡುವ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸ ಬಹುದಾಗಿದೆ.

3.ಭ್ರಷ್ಟಾಚಾರದ ಪರಿಧಿಯೊಳಗೆ ಬರುವ ಸಂಗತಿಗಳು ಯಾವುವು?

– ಲಂಚಗುಳಿತನ –ಸ್ವಜನ ಪಕ್ಷಪಾತ

–ಜಾತೀಯತೆ –ನಿಧಾನದ್ರೋಹ

4.ಭ್ರಷ್ಟಾಚಾರವನ್ನು ನಿವಾರಿಸಲು ಎಲ್ಲಾ ಸ್ತರಗಳಲ್ಲಿಯೂ ಕೈಗೊಳ್ಳಬಹುದಾದ ಅತ್ಯಗತ್ಯ ಕ್ರಮಗಳೇನು? ಅಥವಾ ಭ್ರಷ್ಟಾಚಾರವನ್ನು ನಿಯಂತ್ರಿಸಲು ಕೈಗೊಳ್ಳಬಹುದಾದ ಕ್ರಮಗಳನ್ನು ತಿಳಿಸಿ

- ಭ್ರಷ್ಟಾಚಾರ ನಿಗ್ರಹಕ್ಕೆ ರಾಜಕೀಯ ಇಚ್ಛಾಶಕ್ತಿ ಹಾಗೂ ಸಾರ್ವಜನಿಕ ಸಹಕಾರ ತೀರಾ ಅತ್ಯಗತ್ಯ.
- ಒಳ್ಳೆಯ ರಾಜಕೀಯ ನಾಯಕತ್ವ,ಉತ್ತಮ ಅಧಿಕಾರಿ ವರ್ಗ ಹಾಗೂ ರಾಜಕೀಯ ಪರಿಜ್ಞಾನ ಹಾಗೂ ಪೌರತ್ವದ ಅರಿವು ಹೊಂದಿದ ಜನತೆ
- ಲೋಕಪಾಲ ಮತ್ತು ಲೋಕಾಯುಕ್ತರಂತಹ ಸಂಸ್ಥೆಗಳು
- ಸರ್ಕಾರಿ ಕಛೇರಿಗಳಲ್ಲಿ ಸಿಸಿ ಕ್ಯಾಮರಗಳನ್ನು ಅಳವಡಿಸುವುದು ಮತ್ತು ಕಛೇರಿಯ ಕಾರ್ಯನಿರ್ವಹಣೆಯ ವೇಗ ಹೆಚ್ಚಿಸುವುದು.
- ಭ್ರಷ್ಟಾಚಾರದಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆ ವಿಧಿಸುವುದು.
- ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸುವುದರ ಮೂಲಕ ಸಾಧ್ಯವಾದಷ್ಟು ಬೇಗನೆ ನ್ಯಾಯ ನಿರ್ಣಯ ನೀಡುವುದು.

5.ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೈಗೊಂಡ ಕ್ರಮಗಳು ಯಾವುವು?

- ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸುವ ಉದ್ದೇಶದಿಂದ 2001 ರಲ್ಲಿ ಡಿ.ಎಂ.ನಂಜುಂಡಪ್ಪ ಸಮಿತಿಯು ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮತೋಲನವನ್ನು ಕುರಿತು ವರದಿ ನೀಡಿದೆ.
- ಇದಕ್ಕೆ ಪೂರಕವಾಗಿ ಸಂವಿಧಾನಕ್ಕೆ ವಿಧಿ 371(ಜೆ) ಸೇರ್ಪಡೆ ಮಾಡುವುದರ ಮೂಲಕ ಕರ್ನಾಟಕದಲ್ಲಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ.

6.ಕೋಮುವಾದವು ದೇಶದ ಐಕ್ಯತೆಗೆ ಮಾರಕ.ಹೇಗೆ?

- ಕೋಮುವಾದವು ಸಾಮಾಜಿಕ ಭಿನ್ನತೆ,ಪರಸ್ಪರ ಅಪನಂಬಿಕೆ ಹಾಗೂ ಭಯದ ವಾತಾವರಣವನ್ನು ಸೃಷ್ಟಿಸುತ್ತದೆ.
- ಇದು ಸಮಾಜದಲ್ಲಿ ಗುಂಪುಗಾರಿಕೆ, ಆರ್ಥಿಕ ವೈಷಮ್ಯ ಮತ್ತು ರಾಜಕೀಯ ಪೈಪೋಟಿಯಲ್ಲಿ ಪ್ರಕಟವಾಗುತ್ತದೆ.

- ಭಾರತದ ಮಟ್ಟಿಗೆ ಈ ಕೋಮುವಾದ ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಯನ್ನು ಭಂಗಪಡಿಸುವ,ಅಪಾಯ ತಂದೊಡ್ಡುವ ಶಕ್ತಿಯಾಗಿದೆ.
- ಅದು ಸಮಾಜದ ನೆಮ್ಮದಿಯನ್ನು ಕೆಡಿಸುವುದಲ್ಲದೆ ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶಕ್ಕೂ ಕಾರಣವಾಗುತ್ತದೆ.
- ಈ ಮತೀಯವಾದವು ಗುಂಪುಗಳ ಮಧ್ಯೆ,ಪರಸ್ಪರ ದೋಷಾರೋಪಣೆ, ದೈಹಿಕ ಹಲ್ಲೆ ಮುಂತಾದ ಅನಗತ್ಯ ತೊಂದರೆಗಳಿಗೂ ಕಾರಣವಾಗುತ್ತದೆ.

7. ಕೋಮುವಾದವನ್ನು ನಿಯಂತ್ರಿಸುವ ಕ್ರಮಗಳನ್ನು ತಿಳಿಸಿ / ಕೋಮುವಾದವನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮಗಳನ್ನು ತಿಳಿಸಿ

- ಏಕರೂಪದ ನಾಗರಿಕ ಸಂಹಿತೆ
- ಎಲ್ಲಾ ನಾಗರಿಕರನ್ನು ಸಮಾನ ದೃಷ್ಟಿಕೋನದಿಂದ ಕಾಣುವಿಕೆ
- ಜಾತ್ಯತೀತ ಮನೋಭಾವಕ್ಕೆ ಸಾಮಾಜಿಕ ಜೀವನದ ಎಲ್ಲಾ ರಂಗಗಳಲ್ಲೂ ಪ್ರಾಶಸ್ತ್ಯ
- ಸಂಕುಚಿತ ವಿಭಾಗೀಯ ಚಿಂತನೆಗಳಿಂದ ಮೇಲುಸ್ತರದ ರಾಷ್ಟ್ರೀಯ ಚಿಂತನೆಗೆ ಹೆಚ್ಚು ಒತ್ತು ನೀಡುವುದು.

8. ಮಹಿಳೆಯರ ಸ್ಥಾನಮಾನವನ್ನು ಉತ್ತಮ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ತಿಳಿಸಿ

- ಮಹಿಳೆಯರ ಶಿಕ್ಷಣ ಮತ್ತು ಅಭಿವೃದ್ಧಿಯನ್ನು ಉತ್ತಮ ಪಡಿಸಲು ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಪ್ರಾರಂಭಿಸಿದೆ .
- ಮಹಿಳೆಯರ ಆರೋಗ್ಯ,ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿನ ಸ್ಥಾನಮಾನವನ್ನು ಉತ್ತಮ ಪಡಿಸಲಾಗುತ್ತಿದೆ.
- ಮಹಿಳಾ ಸಬಲೀಕರಣಕ್ಕಾಗಿ ಮಹಿಳಾ ಶಿಕ್ಷಣ,ಬಾಲ್ಯವಿವಾಹ ನಿಷೇಧ ಕಾಯ್ದೆ,ವರದಕ್ಷಿಣೆ ನಿಷೇಧ ಕಾಯ್ದೆ,ಮುಂತಾದ ಕಾರ್ಯಕ್ರಮಗಳು
- ಕರ್ನಾಟಕ ಸರ್ಕಾರವು 'ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮವನ್ನು ರೂಪಿಸಿ, ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಪ್ರಯತ್ನಿಸಿದೆ.
- ಮಹಿಳೆಯರ ಸ್ವ-ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಮತ್ತು ಸಬ್ಸಿಡಿ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ
- ಮಹಿಳಾ ಮಂಡಲಗಳು,ಸ್ತ್ರೀ ಶಕ್ತಿ ಸಂಘಗಳು,ಸ್ವಸಹಾಯ ಸಂಘಗಳು ಮಹಿಳಾ ಸಹಕಾರಿ ಸಂಘಗಳು,ಸ್ತ್ರೀಯರ ಸರ್ವತೋಮುಖ ಅಭಿವೃದ್ಧಿಗೆ ಪೂರಕ ಕಾರ್ಯ ಮಾಡುತ್ತಿವೆ.
- ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಹಿಳಾ ಆಯೋಗಗಳನ್ನು ರಚಿಸಿದ್ದು ಮಹಿಳೆಯರ ದೂರು-ದುಮ್ಮಾನಗಳನ್ನು ಇದು ಪರಿಶೀಲಿಸಿ ನ್ಯಾಯ ಒದಗಿಸಿಕೊಡುತ್ತದೆ.
- ಶಾಸಕಾಂಗ ಮತ್ತು ಸಂಸತ್ತಿನಲ್ಲಿ ರಾಜಕೀಯದಲ್ಲಿ ಮಹಿಳಾ ಮೀಸಲಾತಿ ನೀಡುವಂತಹ ಪ್ರಯತ್ನ ನಡೆಯುತ್ತಿದೆ.
- ಸರ್ಕಾರಿ ಉದ್ಯೋಗಗಳಲ್ಲಿ ಕೂಡಾ ಮಹಿಳೆಯರಿಗೆ ನಿಗದಿತ ಪ್ರಮಾಣದಲ್ಲಿ ಮೀಸಲಾತಿಯನ್ನು ನೀಡಲಾಗುತ್ತದೆ.

9.ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳಾವುವು?

- ಭಯೋತ್ಪಾದಕತೆಯು ವ್ಯಕ್ತಿಗಳಿಗೆ ಮತ್ತು ಸ್ವತ್ತುಗಳಿಗೆ ಅಪಾರ ಹಾನಿ ಉಂಟುಮಾಡುತ್ತದೆ.
- ಉಗ್ರಗಾಮಿತ್ವ ಮಾನಸಿಕ ವೇದನೆಯನ್ನು ನೀಡುತ್ತದೆ.
- ಸಾಮಾಜಿಕ ಸಂಸ್ಕೃತಿಗೆ, ಅದೇ ರೀತಿ ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ.
- ಈ ಉಗ್ರಗಾಮಿತ್ವವು ಒಂದು ರಾಷ್ಟ್ರದ ನಾಗರಿಕರ ಮೇಲೆ,ಮಿಲಿಟರಿ ಪಡೆಗಳ ಮೇಲೆ,ಅಂತೆಯೇ ನಿರ್ದಿಷ್ಟ ಭಾಷಾವಾರು,ಧಾರ್ಮಿಕ, ಜನಾಂಗೀಯ ಅಥವಾ ವರ್ಗದವರ ಮೇಲೆ ಎರಗಿ ಸಾವು ನೋವು ಉಂಟುಮಾಡುತ್ತದೆ.

10.ಭಯೋತ್ಪಾದಕರ ಹೊಡೆತಕ್ಕೆ ಸಿಗುವ ಸಾಮಾನ್ಯ ತಾಣಗಳಾವುವು?

- ರಸ್ತೆ ಸಾರಿಗೆ,ರೈಲ್ವೇ,ವಿಮಾನ,ಪ್ರಮುಖ ಸರ್ಕಾರಿ ಕಛೇರಿಗಳು, ಕಿಕ್ಕಿರಿದ ಜನ ಜಂಗುಳಿ,ಮಾರುಕಟ್ಟೆ,ಪ್ರದೇಶಗಳು ಭಯೋತ್ಪಾದಕರ ಹೊಡೆತಕ್ಕೆ ಸಿಗುವ ಸಾಮಾನ್ಯ ತಾಣಗಳಾಗಿವೆ.

11. ಭಯೋತ್ಪಾದಕರು/ ಉಗ್ರಗಾಮಿಗಳು ಮಾಡುವ ಹೀನ ಕೃತ್ಯಗಳು ಯಾವುವು?

- ಆತ್ಮಾಹುತಿ ದಾಳಿ -ವಿಮಾನ ಕಳ್ಳತನ -ಗುಂಡಿನಕಾಳಗ -ಬಾಂಬುದಾಳಿ
- ನಿರ್ದಿಷ್ಟ ಅಥವಾ ಮುಗ್ಧ ಜನರನ್ನು ಒತ್ತೆ ಇರಿಸುವಿಕೆ ಇವು ಉಗ್ರಗಾಮಿಗಳು ಮಾಡುವ ಹೀನ ಕೃತ್ಯಗಳು

12.ಕಾರ್ಪೋರೇಟ್ ತಂತ್ರಗಾರಿಕೆ ಎಂದರೇನು? ಮತ್ತು ಅದರ ಪ್ರಸ್ತುತದ ಬೆಳವಣಿಗೆಯನ್ನು ಕುರಿತು ವಿವರಿಸಿ.

- ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧಾರಿತ ಗುರಿಗಳನ್ನು ತಲುಪಲು ಕಂಪನಿಯು (ಸಂಘಟನೆಯು)ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನಗಳನ್ನು ಕಾರ್ಪೋರೇಟ್ ತಂತ್ರಗಾರಿಕೆ ಎನ್ನುವರು
- ಇಂದಿನ ಕಾರ್ಪೋರೇಟ್ ತಂತ್ರಗಾರಿಕೆ ಜಾಗತೀಕರಣ ಮತ್ತು ಆಧುನೀಕರಣ ತಂತ್ರಜ್ಞಾನಗಳ ಬಳಕೆಯೊಂದಿಗೆ ಬೆಳೆಯುತ್ತಿದೆ
- ತಂತ್ರಗಾರಿಕೆಯ ಪ್ರಮುಖ ಉದ್ದೇಶ ಲಾಭ ಪಡೆಯುವುದಾಗಿರುತ್ತದೆ.
- ಇದರಿಂದ ನಕಾರಾತ್ಮಕವಾದ ಬೆಳವಣಿಗೆಗಳು ವ್ಯಕ್ತಿಯ ಜೀವನ

ಸಮಾಜ ಮತ್ತು ರಾಷ್ಟ್ರಗಳ ಮೇಲುಂಟಾಗುತ್ತದೆ.

- ಪ್ರಭುತ್ವ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಮೇಲೂ ಕಾರ್ಪೋರೇಟ್ ತಂತ್ರ ಗಾರಿಕೆ ತನ್ನ ಪ್ರಭಾವಗಳನ್ನು ಬೀರಿದೆ
- ಇದು ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ಬಡತನ ನಿರ್ಮೂಲನೆ ಉತ್ತಮ ಆರೋಗ್ಯ,ಶಿಕ್ಷಣ,ವಸತಿ,ಆಹಾರ ಇತ್ಯಾದಿ ಮೂಲ ಸೇವೆಗಳನ್ನು ಬದಲಿಸಲು ಪೂರಕವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಅವಕಾಶ ಕಲ್ಪಿಸಲಾಗಿದೆ

## ಅಧ್ಯಾಯ-2
## ಭಾರತದ ವಿದೇಶಾಂಗ ನೀತಿ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

1.ವಿದೇಶಾಂಗ ನೀತಿ ಎಂದರೇನು?

-ಒಂದು ರಾಷ್ಟ್ರವು ಅನ್ಯರಾಷ್ಟ್ರಗಳೊಡನೆ ವ್ಯವಹರಿಸುವಾಗ ಅನುಸರಿಸುವ ನೀತಿಯನ್ನು ವಿದೇಶಾಂಗ ನೀತಿ ಎಂದು ಕರೆಯುವರು.

2.ಸಾರ್ವಭೌಮ ಅಥವಾ ಪರಮಾಧಿಕಾರವುಳ್ಳ ರಾಷ್ಟ್ರ ಎಂದರೇನು?

-ಒಂದು ರಾಷ್ಟ್ರ ಯಾವುದೇ ಬಗೆಯಲ್ಲಿ ಆಂತರಿಕವಾಗಲೀ, ಬಾಹ್ಯವಾಗಿ ಯಾಗಲಿ ಇತರೆ ರಾಷ್ಟ್ರಗಳಿಗೆ ಅಧೀನವಾಗಿರದೆ ಸ್ವತಂತ್ರವಾಗಿರುವುದನ್ನು ಸಾರ್ವಭೌಮ ಅಥವಾ ಪರಮಾಧಿಕಾರವುಳ್ಳ ರಾಷ್ಟ್ರ ಎನ್ನುವರು.

3.ಭಾರತದ ವಿದೇಶಾಂಗನೀತಿಯನ್ನು ವಿಶೇಷವಾಗಿ ನಿರೂಪಿಸಿದವರು ಯಾರು?- ಜವಾಹರಲಾಲ್ ನೆಹರು.

4.ವಿಶ್ವದ ಯಾವುದೇ ಬಣಕ್ಕೂ ಸೇರದೆ ಇರುವ ನೀತಿಯನ್ನು ಏನೆಂದು ಕರೆಯುವರು? - ಅಲಿಪ್ತ ನೀತಿ

5.ಭಾರತವು ಸ್ವಾತಂತ್ರ್ಯ ಪೂರ್ವದಲ್ಲಿ ಯಾರ ವಸಾಹತು ಶಾಹಿಗೆ ಒಳಗಾಗಿತ್ತು?

- ಬ್ರಿಟಿಷರ

6.1954 ರಲ್ಲಿ ಪಂಚಶೀಲ ತತ್ವಗಳ ಒಪ್ಪಂದಕ್ಕೆ ಸಹಿ ಹಾಕಿದವರು ಯಾರು?

- ಅಂದಿನ ಚೀನಾದ ಪ್ರಧಾನಿ ಚೌ.ಎನ್.ಲಾಯ್ ಮತ್ತು ಭಾರತದ ಪ್ರಧಾನಿ ಜವಾಹರಲಾಲ್ ನೆಹರು

7.ವಸಾಹತುಶಾಹಿತ್ವ ಎಂದರೇನು?

- ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಆ ದೇಶದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿ ಕೊಳ್ಳುವುದಕ್ಕೆ ವಸಾಹತು ಶಾಹಿತ್ವ ಎನ್ನವರು.

8.ವರ್ಣಭೇದ ನೀತಿ ಎಂದರೇನು?

-ಒಂದು ಜನಾಂಗದ ಅಥವಾ ವರ್ಣದ ಜನಸಮುದಾಯ ಇನ್ನೊಂದು ಜನಾಂಗ ಅಥವಾ ವರ್ಣದ ಜನಸಮುದಾಯವನ್ನು ತಮಗಿಂತ ಕೀಳು ಎಂದು ಭಾವಿಸಿ ಅವರನ್ನು ಕಡೆಗಣಿಸುವ ಅಥವಾ ವಿರೋಧಿಸುವ ನೀತಿಗೆ ವರ್ಣಭೇದ ನೀತಿ ಎನ್ನುವರು.

9.ಆಫ್ರಿಕಾದ ಗಾಂಧಿ ಎಂದು ಪ್ರಸಿದ್ಧರಾದವರು ಯಾರು?

-ನೆಲ್ಸನ್ ಮಂಡೇಲ

10.ನಿಶ್ಶಸ್ತ್ರೀಕರಣ ಎಂದರೇನು?

- ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿ ಸುವುದೇ ನಿಶ್ಶಸ್ತ್ರೀಕರಣ.

11.ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ 51 ನೇ ವಿಧಿಯ ಮಹತ್ವವೇನು?

-ಭಾರತ ಸಂವಿಧಾನವು ತನ್ನ 51 ನೇ ವಿಧಿಯ ಮೂಲಕ ಅಂತರರಾಷ್ಟ್ರೀಯ ಸಹಬಾಳ್ವೆ ಹಾಗೂ ಅಂತರರಾಷ್ಟ್ರೀಯ ಕಾನೂನಿಗೆ ಗೌರವ ತಂದು ಕೊಡುವಂತಹ ವಿದೇಶಾಂಗ ನೀತಿಯನ್ನು ಸೂಚಿಸುತ್ತದೆ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಅಂತರರಾಷ್ಟ್ರೀಯ ಸಂಬಂಧಗಳ ವೃದ್ಧಿಗಾಗಿ ಭಾರತ ಅಳವಡಿಸಿಕೊಂಡ ಪಂಚಶೀಲ ತತ್ವಗಳಾವುವು? **ಅಥವಾ** ಭಾರತದ ವಿದೇಶಾಂಗ ನೀತಿಗೆ ಪೂರಕ ವಾಗಿರುವ ಪಂಚಶೀಲ ತತ್ವಗಳಾವುವು?

- ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ
- ಪರಸ್ಪರ ಆಕ್ರಮಣ ಮಾಡದಿರುವುದು
- ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡದಿರುವುದು.
- ಪರಸ್ಪರ ಸಹಕಾರ ಮತ್ತು ಸಮಾನತೆ.
- ಶಾಂತಿಯುತ ಸಹಬಾಳ್ವೆ

2.ಭಾರತದ ವಿದೇಶಾಂಗನೀತಿಯ ಪ್ರಮುಖ ಉದ್ದೇಶಗಳು/ ಗುರಿಗಳೇನು?

- ರಾಷ್ಟ್ರದ ಭದ್ರತೆ
- ರಾಷ್ಟ್ರದ ಆರ್ಥಿಕ ಸಂವರ್ಧನೆ.
- ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸುವುದು.
- ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ವಿರೋಧಿ ರಾಷ್ಟ್ರಗಳನ್ನು ನಿರ್ಬಂಧಿಸುವುದು ಅಥವಾ ಹತ್ತಿಕ್ಕುವುದು.
- ವಿಶ್ವಶಾಂತಿ ಹಾಗೂ ಸಹಬಾಳ್ವೆಯನ್ನು ಸಾಧಿಸುವುದು.

3.ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳು ಯಾವುವು?

**1.**ಪಂಚಶೀಲ ತತ್ವಗಳು.**2.** ಅಲಿಪ್ತ ವಿದೇಶಾಂಗ ನೀತಿ.**3.**ವಸಾಹತುಶಾಹಿತ್ವಕ್ಕೆ ವಿರೋಧ .**4.**ವರ್ಣಭೇದ ನೀತಿಗೆ ವಿರೋಧ. **5.**ನಿಶ್ಶಸ್ತ್ರೀಕರಣ

4.ಭಾರತದ ವಿದೇಶಾಂಗ ನೀತಿಯು ರೂಪುಗೊಳ್ಳಲು ಪ್ರಭಾವ ಬೀರಿದ ಅಂಶಗಳನ್ನು ತಿಳಿಸಿ.

**1.** ರಾಷ್ಟ್ರೀಯ ಹಿತಾಸಕ್ತಿಗಳು 2.ಭೌಗೋಳಿಕ ಅಂಶಗಳು 3.ರಾಜಕೀಯ ಪರಿಸ್ಥಿತಿ 4.ಆರ್ಥಿಕ ವ್ಯವಸ್ಥೆ 5.ರಕ್ಷಣಾ ಸಾಮರ್ಥ್ಯ 6.ಜನಾಭಿಪ್ರಾಯಗಳು

7.ಅಂತರ ರಾಷ್ಟ್ರೀಯ ಪರಿಸರ ಮುಂತಾದ ಅಂಶಗಳು ಭಾರತದ ವಿದೇಶಾಂಗ ನೀತಿಯು ರೂಪುಗೊಳ್ಳಲು ಸಹಕಾರಿಯಾದವು.

5.ವಿದೇಶಾಂಗ ನೀತಿಯು ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿ ಹೇಗೆ?

- ಒಂದು ಉತ್ತಮ ವಿದೇಶಾಂಗ ನೀತಿ ಎಲ್ಲಾ ರಾಷ್ಟ್ರಗಳಿಗೂ ತೀರಾ ಅವಶ್ಯಕ.
- ಅದರ ಮೂಲಕ ವಿಶ್ವ ಕುಟುಂಬದ ಎಲ್ಲಾ ರಾಷ್ಟ್ರಗಳೂ ಪರಸ್ಪರ ನಂಬಿಕೆ ಹಾಗೂ ಸಹಕಾರವನ್ನು ಬೆಳೆಸಲು ಸಾಧ್ಯ ಎನಿಸುತ್ತದೆ.
- ಪ್ರತಿಯೊಂದು ದೇಶವೂ ಆರೋಗ್ಯಕರ ನೀತಿಯನ್ನು ಹೊಂದುವ ಮೂಲಕ ಅಂತರರಾಷ್ಟ್ರೀಯ ಶಾಂತಿ ಹಾಗೂ ಸಹಬಾಳ್ವೆಯನ್ನು ಸಾಧಿಸಬಹುದು.
- ಇದು ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ.

6.ವಸಾಹತುಶಾಹಿತ್ವವನ್ನು ಭಾರತವು ವಿರೋಧಿಸಲು ಕಾರಣಗಳೇನು?

- ಭಾರತದ ವಿದೇಶಾಂಗ ನೀತಿಯು ವಸಾಹತುಶಾಹಿತ್ವವನ್ನು ವಿರೋಧಿಸುತ್ತದೆ.
- ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಆ ದೇಶದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿ ಕೊಳ್ಳುವುದಕ್ಕೆ ವಸಾಹತು ಶಾಹಿತ್ವ ಎನ್ನುವರು.
- ವಸಾಹತುಶಾಹಿತ್ವವನ್ನು ವಿರೋಧಿಸಿ ಸ್ವತಂತ್ರ ಗಳಿಸಿಕೊಂಡ ಭಾರತವು ಸ್ವಾಭಾವಿಕವಾಗಿ ಅದನ್ನು ವಿರೋಧಿಸಿ, ಪ್ರಪಂಚದ ಯಾವುದೇ ಮೂಲೆಯಲ್ಲಿ ವಸಾಹತುಶಾಹಿತ್ವ ಇರಕೂಡದು ಎಂದು ತನ್ನ ನಿಲುವನ್ನು ಪ್ರತಿಪಾದಿಸಿದೆ.

7.ಪ್ರಚಲಿತ ಜಗತ್ತಿಗೆ ನಿಶ್ಶಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ? ವಿವರಿಸಿ.

- ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಉತ್ಪಾದನೆ,ಮಾರಾಟ,ಸಂಗ್ರಹಣೆಯಲ್ಲಿ ಭಾರಿ ಪೈಪೋಟಿ ನಡೆದಿದೆ.
- ಈ ರೀತಿಯ ಶಸ್ತ್ರಾಸ್ತ್ರಗಳ ಪೈಪೋಟಿಯಿಂದ ಮೂರನೇ ಮಹಾಯುದ್ಧ ನಡೆಯ ಬಹುದೆಂಬ ಆತಂಕ ಹಲವು ದೇಶಗಳಲ್ಲಿ ಉಂಟಾಗಿದೆ.
- ಶಸ್ತ್ರಾಸ್ತ್ರಗಳ ಪೈಪೋಟಿಗೆ ಒಳಗಾದ ರಾಷ್ಟ್ರಗಳು ಅಚಾತುರ್ಯದಿಂದಲೋ, ತಪ್ಪುಗ್ರಹಿಕೆಯಿಂದಲೋ ಬೇಕೆಂತಲೇ ಒಂದರ ಮೇಲೊಂದು ಯುದ್ಧ ಶಸ್ತ್ರಾಸ್ತ್ರಗಳನ್ನು ಅದರಲ್ಲೂ ಅಣ್ವಸ್ತ್ರಗಳನ್ನು ತಯಾರಿಸಿ ಉಪಯೋಗಿಸುವ ಸಂಭವವಿರುತ್ತದೆ.
- ಆದುದರಿಂದ ಭಾರತ ಶಾಂತಿಪ್ರಿಯ ರಾಷ್ಟ್ರವಾಗಿದ್ದು ಗುಣಾತ್ಮಕ ಹಾಗೂ ಗಾತ್ರದ ಪರಿಮಿತಿಯಲ್ಲಿನ ನಿಶ್ಶಸ್ತ್ರೀಕರಣವನ್ನು ಪ್ರತಿಪಾದಿಸಿದೆ .

8.ಭಾರತವು ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ.ಹೇಗೆ?

- ಭಾರತವು ತನ್ನದೇ ಆದ ಸ್ವತಂತ್ರ ವಿದೇಶಾಂಗ ನೀತಿಯನ್ನು ಹೊಂದಿದೆ.
- ಭಾರತವು ವಿಪುಲವಾದ ಜನಸಂಖ್ಯೆ
- ಅಪಾರ ಪ್ರಾಕೃತಿಕ ಸಂಪತ್ತು
- ಪರಿಣಿತ ಬೌದ್ಧಿಕ ಮತ್ತು ಔದ್ಯೋಗಿಕ ಸಾಮರ್ಥ್ಯ
- ಬಲಾಢ್ಯ ಸೈನಿಕಬಲ – ಮುಂತಾದವುಗಳನ್ನು ಹೊಂದಿದ್ದು ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ.

## ಅಧ್ಯಾಯ-3
## ಅನ್ಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

1.ಅಂತರರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ಧತೆಯ ಕುರಿತು ನಮ್ಮ ಸಂವಿಧಾನದ ಯಾವ ವಿಧಿಯಲ್ಲಿ ತಿಳಿಸಲಾಗಿದೆ?
– ಸಂವಿಧಾನದ 51 ನೇ ವಿಧಿಯಲ್ಲಿ.

2.ಪಂಚಶೀಲ ತತ್ವಗಳ ಮೂಲಕ ಯಾವ ರಾಷ್ಟ್ರಗಳ ಸಂಬಂಧವನ್ನು ವೃದ್ಧಿಸುವ ಪ್ರಯತ್ನ ಮಾಡಲಾಯಿತು.?– ಭಾರತ ಮತ್ತು ಚೀನಾ ದೇಶಗಳು

3.1962 ರಲ್ಲಿ ಯಾವ ದೇಶವು ಭಾರತದ ಮೇಲೆ ಆಕ್ರಮಣ ಮಾಡಿತು?
– ಚೀನಾ ದೇಶ

4.ಭಾರತದ ಭೂ ಪ್ರದೇಶಕ್ಕೆ ಹೊಂದಿಕೊಂಡಿರುವ ಅತ್ಯಂತ ದೊಡ್ಡ ನೆರೆಯ ದೇಶ ಯಾವುದು? – ಚೀನಾ

5.ಯಾವ ದೇಶಗಳ ಪ್ರಯತ್ನಗಳ ಫಲವಾಗಿ 2015 ರ ನಂತರದಲ್ಲಿ BRICS ರಾಷ್ಟ್ರಗಳ ಗುಂಪು ಪ್ರಾರಂಭಗೊಂಡಿತು? – ಭಾರತ ಮತ್ತು ಚೀನಾ

6.1971 ರಲ್ಲಿ 20 ವರ್ಷಗಳ ಶಾಂತಿ,ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದ ದೇಶಗಳು ಯಾವುವು? – ಭಾರತ ಮತ್ತು ರಷ್ಯಾ ದೇಶಗಳು

7.ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ಪ್ರತಿಪಾದಿಸುತ್ತಿರುವ ದೇಶ ಯಾವುದು?
– ರಷ್ಯಾ ದೇಶ.

8.ಭಾರತದ ಭಿಲಾಯಿ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಕರಿಸಿದ ದೇಶ ಯಾವುದು? – ರಷ್ಯಾ ದೇಶ.

9.1966 ರ ತಾಷ್ಕೆಂಟಿನಲ್ಲಿ ಭಾರತ–ಪಾಕಿಸ್ತಾನಗಳ ಮಧ್ಯ ಒಪ್ಪಂದಕ್ಕೆ ಸಹರಿಸಿದ ದೇಶ ಯಾವುದು? – ರಷ್ಯಾ ದೇಶ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಅನ್ಯರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಅವಶ್ಯಕ ಏಕೆ?

- ಒಂದು ರಾಷ್ಟ್ರವು ಬೇರೆ ರಾಷ್ಟ್ರಗಳ ಜೊತೆಗೆ ವ್ಯವಹರಿಸದೆ, ಉತ್ತಮ

ಸಂಬಂಧವನ್ನು ಹೊಂದದೆ ಅಭಿವೃದ್ಧಿಯಾಗಲು ಸಾಧ್ಯವಾಗುವುದಿಲ್ಲ.

- ಪ್ರಸ್ತುತದ ಜಾಗತೀಕರಣ ಮತ್ತು ಆಧುನೀಕರಣದ ಯುಗದಲ್ಲಿ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರದ ಜೊತೆಗೆ ಉತ್ತಮವಾದ ಸಂಬಂಧವನ್ನು ಹೊಂದುವುದು ಅನಿವಾರ್ಯವೂ, ಅಗತ್ಯವೂ ಆಗಿದೆ.
- ರಾಷ್ಟ್ರದ ಭದ್ರತೆಗೆ ಹಾಗೂ ಆರ್ಥಿಕ ಸಂವರ್ಧನೆಗೆ
- ಅಂತರರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದತೆಯನ್ನು ಹೆಚ್ಚಿಸಲು ಅನ್ಯರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಅವಶ್ಯಕ.

2.ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು?

- ಜಮ್ಮು-ಕಾಶ್ಮೀರ ಸಮಸ್ಯೆಗಳ
- ನೀರಿನ ಹಂಚಿಕೆಯ ಸಮಸ್ಯೆ
- ಭಯೋತ್ಪಾದನೆ
- 2001 ರಲ್ಲಿ ಭಾರತದ ಸಂಸತ್ತಿನ ಮೇಲೆ ದಾಳಿ ,2008 ರ ಮುಂಬೈ ದಾಳಿ 2016 ರ ಪಠಾಣ್ ಕೋಟ್ ದಾಳಿಗಳು.

3.ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವುವು?

- 1962 ರಲ್ಲಿ ಟಿಬೆಟ್ ವಿವಾಧ ಉಲ್ಬಣಗೊಂಡು ಎರಡು ರಾಷ್ಟ್ರಗಳ ನಡುವೆ ಯುದ್ಧ ನಡೆದ ನಂತರದಲ್ಲಿ ಗಡಿ ಸಮಸ್ಯೆಯು ಉಲ್ಬಣಗೊಂಡಿತು. ಈ ಗಡೀ ಸಮಸ್ಯೆ ಇಂದಿಗೂ ಕೂಡ ಮುದುವರೆದಿದೆ.
- ಚೀನವು ಭಾರತದ ಭಾಗವಾಗಿರುವ ಅರುಣಾಚಲ ಪ್ರದೇಶ ತನಗೆ ಸೇರಬೇಕೆಂದು ಪ್ರತಿಪಾದಿಸುತ್ತಿರುವುದು ಎರಡು ರಾಷ್ಟ್ರಗಳ ಸಂಬಂಧಗಳನ್ನು ಮತ್ತಷ್ಟು ಕಗ್ಗಂಟಾಗಿಸಿದೆ.

4.ಭಾರತ ಮತ್ತು ಅಮೆರಿಕಾ ದೇಶಗಳು ಪ್ರಜಾತಂತ್ರ ದೇಶಗಳಾಗಿದ್ದು ಇವುಗಳ ಪರಸ್ಪರ ಸೌಹಾರ್ದತೆಯು ಹೇಗಿದೆ ಎಂಬುದನ್ನು ವಿವರಿಸಿ.

ಅಥವಾ ಭಾರತ ಮತ್ತು ಅಮೆರಿಕಾ ಸಂಬಂಧಗಳನ್ನು ಕುರಿತು ವಿವರಿಸಿ.

- 1947 ರ ನಂತರ ಭಾರತ ಮತ್ತು ಅಮೆರಿಕಾ ದೇಶಗಳ ಸಂಬಂಧ ರಾಷ್ಟ್ರೀಯ ಹಿತಾಸಕ್ತಿಗಳನ್ನು ಆಧರಿಸಿ ಹಲವಾರು ಸ್ಥಿತ್ಯಂತರಗಳನ್ನು ಕಂಡಿದೆ.
- ಜಗತ್ತು ರಾಜಕೀಯ ಧ್ರುವೀಕರಣವನ್ನು ಕಂಡಾಗ, ಭಾರತ ಅಲಿಪ್ತ ನೀತಿ ಅನುಸರಿಸಿತು. ಹಾಗೂ ಅಮೆರಿಕಾ ಮತ್ತು ರಷ್ಯಾ ಬಣದಿಂದ ಸಮಾನ ದೂರದಲ್ಲಿರುವ ನೀತಿ ಅನುಸರಿಸಿತು.
- ಭಾರತದ ಪಂಚವಾರ್ಷಿಕ ಯೋಜನೆಗೆ ಅಮೆರಿಕಾ ತುಂಬಾ ಸಹಾಯ ನೀಡಿತು.
- 1962 ರ ಚೀನಾ ಆಕ್ರಮಣ ಸಂದರ್ಭದಲ್ಲಿಯೂ ಅಮೆರಿಕಾದ ಸಹಾಯ ನಮಗೆ ತುಂಬಾ ಶಕ್ತಿ ನೀಡಿತು.
- ಆದರೆ ಆ ಬಳಿಕ ಅಲ್ಲಿನ ರಾಜಕೀಯ ಮುಖಂಡರು ಭಾರತ-ಪಾಕಿಸ್ತಾನ ಯುದ್ಧಗಳ ವೇಳೆ ಪಾಕಿಸ್ತಾನಕ್ಕೆ ಸಹಾಯ ನೀಡಿದರು.
- ಅನೇಕ ಬಾರಿ ಅಮೆರಿಕಾದ ವಿದೇಶಾಂಗ ನೀತಿ ಭಾರತದ ವಿರುದ್ಧವಿದ್ದು ಪಾಕಿಸ್ತಾನದ ಪರವಾಗಿತ್ತು.
- ಭಯೋತ್ಪಾದನೆಯನ್ನು ಹತ್ತಿಕ್ಕುವಲ್ಲಿ ನಮ್ಮೆರಡು ರಾಷ್ಟ್ರಗಳ ಮಧ್ಯೆ ಸಮಾನ ಹಿತಾಸಕ್ತಿಯಿದೆ.
- ಭಾರತ ವಿದೇಶಿ ವ್ಯಾಪಾರ, ವಿಜ್ಞಾನ ಮತ್ತು ತಾಂತ್ರಿಕತೆ ಬಾಹ್ಯಾಕಾಶ ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಅಮೆರಿಕಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ.
- ವಿಶ್ವಸಂಸ್ಥೆಯನ್ನು ಬಲಪಡಿಸುವ ಹಾಗೂ ಜಾಗತಿಕ ಶಾಂತಿಯನ್ನು ಉಳಿಸುವ ನಿಟ್ಟಿನಲ್ಲಿ ಎರಡೂ ರಾಷ್ಟ್ರಗಳು ಸಮಾನ ಧೋರಣೆಯನ್ನು ಹೊಂದಿವೆ.

5.ಭಾರತ ಮತ್ತು ಪಾಕಿಸ್ತಾನ ಯಾವ ವಿಷಯಗಳಲ್ಲಿ ಸಾಮ್ಯತೆಯನ್ನು ಹೊಂದಿವೆ?

1. ಎರಡು ದೇಶಗಳ ನಡುವೆ ಸಂಸ್ಕೃತಿ ಮತ್ತು ಆರ್ಥಿಕ ವಿಷಯದಲ್ಲಿ ಪರಸ್ಪರ ವಿನಿಮಯ . 2.ಕ್ರೀಡೆ, ಸಾಂಸ್ಕೃತಿಕ, ವ್ಯವಹಾರಗಳಲ್ಲಿ, ನೈಸರ್ಗಿಕ ವಿಕೋಪ ಗಳು ಸಂಭವಿಸುದಾಗ ಎರಡು ರಾಷ್ಟ್ರಗಳು ಸೌಹಾರ್ದಯುತವಾಗಿ ಸಹಕಾರ ಹೊಂದಿವೆ.

6.ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಬಂಧಗಳನ್ನು ವಿವರಿಸಿ.

- ಚೀನಾ ಭಾರತ ಭೂ ಪ್ರದೇಶಕ್ಕೆ ಹೊಂದಿಕೊಂಡಿರುವ ದೊಡ್ಡ ನೆರೆಯ ರಾಷ್ಟ್ರವಾಗಿದೆ.
- ಭಾರತ ಮತ್ತು ಚೀನಾಗಳ ಸಂಬಂಧವನ್ನು ಸಿಂಧೂ ನದಿ ಬಯಲಿನ ನಾಗರೀಕತೆ ಮತ್ತು ಮೆಸಪಟೋಮಿಯಾ ನಾಗರೀಕತೆಯಂದಿಗೆ ಗುರುತಿಸಲಾಗುತ್ತದೆ.
- ಭಾರತದಲ್ಲಿ ಉದಯಿಸಿದ ಬೌದ್ಧ ಧರ್ಮವು ಚೀನಾದಲ್ಲಿ ಪ್ರಸಾರ ಗೊಂಡಿರುವುದು ಭಾರತ ಮತ್ತು ಚೀನಗಳ ನಡುವಿನ ಪ್ರಾಚೀನ ಕಾಲದ ಸಂಬಂಧವನ್ನು ಪ್ರತಿಬಿಂಬಿಸುತ್ತದೆ.
- ಈ ರೀತಿಯಾಗಿ ಐತಿಹಾಸಿಕ ಸಂಬಂಧವನ್ನು ಹೊಂದಿದ್ದ ಭಾರತ ಮತ್ತು ಚೀನಾ ಸಾರ್ವಭೌಮ ರಾಷ್ಟ್ರಗಳಾಗಿ ಉದಯಿಸಿದ ನಂತರದಲ್ಲಿ ಪಂಚಶೀಲ ತತ್ವಗಳ ಮೂಲಕ ಎರಡು ರಾಷ್ಟ್ರಗಳ ಸಂಬಂಧಗಳನ್ನು ವೃದ್ಧಿಸುವ ಪ್ರಯತ್ನ ಮಾಡಲಾಯಿತು.
- 1962 ರಲ್ಲಿ ಟಿಬೆಟ್ ವಿವಾಧ ಉಲ್ಬಣಗೊಂಡು ಎರಡು ರಾಷ್ಟ್ರಗಳ ನಡುವೆ ಯುದ್ಧ ನಡೆದ ನಂತರದಲ್ಲಿ ಗಡಿ ಸಮಸ್ಯೆಯು

ಉಲ್ಬಣಗೊಂಡಿತು. ಈ ಗಡೀ ಸಮಸ್ಯೆ ಇಂದಿಗೂ ಕೂಡ ಮುದುವರೆದಿದೆ.

- ಚೀನವು ಭಾರತದ ಭಾಗವಾಗಿರುವ ಅರುಣಾಚಲ ಪ್ರದೇಶ ತನಗೆ ಸೇರಬೇಕೆಂದು ಪ್ರತಿಪಾದಿಸುತ್ತಿರುವುದು ಎರಡು ರಾಷ್ಟ್ರಗಳ ಸಂಬಂಧಗಳನ್ನು ಮತ್ತಷ್ಟು ಕಗ್ಗಂಟಾಗಿಸಿದೆ.
- ಭಾರತ ಮತ್ತು ಚೀನಾ ನಡುವೆ ಗಡೀ ವಿವಾಧ ಇದ್ದರೂ ಕೂಡ ಎರಡು ರಾಷ್ಟ್ರಗಳ ನಡುವೆ ದ್ವಿಪಕ್ಷೀಯ ರಾಯಭಾರ ಸಂಬಂಧಗಳು ಮುಂದುವರೆದಿವೆ.
- **1980** ರ ದಶಕದ ನಂತರದಲ್ಲಿ ಚೀನಾ ಭಾರತದೊಂದಿಗೆ ದೊಡ್ಡ ಮಟ್ಟದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಸಂಪರ್ಕವನ್ನು ಹೊಂದಿರುವ ರಾಷ್ಟ್ರವಾಗಿ ಬೆಳೆದಿರುವುದು ಸಂಬಂಧಗಳನ್ನು ಗಟ್ಟಿಗೊಳಿಸಿದೆ.
- **2015** ರ ನಂತರದಲ್ಲಿ ಭಾರತ ಮತ್ತು ಚೀನಾಗಳ ಪ್ರಯತ್ನದ ಫಲವಾಗಿ **BRICS** ರಾಷ್ಟ್ರಗಳ ಗುಂಪು ಪ್ರಾರಂಭಗೊಂಡಿರುವುದು ಈ ಎರಡು ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಮತ್ತಷ್ಟು ಉತ್ತಮಗೊಳಿಸಿದೆ.

7.ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಸಂಬಂಧಗಳನ್ನು ವಿವರಿಸಿ.

- ಭಾರತ ಮತ್ತು ಪಾಕಿಸ್ತಾನಗಳೆರಡು ನೆರೆಯ ರಾಷ್ಟ್ರಗಳಾಗಿವೆ.ಪಾಕಿಸ್ತಾನ ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಅವಿಭಾಜ್ಯ ಅಂಗವಾಗಿತ್ತು.
- 1947 ರ ಭಾರತ ಸ್ವಾತಂತ್ರ್ಯ ಕಾಯಿದೆಯನ್ವಯ ಎರಡು ಪ್ರತ್ಯೇಕ ಸಾರ್ವಭೌಮ ರಾಷ್ಟ್ರಗಳಾಗಿ ರಚಿತವಾದವು.
- ಸ್ವಾತಂತ್ರ್ಯಗೊಂಡ ನಂತರ ಎರಡು ರಾಷ್ಟ್ರಗಳ ನಡುವೆ ಜಮ್ಮು-ಕಾಶ್ಮೀರ ಸಮಸ್ಯೆ,ಭಯೋತ್ಪಾದನೆ,ನೀರಿನ ಹಂಚಿಕೆ ಮುಂತಾದ ಸಮಸ್ಯೆಗಳಿವೆ.
- ಹಾಗಾಗಿ ಎರಡೂ ರಾಷ್ಟ್ರಗಳ ನಡುವೆ ಮೂರು ಬಾರಿ ಯುದ್ಧಗಳು ನಡೆದಿವೆ.
- ಎರಡೂ ರಾಷ್ಟ್ರಗಳ ಮಧ್ಯೆ ಉತ್ತಮ ಬಾಂಧವ್ಯ ಹೊಂದಲು ತಾಷ್ಕೆಂಟ್ ಒಪ್ಪಂದ,ಲಾಹೋರ್ ಬಸ್ ಯಾತ್ರೆ,ಆಗ್ರಾ ಶೃಂಗಸಭೆಯಂತಹ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಲಾಗಿದೆ.
- ಆದರೆ ಈ ಒಪ್ಪಂದಗಳು ನಿರೀಕ್ಷಿತ ಯಶಸ್ಸು ಸಾಧಿಸಲು ವಿಫಲವಾಗಿವೆ.
- 2001 ರಲ್ಲಿ ಭಾರತದ ಸಂಸತ್ತಿನ ಮೇಲೆ ದಾಳಿ ,2008 ರ ಮುಂಬೈ ದಾಳಿ 2016 ರ ಪಠಾಣ್ ಕೋಟ್ ದಾಳಿಗಳು ಎರಡು ರಾಷ್ಟ್ರಗಳ ಸಂಬಂಧಗಳ ವೃದ್ಧಿಗೆ ಹಿನ್ನಡೆಯನ್ನು ಉಂಟುಮಾಡಿವೆ.

8.ರಷ್ಯಾದೊಂದಿಗಿನ ಭಾರತದ ಸಂಬಂಧವನ್ನು ವಿವರಿಸಿ. ಅಥವಾ ರಷ್ಯಾದೊಂದಿಗೆ ಭಾರತವು ಉತ್ತಮ ಸಂಬಂಧವನ್ನು ಹೊಂದಿದೆ ಎಂಬುದನ್ನು ಸಮರ್ಥಿಸಿ.

- ಭಾರತ ರಷ್ಯಾದೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದೆ.
- ಭಾರತ–ಸೋವಿಯತ್ ಒಪ್ಪಂದವು ರಾಜಕೀಯ,ಆರ್ಥಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಉತ್ತಮ ಪ್ರಗತಿಯನ್ನು ಕಂಡಿತು
- **1962** ರಲ್ಲಿನ ಚೈನಾ ದಾಳಿಯನ್ನು ರಷ್ಯಾ ಖಂಡಿಸಿತು.
- **1961** ರಲ್ಲಿ ಗೋವಾ ವಿಮೋಚನೆಯ ಸಂದರ್ಭದಲ್ಲಿ ಭಾರತಕ್ಕೆ ಸಹಕರಿಸಿತು.
- **1966** ರಲ್ಲಿ ಭಾರತ–ಪಾಕಿಸ್ತಾನಗಳ ಮಧ್ಯೆ ತಾಷ್ಕೆಂಟ್ ಒಪ್ಪಂದಕ್ಕೆ ಸಹಕರಿಸಿತು.
- **1971** ರಲ್ಲಿ ರಷ್ಯಾ–ಭಾರತ **20** ವರ್ಷಗಳ ಶಾಂತಿ,ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದವು.
- ಭಾರತದ ಭಿಲಾಯಿ, ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ರಷ್ಯಾ ಸಹಕರಿಸಿತು.
- ನಮ್ಮ ದೇಶದ ಕೈಗಾರಿಕೆ ಹಾಗೂ ವಾಣಿಜ್ಯದ ಬೆಳವಣಿಗೆಗೆ ಸಹಕರಿಸಿದೆ.
- ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯ ಬೇಕೆಂದು ರಷ್ಯಾ ಪ್ರತಿಪಾದಿಸುತ್ತಿದೆ.

9.ಭಾರತ ಮತ್ತು ಚೀನಾಗಳ ನಡುವೆ ಗಡೀ ವಿವಾದವಿದ್ದರೂ ಕೂಡ ಅವುಗಳ ನಡುವಿನ ಸಂಬಂಧವನ್ನು ಹೇಗೆ ಉತ್ತಮಪಡಿಸಿಕೊಂಡಿವೆ?

- 1980 ರ ದಶಕದ ನಂತರ ಭಾರತ ಚೀನಾದೊಂದಿಗೆ ದೊಡ್ಡ ಮಟ್ಟದಲ್ಲಿ
  ವ್ಯಾಪಾರ ಮತ್ತು ವಾಣಿಜ್ಯ ಸಂಪರ್ಕ ಸಾಧಿಸಿದೆ
- ಪಂಚಶೀಲ ತತ್ವಗಳು
- **2015** ರ ನಂತರದಲ್ಲಿ ಭಾರತ ಮತ್ತು ಚೀನಾಗಳ ಪ್ರಯತ್ನದ ಫಲವಾಗಿ **BRICS** ರಾಷ್ಟ್ರಗಳ ಗುಂಪು ಪ್ರಾರಂಭಗೊಂಡಿರುವುದು ಈ ಎರಡು ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಮತ್ತಷ್ಟು ಉತ್ತಮಗೊಳಿಸಿದೆ.

## ಅಧ್ಯಾಯ-4
## ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

**I.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1.ವಿಶ್ವಸಂಸ್ಥೆಯ ಇತಿಹಾಸದಲ್ಲಿ 1948 ಡಿಸೆಂಬರ್ 10 ಮಹತ್ವದ ದಿನ ಏಕೆ?

-ಮಾನವ ಹಕ್ಕುಗಳ ಘೋಷಣೆಯಾದ ದಿನವಾದ್ದರಿಂದ

2.ನಿಶ್ಶಸ್ತ್ರೀಕರಣ ಎಂದರೇನು?

-ನಿರ್ದಿಷ್ಟ ಅಥವಾ ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಬಳಕೆಯಿಂದ ಸಂಪೂರ್ಣವಾಗಿ ನಿಲ್ಲಿಸುವ ನೇರ ಪ್ರಕ್ರಿಯೆಯೇ ನಿಶ್ಶಸ್ತ್ರೀಕರಣ

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಮುಖ್ಯಸಮಸ್ಯೆಗಳೇನು?

- ಮಾನವ ಹಕ್ಕುಗಳ ನಿರಾಕರಣೆ
- ಶಸ್ತ್ರಾಸ್ತ್ರಗಳ ಪೈಪೋಟಿ
- ಆರ್ಥಿಕ ಅಸಮಾನತೆ
- ವರ್ಣಭೇದನೀತಿ
- ಭಯೋತ್ಪಾದನೆ

2.ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ತಂದುಕೊಟ್ಟ ಅಂಶಗಳು/ಘಟನೆಗಳು ಯಾವುವು?

- 1776 ರ ಅಮೆರಿಕಾದ ಸ್ವಾತಂತ್ರ್ಯ ಯುದ್ಧ
- 1789 ರ ಫ್ರಾನ್ಸಿನ ಮಹಾಕ್ರಾಂತಿ
- 1917 ರ ರಷ್ಯಾಕ್ರಾಂತಿ
- 20 ನೇ ಶತಮಾನದ ಪ್ರಥಮಾರ್ಧದ ಭಾರತ ಹಾಗೂ ಇನ್ನಿತರ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟಗಳು

3.ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟವನ್ನು ವಿವರಿಸಿ/ತಿಳಿಸಿ.

- ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತ ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿದೆ.
- ಭಾರತ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ.
- ವಿಶ್ವಸಂಸ್ಥೆಯ ಸಾಮಾನ್ಯಸಭೆಯಲ್ಲಿಯೂ ವಿಶ್ವದಾದ್ಯಂತ ಮಾನವ ಹಕ್ಕುಗಳು ಸುರಕ್ಷಿತವಾಗಿರಬೇಕೆಂದು ಸಮರ್ಥಿಸುತ್ತಾ ಬಂದಿದೆ.
- ಮಾನವ ಹಕ್ಕುಗಳ ರಕ್ಷಣೆಗೆ ಭಾರತದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವನ್ನು ರಚಿಸಲಾಗಿದೆ.

4.ಮಾನವ ಹಕ್ಕುಗಳ ರಕ್ಷಣೆಗೆ ಬದ್ಧವಾಗಿರಲು ಭಾರತ ರಚಿಸಿರುವ ಆಯೋಗಗಳಾವುವು?

- ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ
- ರಾಷ್ಟ್ರೀಯ ಮಹಿಳಾ ಆಯೋಗ
- ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ
- ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗ
- ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗದ ರಾಷ್ಟ್ರೀಯ ಆಯೋಗ

5.ನಿಶ್ಶಸ್ತ್ರೀಕರಣಕ್ಕೆ ಸಂಬಂಧಿಸಿದಂತೆ ಅಮೆರಿಕಾ ಮತ್ತು ರಷ್ಯಾ ಮಾಡಿಕೊಂಡ ವಿಶ್ವಮಟ್ಟದ ಒಪ್ಪಂದ/ಸಂಧಿಗಳು ಯಾವುವು? ಅಥವಾ ನಿಶ್ಶಸ್ತ್ರೀಕರಣಕ್ಕೆ ಸಂಬಂಧಿಸಿದಂತೆ ಆಗಿರುವ ಜಾಗತಿಕ ಒಪ್ಪಂದಗಳಾವುವು?

- ನಿರ್ಣಾಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ (ಸಾಲ್ಟ್)
- ಪಾಕ್ಷಿಕ ಪ್ರಯೋಗ ನಿಷೇಧ ಒಪ್ಪಂದ
- ಸಮಗ್ರ ಪರೀಕ್ಷಣಾ ನಿಷೇಧ ಒಪ್ಪಂದ (CTBT)
- ಫಲಿಕೆ ನಿಷೇಧ ಒಪ್ಪಂದ

6.ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳಾವುವು?

- ಶಸ್ತ್ರಾಸ್ತ್ರಗಳ ಪೈಪೋಟಿಯು ಒಂದು ಭಯಾನಕ ವಿದ್ಯಮಾನ
- ಶಸ್ತ್ರಾಸ್ತ್ರಗಳ ಪೈಪೋಟಿಯಿಂದ ವಿಶ್ವದಾದ್ಯಂತ ಭಯ, ಅಸ್ಥಿರತೆ, ಚಡಪಡಿಕೆ ಹಾಗೂ ಯುದ್ಧದ ಸಂಭವ ತಲೆದೋರುತ್ತದೆ.
- ಶಸ್ತ್ರಾಸ್ತ್ರಗಳು ಹಾಗೂ ಮದ್ದುಗುಂಡುಗಳು ಆರ್ಥಿಕವಾಗಿ ಅನಗತ್ಯ ನಷ್ಟವಾಗಿವೆ.
- ಐಸನ್ ಹೋವರ್‌ರವರು ಹೇಳುವಂತೆ, ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಿಲ್ಲ ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ.

7.ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡಿರುವ ಸುಧಾರಣಾ ಕ್ರಮಗಳಾವುವು?

- ಯಾವುದೇ ಷರತ್ತುಗಳಿಲ್ಲದೆ ಮುಂದುವರಿದ ದೇಶಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿ.
- ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಭಾರತ ಎತ್ತಿ ಹಿಡಿಯಲು ಸಹಕರಿಸಿತು.
- ಶ್ರೀಮಂತ ರಾಷ್ಟ್ರಗಳ ಬಂಡವಾಳವು ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿತು.
- ಭಾರತವು ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯ ಹಾಗೂ ಸಮಾನತೆಯನ್ನು ಪ್ರತಿಪಾದಿಸುತ್ತಿದೆ.

8.ತೃತೀಯ ಜಗತ್ತಿನ ಅಥವಾ ಬಡರಾಷ್ಟ್ರಗಳ ಮೇಲೆ ಯಾವ ವಿದ್ಯಮಾನಗಳು ಹಲವು ಬಾರಿ ದುಷ್ಪರಿಣಾಮ ಬೀರಿವೆ?

- ಅನ್ಯರಾಷ್ಟ್ರಗಳಲ್ಲಿನ ಅನಗತ್ಯ ವೆಚ್ಚ

- ಮುಕ್ತ ವ್ಯಾಪಾರ
- ಅಸಮರ್ಪಕ ಪೈಪೋಟಿ
- ಜಾಗತೀಕರಣ

9.ವರ್ಣಭೇದ ನೀತಿಯು ಮಾನವತ್ವವಾದಕ್ಕೆ ವಿರೋಧವಾದುದು.ಇದನ್ನು ನಿಮ್ಮ ದೃಷ್ಟಿಕೋನದಲ್ಲಿ ಸಮರ್ಥಿಸಿ.

- ವರ್ಣಭೇದನೀತಿಯು ಮಾನವತ್ವಕ್ಕೆ ವಿರುದ್ಧವಾದುದು.
- ಇದು ಸಮಾನತೆಯ ತತ್ವಕ್ಕೆ ವಿರುದ್ಧವಾದುದು.
- ಇದು ಹಿಂಸೆಯನ್ನು ಪ್ರಚೋದಿಸುತ್ತದೆ
- ಇದು ಜಾಗತಿಕ ಶಾಂತಿ ಮತ್ತು ಸಹಕಾರಕ್ಕೆ ಸವಾಲಾಗಿದೆ.

## ಅಧ್ಯಾಯ-5
## ಜಾಗತಿಕ ಸಂಸ್ಥೆಗಳು:

**I.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1.ವಿಶ್ವಸಂಸ್ಥೆಯು ಪ್ರಾರಂಭವಾದ ವರ್ಷ -1945

2.ವಿಶ್ವಸಂಸ್ಥೆಯ ಮುಖ್ಯ ಕಚೇರಿ ಇರುವುದು- ನ್ಯೂಯಾರ್ಕ್ ನಲ್ಲಿ

3.ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ - ಭದ್ರತಾ ಸಮಿತಿ.

4.ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಅಧಿಕಾರದ ಅವಧಿ - 9 ವರ್ಷಗಳು

5.ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿಯ ಹೆಸರೇನು?

-ಅಂಟೋನಿಯೊ ಗಟೆರಸ್

6.ಅಂತರರಾಷ್ಟ್ರೀಯ ನ್ಯಾಯಾಲಯ ಎಲ್ಲಿದೆ?

-ನೆದರ್ ಲ್ಯಾಂಡಿನ ಹೇಗ್ ಎಂಬಲ್ಲಿದೆ.

7.ವಿಶ್ವಸಂಸ್ಥೆಯ ಭದ್ರತಾ ಸಮಿತಿಯು ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಪ್ರಮುಖಪಾತ್ರ ವಹಿಸುತ್ತದೆ ಏಕೆ?

-ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ಇದು ನೇಮಕ ಮಾಡುತ್ತದೆ.

8.ನಾವು ಯೂನಿಸೆಫ್ ಶುಭಾಷಯ ಪತ್ರಗಳನ್ನು ಏಕೆ ಕೊಳ್ಳಬೇಕು?

-ಯೂನಿಸೆಫ್ ಶುಭಾಷಯ ಪತ್ರಗಳ ಮಾರಾಟದ ಮೂಲಕ ಗಳಿಸುವ ಹಣವನ್ನು ಮಕ್ಕಳ ಯೋಗಕ್ಷೇಮಕ್ಕಾಗಿ ಬಳಸುವುದರಿಂದ

9.ವಿಶ್ವಬ್ಯಾಂಕ್ ಎಂದು ಕರೆಯಲ್ಪಡುವ ಸಂಸ್ಥೆ -ಐ.ಬಿ.ಆರ್.ಡಿ.

10.ವಿಶ್ವಸಂಸ್ಥೆಯ ದೈನಂದಿನ ಆಡಳಿತ ಯೋಜನೆ ಮತ್ತು ಸಂಯೋಜನೆ ಕಾರ್ಯಗಳು ಇದರ ವ್ಯಾಪ್ತಿಗೆ ಬರುತ್ತವೆ.--ಸಚಿವಾಲಯ .

11.ವಿಶ್ವಸಂಸ್ಥೆಯ ಸಂಸತ್ತು ಎಂದು ಕರೆಯಲ್ಪಡುವುದು

-ಸಾಮಾನ್ಯಸಭೆ.

12.ಐ.ಎಂ.ಎಫ್. ವಿಶ್ವ ಮನ್ನಣೆ ಪಡೆಯಲು ಯಾವ ಅಂಶ ಸಹಾಯಕ ವಾಯಿತು?

-I.M.F.ನ ಕಾರ್ಯನಿರ್ವಹಣೆಯ ಗುಣಮಟ್ಟ ಹಾಗೂ ಪಾರದರ್ಶಕತೆ ವಿಶ್ವ ಮನ್ನಣೆ ಪಡೆಯಲು ಸಹಾಯಕವಾಯಿತು.

13.ವಿಶ್ವಬ್ಯಾಂಕ್ ಸ್ಥಾಪನೆಯ ಉದ್ದೇಶವೇನಾಗಿತ್ತು?

-ದ್ವಿತೀಯ ಮಹಾಯುದ್ಧದ ಬಳಿಕ ಆರ್ಥಿಕ ಪುನಶ್ಚೇತನಕ್ಕಾಗಿ ವಿಶ್ವಬ್ಯಾಂಕ್ ಸ್ಥಾಪನೆ ಮಾಡಲಾಯಿತು.

14.ಸಾರ್ಕ್ ಸದಸ್ಯ ರಾಷ್ಟ್ರಗಳು ಯಾವುವು?

-ಭಾರತ,ಬಾಂಗ್ಲಾದೇಶ,ನೇಪಾಳ,ಶ್ರೀಲಂಕಾ,ಪಾಕಿಸ್ತಾನ,ಮಾಲ್ಡೀವ್ಸ್ ಭೂತಾನ್, ಆಫಘಾನಿಸ್ತಾನ .

15.ಸಾರ್ಕ್ ಸ್ಥಾಪನೆಯಾದ ವರ್ಷ-1985.

16.ಸಾರ್ಕ್ ನ ಕೇಂದ್ರ ಕಛೇರಿ ಇರುವ ಸ್ಥಳ -ನೇಪಾಳದ ಕಠ್ಮಂಡುವಿನಲ್ಲಿ.

17.ವಿಶ್ವಸಂಸ್ಥೆಯ ಸ್ಥಾಪನೆಗೆ ಕಾರಣಕರ್ತರು

- ಇಂಗ್ಲೆಂಡಿನ ವಿನ್ ಸ್ಟನ್ ಚರ್ಚಿಲ್,ರಷ್ಯಾದ ಜೋಸೆಫ್ ಸ್ಟಾಲಿನ್, ಅಮೆರಿಕಾದ ಫ್ರಾಂಕ್ಲಿನ್ ಡಿ ರೂಸ್ ವೆಲ್ಟ್.

18.ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಖಾಯಂ ಸದಸ್ಯ ದೇಶಗಳು -

-ಅಮೆರಿಕಾ ಸಂಯುಕ್ತ ಸಂಸ್ಥಾನ,ರಷ್ಯಾ,ಬ್ರಿಟನ್,ಫ್ರಾನ್ಸ್,ಚೈನಾ

19.ಜಗತ್ತಿನಾದ್ಯಂತ ಬಡತನ,ಹಸಿವು ಹಾಗೂ ಅಪೌಷ್ಟಿಕತೆಯ ವಿರುದ್ಧ ಹೋರಾಡಲು ಸ್ಥಾಪಿಸಲ್ಪಟ್ಟ ಸಂಸ್ಥೆ -ಆಹಾರ ಮತ್ತು ಕೃಷಿ ಸಂಸ್ಥೆ.

20.ವಿಶ್ವ ಆರೋಗ್ಯ ಸಂಸ್ಥೆಯ ಪ್ರಮುಖ ಸಾಧನೆ ಏನು?

-ಸಿಡುಬು ರೋಗದ ನಿವಾರಣೆ,ಕಾಲರಾ,ಪ್ಲೇಗ್,ಮಲೇರಿಯಾ ರೋಗಗಳ ನಿವಾರಣೆ.

21.ತನ್ನ ಸೇವೆಗೆ 1965 ರಲ್ಲಿ ಶಾಂತಿ ನೋಬೆಲ್ ಪಡೆದ ಸಂಸ್ಥೆ

- ಯುನೆಸೆಫ್

22.ಸಾರ್ಕ್ ಸಂಸ್ಥೆಯ ಪ್ರಗತಿಗೆ ತೊಡಕಾಗಿರುವ ಅಂಶ ಯಾವುವು ?

-ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲೇ ಇರಬೇಕು ಎಂಬ ಸೂತ್ರ.

- ಸಾರ್ಕ್ ಸದಸ್ಯ ರಾಷ್ಟ್ರಗಳ ಪರಸ್ಪರ ಅಪನಂಬಿಕೆ,ವಿವಾದಗಳು ಈ ಸಂಸ್ಥೆಯ ಪ್ರಗತಿಗೆ ತೊಡಕಾಗಿವೆ.

23.ವಿಶ್ವಸಂಸ್ಥೆ ಎಂಬ ಪದವನ್ನು ಮೊದಲು ಚಾಲ್ತಿಗೆ ತಂದವರು ಯಾರು?

-ಅಮೇರಿಕಾದ ಅಧ್ಯಕ್ಷ ಫ್ರಾಂಕ್ಲಿನ್ ಡಿ ರೂಸ್ ವೆಲ್ಟ್

24.ವಿಶ್ವಸಂಸ್ಥೆಯ ಪ್ರಸ್ತಾವನೆಯು ಈ ಹೇಳಿಕೆಯೊಂದಿಗೆ ಪ್ರಾರಂಭವಾಗುತ್ತದೆ

-ವಿಶ್ವದ ಜನಸಮುದಾಯವೆನಿಸಿದ ನಾವು

25.ವಿಟೋ ಅಧಿಕಾರ ಎಂದರೇನು?

-ಭದ್ರತಾ ಸಮಿತಿಯ ಖಾಯಂ ಸದಸ್ಯ ರಾಷ್ಟ್ರಗಳು ಹೊಂದಿರುವ

ನಿಷೇಧಾತ್ಮಕ ಮತ ಚಲಾವಣೆಯ ಅಧಿಕಾರವನ್ನು ವಿಟೋ ಎನ್ನವರು.

26.ಯುರೋಪಿಯನ್ ಯೂನಿಯನ್ ಒಂದು ಸಂಯುಕ್ತ ರಾಜ್ಯವನ್ನು ಹೋಲುವಂತಿದೆ.ಏಕೆ?

–ಇದರ ಸದಸ್ಯರ ರಾಷ್ಟ್ರಗಳು ಸ್ವಯಂ ಇಚ್ಛೆಯಿಂದ ತಮ್ಮ ಸಾರ್ವಭೌಮ ಅಧಿಕಾರದ ಗಮನಾರ್ಹ ಅಂಶವನ್ನು ಈ ಸಂಸ್ಥೆಗೆ ನೀಡಿದ್ದಾರೆ.

27.ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಖಾಯಂ ಸದಸ್ಯ ರಾಷ್ಟ್ರಗಳು

–ಅಮೆರಿಕಾ ಸಂಯುಕ್ತ ಸಂಸ್ಥಾನ, ರಷ್ಯಾ, ಬ್ರಿಟನ್, ಫ್ರಾನ್ಸ್, ಚೀನಾ

28.ವಿಶ್ವಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ –ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಂಸ್ಥೆ

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ವಿಶ್ವಸಂಸ್ಥೆಯ ಉದ್ದೇಶಗಳನ್ನು ತಿಳಿಸಿ.

- ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು.
- ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು.
- ಮಾನವನ ಮೂಲಭೂತಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು
- ಅಂತರರಾಷ್ಟ್ರೀಯ ಮಟ್ಟದ ಆರ್ಥಿಕ, ಸಾಮಾಜಿಕ,ಸಾಂಸ್ಕೃತಿಕ ಅಥವಾ ಮಾನವೀಯ ನೆಲೆಯ ಸಮಸ್ಯೆಗಳಿಗೆ ಅಂತರರಾಷ್ಟ್ರೀಯ ಸಹಕಾರದಿಂದ ಪರಿಹಾರ ಕಂಡುಕೊಳ್ಳುವುದು.
- ಅಂತರರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವುದು.
- ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕೆಲಸ ನಿರ್ವಹಿಸುವುದು.

2.ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು ಯಾವುವು?

1)ಸಾಮಾನ್ಯಸಭೆ 2)ಭದ್ರತಾ ಸಮಿತಿ 3)ಆರ್ಥಿಕ ಹಾಗೂ ಸಾಮಾಜಿಕ ಸಮಿತಿ 4)ದತ್ತಿ ಸಮಿತಿ 5)ಅಂತರ ರಾಷ್ಟ್ರೀಯ ನ್ಯಾಯಾಲಯ 6)ಸಚಿವಾಲಯ

3.ಸಾಮಾನ್ಯ ಸಭೆಯ ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.

- ಸಾಮಾನ್ಯ ಸಭೆಯು ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡ ಅಂಗಸಂಸ್ಥೆಯಾಗಿದೆ.
- ಪ್ರತಿ ಸದಸ್ಯ ರಾಷ್ಟವೂ 5 ಸದಸ್ಯರನ್ನು ಇದಕ್ಕೆ ಕಳುಹಿಸಿಕೊಡುತ್ತದೆ. ಆದರೆ ಮತದಾನದ ಹಕ್ಕು ಒಂದು ಮಾತ್ರ.
- ಇದು ಪ್ರಥಮ ಅಧಿವೇಶನದಲ್ಲಿ ಒಂದು ವರ್ಷದ ಅವಧಿಗೆ ಓರ್ವ ಅಧ್ಯಕ್ಷರನ್ನು ಆರಿಸುತ್ತದೆ. 17 ಉಪಾಧ್ಯಕ್ಷರನ್ನು ಹಾಗೂ 7 ಸ್ಥಾಯಿ ಸಮಿತಿಗಳಿಗೆ 7 ಮಂದಿ ಅಧ್ಯಕ್ಷರನ್ನು ಆರಿಸಲಾಗುತ್ತದೆ.
- ವಿಶ್ವಸಂಸ್ಥೆಯ ಆಯವ್ಯಯ ಪಟ್ಟಿಗೆ ಅನುಮೋದನೆ ನೀಡುತ್ತದೆ.
- ಯಾವುದಾದರು ತುರ್ತು ವಿಷಯಗಳು ಚರ್ಚೆ ನಡೆಯಬೇಕಿದ್ದರೆ ವಿಶೇಷ ಅಧಿವೇಶನ ಕರೆಯುತ್ತದೆ.
- ಜಾಗತಿಕ ಸಂಸತ್ತಿನ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ.

4.ಭದ್ರತಾ ಸಮಿತಿಯ ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.

- ಭದ್ರತಾ ಸಮಿತಿಯು ವಿಶ್ವಸಂಸ್ಥೆಯ ಸಚಿವ ಸಂಪುಟ ಮಾದರಿಯಲ್ಲಿದ್ದು ಅತ್ಯಂತ ಪ್ರಭಾವಿ ಅಂಗಸಂಸ್ಥೆಯಾಗಿದೆ.
- ಇದು 15 ಸದಸ್ಯರನ್ನು ಹೊಂದಿದ್ದು 5 ಖಾಯಂ ಸದಸ್ಯರು, 10 ಹಂಗಾಮಿ ಸದಸ್ಯರು .ಅಮೆರಿಕಾ,ರಷ್ಯಾ,ಬ್ರಿಟನ್,ಫ್ರಾನ್ಸ್,ಚೀನಾ ಖಾಯಂ ಸದಸ್ಯರು.
- ಖಾಯಂ ಸದಸ್ಯ ದೇಶಗಳು ನಿಷೇಧಾತ್ಮಕ ಮತ ಚಲಾಯಿಸುವ ವಿಟೋ ಅಧಿಕಾರವನ್ನು ಹೊಂದಿವೆ.
- ಜಾಗತಿಕ ಸಮಸ್ಯೆಗಳ ಶಾಂತಿಯುತ ಪರಿಹಾರಕ್ಕೆ ಭದ್ರತಾ ಸಮಿತಿ ಯತ್ನಿಸುತ್ತದೆ.
- ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕಾಪಾಡುವುದು.
- ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ಇದು ನೇಮಿಸುವುದು.
- ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹೆಸರು ಸೂಚಿಸುತ್ತದೆ.

5. 'ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾದುದು'.ಈ ಹೇಳಿಕೆಯನ್ನು ಸಮರ್ಥಿಸಿ .**ಅಥವಾ** ಜಾಗತಿಕ ಶಾಂತಿ ಸ್ಥಾಪನೆಯಲ್ಲಿ ವಿಶ್ವಸಂಸ್ಥೆಯ ಪಾತ್ರವನ್ನು ವಿವರಿಸಿ

- ವಿಶ್ವಸಂಸ್ಥೆಯು ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ.
- ಸುಯೇಜ್‌ಕಾಲುವೆ ಬಿಕ್ಕಟ್ಟು, ಇರಾನ್ ಸಂಘರ್ಷ, ಇಂಡೋನೇಷ್ಯಾ, ಕಾಶ್ಮೀರ,ಪ್ಯಾಲಸ್ಟೈನ್ ,ಕೋರಿಯಾ, ಹಂಗೇರಿ, ಕಾಂಗೋ,ಸೈಪ್ರೆಸ್, ಅರಬ್–ಇಸ್ರೇಲ್,ನಮೀಬಿಯಾ,ಆಫ್ಘಾನಿಸ್ತಾನ ಮುಂತಾದ ವಿವಾದಗಳ ಪರಿಹಾರಕ್ಕೆ ಶ್ರಮಿಸಿದೆ
- ಅಣ್ವಸ್ತ್ರ ಹಾಗೂ ಸಾಂಪ್ರದಾಯಿಕ ನಿಶ್ಯಸ್ತ್ರೀಕರಣಕ್ಕೆ ನಿರಂತರವಾಗಿ ಪ್ರಯತ್ನ ಮಾಡುತ್ತಿದೆ.
- ವಿಶ್ವಶಾಂತಿಯ ನೆಲೆಯಲ್ಲಿ ಪ್ರಮುಖ ಕಾರ್ಯ ನಿರ್ವಹಿಸುತ್ತಿದೆ.

6.ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಾಧನೆಗಳನ್ನು ವಿವರಿಸಿ.

- ವಿಶ್ವಸಂಸ್ಥೆ ತನ್ನ ಸನ್ನದಿನಲ್ಲಿ ಸಾಮಾಜಿಕ ಪ್ರಗತಿ ಹಾಗೂ ಉತ್ತಮ ಜೀವನ ಮಟ್ಟಕ್ಕೆ ಯತ್ನಿಸಬೇಕು ಎಂದು ಘೋಷಿಸಿದೆ.
- ಆರ್ಥಿಕ ಮತ್ತು ಹಣಕಾಸಿನ ಕ್ಷೇತ್ರದಲ್ಲಿ ಸುಂಕ ಮತ್ತು ವ್ಯಾಪಾರದ

ಸಾಮಾನ್ಯ ಒಪ್ಪಂದ ಜಾರಿಗೆ ಬಂದಿದೆ.

- ವಿಶ್ವಸಂಸ್ಥೆಯ ಪ್ರಗತಿ ಯೋಜನೆ ಈ ಕ್ಷೇತ್ರದ ಪ್ರಮುಖ ಸಾಧನೆಯಾಗಿದೆ.
- ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್.ನಂತಹ ವಿತ್ತೀಯ ಸಂಸ್ಥೆಗಳು ಇದರ ಸಹಯೋಗದಿಂದ ಉತ್ತಮ ಸಾಧನೆ ಮಾಡಿವೆ.
- ವಿಶ್ವ ಆರೋಗ್ಯ ಸಂಸ್ಥೆ,ಯುನೆಸ್ಕೋ,ಯುನಿಸೆಫ್,ವಿಶ್ವ ನಿರಾಶ್ರಿತರ ಆಯೋಗ ವಿಶ್ವಸಂಸ್ಥೆಯ ಸಾಮಾಜಿಕ ಕಳಕಳಿಯ ಸಂಸ್ಥೆಗಳಾಗಿವೆ.
- 1948 ರ ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆ ಇದರ ಮಹತ್ವದ ಸಾಧನೆಯಾಗಿದೆ.
- ವರ್ಣಭೇದ ನೀತಿಯನ್ನು ಅಳಿಸಿ ಹಾಕುವಲ್ಲಿ ಸಾಮ್ರಾಜ್ಯಶಾಹಿತ್ವ, ವಸಾಹತುಶಾಹಿತ್ವಗಳನ್ನು ಇಲ್ಲವಾಗಿಸುವಲ್ಲಿ ವಿಶ್ವಸಂಸ್ಥೆಯ ಪಾತ್ರ ಪ್ರಮುಖವಾಗಿದೆ.

7.ಕಾಮನ್‌ವೆಲ್ತ್ ರಾಷ್ಟ್ರಸಂಘದ ಉದ್ದೇಶಗಳನ್ನು ಪಟ್ಟಿಮಾಡಿ.

- ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವುದು.
- ಸ್ವಾತಂತ್ರ್ಯದ ಸಂರಕ್ಷಣೆ
- ಬಡತನ ನಿರ್ಮೂಲನೆ
- ವಿಶ್ವಶಾಂತಿ ನೆಲೆಗೊಳಿಸುವಿಕೆ
- ಕ್ರೀಡೆ,ವಿಜ್ಞಾನ ಮತ್ತು ಕಲೆಗಳ ಬೆಳವಣಿಗೆಗೆ ಪ್ರೋತ್ಸಾಹ
- ಪರಸ್ಪರ ಸದಸ್ಯ ರಾಷ್ಟ್ರಗಳ ಮೈತ್ರಿಯನ್ನು ಬಲಪಡಿಸುವುದು.

8.ಯುರೋಪಿನ್ ಯೂನಿಯನ್ ಸಂಸ್ಥೆಯನ್ನು ವಿವರಿಸಿ.

- ಯುರೋಪಿಯನ್ ಯೂನಿಯನ್ ಸಂಸ್ಥೆ 27 ಯುರೋಪಿನ ಸದಸ್ಯ ರಾಷ್ಟ್ರಗಳನ್ನು ಒಳಗೊಂಡ ಸಂಸ್ಥೆಯಾಗಿದೆ.
- ಮ್ಯಾಸ್ಟ್ರಿಚ್ ಎಂಬಲ್ಲಿ ಯುರೋಪಿಯನ್ ಯೂನಿಯನ್ ಒಪ್ಪಂದದ ಅನುಗುಣವಾಗಿ ಇದು 1992 ಉದಯವಾಯಿತು.
- ಇದು ಸದಸ್ಯ ರಾಷ್ಟ್ರಗಳ ಮಧ್ಯೆ ಸಮಾನ ಮಾರುಕಟ್ಟೆ,ಒಂದೇ ಚಲಾವಣೆಯ ಕರೆನ್ಸಿ,ಸಮಾನ ಕೃಷಿ ಹಾಗೂ ವ್ಯಾಪಾರ ಧೋರಣೆ ಇತ್ಯಾದಿಗಳಿಗೆ ಅವಕಾಶ ಮಾಡಿಕೊಡುತ್ತದೆ.
- ಇದರ ಮುಖ್ಯ ಅಂಗಗಳು ಸಮಿತಿ,ಆಯೋಗ,ಯುರೋಪಿನ ಸಂಸತ್ತು ಮತ್ತು ಯುರೋಪಿನ ನ್ಯಾಯಾಲಯ
- ಈ ಸಂಸ್ಥೆಯು ಒಂದು ಸಂಯುಕ್ತ ರಾಜ್ಯವನ್ನು ಹೋಲುವಂತಿದೆ.
- ಈ ಸಂಸ್ಥೆಯು ಶಾಂತಿ ಮತ್ತು ಪ್ರಜಾತಂತ್ರಕ್ಕಾಗಿ ಕಾರ್ಯ ನಿರ್ವಹಿಸುತ್ತದೆ.
- ಇದರ ಸದಸ್ಯ ರಾಷ್ಟ್ರಗಳು ಸ್ವಯಂ ಇಚ್ಛೆಯಿಂದ ತಮ್ಮ ಸಾರ್ವಭೌಮ ಅಧಿಕಾರದ ಗಮನಾರ್ಹ ಅಂಶವನ್ನು ಈ ಸಂಸ್ಥೆಗೆ ನೀಡಿದ್ದಾರೆ.

*****

ಸಮಾಜಶಾಸ್ತ್ರ

## ಅಧ್ಯಾಯ– 1

## ಸಾಮಾಜಿಕ ಸ್ತರವಿನ್ಯಾಸ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

1.ಸಂವಿಧಾನದ ಯಾವ ವಿಧಿಯು ಅಲ್ಪಸಂಖ್ಯಾತರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ನೀಡಿದೆ? – ಸಂವಿಧಾನದ 30 ನೇ ವಿಧಿ.

2.14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ಸಂವಿಧಾನದ ಯಾವ ವಿಧಿಯು ಹೇಳುತ್ತದೆ?
– ಸಂವಿಧಾನದ 45 ನೇ ವಿಧಿ.

3.ಸಂವಿಧಾನದ ವಿಧಿ 21 ಎ ಯ ಪ್ರಾಮುಖ್ಯತೆ ಏನು?
– ಸಂವಿಧಾನದ ವಿಧಿ 21 ಎ ಯು 6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಮೂಲಭೂತ ಹಕ್ಕು ಎಂದು ತಿಳಿಸಿದೆ.

4.ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ ನೀಡುವ ಸಂವಿಧಾನದ ವಿಧಿ ಯಾವುದು? – 29 ನೇ ವಿಧಿ.

5.'ಶಿಕ್ಷಣ ಸಾರ್ವಜನಿಕರ ಸ್ವತ್ತಾಗಬೇಕು' ಎಂದು ಪ್ರತಿಪಾದಿಸಿದವರು ಯಾರು? – ಡಾ|| ಬಿ.ಆರ್.ಅಂಬೇಡ್ಕರ್

6.ಅಸ್ಪೃಶ್ಯತೆಯ ಆಚರಣೆಯನ್ನು ಸಂವಿಧಾನದ ಯಾವ ವಿಧಿಯು ನಿಷೇಧಿಸಿದೆ? – 17 ನೇ ವಿಧಿ

7.ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯು ಯಾವಾಗ ಜಾರಿಗೆ ಬಂದಿತು?
– 1955 ರಲ್ಲಿ

8.ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು ಏನೆಂದು ಮಾರ್ಪಾಡಿಸಲಾಯಿತು? –'ನಾಗರಿಕ ಹಕ್ಕುಗಳ ಹಕ್ಕುಗಳ ಸಂರಕ್ಷಣಾ ಕಾಯ್ದೆ'.

9.ಸಾಮಾಜಿಕ ಸ್ತರವಿನ್ಯಾಸ ಎಂದರೇನು?
– ಜನರನ್ನು ವಿಭಿನ್ನ ಸ್ತರಗಳಾಗಿ ವರ್ಗೀಕರಿಸುವ ವ್ಯವಸ್ಥೆ ಅಥವಾ ಅವರನ್ನು ಏಣಿಶ್ರೇಣಿಗಳಿಂದ ವಿಭಿನ್ನ ಸ್ಥಾನಗಳಲ್ಲಿ ವಿಭಾಗಿಸುವ ಕ್ರಮವನ್ನು ಸಾಮಾಜಿಕ ಸ್ತರ ವಿನ್ಯಾಸ ಎಂದು ಕರೆಯುವರು.

10.ಸಾಮಾಜಿಕ ಅಸಮಾನತೆ ಎಂದರೇನು?
– ವ್ಯಕ್ತಿಗಳು ಸಮಾಜದಲ್ಲಿ ವಿವಿಧ ಲಕ್ಷಣಗಳ ಆಧಾರದಲ್ಲಿ ಲಿಂಗ,ಜಾತಿ,ವೃತ್ತಿ, ವರ್ಗ ಮತ್ತು ಜನಾಂಗ ಹೀಗೆ ಶ್ರೇಣೀಕೃತಗೊಂಡಿರುತ್ತಾರೆ ಎಂಬುದನ್ನು ಸಾಮಾಜಿಕ ಅಸಮಾನತೆ ಎನ್ನುವರು.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಸಾಮಾಜಿಕ ಅಸಮಾನತೆಗೆ ಕಾರಣಗಳಾವುವು?

- ವ್ಯಕ್ತಿಗಳು ಸಮಾಜದಲ್ಲಿ ವಿವಿಧ ಲಕ್ಷಣಗಳ ಆಧಾರದಲ್ಲಿ ಶ್ರೇಣೀಕೃತಗೊಂಡಿರುತ್ತಾರೆ ಎನ್ನುವುದು ಸಾಮಾಜಿಕ ಅಸಮಾನತೆ

ಯನ್ನು ಸೂಚಿಸುತ್ತದೆ. ಉದಾ: ಲಿಂಗ,ಜಾತಿ,ವೃತ್ತಿ,ವರ್ಗ ಮತ್ತು ಜನಾಂಗ

- ಆದಾಯದ ಮೂಲಗಳು
- ಶಿಕ್ಷಣ ಮತ್ತು ವೃತ್ತಿ ಅವಕಾಶಗಳು
- ಆರೋಗ್ಯ ಸೌಲಭ್ಯಗಳು
- ರಾಜಕೀಯ ಪ್ರತಿನಿಧಿತ್ವ ಮತ್ತು ಭಾಗವಹಿಸುವಿಕೆ

2.ಲಿಂಗತ್ವ ಅಸಮಾನತೆ ಹೇಗೆ ಉಂಟಾಗಿದೆ?

- ವಾಸ್ತವದಲ್ಲಿ ನಮ್ಮ ಮನೋಭಾವನೆಗಳು ಹೆಚ್ಚಾಗಿ ಒಂದು ಮತ್ತೊಂದನ್ನು ಅವಲಂಬಿಸಿರುತ್ತವೆ.
- ಉದಾಹರಣೆಗೆ ಶಿಕ್ಷಣದ ಮೌಲ್ಯ ಕುರಿತು ಒಬ್ಬ ವ್ಯಕ್ತಿಗೆ ಇರುವ ಚಿಂತನೆ ಅಥವಾ ಮನೋಭಾವನೆಯು ಮತ್ತೊಬ್ಬರಿಂದ ಪ್ರಭಾವಿತವಾದುದ್ದಾಗಿರಬಹುದು.
- ಈ ರೀತಿಯ ಪ್ರಭಾವಗಳು ಒಂದೇ ಕುಟುಂಬದಲ್ಲಿ ಅವನ/ಅವಳ ಮೇಲೆ ಬೀರಬಹುದಾದ ಪ್ರಭಾವಗಳು ಸಮುದಾಯದಿಂದಲೇ ಉಂಟಾಗಿರಬಹುದು.ಅಥವಾ ನೆರೆ–ಹೊರೆಯವರ ಪ್ರಭಾವಕ್ಕೆ ಒಳಗಾಗಿರ ಬಹುದು.
- ಈ ದೃಷ್ಟಿಯಿಂದ ಹೆಣ್ಣು ಮತ್ತು ಗಂಡು ಮಕ್ಕಳ ಶಿಕ್ಷಣಕ್ಕೆ ಇರುವ ಪ್ರೇರಣಾ ಶಕ್ತಿಯು ಪ್ರಮುಖವಾಗಿ ಸಾಮಾಜಿಕ ಆಯಾಮ ಹೊಂದಿದೆ.
- ಈ ಕಾರಣಗಳಿಂದ ಶಾಲಾ ಭಾಗವಹಿಸುವಿಕೆಯಲ್ಲಿ, ಆಹಾರ ಮತ್ತು ಆರೋಗ್ಯ ಸೌಲಭ್ಯಗಳನ್ನು ಪಡೆಯುವಲ್ಲಿ ಲಿಂಗ ಅಸಮಾನತೆಯನ್ನು ನಾವು ಕಾಣಬಹುದು.

3.ಸಾಮಾಜಿಕ ಸ್ತರವಿನ್ಯಾಸದ ಲಕ್ಷಣಗಳು ಯಾವುವು?

- ಸಾಮಾಜಿಕ ಸ್ತರವಿನ್ಯಾಸವು ಸಾಮಾಜಿಕವಾದದ್ದು
- ಸಾಮಾಜಿಕ ಸ್ತರವಿನ್ಯಾಸವು ಸರ್ವವ್ಯಾಪಕವಾದದ್ದು
- ಸಾಮಾಜಿಕ ಸ್ತರವ್ಯವಸ್ಥೆ ಪುರಾತನವಾದದ್ದು
- ಸ್ತರವಿನ್ಯಾಸವು ವಿವಿಧ ರೂಪಗಳಲ್ಲಿದೆ.

4.ಸಾಮಾಜಿಕ ಸ್ತರವಿನ್ಯಾಸ ವ್ಯವಸ್ಥೆಯಲ್ಲಿರುವ ಪ್ರಮುಖ ರೂಪಗಳಾವುವು?

1. ಆದಿವಾಸಿ ಸಮಾಜ 2.ಗುಲಾಮಗಿರಿ 3.ಎಸ್ಟೇಟ್ ಪದ್ಧತಿ
4.ವರ್ಣವ್ಯವಸ್ಥೆ 5.ಜಾತಿ ವ್ಯವಸ್ಥೆ

5.ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಚರ್ಚಿಸಿ.

- ಶೂದ್ರರಿಗಿಂತ ಕೆಳಗಿನವರಾದ ಐದನೆ ವರ್ಗವಾದ ಅಂತ್ಯಜರ (ಅಸ್ಪೃಶ್ಯರ)ಸ್ಥಿತಿ ಮನುಷ್ಯರೇ ಅಲ್ಲವೇನೊ ಎನಿಸುವಂತಿತ್ತು.
- ಅಸ್ಪೃಶ್ಯತೆಯ ಆಚರಣೆಯು ವರ್ಣವ್ಯವಸ್ಥೆಯ ಹುಟ್ಟಿನೊಂದಿಗೆ ಅಸ್ತಿತ್ವವನ್ನು ಪಡೆದುಕೊಂಡಿದೆ.
- ಸ್ಪೃಶ್ಯ ಮತ್ತು ಅಸ್ಪೃಶ್ಯ ಭಾವನೆ ಮುಖ್ಯವಾಗಿ ಸಾಮಾಜಿಕ,ಆರ್ಥಿಕ, ಅಸಮಾನತೆಯ ಮೂಲದಿಂದ ರೂಪಿತಗೊಂಡದ್ದಾಗಿದೆ,
- ಅಸ್ಪೃಶ್ಯ ಎಂಬುದು ಮುಟ್ಟಬಾರದ,ಮುಟ್ಟಲಾಗದ ಎಂಬ ಅರ್ಥದಲ್ಲಿ ಬಳಕೆಯಾಗಿದೆ.

– ಈ ಎಲ್ಲಾ ಅಂಶಗಳಿಂದ ಅಸ್ಪೃಶ್ಯತೆಯು ಒಂದು ಸಾಮಾಜಿಕ ಪಿಡುಗಾಗಿದೆ.

6.ಅಸ್ಪೃಶ್ಯತೆಯ ಸಮಸ್ಯೆಗಳಾವುವು?

1.ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳ ಮಟ್ಟದ ಸ್ಥಾನ 2.ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು 3. ಆಸ್ತಿಯ ಒಡೆತನದ ಹಕ್ಕಿನ ನಿರಾಕರಣೆ 4 ರಾಜಕೀಯ ಭಾಗವಹಿಸುವಿಕೆಯ ನಿರಾಕರಣೆ

7.ಅಸ್ಪೃಶ್ಯತೆ ನಿವಾರಣೆಯ ಕಾನೂನು ಕ್ರಮಗಳನ್ನು ತಿಳಿಸಿ ಅಥವಾ ಅಸ್ಪೃಶ್ಯತೆಯನ್ನು ತಡೆಯಲು ಇರುವ ಕಾನೂನು ಕ್ರಮಗಳಾವುವು?

- ಸಂವಿಧಾನದ 17 ನೆಯ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದೆ.
- ಭಾರತ ಸರ್ಕಾರ 'ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ'ಯನ್ನು 1955 ರಲ್ಲಿ ಜಾರಿಗೊಳಿಸಿದೆ.
- ಇದರಲ್ಲಿ ಕಂಡುಬಂದ ಕೆಲವು ಲೋಪದೋಷಗಳನ್ನು ತಿದ್ದುಪಡಿಮಾಡಿ 'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ' ಎಂದು 1976 ರಲ್ಲಿ ಮಾರ್ಪಾಡು ಗೊಳಿಸಲಾಯಿತು.
- ಈ ಕಾಯ್ದೆಯ ಪ್ರಕಾರ ಅಸ್ಪೃಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧವಾಗಿರುತ್ತದೆ.
- ಸಂವಿಧಾನಾತ್ಮಕವಾಗಿ ಸಾರ್ವತ್ರಿಕ ಮತದಾನದ ಹಾಗೂ ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ನಾಗರಿಕರಿಗೂ ನೀಡಲಾಗಿದೆ.
- ವಿಶೇಷವಾಗಿ ಪರಿಶಿಷ್ಟರನ್ನೊಳಗೊಂಡಂತೆ ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿಗಳನ್ನು ಕಲ್ಪಿಸಲಾಗಿದೆ.
- 1989 ರ ಶಾಸನವು ಅಸ್ಪೃಶ್ಯತೆಯ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿಗಳನ್ನು ರಾಜ್ಯ ಸರ್ಕಾರಗಳಿಗೆ ವಹಿಸಿದೆ.
- ಭಾರತವು ಎಲ್ಲಾ ನಾಗರಿಕರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಲು ಶ್ರಮಿಸುತ್ತಾ ಬಂದಿದೆ

8.ಕರ್ಮ ಸಿದ್ಧಾಂತದ ಆಶಯ ಯಾವುದು?

- ಬ್ರಾಹ್ಮಣ–ಅಧ್ಯಯನ,ಅಧ್ಯಾಪನ,ಯಜ್ಞಯಾಗಾದಿಗಳಲ್ಲಿಯೂ
- ಕ್ಷತ್ರಿಯನು–ರಾಜ್ಯ ಆಡಳಿತದಲ್ಲಿಯೂ
- ವೈಶ್ಯರು–ವ್ಯಾಪಾರ,ವ್ಯವಹಾರದಲ್ಲಯೂ
- ಶೂದ್ರರು–ಕೃಷಿ,ಕೂಲಿಕಾರರಾಗಿಯೂ ಕಾರ್ಯ ನಿರ್ವಹಿಸಬೇಕು.

## ಅಧ್ಯಾಯ-2
## ದುಡಿಮೆ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

1.ಶ್ರಮ ವಿಭಜನೆಯು ಕಾರಣವಾಗುವುದು- ವಿಶೇಷ ಪರಿಣಿತಿಗೆ

2.ಭೂ ರಹಿತ ಕೃಷಿ ಕಾರ್ಮಿಕರನ್ನು ಈ ಕೆಲಸಗಾರರೆಂದು ಕರೆಯುವರು

- ಅಸಂಘಟಿತ ವಲಯದ ಕೆಲಸಗಾರರು

3.ವೈದ್ಯಕೀಯ ಸಂಸ್ಥೆಗಳ ಕಾರ್ಮಿಕರನ್ನು ಹೀಗೆ ಕರೆಯುವರು

- ಸಂಘಟಿತ ಕೆಲಸಗಾರರು

4.ದಿ ರಿಪಬ್ಲಿಕ್ ಗ್ರಂಥವನ್ನು ಬರೆದವರು ಯಾರು? - ಪ್ಲೇಟೋ

5.ವಿಶೇಷ ಪರಿಣತಿ ಎಂದರೇನು?

- ಯಾವುದಾದರೂ ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣತಿ ತರಬೇತಿ ಅಥವಾ ಕೌಶಲ್ಯ ಪಡೆಯುವುದನ್ನು ವಿಶೇಷ ಪರಿಣತಿ ಎನ್ನುವರು.

6.ಶ್ರಮ ವಿಭಜನೆ ಎಂದರೇನು?

-ಒಂದು ಸಮಾಜಕ್ಕೆ ಅಗತ್ಯವಾದ ಸೌಲಭ್ಯಗಳನ್ನು ಮತ್ತು ವಸ್ತು ಪದಾರ್ಥ ಗಳನ್ನು ಬೇರೆ ಬೇರೆ ವರ್ಗಗಳ ದುಡಿಯುವ ಜನರು ಪೂರೈಸುವುದನ್ನು ಶ್ರಮವಿಭಜನೆ ಎನ್ನುವರು.

7.ದುಡಿಮೆ ಎಂದರೇನು?

- ಒಬ್ಬ ವ್ಯಕ್ತಿ ದೈಹಿಕ ಪರಿಶ್ರಮದಿಂದ ಅಥವಾ ಬೌದ್ಧಿಕ ಪರಿಶ್ರಮದಿಂದ ಆದಾಯ ಅಥವಾ ವಸ್ತು ರೂಪದ ಪ್ರತಿಫಲವನ್ನು ಪಡೆಯುವುದನ್ನು ದುಡಿಮೆ ಎನ್ನುವರು.

8.ದುಡಿಮೆಯಲ್ಲಿನ ಅಸಮಾನತೆ ಎಂದರೇನು?

- ಸಮಾನ ಕೆಲಸಕ್ಕೆ ಸಮಾನ ವೇತನದ ನಿಯಮಕ್ಕೆ ವಿರುದ್ಧವಾಗಿ ನಡೆಯುವ ದುಡಿಮೆಯನ್ನು ದುಡಿಮೆಯಲ್ಲಿನ ಅಸಮಾನತೆ ಎನ್ನುವರು.

9.ಸಂಭಾವನೆ ರಹಿತ ದುಡಿಮೆ ಎಂದರೇನು?

- ಒಬ್ಬರ ದುಡಿಮೆಗೆ ಪ್ರತಿಯಾಗಿ ಯಾವುದೇ ರೀತಿಯ ಸಂಭಾವನೆ ಅಥವಾ ವಸ್ತುರೂಪದಲ್ಲಿ,ಯಾವುದೇ ಪ್ರತಿಫಲ ಇಲ್ಲದೇ ದುಡಿಮೆಯ ಚಟುವಟಿಕೆ ಯನ್ನು ಸಂಭಾವನೆ ರಹಿತ ದುಡಿಮೆ ಎನ್ನುವರು.

10.ಸಂಭಾವನೆ ಸಹಿತ ದುಡಿಮೆ ಎಂದರೇನು?

- ನಿಗದಿತ ವೇತನವನ್ನು ಘಂಟೆಗಳ ಆಧಾರದಲ್ಲಿ,ದಿನಗೂಲಿಯ ಆಧಾರದಲ್ಲಿ ವಾರದ ಆಧಾರದಲ್ಲಿ ಅಥವಾ ತಿಂಗಳ ಆಧಾರದಲ್ಲಿ ದೈಹಿಕ ಶ್ರಮಕ್ಕೆ ವ್ಯಕ್ತಿಯ ಅರೆಕುಶಲ ಕೆಲಸಕ್ಕೆ ಅಥವಾ ಕುಶಲ ಕೆಲಸಕ್ಕೆ ನೀಡುವ ವೇತನವನ್ನು ಸಂಭಾವನೆ ಸಹಿತ ದುಡಿಮೆ ಎನ್ನವರು.

11.ಸಂಘಟಿತ ದುಡಿಮೆಯ ವಲಯ ಎಂದರೇನು?

- ಯಾವ ವಲಯವು ಸರ್ಕಾರದಲ್ಲಿ ನೋಂದಣಿಯಾಗಿ ಕಾನೂನಿನ ಚೌಕಟ್ಟಿನೊಳಗೆ,ದುಡಿಯುವ ಕಾರ್ಮಿಕರಿಗೆ ನಿಗದಿತ ಕೆಲಸ, ಉದ್ಯೋಗದ ಭರವಸೆ,ನಿಗದಿತ ವೇತನವನ್ನು ಕಾನೂನಿನ ಚೌಕಟ್ಟಿನಲ್ಲಿಯೇ ನಿಗದಿಯಾಗಿ ರುತ್ತದೆಯೋ ಅದನ್ನು ಸಂಘಟಿತ ದುಡಿಮೆಯ ವಲಯ ಎನ್ನುವರು.

12.ಅಸಂಘಟಿತ ದುಡಿಮೆಯ ವಲಯ ಎಂದರೇನು?

- ದುಡಿಮೆಗೆ ಸಂಬಂಧಿಸಿದಂತೆ ಯಾವುದೇ ಕಾನೂನಿನ ಚೌಕಟ್ಟು ಇಲ್ಲದಿರುವುದನ್ನು ಅಸಂಘಟಿತ ದುಡಿಮೆಯ ವಲಯ ಎನ್ನುವರು.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ದುಡಿಮೆಯಲ್ಲಿನ ತಾರತಮ್ಯತೆಯನ್ನು ವಿವರಿಸಿ.

- ಸಮಾನ ಕೆಲಸಕ್ಕೆ ಸಮಾನವೇತನದ ನಿಯಮಕ್ಕೆ ವಿರುದ್ಧವಾಗಿ ನಡೆಯುವ ದುಡಿಮೆಯನ್ನು ದುಡಿಮೆಯಲ್ಲಿನ ಅಸಮಾನತೆ ಎನ್ನುವರು.
- ಇಬ್ಬರು ವ್ಯಕ್ತಿಗಳು ಒಂದೇ ಕೆಲಸವನ್ನು ಒಂದೇ ಸಮಯದಲ್ಲಿ ಮಾಡಿದಾಗ ಒಬ್ಬರಿಗೆ ಹೆಚ್ಚು ವೇತನವನ್ನು ಒಬ್ಬರಿಗೆ ಕಡಿಮೆ ವೇತನವನ್ನು ನೀಡುವುದನ್ನು ದುಡಿಮೆಯಲ್ಲಿನ ತಾರತಮ್ಯ ಎನ್ನುವರು.
- ಮಹಿಳೆ ಮತ್ತು ಪುರುಷರಿಬ್ಬರೂ ಒಂದು ದುಡಿಮೆಯಲ್ಲಿ ತೊಡಗಿದ್ದರೂ ಅವರಿಗೆ ಸಂಭಾವನೆ ಸಮಾನವಾಗಿರುವುದಿಲ್ಲ.
- ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗ ಮತ್ತು ಹೆಚ್ಚು ಸಂಬಳವನ್ನು ಮತ್ತು ಮಹಿಳೆಯರಿಗೆ ಕಡಿಮೆ ಸಂಬಳ ನೀಡುವುದು.
- ಕೃಷಿ ವಲಯದ ದುಡಿಮೆಯು ಲಿಂಗ,ವಯಸ್ಸು,ಸಾಮರ್ಥ್ಯಗಳ ಆಧಾರದಲ್ಲಿ ಅಸಮಾನತೆಯಿಂದ ಕೂಡಿರುತ್ತದೆ.
- ಬೀದಿಗಳಲ್ಲಿ ಕೆಲಸ ಮಾಡುವವರು ಮತ್ತು ಕರ್ಮಚಾರಿಗಳಿಗೆ ಕನಿಷ್ಠ ವೇತನಕ್ಕಿಂತ ಕಡಿಮೆ ಸಂಭಾವನೆ .
- ಸರ್ಕಾರಿ ವಲಯದಲ್ಲಿಯೂ ಶ್ರೇಣೀಕೃತವಾಗಿ ದುಡಿಮೆಯಲ್ಲಿ ಅಸಮಾನತೆಯನ್ನು ಕಾಣಬಹುದು.

2.ಸಂಘಟಿತ ವಲಯದ ಕೆಲಸಗಾರರಿಗೆ ದೊರೆಯುವ ಸೌಲಭ್ಯಗಳನ್ನು ತಿಳಿಸಿ

1)ಉದ್ಯೋಗದ ಭದ್ರತೆ ಮತ್ತು ಭರವಸೆ

2)ನಿಗದಿತ ವೇತನ ಸೌಲಭ್ಯ

3)ಕನಿಷ್ಠ ವೇತನ,ವಿಶೇಷ ಭತ್ಯೆಗಳು,ಫ್ರಾವಿಡೆಂಟ್ ಫಂಡ್ ಸೌಲಭ್ಯಗಳು

4)ಅನೇಕ ಸಂಚಿತ ಸೌಲಭ್ಯಗಳು

5)ನಿಗದಿತ ಸಮಯದಲ್ಲಿ ವೇತನ ಮತ್ತು ವಾರ್ಷಿಕ ಭತ್ಯೆ,ಸೌಲಭ್ಯಗಳು

6)ಹೆಚ್ಚಿನ ಅವಧಿಯ ದುಡಿಮೆಗೆ ಹೆಚ್ಚುವರಿ ವೇತನ ಸೌಲಭ್ಯ

7)ವೈದ್ಯಕೀಯ ಸೌಲಭ್ಯಗಳು ಇತ್ಯಾದಿ.

3.ಅಸಂಘಟಿತ ದುಡಿಮೆಗಾರರ ಸವಾಲುಗಳನ್ನು ತಿಳಿಸಿ./ಸಮಸ್ಯೆಗಳೇನು?

1) ವಲಸೆ 2) ಸಾಮಾಜಿಕ ಭದ್ರತೆ 3)ಕಾನೂನಿನ ಚೌಕಟ್ಟಿನ ಸವಾಲು 4)ಬಾಲಕಾರ್ಮಿಕ ಸಮಸ್ಯೆ 5)ಉದ್ಯೋಗಪತಿಗಳಿಂದ ಶೋಷಣೆ

6)ದೈಹಿಕ ಮತ್ತು ಮಾನಸಿಕ ದೌರ್ಜನ್ಯದ ಸವಾಲುಗಳು

4.ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯಾತ್ಯಾಸಗಳನ್ನು ತಿಳಿಸಿ.

| ಸಂಘಟಿತ ಕೆಲಸಗಾರರು | ಅಸಂಘಟಿತ ಕೆಲಸಗಾರರು |
|---|---|
| 1.ಸರ್ಕಾರದಲ್ಲಿ ನೋಂದಣಿಯಾಗಿ ಕಾನೂನಿನ ಚೌಕಟ್ಟಿಗೆ ಒಳಪಟ್ಟಿರುತ್ತಾರೆ | 1.ಇವರು ಯಾವುದೇ ಕಾನೂನು ಚೌಟಟ್ಟಿಗೆ ಒಳಪಟ್ಟಿರುವುದಿಲ್ಲ. |
| 2.ಇವರಿಗೆ ನಿಗದಿತ ಕೆಲಸ,ಉದ್ಯೋಗದ ಭರವಸೆ, ನಿಗದಿತ ವೇತನ ಸೌಲಭ್ಯವಿದೆ. | 2.ಇವರಿಗೆ ಯಾವುದೇ ನಿಗದಿತ ಕೆಲಸ, ಉದ್ಯೋಗದ ಭದ್ರತೆ, ನಿಗದಿತ ವೇತನವಿರುವುದಿಲ್ಲ. |
| 3.ಶಾಲೆಗಳು, ಆಸ್ಪತ್ರೆಗಳು, ಕೈಗಾರಿಕೆಗಳು ಸರ್ಕಾರದ ಆಡಳಿತ ಸೇವೆಗಳು, ವಾಣಿಜ್ಯ ಬ್ಯಾಂಕುಗಳು, ಜೀವವಿಮಾ ಕಂಪನಿಗಳು ಮತ್ತು ಸೈನ್ಯ ಈ ವಲಯದಲ್ಲಿ ಬರುತ್ತವೆ. | 3.ಮೋಟಾರು ವಾಹನ ರಿಪೇರಿ, ತರಕಾರಿ ಮಾರುವವರು,ಸೈಕಲ್ ರಿಪೇರಿ ಕಟ್ಟಡ ಕಾರ್ಮಿಕರು,ಕೃಷಿ ಕಾರ್ಮಿಕರು ಈ ವಲಯದಲ್ಲಿ ಕಂಡು ಬರುತ್ತಾರೆ. |
| 4.ಇವರಿಗೆ ವಿಶೇಷ ಭತ್ಯೆಗಳು ಮತ್ತು ವೈದ್ಯಕೀಯ ಸೌಲಭ್ಯಗಳಿರುತ್ತವೆ. | 4.ಇವರಿಗೆ ಈ ರೀತಿಯ ಯಾವುದೇ ಸೌಲಭ್ಯಗಳಿರುವುದಿಲ್ಲ. |

5.ಅಸಂಘಟಿತ ಕೆಲಸ/ದುಡಿಮೆಗಾರರು ಎದುರಿಸುತ್ತಿರುವ ಸಾಮಾಜಿಕ ಭದ್ರತೆಯ ಸವಾಲುಗಳನ್ನು ವಿವರಿಸಿ.

1)ವಸತಿ ಸಮಸ್ಯೆ2)ಆರೋಗ್ಯ ಸಮಸ್ಯೆ 3)ಆಹಾರ ಸಮಸ್ಯೆ4)ಕುಡಿಯುವ ನೀರಿನ ಸಮಸ್ಯೆ5)ದುಡಿಯುವ ಸಮಾನವಕಾಶದ ಸಮಸ್ಯೆ 6)ಸಮಾನತೆಯ ಸಮಸ್ಯೆ

## ಅಧ್ಯಾಯ-3
## ಸಾಮಾಜಿಕ ಚಳವಳಿಗಳು

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

1.ಸಾಮಾಜಿಕ ಚಳವಳಿ ಎಂದರೇನು?

-ಸಾಮಾಜಿಕ ಚಳವಳಿ ಎಂದರೆ ಮಾನವ ಸಮಾಜದ ಚಲನೆ ಬದಲಾವಣೆ ಮತ್ತು ರೂಪಾಂತರಗಳಿಗೆ ಸಂಬಂಧಿಸಿ ನಡೆಯುವ ಒಂದು ವ್ಯವಸ್ಥಿತ ಸ್ವಾಭಾವಿಕ ಪ್ರತಿರೋಧದ ಸಾಮಾಜಿಕ ಪ್ರಕ್ರಿಯೆ.

2.ಸಮೂಹ ವರ್ತನೆ ಎಂದರೇನು?

- ಜನರು ಆಕಸ್ಮಿಕವಾದ ಕಾರಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ತಾತ್ಕಾಲಿಕ ವಾಗಿ ನಡೆಸುವ ಆಲೋಚನೆ,ಭಾವನೆ ಹಾಗೂ ವರ್ತನೆಗಳನ್ನು ಸಮೂಹ ವರ್ತನೆ ಎನ್ನುವರು.

3.ಜನಮಂದೆ ಎಂದರೇನು?

-ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ.

4.ಜನಮಂದೆಗೆ ಉದಾಹರಣೆ ಕೊಡಿ.

-ಚಲನಚಿತ್ರ ಮಂದಿರದ ಹತ್ತಿರ ಟಿಕೆಟ್ ಪಡೆಯಲು ಮುತ್ತಿಗೆ ಹಾಕಿದಂತೆ ಸೇರಿರುವ ಜನಸ್ತೋಮ.- ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನರ ಗುಂಪು.

5.ದೊಂಬಿ/ಗಲಭೆ ಎಂದರೇನು?

-ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯವರ್ತನೆಯನ್ನು ದೊಂಬಿ/ಗಲಭೆ ಎನ್ನುವರು.

6.ದೊಂಬಿ/ಗಲಭೆಗಳಿಗೆ ಉದಾಹರಣೆ ಕೊಡಿ.

-ಕೋಮುಗಲಭೆ,ಜನಾಂಗೀಯ ಕಲಹ,ಜಾತಿಗಲಭೆ, ರಾಜಕೀಯ ಗುಂಪುಗಳ ನಡುವಿನ ಘರ್ಷಣೆ.

7.ಪರಿಸರ ಚಳುವಳಿ ಎಂದರೇನು?

-ಪರಿಸರದಲ್ಲಿರುವ ಜೀವಜಗತ್ತಿನ ಸಂರಕ್ಷಣೆಯನ್ನು ವೈಜ್ಞಾನಿಕವಾಗಿ ಪ್ರತಿಪಾದಿಸುವ ಚಳವಳಿಯನ್ನು ಪರಿಸರ ಚಳವಳಿ ಎನ್ನುವರು.

8.ಚಿಪ್ಕೋ ಚಳುವಳಿ ನಡೆದದ್ದು ಎಲ್ಲಿ?

-ಉತ್ತರ ಪ್ರದೇಶದ ತೆಹ್ರಿ-ಘರ್ವಾಲ್ ಜಿಲ್ಲೆಯ ರೆನ್ನಿ ಎಂಬಲ್ಲಿ.(1974 ರಲ್ಲಿ)

9.ಕರ್ನಾಟಕದ ಅಪ್ಪಿಕೋ ಚಳುವಳಿಯ ಉದ್ದೇಶವೇನು?

-ಮರಗಳ ಕಳ್ಳಸಾಗಾಣಿಕೆ ತಪ್ಪಿಸುವುದು,ಗಿಡಮರಗಳನ್ನು ಬೆಳೆಸುವುದು, ಪರಿಸರ ಮಹತ್ವದ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸುವುದು.

10.ನರ್ಮದಾ ಬಚಾವೋ ಆಂದೋಲನದ ನೇತೃತ್ವವನ್ನು ವಹಿಸಿದವರು ಯಾರು? -ಮೇಧಾ ಪಾಟ್ಕರ್

11.ಮೌನಕಣಿವೆ ಆಂದೋಲನವನ್ನು ಯಾರು ನಡೆಸಿದರು?

-ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು ಮತ್ತು ವನ್ಯಮೃಗ ಆಸಕ್ತರು ಅಣೆಕಟ್ಟಿನ ನಿರ್ಮಾಣದ ವಿರುದ್ಧ ಚಳವಳಿ ನಡೆಸಿದರು.

12.ಕೈಗಾ ಅಣು ಸ್ಥಾವರ ಸ್ಥಾಪನೆಗೆ ವಿರೋಧ ವ್ಯಕ್ತವಾಗಲು ಕಾರಣವೇನು?

-ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆಯಿಂದ ಅರಣ್ಯನಾಶ, ಅಣುವಿಕಿರಣ ದಿಂದ ಪರಿಸರ ಮಾಲಿನ್ಯ ಮುಂತಾದ ದುಷ್ಪರಿಣಾಮಗಳಿಂದ ಜೀವ ಪ್ರಭೇದಗಳ ಮೇಲೆ ಹಾನಿಯಾಗುತ್ತದೆ. ಎಂದು ಕೈಗಾ ಅಣು ಸ್ಥಾವರ ಸ್ಥಾಪನೆಗೆ ವಿರೋಧ ವ್ಯಕ್ತವಾಯಿತು.

13.ಕೈಗಾದಲ್ಲಿ ಅಣು ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸುವುದರ ವಿರೋಧಿ ಚಳುವಳಿಯ ನಾಯಕತ್ವವನ್ನು ವಹಿಸಿದ್ದವರು ಯಾರು?

-ಡಾ.ಶಿವರಾಮ ಕಾರಂತರು

14.ಕುಸುಮಾ ಸೊರಬ ರವರು ಈ ಚಳುವಳಿಯಲ್ಲಿ ತಮ್ಮ ಜೀವವನ್ನು

ಕಳೆದು ಕೊಂಡರು – ಮದ್ಯಪಾನ ನಿಷೇಧ ಚಳವಳಿ

15.ಕರ್ನಾಟಕ ರಾಜ್ಯ ರೈತ ಸಂಘ ಸ್ಥಾಪನೆ ಮಾಡಿದವರು ಯಾರು?

– ಪ್ರೊ.ಎಂ.ಡಿ.ನಂಜುಂಡ ಸ್ವಾಮಿ

16.ಮಹಿಳಾ ಚಳುವಳಿ ಎಂದರೇನು?

– ಮಹಿಳೆಯರ ಮೇಲೆ ಪುರುಷ ಪ್ರಾಧಾನ್ಯ ಸಂಸ್ಕೃತಿ ನಡೆಸಿದ ದರ್ಪ, ಶೋಷಣೆ ದೌರ್ಜನ್ಯಗಳ ವಿರುದ್ಧ ಮಹಿಳೆಯರು ನಡೆಸಿದ ಪ್ರತಿಭಟನೆಯೇ ಮಹಿಳಾ ಚಳುವಳಿ.

17.ರೈತ ಚಳುವಳಿ ನಡೆಯಲು ಕಾರಣವೇನು?

–ಕೃಷಿಕರನ್ನು ಆವರಿಸಿರುವ ಆರ್ಥಿಕ ಬಿಕ್ಕಟ್ಟುಗಳನ್ನು ವಿರೋಧಿಸಿ ನಡೆದ ಚಳುವಳಿ

18.ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿ. ಇದು ಹಿಂದೂ ಸಮಾಜದ ಶರೀರವನ್ನು ಕುಷ್ಠ ರೋಗದ ಹುಣ್ಣಿನಂತೆ ಪೀಡಿಸುತ್ತದೆ.ಎಂದವರು

– ಮಹಾತ್ಮ ಗಾಂಧೀಜಿ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಪರಿಸರ ಸಂರಕ್ಷಣೆಗಾಗಿ ನಡೆದ ಚಳವಳಿಗಳನ್ನು ತಿಳಿಸಿ. ಅಥವಾ ಪರಿಸರ ಸಂರಕ್ಷಣೆಗಾಗಿ ನಡೆದ ಸಾಮೂಹಿಕ ಪ್ರತಿಭಟನೆಗಳನ್ನು ಪಟ್ಟಿಮಾಡಿ.

- ಚಿಪ್ಕೋ ಚಳವಳಿ
- ಅಪ್ಪಿಕೋ ಚಳವಳಿ
- ನರ್ಮದಾ ಬಚಾವೋ ಆಂದೋಲನ
- ಮೌನ ಕಣಿವೆ ಆಂದೋಲನ
- ಕರ್ನಾಟಕ ಕರಾವಳಿ ತೀರದ ಪರಿಸರ ಚಳವಳಿ
- ಕೈಗಾ ಅಣುಸ್ಥಾವರ ವಿರೋಧಿ ಚಳವಳಿ

2.ಜನಮಂದೆಯ ಸ್ವರೂಪವನ್ನು ತಿಳಿಸಿ.

- ಜನಮಂದೆಯು ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತ ವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯಾಗಿದೆ.
- ಉದಾಹರಣೆಗೆ ಚಲನಚಿತ್ರ ಮಂದಿರದ ಹತ್ತಿರ ಟಿಕೆಟ್ ಪಡೆಯಲು ಮುತ್ತಿಗೆ ಹಾಕಿದಂತೆ ಸೇರಿರುವ ಜನಸ್ತೋಮ, ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನರ ಗುಂಪು.
- ಜನಮಂದೆಯಲ್ಲಿರುವ ಜನರ ಅನಿಯಂತ್ರಿತ ನಡವಳಿಕೆಯು ಎಷ್ಟೋ ಬಾರಿ ಸಮಾಜದ ಲೋಪದೋಷಗಳನ್ನು ಸೂಚಿಸುವುದು.
- ಇದು ಕೆಲವೊಮ್ಮೆ ಸಾಮಾಜಿಕ ಸಂಸ್ಥೆಗಳ ಕಾರ್ಯವಿಧಾನದ ಬಗೆಗಿರುವ ಜನರ ಅತೃಪ್ತಿಯನ್ನು ಪ್ರಕಟಿಸುತ್ತದೆ.
- ಸರ್ಕಾರದ ಯೋಜನೆಗಳು, ಧೋರಣೆಗಳು ಮತ್ತು ನಿರ್ದಿಷ್ಟ ಕಾರ್ಯಕ್ರಮಗಳ ಬಗೆಗಿನ ಜನರ ಅಸಮಾಧಾನವನ್ನು ಹೊರಹಾಕುತ್ತದೆ.

3.ದೊಂಬಿಯು ಒಂದು ಸಮಾಜ ಘಾತುಕ ಚಟುವಟಿಕೆ.ಏಕೆ? ಅಥವಾ ದೊಂಬಿಯು ಕಾನೂನು ಮತ್ತು ಸುವ್ಯವಸ್ಥೆಗೆ ಗಂಭೀರ ಸವಾಲು ಹೇಗೆ?

- ದೊಂಬಿಯು ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಹಾಳು ಮಾಡುತ್ತದೆ.
- ಇದು ಗೊಂದಲವನ್ನು ಸೃಷ್ಟಿಸುತ್ತದೆ.
- ಇದು ಅಪಪ್ರಚಾರಗಳನ್ನು ನಡೆಸುತ್ತದೆ.
- ಅಪಾರವಾದ ಜೀವಹಾನಿಯುಂಟು ಮಾಡುತ್ತದೆ.
- ಕಾನೂನು ಸುವ್ಯವಸ್ಥೆಯನ್ನು ಹಾಳು ಮಾಡುತ್ತದೆ.
- ಇದು ಕೋಮುಗಲಭೆ, ಜಾತಿಗಲಭೆ,ಜನಾಂಗೀಯ ಕಲಹಗಳಿಗೆ ದಾರಿಮಾಡಿಕೊಡುತ್ತದೆ.

4.ಪರಿಸರ ಚಳವಳಿಯ ಅರ್ಥ ಮತ್ತು ಸ್ವರೂಪವನ್ನು ತಿಳಿಸಿ.

- ಪರಿಸರ ಚಳವಳಿ ಎಂದರೆ ಪರಿಸರದಲ್ಲಿರುವ ಜೀವ ಜಗತ್ತಿನ ಸಂರಕ್ಷಣೆ ಯನ್ನು ವೈಜ್ಞಾನಿಕವಾಗಿ ಪ್ರತಿಪಾದಿಸುವ ಚಳವಳಿ.
- ಅಂದರೆ ನಮ್ಮ ಸುತ್ತಮುತ್ತಲಿನ ಭೂಮಿ,ಗಾಳಿ,ನೀರು ಸೇರಿದಂತೆ ಇಡೀ ಜೀವಮಂಡಲವನ್ನು ನಾಶ ಮಾಡುತ್ತಿರುವುದು ಮತ್ತು ಕಲುಶಿತ ಮಾಡುತ್ತಿರುವುದನ್ನು ವೈಜ್ಞಾನಿಕವಾಗಿ ಪ್ರತಿಭಟಿಸುವ ಚಳವಳಿ
- ಪರಿಸರ ಚಳವಳಿಯು ದಿಢೀರನೆ ಕಾಣಿಸಿಕೊಂಡ ಚಳವಳಿಯಲ್ಲ.
- ಇದು ಹಲವಾರು ವರ್ಷಗಳು ಪರಿಸರ ಮತ್ತು ಪರಿಸರ ವಾಸಿಗಳ ಮೇಲೆ ನಡೆಸಿದ ದೌರ್ಜನ್ಯಗಳಿಗೆ ಹುಟ್ಟಿಕೊಂಡ ಪ್ರತಿರೋಧವಾಗಿದೆ.

5.ಚಿಪ್ಕೋ ಚಳವಳಿಯನ್ನು ಕುರಿತು ಬರೆಯಿರಿ.

- ಉತ್ತರ ಪ್ರದೇಶದ ತೆಹ್ರಿ–ಘರ್ವಾಲ್ ಜಿಲ್ಲೆಯ ರೆನ್ನಿ ಗ್ರಾಮದಲ್ಲಿ 2500 ಮರಗಳನ್ನು ಸರ್ಕಾರವು ಕಡಿಯಲು ಅನುಮತಿಯನ್ನು ನೀಡಿತ್ತು.
- ಇದರಿಂದ ಅರಣ್ಯ ನಾಶವಾಗುತ್ತದೆ ಮತ್ತು ಪರಿಸರ ಹಾಳಗುತ್ತದೆ ಎಂದು ತಿಳಿದು ಅಲ್ಲಿನ ಮಹಿಳೆಯರೇ ಮುಂದಾಗಿ ಯಾವ ಆಮಿಷ ಬೆದರಿಕೆಗಳಿಗೆ ಮಣಿಯದೆ ಮರಗಳನ್ನು ತಬ್ಬಿಕೊಂಡು ಚಿಪ್ಕೋ ಚಳವಳಿಯನ್ನು ಪ್ರಾರಂಭಿಸಿದರು.
- 1974 ರಲ್ಲಿ ನಡೆದ ಈ ಚಳವಳಿಯು ಒಬ್ಬ ಮಹಿಳೆಯ ಸಮಯ ಸ್ಫೂರ್ತಿಯಾದರೂ ಅದರ ಪರಿಣಾಮ ದೂರಗಾಮಿಯಾದದ್ದು ಈ ಚಳವಳಿಯ ಪರಿಣಾಮವಾಗಿ ಮರಗಳನ್ನು ಕಡಿಯಲು ಸರ್ಕಾರ ನೀಡಿದ ಅನುಮತಿ ರದ್ದಾಯಿತು.

6.ಕರ್ನಾಟಕದಲ್ಲಿ ನಡೆದ ಅಪ್ಪಿಕೋ ಚಳವಳಿಯನ್ನು ವಿವರಿಸಿ.

- ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮದ ರೈತರು 1983 ರಲ್ಲಿ ಅಪ್ಪಿಕೋ ಚಳವಳಿಯನ್ನು ನಡೆಸಿದರು.
- ಕಲಸೆ ಎಂದು ಕರೆಯುವ ಅರಣ್ಯದಲ್ಲಿ ಗುತ್ತಿಗೆದಾರರು ಮರ

ಕಡಿಯಲು ಬಂದಾಗ ಅದನ್ನು ತಡೆಯಲು ಸ್ಥಳೀಯ ಜನರು ಮರಗಳನ್ನು ಅಪ್ಪಿಕೊಳ್ಳುವುದರ ಮೂಲಕ ಪ್ರತಿಭಟಿಸಿದರು.

- ಮರಗಳ ಕಳ್ಳ ಸಾಗಾಣಿಕೆ ತಪ್ಪಿಸುವುದು, ಗಿಡಮರಗಳನ್ನು ಬೆಳೆಸುವುದು ಹಾಗೂ ಪರಿಸರ ಮಹತ್ವದ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸುವುದು ಅಲ್ಲಿನ ಸ್ಥಳೀಯ ರೈತರ ಉದ್ದೇಶವಾಗಿತ್ತು.

7.ನರ್ಮದಾ ಬಚಾವೋ ಆಂದೋಲನವನ್ನು ವಿವರಿಸಿ.

- ಗುಜರಾತ್ ರಾಜ್ಯದ ಸರ್ದಾರ್ ಸರೋವರ ಯೋಜನೆಯಡಿಯಲ್ಲಿ ನರ್ಮದಾ ನದಿಗೆ ಕಟ್ಟಲಾದ ಅಣೆಕಟ್ಟು ನಿರ್ಮಾಣ ಅಲ್ಲಿನ ಸ್ಥಳೀಯ ಜನರನ್ನು ಮತ್ತು ಬುಡಕಟ್ಟು ಜನರನ್ನು ನಿರ್ಗತಿಕರನ್ನಾಗಿ ಮಾಡಿತ್ತು.
- ಅರಣ್ಯ ನಾಶ,ಪರಿಸರ ನಾಶ,ಜೀವ ಸಂಕುಲಗಳಿಗೆ ತೊಂದರೆ ಯಾಗುತ್ತದೆ ಎನ್ನುವುದನ್ನು ವೈಜ್ಞಾನಿಕವಾಗಿ ತಿಳಿದು ಅವುಗಳನ್ನು ಸಂರಕ್ಷಣೆ ಮಾಡಬೇಕು ಎನ್ನುವ ಆಶಯದಿಂದ ಪರಿಸರ ಪ್ರೇಮಿ ಮೇಧಾ ಪಾಟ್ಕರ್ ಅವರ ನೇತೃತ್ವದಲ್ಲಿ ಅಣೆಕಟ್ಟು ನಿರ್ಮಾಣದ ವಿರುದ್ಧ ಬಹು ದೀರ್ಘಕಾಲ ಚಳವಳಿಯನ್ನು ನಡೆಸಲಾಯಿತು. ಇದನ್ನು ನರ್ಮದಾ ಬಚಾವೋ ಆಂದೋಲನ ಎನ್ನುವರು.

8.ಕೇರಳದಲ್ಲಿ ನಡೆದ ಮೌನ ಕಣಿವೆ ಆಂದೋಲನದ ಬಗ್ಗೆ ತಿಳಿಸಿ.

- ಕೇರಳದ ಪಾಲ್ಘಾಟ್ ತಾಲೂಕಿನ ಮೌನ ಕಣಿವೆಯಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಅಣೆಕಟ್ಟಿನ ನಿರ್ಮಾಣದಿಂದ ಪರಿಸರ ನಾಶದ ಜೊತೆಗೆ ಅನೇಕ ಜೀವ ಪ್ರಭೇದಗಳು ಜೀವಿಸಲು ತೊಂದರೆ ಯಾಗುತ್ತದೆ.
- ಆದ್ದರಿಂದ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು ಮತ್ತು ವನ್ಯಮೃಗ ಆಸಕ್ತರು ಅಣೆಕಟ್ಟೆಯ ನಿರ್ಮಾಣದ ವಿರುದ್ಧ ಚಳವಳಿ ನಡೆಸಿದರು.
- ಈ ಚಳವಳಿಯು ಅನೇಕ ಜೀವಸಂಕುಲಗಳನ್ನು ಸಂರಕ್ಷಿಸುವಲ್ಲಿ ಯಶಸ್ವಿಯಾಯಿತು.

9.ಅಸ್ಪೃಶ್ಯತಾ ಆಚರಣೆ ವಿರೋಧಿ ಚಳವಳಿಯಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ರವರು ಪ್ರಮುಖ ಪಾತ್ರ ವಹಿಸಿದರು ದೃಢೀಕರಿಸಿ

- ಡಾ.ಬಿ.ಆರ್.ಅಂಬೇಡ್ಕರ್ ರವರ ಚಿಂತನೆ ಮತ್ತು ಹೋರಾಟ ದೊಂದಿಗೆ ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಯು ತೀವ್ರ ಸ್ವರೂಪವನ್ನು ಪಡೆಯುತ್ತದೆ.
- 1930 ರ ದುಂಡು ಮೇಜಿನ ಪರಿಷತ್‌ನಲ್ಲಿ ಅಂಬೇಡ್ಕರ್ ರವರು ನಾವು ಆಳುವ ವರ್ಗವಾಗಬೇಕೆಂದು ಕರೆ ಕೊಟ್ಟರು.
- ಇವರು ನಿರಂತರವಾಗಿ ದಲಿತರ ಎಲ್ಲಾ ರೀತಿಯ ಹಕ್ಕುಗಳಿಗಾಗಿ ಹೋರಾಡುತ್ತಲೇ ಬಂದರು.
- ಮೂಕನಾಯಕ ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಬಹುದೊಡ್ಡ ಚಳವಳಿಯನ್ನು ರೂಪಿಸಲು ಕಾರಣೀಭೂತರಾದರು.

## ಅಧ್ಯಾಯ-4

## ಸಾಮಾಜಿಕ ಸಮಸ್ಯೆಗಳು

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

1.ಬಾಲಕಾರ್ಮಿಕರು ಎಂದರೆ ಯಾರು?

-14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ಸಂಪಾದನೆಯ ಉದ್ದೇಶದಿಂದ ದುಡಿಮೆ ಮಾಡುತ್ತಿದ್ದರೆ ಅಂತಹವರನ್ನು ಬಾಲ ಕಾರ್ಮಿಕರು ಎಂದು ಕರೆಯುವರು.

2.ಹೆಣ್ಣು ಭ್ರೂಣಹತ್ಯೆ ಎಂದರೇನು?

-ಸ್ವಾಭಾವಿಕವಾಗಿ ತಾಯಿಯ ಗರ್ಭದಲ್ಲಿ ಬೆಳೆದ ಹೆಣ್ಣು ಭ್ರೂಣವನ್ನು ಬೆಳೆಯದಂತೆ ತಡೆಯುವುದು ಅಥವಾ ಕಾನೂನನ್ನು ಕಡೆಗಣಿಸಿ ಹತ್ಯೆ ಮಾಡುವುದನ್ನು ಹೆಣ್ಣು ಭ್ರೂಣಹತ್ಯೆ ಎನ್ನುವರು.

3.ಹೆಣ್ಣುಭ್ರೂಣಹತ್ಯೆ ನಿಷೇಧ ಕಾಯ್ದೆ ಜಾರಿಗೆ ಬಂದ ವರ್ಷ- 1994

4.ಬಾಲ್ಯವಿವಾಹ ನಿಷೇಧ ಕಾಯಿದೆ ಜಾರಿಗೆ ಬಂದದ್ದು - 2006

5.ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ ಜಾರಿಗೆ ಬಂದಿದ್ದು - ಜೂನ್ 19 2012

6.ಮಕ್ಕಳ ಸಾಗಾಣಿಕೆ ಎಂದರೇನು?

-18 ವರ್ಷದೊಳಗಿನ ಯಾವುದೇ ವ್ಯಕ್ತಿಯ ನೇಮಕಾತಿ,ಸಾಗಾಣಿಕೆ, ವರ್ಗಾವಣೆ, ಆಶ್ರಯ,ರವಾನಿಸುವುದು,ಸ್ವಾಧೀನ ಪಡಿಸುವುದು ಅಥವಾ ಶೋಷಣೆಯ ಉದ್ದೇಶಕ್ಕಾಗಿ ನಡೆಯುವ ಕೃತ್ಯವನ್ನು ಮಕ್ಕಳ ಸಾಗಾಣಿಕೆ ಎನ್ನುವರು.

7.ಬಾಲ್ಯವಿವಾಹ ಎಂದರೇನು?

-18 ವರ್ಷದೊಳಗಿನ ಬಾಲಕಿಗೆ ಅಥವಾ 21 ವರ್ಷದೊಳಗಿನ ಬಾಲಕ/ ಹುಡುಗನಿಗೆ ಮದುವೆ ಮಾಡಿದರೆ ಅದನ್ನು ಬಾಲ್ಯ ವಿವಾಹ ಎನ್ನುವರು.

8.ಪೋಕ್ಸೋ ಕಾಯಿದೆ-2012 ನ್ನು (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯಿದೆ)ಜಾರಿಗೆ ತಂದ ಉದ್ದೇಶವೇನು?

-ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಡೆಯುವುದು.

9.ಸಂವಿಧಾನದ ಯಾವ ವಿಧಿಯು ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ ಎಂದು ಘೋಷಿಸಿದೆ- 24 ನೇ ವಿಧಿ.

10.ಒಬ್ಬ ವ್ಯಕ್ತಿಯು 14 ವರ್ಷದೊಳಗಿನ ಮಗುವನ್ನು ಕೆಲಸಕ್ಕಿಟ್ಟು ಕೊಂಡಿದ್ದಾನೆ ಹಾಗಾದರೆ ಅವನಿಗೆ ನೀಡುವ ದಂಡವೇನು?

-2 ವರ್ಷದ ತನಕ ಜೈಲು ಶಿಕ್ಷೆ ಮತ್ತು 50,000/- ತನಕ ದಂಡ ವಿಧಿಸಲಾಗುತ್ತದೆ.

11.ಒಬ್ಬ ಹುಡುಗನು ಶಾಲೆಗೆ ರಜೆ ಹಾಕಿ ಮನೆಯಲ್ಲಿ ತನ್ನ ತಂದೆಗೆ ತೋಟಗಾರಿಕೆಗೆ ಸಹಾಯ ಮಾಡುತ್ತಿದ್ದನು ಇದರ ಪರಿಣಾಮವೇನು?

– ಆ ಹುಡುಗನ ತಂದೆಗೆ ರೂ.10,000 ಜುಲಮಾನೆ (ದಂಡ)ವಿಧಿಸಿ ಶಿಕ್ಷಿಸಲಾಗುವುದು.

12.ಕಾಣದ ಹಸಿವು ಎಂದರೇನು?

– ಪೋಷಕಾಂಶಗಳ ಅಭಾವವನ್ನು(ಕೊರತೆಯನ್ನು) ಕಾಣದ ಹಸಿವು ಎನ್ನುವರು.

13.ಲಿಂಗ ತಾರತಮ್ಯ ಎಂದರೇನು?

–ಮಹಿಳೆ ಮತ್ತು ಪುರುಷರ ನಡುವಿನ ತಾರತಮ್ಯವನ್ನು ಲಿಂಗ ತಾರತಮ್ಯ ಎನ್ನುವರು.

14.ದೇವದಾಸಿ ಪದ್ಧತಿಯು ಒಂದು ಅಮಾನವೀಯ ಅಭ್ಯಾಸ.ಏಕೆ?

– ದೇವದಾಸಿ ಪದ್ಧತಿಯು ಮಹಿಳೆಯರ ಶೋಷಣೆ,ಲಿಂಗ ತಾರತಮ್ಯ, ಬಾಲ್ಯ ವಿವಾಹ ಮತ್ತು ಲೈಂಗಿಕ ಜೀತಕ್ಕೆ ದಾರಿ ಮಾಡಿಕೊಡುತ್ತದೆ.ಆದುದರಿಂದ ದೇವದಾಸಿ ಪದ್ಧತಿಯು ಒಂದು ಅಮಾನವೀಯ ಅಭ್ಯಾಸ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಬಾಲಕಾರ್ಮಿಕ ಸಮಸ್ಯೆಗೆ ಅಥವಾ ಮಕ್ಕಳ ದುಡಿಮೆಗೆ ಕಾರಣಗಳಾವುವು?

– ಮಕ್ಕಳ ಹಕ್ಕುಗಳನ್ನು ಗೌರವಿಸಲು ಮತ್ತು ಅವುಗಳ ರಕ್ಷಣೆ ಮಾಡಲು ಬೇಕಾದ ಸಾಮಾಜಿಕ ವಾತಾವರಣ ಇಲ್ಲದಿರುವುದು. –ಬಾಲ್ಯ ವಿವಾಹ , ಮಕ್ಕಳ ಸಾಗಾಣಿಕೆ ಮತ್ತು ಮಾರಾಟ –ಕಡಿಮೆ ಕೂಲಿಗೆ, ಹೆಚ್ಚು ದುಡಿಮೆಯನ್ನು ಬಯಸುವ ಮಾಲೀಕ ವರ್ಗದ ಸ್ವಾರ್ಥತೆ –ಅಸಂಘಟಿತ ದುಡಿಮೆಯ ವಲಯ –ಬರದಿಂದ ಉಂಟಾದ ಕೃಷಿ ಸಮಾಜದ ಬಿಕ್ಕಟ್ಟುಗಳು –ವಲಸೆ ಮತ್ತು ಪೋಷಕರ ದುಶ್ಚಟಗಳು –ಉಚಿತ ಮತ್ತು ಕಡ್ಡಾಯ ಶಿಕ್ಷಣದಹಕ್ಕುಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗದಿರುವುದು.–ಕುಟುಂಬದ ಆರ್ಥಿಕ ಸ್ಥಿತಿ – ಕನಿಷ್ಠ ಕೂಲಿ –ಭೂ ಸುಧಾರಣಾ ಕಾಯ್ದೆಯ ಅನುಷ್ಠಾನದ ಕೊರತೆ

( ಯಾವುದಾದರು 4 ಅಥವಾ 6 ಅಂಶಗಳು)

2.ಮಕ್ಕಳ ದುಡಿಮೆಯಿಂದ ಮಕ್ಕಳ ವಿಕಾಸವು ಕುಂಠಿತವಾಗುತ್ತದೆ. ಈ ಹೇಳಿಕೆಯನ್ನು ಸಮರ್ಥಿಸಿ. ಅಥವಾ ಮಕ್ಕಳ ದುಡಿಮೆಯಿಂದಾಗುವ ದುಷ್ಪರಿಣಾಮಗಳೇನು?

- ಮಕ್ಕಳ ದುಡಿಮೆಯಿಂದ ಮಕ್ಕಳ ದೈಹಿಕ,ಮಾನಸಿಕ,ಸಾಮಾಜಿಕ ಆರೋಗ್ಯ ಕುಂಠಿತವಾಗುತ್ತದೆ.
- ಮಕ್ಕಳು ಶಿಕ್ಷಣದಿಂದ ವಂಚಿತರಾಗಿ ಅನಕ್ಷರಸ್ಥರಾಗುತ್ತಾರೆ.ಇದು ಅವರ ಹಕ್ಕುಗಳನ್ನು, ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತದೆ
- ಮಕ್ಕಳ ದುಡಿಮೆಯು ಕುಟುಂಬಗಳ ಸಾಮಾಜಿಕ ಮತ್ತು ಆರ್ಥಿಕ ಚಲನೆಯನ್ನು ಕುಸಿಯುವಂತೆ ಮಾಡುತ್ತದೆ.
- ಇದರಿಂದ ಮಕ್ಕಳು ದೌರ್ಜನ್ಯಕ್ಕೆ,ಶೋಷಣೆಗೆ ಒಳಗಾಗುತ್ತಾರೆ.
- ಬಾಲಕಾರ್ಮಿಕರಾಗಿ ದುಡಿಯುವ ಮಕ್ಕಳು ಅನೇಕ ಕಾಯಿಲೆಗಳಿಗೆ ತುತ್ತಾಗಿ ಅಂಗವಿಕಲರಾಗುವ ಸಾಧ್ಯತೆಗಳು ಹೆಚ್ಚುತ್ತವೆ.

3.ಬಾಲಕಾರ್ಮಿಕ ಸಮಸ್ಯೆಯ ನಿರ್ಮೂಲನಾ ಕ್ರಮಗಳಾವುವು?

- 18 ವರ್ಷದೊಳಗಿನ ಎಲ್ಲಾ ಮಕ್ಕಳು ಶೇ.100 ರಷ್ಟು ಶಾಲಾ ದಾಖಲಾತಿಯಾಗಿ 18 ವರ್ಷದ ತನಕ ನಿರಂತರ ಶಾಲಾ ಶಿಕ್ಷಣವನ್ನು ಪೂರೈಸುವುದು.
- ಎಲ್ಲಾ ಸಂದರ್ಭಗಳಲ್ಲಿ ಲಿಂಗ ಸಮಾನತೆಯನ್ನು ಕಾಪಾಡುವುದು.
- ಅಸಹಾಯಕ ಕುಟುಂಬಗಳು ಬದುಕಿಗೆ ವಲಸೆ ಹೋಗುವುದನ್ನು ತಡೆಗಟ್ಟುವುದು.
- ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ/ಮಾರಾಟ ತಡೆ ಕುರಿತು ಅರಿವನ್ನು ಹೆಚ್ಚಿಸುವುದು.
- ಮಕ್ಕಳ ರಕ್ಷಣಾತ್ಮಕ ಹಕ್ಕುಗಳನ್ನು ಪಂಚಾಯತಿಗಳು ಜವಾಬ್ದಾರಿಯಿಂದ ನಿರ್ವಹಿಸುವುದು.

4.ಹಸಿವಿನ ಸೂಚಕವನ್ನು ತಿಳಿಯಲು ಸಹಾಯಕವಾಗುವ ಅಂಶಗಳಾವುವು?

- ಕನಿಷ್ಠ ಕ್ಯಾಲೋರಿ ದೊರಕದ ಆಹಾರ ಸೇವಿಸುವವರ ಶೇಕಡವಾರು ಪ್ರಮಾಣ
- ಸರಾಸರಿ ತೂಕಕ್ಕಿಂತ ಕಡಿಮೆ ತೂಕ ಇರುವ 5 ವರ್ಷದವರಗಿನ ಮಕ್ಕಳ ಶೇಕಡವಾರು ಪ್ರಮಾಣ
- 5 ವರ್ಷದವರಗಿನ ಮಕ್ಕಳ ಮರಣದ ಶೇಕಡವಾರು ಪ್ರಮಾಣ

5.ಹೆಣ್ಣು ಭ್ರೂಣಹತ್ಯೆ ಹೆಚ್ಚಾಗಲು ಕಾರಣಗಳೇನು?

– ಮಗಳ ಮದುವೆ ಖರ್ಚು – ವರದಕ್ಷಿಣೆ –ಮಗಳ ಗಂಡನ ಮನೆಯವರ ನಿರಂತರ ಶೋಷಣೆ –ಲೈಂಗಿಕ ಶೋಷಣೆ ಮತ್ತು ದೌರ್ಜನ್ಯಗಳು

6.ಲಿಂಗತಾರತಮ್ಯದ ಪ್ರಕಾರಗಳು ಯಾವುವು?

– ಜನನ ಪ್ರಮಾಣದಲ್ಲಿ ಅಸಮಾನತೆ –ಮೂಲ ಸೌಕರ್ಯದಲ್ಲಿ ಅಸಮಾನತೆ – ಅವಕಾಶಗಳಲ್ಲಿ ಅಸಮಾನತೆ –ಒಡೆತನದಲ್ಲಿ ಅಸಮಾನತೆ – ಕೌಟುಂಬಿಕ ಅಸಮಾನತೆ

7.ಬಾಲ್ಯ ವಿವಾಹಕ್ಕೆ ಕಾರಣಗಳೇನು?

– ಲಿಂಗ ತಾರತಮ್ಯ –ಹೆಣ್ಣು ಮತ್ತು ಗಂಡು ಮಕ್ಕಳ ನಡುವಿನ ಬೇಧಭಾವ – – ಶಿಕ್ಷಣ ಇಲ್ಲದಿರುವಿಕೆ –ಕಾನೂನಿನ ಕನಿಷ್ಠ ಅನುಷ್ಠಾನ ಮತ್ತು ಬಳಕೆಯ ಕೊರತೆ –ಬಾಲ ಕಾರ್ಮಿಕತೆ

–ಮಕ್ಕಳ ಸಾಗಾಣಿಕೆ ಮತ್ತು ಮಾರಾಟ

8.ಬಾಲ್ಯವಿವಾಹದ ದುಷ್ಪರಿಣಾಮಗಳೇನು?

- ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತವಾಗುತ್ತದೆ.

- ಮಕ್ಕಳು ಪ್ರಶ್ನಿಸುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ ಇದರಿಂದ ಮಕ್ಕಳ ಮೇಲೆ ಅತಿಯಾದ ದೌರ್ಜನ್ಯ,ನಿರ್ಲಕ್ಷ್ಯ ಹಿಂಸೆ ಮತ್ತು ಶೋಷಣೆಗೆ ಒಳಗಾಗುತ್ತಾರೆ.
- ಮಕ್ಕಳ ಎಲ್ಲಾ ಹಕ್ಕುಗಳ ಉಲ್ಲಂಘನೆಯಾಗುತ್ತದೆ.
- ಬಾಲ್ಯತನ,ಶಿಕ್ಷಣ,ಮನೋರಂಜನೆಗೆ ಧಕ್ಕೆಯಾಗುತ್ತದೆ.
- ಅಪೌಷ್ಠಿಕತೆ,ರಕ್ತಹೀನತೆ,ಅನಾರೋಗ್ಯ,ಗರ್ಭಪಾತ,ಶಿಶು ಮರಣ, ತಾಯಿಮರಣಕ್ಕೆ ಕಾರಣವಾಗುತ್ತದೆ.

9.ಬಾಲ್ಯವಿವಾಹಕ್ಕೆ ಪರಿಹಾರಗಳೇನು? ಅಥವಾ ಬಾಲ್ಯವಿವಾಹದ ನಿಷೇಧಕ್ಕೆ ಕೈಗೊಳ್ಳಬಹುದಾದ ಕ್ರಮಗಳನ್ನು ತಿಳಿಸಿ

- 18 ವರ್ಷದ ವರೆಗೆ ಯಾವ ಮಕ್ಕಳು ಶಾಲೆ ಬಿಡದಂತೆ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ
- ಶೇ.100 ರಷ್ಟು ದಾಖಲಾತಿ ಮತ್ತು ಹಾಜರಾತಿ ಸಾಧಿಸುವುದು.
- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು
- ಬಾಲಕೀಯರ ಬಲವರ್ಧನೆ ಮತ್ತು ಸಬಲೀಕರಣಕ್ಕೆ ಆಧ್ಯತೆ
- ಎಲ್ಲೇ ಬಾಲ್ಯವಿವಾಹ ನಡೆದರೂ ತಪ್ಪದೇ ದೂರು ನೀಡುವುದು, ಖಂಡಿಸುವುದು.

10.ಮಕ್ಕಳ ಸಾಗಾಣಿಕೆಗೆ ಕಾರಣಗಳೇನು?

– ಬಾಲಕಾರ್ಮಿಕತೆ –ಬಾಲ್ಯವಿವಾಹ –ಶಾಲೆಬಿಡುವುದು –ಬಡತನ –ಜೀತಪದ್ಧತಿ –ಅನಿಯಮಿತ ವಲಸೆ ಮತ್ತು ಸ್ಥಳಾಂತರ –ಲಿಂಗ ಅಸಮಾನತೆ –ಹೆಚ್ಚಾಗುತ್ತಿರುವ ಸಂಪರ್ಕ ತಂತ್ರಜ್ಞಾನ ಹಾಗೂ ಇಂಟರ್‌ನೆಟ್ ಬಳಕೆ –ಕೌಶಲ್ಯಗಳ ಕೊರತೆ –ಹೆಚ್ಚಾಗುತ್ತಿರುವ ಸಾಲದ ಹೊರೆ.

11.ಮಕ್ಕಳ ಸಾಗಾಣಿಕೆಯಿಂದಾಗುವ ದುಷ್ಪರಿಣಾಮಗಳೇನು?

– ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಮಾರಕ –ದೈಹಿಕ ಹಾಗೂ ಲೈಂಗಿಕ ಶೋಷಣೆಗೆ ಬಲಿ –ಮಕ್ಕಳ ಸಾವು ಮತ್ತು ಗಂಭೀರ ರೋಗದ ಅಪಾಯ –ಅನಗತ್ಯ ಗರ್ಭಧಾರಣೆ –ಕೊಲೆ –ಮಾದಕ ವ್ಯಸನಗಳಿಗೆ ಬಲಿ

12.ಮಕ್ಕಳ ಸಾಗಾಣಿಕೆಯ ಪರಿಹಾರ ಕ್ರಮಗಳನ್ನು ತಿಳಿಸಿ

– ಎಲ್ಲಾ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ರಚಿಸಿ ಅನುಷ್ಠಾನ ತರುವುದು.

– ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ಮಕ್ಕಳ ಸುರಕ್ಷಾ ಸಮಿತಿ ರಚಿಸುವುದು.

– ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪ್ರತಿ ವರ್ಷ ಕಡ್ಡಾಯವಾಗಿ ಮಕ್ಕಳ ಗ್ರಾಮ ಸಭೆಗಳನ್ನು ನಡೆಸಿ 18 ವರ್ಷದೊಳಗಿನ ಎಲ್ಲಾ ಮಕ್ಕಳ ಸಮಸ್ಯೆಯ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದು

–ರಾಜ್ಯದ ಎಲ್ಲಾ ಗ್ರಾಮ,ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ ರಚಿಸಿ ಎಲ್ಲಾ ಮಕ್ಕಳ ಸಮಸ್ಯೆಯ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದು.

*****

**ಭೂಗೋಳಶಾಸ್ತ್ರ**

## ಅಧ್ಯಾಯ– 1

## ಭಾರತದ ಸ್ಥಾನ ಮತ್ತು ವಿಸ್ತೀರ್ಣ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

1.ಭಾರತದ ಒಟ್ಟು ವಿಸ್ತೀರ್ಣ ಎಷ್ಟು? – 32,87,263 ಚ.ಕಿ.ಮೀ.

2.ಭಾರತದ ಆಗ್ನೇಯ ಭಾಗದಲ್ಲಿರುವ ದೇಶ ಯಾವುದು? – ಶ್ರೀಲಂಕಾ

3.ಭಾರತದ ಮಧ್ಯೆ ಭಾಗದಲ್ಲಿ ಯಾವ ಅಕ್ಷಾಂಶವು ಹಾಯ್ದು ಹೋಗಿದೆ ?

– ಕರ್ಕಾಟಕ ಸಂಕ್ರಾಂತಿ ವೃತ್ತ / 23 $1/2^{0}$ ಉತ್ತರ ಅಕ್ಷಾಂಶ

4.ಭಾರತದ ಹೊಸ ರಾಜ್ಯ ಯಾವುದು? – ತೆಲಂಗಾಣ

5.ಭಾರತದ ಅತ್ಯಂತ ದಕ್ಷಿಣದ ತುದಿ ಯಾವುದು?

– ನಿಕೋಬರ್ ದ್ವೀಪದಲ್ಲಿರುವ ಇಂದಿರಾ ಪಾಯಿಂಟ್ ಭಾರತದ ಅತ್ಯಂತ ದಕ್ಷಿಣದ ತುದಿಯಾಗಿದೆ.

6.ಭಾರತದ ಅತ್ಯಂತ ಉತ್ತರದ ತುದಿ ಯಾವುದು?

– ಜಮ್ಮು ಮತ್ತು ಕಾಶ್ಮೀರದ ಇಂದಿರಾಕೋಲ್ ಭಾರತದ ಅತ್ಯಂತ ಉತ್ತರದ ತುದಿ.

7.ಭಾರತೀಯ ಆದರ್ಶಕಾಲಮಾನವು ಯಾವ ರೇಖಾಂಶವನ್ನಾಧರಿಸಿದೆ?

– **82 $1/2^{0}$** ಪೂರ್ವ ರೇಖಾಂಶವು ಭಾರತೀಯ ಆದರ್ಶಕಾಲಮಾನ ರೇಖಾಂಶವಾಗಿದೆ.

8.ಪ್ರಪಂಚದ 7 ದೊಡ್ಡ ದೇಶಗಳನ್ನು ಹೆಸರಿಸಿ.

– ರಷ್ಯಾ,ಕೆನಡ,ಚೀನಾ,ಅಮೆರಿಕಾ ಸಂಯುಕ್ತ ಸಂಸ್ಥಾನ,ಬ್ರೆಜಿಲ್,ಆಸ್ಟ್ರೇಲಿಯಾ ಮತ್ತು ಭಾರತ.

9.ಶ್ರೀಲಂಕಾ ಭಾರತದಿಂದ ಹೇಗೆ ಪ್ರತ್ಯೇಕ ಗೊಂಡಿದೆ?

– ಶ್ರೀಲಂಕಾ ಪಾಕ್ ಜಲಸಂಧಿ ಮತ್ತು ಮನ್ನಾರ್ ಖಾರಿಗಳಿಂದ ಭಾರತದಿಂದ ಪ್ರತ್ಯೇಕ ಗೊಂಡಿದೆ.

10.ಭಾರತದಲ್ಲಿ ವಿಸ್ತೀರ್ಣದಲ್ಲಿ ಅತ್ಯಂತ ದೊಡ್ಡ ರಾಜ್ಯ ಯಾವುದು?

– ರಾಜಸ್ತಾನ

11.ಭಾರತದಲ್ಲಿ ವಿಸ್ತೀರ್ಣದಲ್ಲಿ ಅತ್ಯಂತ ಚಿಕ್ಕ ರಾಜ್ಯ ಯಾವುದು? –ಗೋವಾ

12.ಭಾರತದ ವಾಯುವ್ಯದಲ್ಲಿರುವ ನೆರೆಯ ದೇಶಗಳನ್ನು ಹೆಸರಿಸಿ.

– ಪಾಕಿಸ್ತಾನ ಮತ್ತು ಅಪ್ಘಾನಿಸ್ತಾನ

13.ಭಾರತದಲ್ಲಿ ಎಷ್ಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿವೆ?

– 29 ರಾಜ್ಯಗಳು ಮತ್ತು 7 ಕೇಂದ್ರಾಡಳಿತ ಪ್ರದೇಶಗಳಿವೆ.

14.ದೇಶದ ಮಧ್ಯ ಭಾಗದಲ್ಲಿ ಹಾಯ್ದು ಹೋಗುವ ರೇಖಾಂಶಯಾವುದು?

– **82 $1/2^{0}$** ಪೂರ್ವ ರೇಖಾಂಶವು ಭಾರತದ ಮಧ್ಯ ಭಾಗದಲ್ಲಿ ಹಾಯ್ದು ಹೋಗುವ ರೇಖಾಂಶವಾಗಿದೆ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.:**

1.ಭಾರತದ ಅಕ್ಷಾಂಶ ಮತ್ತು ರೇಖಾಂಶೀಯ ವಿಸ್ತರಣೆಯನ್ನು ತಿಳಿಸಿ.

- ಭಾರತದ ಪ್ರಧಾನ ಭೂ ಭಾಗವು **$8^0$ 4'** ದಿಂದ **$37^0$ 6'** ಉತ್ತರ ಅಕ್ಷಾಂಶ ಹಾಗೂ **$68^0$ 7'** ರಿಂದ **$97^0$ 3'**ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ.

2.ಭಾರತದ ಮೇರೆಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

- ಭಾರತವು ಭೂ ಮತ್ತು ಜಲಮೇರೆಗಳೆರಡನ್ನೂ ಹೊಂದಿದೆ.
- ಭೂ ಮೇರೆಯ ಉದ್ದ 15200 ಕಿ.ಮೀ. ಕೆಲವೆಡೆ ಹೊರತು ಪಡಿಸಿ ದೇಶದ ಎಲ್ಲಾ ಭಾಗಗಳಲ್ಲೂ ನೈಸರ್ಗಿಕ ಗಡಿಗಳಿವೆ.
- ಉತ್ತರದಲ್ಲಿರುವ ಹಿಮಾಲಯ ಪರ್ವತಗಳು ಭಾರತ ಮತ್ತು ಚೀನಾಗಳ ನಡುವಣ ನೈಸರ್ಗಿಕ ಗಡಿಯಾಗಿವೆ.
- ಭಾರತದ ಪ್ರಧಾನ ಭೂ ಭಾಗವು 6100 ಕಿ.ಮೀ.ಉದ್ದವಾದ ಸಮುದ್ರ ತೀರವನ್ನು ದೊಂದಿದೆ. ಆದರೆ ಅಂಡಮಾನ್-ನಕೋಬರ್ ಹಾಗೂ ಲಕ್ಷದ್ವೀಪಗಳ ತೀರಗಳನ್ನು ಒಳಗೊಂಡಂತೆ 7516.5 ಕಿ.ಮೀ.ಗಳಾಗಿದೆ.
- ದೇಶದ ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ಪೂರ್ವದಲ್ಲಿ ಬಂಗಾಳಕೊಲ್ಲಿ ಹಾಗೂ ದಕ್ಷಿಣದಲ್ಲಿ ಹಿಂದೂ ಮಹಾಸಾಗರಗಳಿವೆ. ಅವು ದೇಶದ ನೈಸರ್ಗಿಕ ಗಡಿಗಳಾಗಿವೆ.

3.ಭಾರತದ ನೆರೆಯ ರಾಷ್ಟ್ರಗಳು ಯಾವುವು?

- ಭಾರತವು 7 ನೆರೆಯ ದೇಶಗಳನ್ನು ಹೊಂದಿದೆ.
- ವಾಯುವ್ಯದಲ್ಲಿ ಪಾಕಿಸ್ತಾನ ಮತ್ತು ಅಪ್ಘಾನಿಸ್ತಾನ
- ಉತ್ತರದಲ್ಲಿ ನೇಪಾಳ,ಭೂತಾನ್ ಮತ್ತು ಚೀನಾದೇಶ
- ಪೂರ್ವದಲ್ಲಿ ಬಾಂಗ್ಲಾದೇಶ ಮತ್ತು ಮ್ಯೆಯನ್ಮಾರ್
- ಆಗ್ನೇಯಕ್ಕೆ ಶ್ರೀಲಂಕಾ.

## ಅಧ್ಯಾಯ-2
## ಭಾರತದ ಮೇಲ್ಮೈ ಲಕ್ಷಣಗಳು

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

1.ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ. ಏಕೆ?

-ಈ ಮೈದಾನವು ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿರುವುದರಿಂದ

2.ದಕ್ಷಿಣ ಭಾರತದ ಅತ್ಯಂತ ಎತ್ತರವಾದ ಶಿಖರ ಯಾವುದು?

-ಅಣ್ಣಾಮಲೈ ಸರಣಿಯ ಅನೈಮುಡಿ ಶಿಖರ (2665 ಮೀ.)

3.ಹಿಮಾಲಯದ ಪಾದಬೆಟ್ಟಗಳು ಅಥವಾ ಹಿಮಾಲಯದ ಹೊರಗಿನ ಸರಣಿಗಳೆಂದು ಇವುಗಳನ್ನು ಕರೆಯುವರು?--ಶಿವಾಲಿಕ್ ಶ್ರೇಣಿ(ಬೆಟ್ಟಗಳು)

4.ಮಹಾ ಹಿಮಾಲಯವನ್ನು ಹೀಗೆ ಕರೆಯುವರು -ಹಿಮಾದ್ರಿ

5.ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರ ಯಾವುದು? -ಮೌಂಟ್ ಎವರೆಸ್ಟ್

6.ಭಾರತದಲ್ಲಿ ಅತಿ ಎತ್ತರವಾದ ಶಿಖರ ಯಾವುದು?

-ಗಾಡ್ವಿನ್ ಆಸ್ಟಿನ್ ಅಥವಾ ಕೆ2 ($K_2$)

7.ಭಾರತದ ಭೂ ಸ್ವರೂಪದ ವಿಭಾಗಗಳಲ್ಲಿ ಅತಿ ದೊಡ್ಡದು ಮತ್ತು ಪುರಾತನವಾದದ್ದು ಯಾವುದು? -ಪರ್ಯಾಯ ಪ್ರಸ್ಥಭೂಮಿ

8.ಪಶ್ಚಿಮ ಘಟ್ಟಗಳನ್ನು ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಏನೆಂದು ಕರೆಯುವರು?-ಸಹ್ಯಾದ್ರಿ ಸರಣಿ

9.ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಎಲ್ಲಿ ಸಂಧಿಸುತ್ತವೆ?

- ನೀಲಗಿರಿ ಬೆಟ್ಟಗಳು

10.ಮಹಾ ಹಿಮಾಲಯವನ್ನು ಹಿಮಾದ್ರಿ ಎಂದು ಕರೆಯುವರು.ಏಕೆ?

-ಈ ಸರಣಿಯು ವರ್ಷವೆಲ್ಲಾ ಹಿಮಾವೃತವಾಗಿರುವುದರಿಂದ ಹಿಮಾದ್ರಿ ಎನ್ನುವರು.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.:**

1.ಭಾರತದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?

1.ಉತ್ತರದ ಪರ್ವತಗಳು 2.ಉತ್ತರದ ಮೈದಾನಗಳು

3.ಪರ್ಯಾಯ ಪ್ರಸ್ಥಭೂಮಿ 4.ಕರಾವಳಿ ಮೈದಾನ ಮತ್ತು ದ್ವೀಪಗಳು

2.ಉತ್ತರದ ಪರ್ವತಗಳ ಲಕ್ಷಣಗಳನ್ನು ತಿಳಿಸಿ.

- ಉತ್ತರದ ಪರ್ವತಗಳು ಇತ್ತೀಚಿನ ಮಡಿಕೆ ಪರ್ವತಗಳ ಗುಂಪಿಗೆ ಸೇರಿದ ಹಿಮಾಲಯ ಶ್ರೇಣಿಗಳನ್ನು ಒಳಗೊಂಡಿವೆ.
- ಅವು ಭಾರತದ ಉತ್ತರದ ಗಡಿಗೆ ಹೊಂದಿಕೊಂಡಂತೆ ಹಬ್ಬಿವೆ.
- ಪ್ರಪಂಚದಲ್ಲೇ ಅತ್ಯಂತ ಎತ್ತರವಾಗಿದ್ದು ಅತ್ಯಂತ ಎತ್ತರವಾದ ಶಿಖರ,ಆಳವಾದ ಕಣಿವೆ ಮತ್ತು ಕಂದರ,ಹಿಮನದಿ, ಪರ್ವತ ಘಾಟಿಗಳನ್ನೊಳಗೊಂಡಿವೆ.
- ಭಾರತದಲ್ಲಿ ಅವು ಪಶ್ಚಿಮದಲ್ಲಿ ಸಿಂಧೂ ನದಿ ಕಂದರದಿಂದ ಪೂರ್ವದಲ್ಲಿ ಬ್ರಹ್ಮಪುತ್ರ ನದಿ ಕಂದರದವರೆಗೂ 2400 ಕಿ.ಮೀ.ಉದ್ದವಾಗಿವೆ.ಹಾಗೂ 240 ರಿಂದ 320 ಕಿ.ಮೀ.ಅಗಲವಾಗಿವೆ.
- ಇವು ಪಶ್ಚಿಮದಲ್ಲಿ ಅಗಲವಾಗಿದ್ದು ಪೂರ್ವದ ಕಡೆಗೆ ಹೋದಂತೆ ಕಿರಿದಾಗುತ್ತವೆ.
- ಉತ್ತರದ ಪರ್ವತಗಳು 5 ಲಕ್ಷ ಚ.ಕಿ.ಮೀ.ಗಳಲ್ಲಿ ಹರಡಿವೆ.
- ಇವು ಭಾರತದ ಕಡೆಗೆ ಕಡಿದಾದ ಇಳಿಜಾರು ಮತ್ತು ಟಿಬೆಟ್ ಕಡೆಗೆ ಬಳಿದಾದ ಇಳಿಜಾರಿನಿಂದ ಕೂಡಿವೆ.

3.ಸಿವಾಲಿಕ್ ಬೆಟ್ಟಗಳನ್ನು ಕುರಿತು ಬರೆಯಿರಿ ಅಥವಾ ಸಿವಾಲಿಕ್ ಸರಣಿಯ ಲಕ್ಷಣಗಳನ್ನು ತಿಳಿಸಿ.

- ಇವು ಹಿಮಾಲಯದ ಪಾದಭಾಗದ ಸರಣಿಗಳಾಗಿದ್ದು ಪ್ರಧಾನ

ಹಿಮಾಲಯದ ದಕ್ಷಿಣ ಭಾಗದಲ್ಲಿವೆ.

- ಇವು ಕಡಿಮೆ ಎತ್ತರವನ್ನು ಹೊಂದಿದ ಹಿಮಾಲಯದ ಭಾಗಗಳು.
- ಇವುಗಳ ಎತ್ತರ 600 ರಿಂದ 1500 ಮೀ. ಮತ್ತು ಅಗಲ 15 ರಿಂದ 150 ಕಿ.ಮೀ.
- ಇವು ಜಮ್ಮು-ಕಾಶ್ಮೀರದಿಂದ ಅರುಣಾಚಲಪ್ರದೇಶದವರೆಗೆ ಹಬ್ಬಿವೆ.
- ಅವು ಸಮತಟ್ಟಾದ ತಳವುಳ್ಳ ಕಣಿವೆಗಳನ್ನು ಹೊಂದಿದ್ದು ಅವುಗಳನ್ನು ಡೂನ್ ಎನ್ನುವರು. ಉದಾ: ಡೆಹ್ರಾಡೂನ್.

4.ಉತ್ತರದ ಪರ್ವತಗಳ ಪ್ರಾಮುಖ್ಯತೆ ಅಥವಾ ಉಪಯೋಗಗಳೇನು?

- ಹಿಮಾಲಯ ಪರ್ವತಗಳು ನೈಸರ್ಗಿಕ ಗಡಿಗಳಾಗಿದ್ದು,ಪರಕೀಯರ ದಾಳಿ ಮತ್ತು ಮಧ್ಯ ಏಷ್ಯಾದಿಂದ ಬೀಸುವ ಶೀತಗಾಳಿಗಳನ್ನು ನಿಯಂತ್ರಿಸುತ್ತದೆ.
- ಮಳೆಯ ಮಾರುತಗಳನ್ನು ತಡೆದು ಅಧಿಕ ಮಳೆಯಾಗಲು ಸಹಕಾರಿಯಾಗಿದೆ.
- ಇದು ಹಲವು ಖನಿಜಗಳ ಉಗ್ರಾಣವಾಗಿದೆ.
- ಹಿಮಾಲಯದ ಇಳಿಜಾರಿನಲ್ಲಿ ದಟ್ಟಕಾಡುಗಳಿವೆ ಮತ್ತು ಇವು ನೆಡುತೋಟದ ಬೆಳೆಗಳಿಗೆ ಸೂಕ್ತವಾಗಿವೆ. ಉದಾ: ಅಸ್ಸಾಂನ ಚಹಾತೋಟಗಳು.
- ಇದು ಹಲವು ನದಿಗಳ ಉಗಮ ಸ್ಥಾನವಾಗಿದ್ದು, ಇಲ್ಲಿನ ಜಲಪಾತಗಳು ಜಲವಿದ್ಯುಚ್ಚಕ್ತಿ ಉತ್ಪಾದನೆಗೆ ಉಪಯುಕ್ತ.

5. ಉತ್ತರದ ಮೈದಾನದ ಪ್ರಾಮುಖ್ಯತೆಯನ್ನು ತಿಳಿಸಿ.

- ಉತ್ತರದ ಮೈದಾನವು ವಿಶಾಲವಾದ ಮೈದಾನ
- ಇದು ಹೆಚ್ಚು ಫಲವತ್ತಾಗಿದೆ ಮತ್ತು ಇಲ್ಲಿ ಸರ್ವಕಾಲಿಕ ನದಿಗಳು ಹರಿಯುತ್ತವೆ.ಆದ್ದರಿಂದ ಕೃಷಿಗೆ ಉಪಯುಕ್ತ.
- ಇಲ್ಲಿನ ಸಮತಟ್ಟಾದ ಭೂಮಿಯು ರಸ್ತೆ,ರೈಲು ಮಾರ್ಗಗಳ ನಿರ್ಮಾಣ ಮತ್ತು ಸಂಪರ್ಕ ಮಾಧ್ಯಮಕ್ಕೂ ಯೋಗ್ಯವಾಗಿದೆ.
- ಕೈಗಾರಿಕೀಕರಣ,ನಗರೀಕರಣ ಮತ್ತು ವ್ಯಾಪಾರಕ್ಕೂ ನೆರವಾಗುತ್ತದೆ.
- ಇಲ್ಲಿ ಅನೇಕ ಯಾತ್ರಾ ಸ್ಥಳಗಳಿವೆ.

6.ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳ ವ್ಯತ್ಯಾಸಗಳನ್ನು ತಿಳಿಸಿ.

| ಪಶ್ಚಿಮ ಘಟ್ಟಗಳು | ಪೂರ್ವ ಘಟ್ಟಗಳು |
|---|---|
| 1.ಇವು ತಾಪಿನದಿ ಕಣಿವೆಯಿಂದ ಕನ್ಯಾಕುಮಾರಿ ಭೂಶಿರದವರೆಗೆ ಪಶ್ಚಿಮ ಕರಾವಳಿಗೆ ಸಮಾಂತರವಾಗಿ ಹಬ್ಬಿವೆ.<br>2.ಇವು ಎತ್ತರವಾಗಿವೆ ಮತ್ತು ನಿರಂತರ ಸರಣಿಗಳಾಗಿವೆ. | 1.ಇವು ಉತ್ತರದಲ್ಲಿ ಮಹಾನದಿ ಕಣಿವೆಯಿಂದ ದಕ್ಷಿಣದಲ್ಲಿ ನೀಲಗಿರಿ ಬೆಟ್ಟಗಳವರೆಗೆ, ಪೂರ್ವಕರಾವಳಿಗೆ ಹೊಂದಿಕೊಂಡಂತೆ ಹಬ್ಬಿವೆ.<br>2.ಇವು ಎತ್ತರವಾಗಿಲ್ಲ ಮತ್ತು ನಿರಂತರ ಸರಣಿಗಳೂ ಆಗಿಲ್ಲ. ಅಲ್ಲಲ್ಲಿ ಪೂರ್ವಕ್ಕೆ ಹರಿಯುವ ನದಿ ಕಣಿವೆಗಳಿಂದ ಪ್ರತ್ಯೇಕಗೊಂಡಿವೆ. |

7.ಪರ್ಯಾಯ ಪ್ರಸ್ಥಭೂಮಿಯ ಪ್ರಾಮುಖ್ಯತೆಯನ್ನು ತಿಳಿಸಿ.

- ಪರ್ಯಾಯ ಪ್ರಸ್ಥಭೂಮಿಯು ಸಮೃದ್ಧ ಖನಿಜಗಳು,ದಟ್ಟ ಕಾಡುಗಳು ಹಾಗೂ ಜೈವಿಕ ವೈವಿಧ್ಯದಿಂದ ಕೂಡಿದೆ.
- ನೈಋತ್ಯ ಮಾನ್ಸೂನ್ ಮಾರುತಗಳ ಮೇಲೆ ಪ್ರಭಾವ ಬೀರಿತ್ತದೆ.
- ಕಪ್ಪು ಮಣ್ಣಿನಿಂದ ಕೂಡಿದ್ದು ಕೃಷಿಗೆ ಪೂರಕವಾಗಿದೆ.
- ಇದು ಅನೇಕ ದಕ್ಷಿಣ ಭಾರತದ ನದಿಗಳಿಗೆ ಉಗಮ ಸ್ಥಾನವಾಗಿದೆ. ಅವು ಜಲಶಕ್ತಿಗೆ ಉಪಯುಕ್ತ.
- ಇಲ್ಲಿ ಗಿರಿಧಾಮಗಳೂ ಇವೆ.

8.ಕರಾವಳಿ ಮೈದಾನಗಳ ಪ್ರಾಮುಖ್ಯತೆ / ಉಪಯೋಗಗಳೇನು?

-ಇವು ನೈಸರ್ಗಿಕ ಬಂದರುಗಳಿಗೆ ಪೂರಕವಾಗಿವೆ.

-ಇದರಿಂದ ಭಾರತದ ವಿದೇಶ ವ್ಯಾಪಾರಾಭಿವೃದ್ಧಿ ಸಾಧ್ಯ ವಾಗುತ್ತದೆ.

- ಕರಾವಳಿಯು ಮೀನುಗಾರಿಕೆ, ಹಡಗು ನಿರ್ಮಾಣ ಕೈಗಾರಿಕೆ,ಕೃಷಿ ಮತ್ತು ಉಪ್ಪು ಉತ್ಪಾದನೆಗೂ ನೆರವಾಗಿದೆ.

- ನೌಕಾಯಾನ ಮತ್ತು ಆಕರ್ಷಕ ಬೀಚ್‌ಗಳಿಂದ ಪ್ರವಾಸೋದ್ಯಮದ ಅಭಿವೃದ್ಧಿಗೆ ನೆರವಾಗಿದೆ.

9.ಭಾರತದ ದ್ವೀಪಗಳ ಬಗ್ಗೆ ಟಿಪ್ಪಣಿ ಬರೆಯಿರಿ.

- ಭಾರತದಲ್ಲಿ 247 ದ್ವೀಪಗಳಿವೆ.
- ಅವುಗಳಲ್ಲಿ 204 ಬಂಗಾಳಕೊಲ್ಲಿಯಲ್ಲಿ ಮತ್ತು 43 ಅರಬ್ಬಿ ಸಮುದ್ರಗಳಲ್ಲಿವೆ.
- ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳು ಬಂಗಾಲಕೊಲ್ಲಿಯಲ್ಲಿವೆ.
- ಲಕ್ಷದ್ವೀಪಗಳು ಅರಬ್ಬಿ ಸಮುದ್ರದಲ್ಲಿವೆ, ಅವು ಹವಳದ ದ್ವೀಪಗಳಾಗಿವೆ.

10.ಪಶ್ಚಿಮ ಕರಾವಳಿ ಮತ್ತು ಪೂರ್ವ ಕರಾವಳಿಗಳ ವ್ಯಾತ್ಯಾಸಗಳನ್ನು ತಿಳಿಸಿ.

| ಪಶ್ಚಿಮ ಕರಾವಳಿ | ಪೂರ್ವ ಕರಾವಳಿ |
|---|---|
| -ಪಶ್ಚಿಮ ಕರಾವಳಿಯು ಪಶ್ಚಿಮ ಘಟ್ಟ ಮತ್ತು ಅರಬ್ಬಿ ಸಮುದ್ರಗಳ ನಡುವೆ ಕಂಡು ಬರುತ್ತದೆ.<br>- ಇದು ಕಛ್‌ನಿಂದ ಕನ್ಯಾಕುಮಾರಿ | -ಪೂರ್ವ ಕರಾವಳಿಯು ಪೂರ್ವ ಘಟ್ಟಗಳು ಮತ್ತು ಬಂಗಾಳಕೊಲ್ಲಿ ನಡುವೆ ನೆಲೆಸಿವೆ.<br>-ಇದು ಸುವರ್ಣರೇಖಾ ನದಿಯ |

| | |
|---|---|
| ವರೆಗೆ ವಿಸ್ತರಿಸಿದೆ.<br>-ಇದು ಕಿರಿದಾಗಿದ್ದು ಕಡಿದಾದ ಇಳಿಜಾರು ಮತ್ತುಶಿಲಾಮಯವಾಗಿದೆ.<br>-ಇದನ್ನು ಕೊಂಕಣತೀರ, ಕರ್ನಾಟಕ ತೀರ ಮತ್ತು ಮಲಬಾರ್ ತೀರ ಎಂದು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. | ಉತ್ತರ ಭಾಗದಿಂದ ಕನ್ಯಾಕುಮಾರಿ ವರಗೆ ವಿಸ್ತರಿಸಿದೆ.<br>-ಇದು ಅಗಲವಾಗಿದೆ,ಪೂರ್ವಕ್ಕೆ ಹರಿಯುವ ಅನೇಕ ದಕ್ಷಿಣ ಭಾರತದ ನದಿಗಳು ಈ ಮೂಲಕ ಹರಿಯುತ್ತವೆ (ಮಹಾನದಿ,ಗೋದಾವರಿ,ಕೃಷ್ಣ, ಕಾವೇರಿ). -ಇದನ್ನು ಉತ್ತರ ಸರ್ಕಾರ್ ಮತ್ತು ಕೋರಮಂಡಲ ತೀರಗಳೆಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. |

## ಅಧ್ಯಾಯ-3
## ಭಾರತದ ವಾಯುಗುಣ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1.ಭಾರತವು ಯಾವ ಮಾದರಿಯ ವಾಯುಗುಣವವನ್ನು ಹೊಂದಿದೆ.?
-ಉಷ್ಣವಲಯದ ಮಾನ್ಸೂನ್ ವಾಯುಗುಣ

2.ಭಾರತದಲ್ಲಿ ಮಾರ್ಚನಿಂದ ಮೇ ತಿಂಗಳ ಅವಧಿಯಲ್ಲಿ(ಬೇಸಿಗೆ ಕಾಲ) ಉಷ್ಣಾಂಶವು ಅಧಿಕವಾಗಿರುತ್ತದೆ.ಕಾರಣಕೊಡಿ.
-ಸೂರ್ಯನ ಲಂಬ ಕಿರಣಗಳು ಉತ್ತರಾರ್ಧಗೋಳದ ಮೇಲೆಬೀಳುತ್ತವೆ.

3.ಭಾರತದಲ್ಲಿ ಅತಿ ಕಡಿಮೆ ಉಷ್ಣಾಂಶವು ದಾಖಲಾಗಿರುವ ಸ್ಥಳ ಯಾವುದು?
-ಕಾರ್ಗಿಲ್ ಸಮೀಪದಲ್ಲಿರುವ ಡ್ರಾಸ್ (-4° ಸೆ)

4.ಭಾರತದಲ್ಲಿ ಉಷ್ಣವಲಯದ ಮಾನ್ಸೂನ್ ಮಾದರಿ ವಾಯುಗುಣವಿದೆ. ಏಕೆ?
- ದೇಶದ ಹೆಚ್ಚು ಭಾಗವು ಉಷ್ಣವಲಯದಲ್ಲಿದೆ ಮತ್ತು ವಾಯುಗುಣವು ಹೆಚ್ಚಾಗಿ ಮಾನ್ಸೂನ್ ಮಾರುತಗಳ ಪ್ರಭಾವಕ್ಕೊಳಪಟ್ಟಿದೆ ಆದುದರಿಂದ ಭಾರತದಲ್ಲಿ ಉಷ್ಣವಲಯದ ಮಾನ್ಸೂನ್ ಮಾದರಿ ವಾಯುಗುಣವಿದೆ.

5.ಭಾರತದಲ್ಲಿಯೇ ಅತೀ ಹೆಚ್ಚು ಉಷ್ಣಾಂಶವನ್ನು ಹೊಂದಿದ ಪ್ರದೇಶ ಯಾವುದು? -ರಾಜಸ್ಥಾನದ ಗಂಗಾನಗರ 52° ಸೆ. ಉಷ್ಣಾಂಶ.

6.ಬೇಸಿಗೆಯಲ್ಲಿಯೂ ದಕ್ಷಿಣ ಭಾರತದಲ್ಲಿ ಉಷ್ಣಾಂಶದಲ್ಲಿ ಇಳಿಕೆ ಕಂಡು ಬರುತ್ತದೆ ಏಕೆ?
-ದಕ್ಷಿಣ ಭಾರತವು ಮೂರು ಕಡೆಗಳಲ್ಲಿ ಸಾಗರಗಳಿಂದ ಆವೃತ್ತವಾಗಿರುವುದ ರಿಂದ ಉಷ್ಣಾಂಶದಲ್ಲಿ ಇಳಿಕೆ ಕಂಡು ಬರುತ್ತದೆ.

7.ಭಾರತದಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಾಗುವ ಮಳೆಯನ್ನು ಏನೆಂದು ಕರೆಯುವರು ?
-ಭಾರತದಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಾಗುವ ಮಳೆಯನ್ನು ಉತ್ತರ ಪ್ರದೇಶದಲ್ಲಿ ಆಂಧಿಸ್,ಪಶ್ಚಿಮ ಬಂಗಾಳದಲ್ಲಿ ಕಾಲ ಬೈಸಾಕಿ , ಕರ್ನಾಟಕದಲ್ಲಿ ಕಾಫಿ ತುಂತುರು ಮಳೆ ಹಾಗೂ ಕೇರಳದಲ್ಲಿ ಮಾವಿನ ಹೊಯ್ಲು ಎಂದು ಕರೆಯುವರು.

8.ನೈಋತ್ಯ ಮಾನ್ಸೂನ್ ಮಾರುತಗಳು ಭಾರತವನ್ನು ಹೇಗೆ ಪ್ರವೇಶಿಸುತ್ತವೆ?
-ನೈಋತ್ಯ ಮಾನ್ಸೂನ್ ಮಾರುತಗಳು ಎರಡು ಕವಲುಗಳಾಗಿ ಭಾರತವನ್ನು ಪ್ರವೇಶಿಸುತ್ತವೆ. 1) ಅರಬ್ಬಿಸಮುದ್ರ ಶಾಖೆ 2) ಬಂಗಾಳಕೊಲ್ಲಿ ಶಾಖೆ.

9.ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್ ತಿಂಗಳಿನಿಂದ ಹಿಂದಿರುಗಲು ಪ್ರಾರಂಭಿಸುತ್ತವೆ ಏಕೆ?
-ಈ ಸಂದರ್ಭದಲ್ಲಿ ಉತ್ತರಾರ್ಧಗೋಳದಲ್ಲಿ ಉಷ್ಣಾಂಶ ಕಡಿಮೆಯಾಗಿ ಒತ್ತಡ ಪ್ರದೇಶವಾಗಿ ಪರಿವರ್ತಿತವಾಗಿರುತ್ತದೆ.ಆದ್ದರಿಂದ ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್ ತಿಂಗಳಿನಿಂದ ಹಿಂದಿರುಗುತ್ತವೆ

10.ಭಾರತದಲ್ಲಿ ಅತಿ ಹೆಚ್ಚು ಮಳೆ ಬೀಳುವ ಋತುಮಾನ
- ನೈರುತ್ಯ ಮಾನ್ಸೂನ್ ಮಾರುತಗಳ ಕಾಲ ಶೇ.75%.

11. ಭಾರತದಲ್ಲಿ ಅತಿ ಕಡಿಮೆ ಮಳೆಯಾಗುವ ಋತುಮಾನ
- ಚಳಿಗಾಲ ಶೇ. 2%

12.ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶ ಯಾವುದು?
- ರಾಜಸ್ಥಾನದ ಜೈಸಲ್ಮೇರ್ ಜಿಲ್ಲೆಯ ರೂಯ್ಲಿ 8.3 ಸೆ.ಮೀ.

13.ಭಾರತದಲ್ಲಿಯೇ ಹೆಚ್ಚು ಮಳೆ ಪಡೆಯುವ ಪ್ರದೇಶ
-ಮೇಘಾಲಯದ ಮಾಸಿನ್ ರಾಮ್

14.ಭಾರತದಲ್ಲಿ ಯಾವ ತಿಂಗಳು ಅತ್ಯಂತ ಶೀತವಾದುದು?
- ಜನವರಿ ತಿಂಗಳು

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.:**

1.ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು? ಅಥವಾ ಭಾರತದ ವಾಯುಗುಣವು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತದೆ.ಏಕೆ?
-ಭಾರತದ ಸ್ಥಾನ -ಜಲರಾಶಿಗಳು, -ಮೇಲ್ಮೈ ಲಕ್ಷಣಗಳು - ಮಾನ್ಸೂನ್ ಮಾರುತಗಳು. - ಸಾಗರ ಪ್ರವಾಹಗಳು -ಅಕ್ಷಾಂಶಗಳು -ಸಮುದ್ರದಿಂದ ದೂರ

2.ಭಾರತದ ವಾಯುಗುಣದ 4 ಋತುಗಳಾವುವು?
1 ಚಳಿಗಾಲ (ಡಿಸೆಂಬರ್-ಫೆಬ್ರವರಿ) 2. ಬೇಸಿಗೆ ಕಾಲ (ಮಾರ್ಚ್-ಮೇ) 3.ಮಳೆಗಾಲ (ಜೂನ್-ಸೆಪ್ಟೆಂಬರ್) 4.ನಿರ್ಗಮನ ಮಾನ್ಸೂನ್ ಮಾರುತಗಳ ಕಾಲ (ಸೆಪ್ಟೆಂಬರ್ ಮಧ್ಯ-ನವೆಂಬರ್)

3.ಭಾರತದಲ್ಲಿ ಚಳಿಗಾಲದ ಲಕ್ಷಣಗಳನ್ನು ತಿಳಿಸಿ
- ಈ ಋತುಕಾಲದಲ್ಲಿ ಸೂರ್ಯನ ಲಂಬ ಕಿರಣಗಳು ದಕ್ಷಿಣ

ಗೋಳಾರ್ಧದಲ್ಲಿ ಪ್ರಕಾಶಿಸುತ್ತವೆ,

- ಭಾರತದಲ್ಲಿ ಓರೆ ಕಿರಣಗಳಿರುತ್ತವೆ ಹೀಗಾಗಿ ಭಾರತದಲ್ಲಿ ಕಡಿಮೆ ಉಷ್ಣಾಂಶ,ಕಡಿಮೆ ಆರ್ದ್ರತೆ ಮತ್ತು ಆಕಾಶವು ಮೋಡ ರಹಿತವಾಗಿರುತ್ತದೆ.
- ಈ ಅವಧಿಯಲ್ಲಿ ದೇಶದ ಉತ್ತರದಲ್ಲಿ ತಂಪಾದ ಮತ್ತು ದಕ್ಷಿಣದಲ್ಲಿ ಬೆಚ್ಚನೆಯ ಪರಿಸ್ಥಿತಿ ಇರುತ್ತದೆ.
- ಜನವರಿ ಅತಿ ಶೀತ ಮಾಹೆಯಾಗಿರುತ್ತದೆ.
- ಕಾಶ್ಮೀರ ಮತ್ತು ಹಿಮಾಚಲ ಪ್ರದೇಶಗಳ ಪರ್ವತಗಳಲ್ಲಿ ಅತಿ ಕಡಿಮೆ ಉಷ್ಣಾಂಶವು ದಾಖಲಾಗಿರುತ್ತದೆ.
- ಪರ್ವತ ಭಾಗಗಳಲ್ಲಿ ಹೆಚ್ಚು ಹಿಮವೃಷ್ಟಿಯಾಗುತ್ತದೆ.
- ಈ ಅವಧಿಯಲ್ಲಿ ಭಾರತವು ವಾರ್ಷಿಕ ಮಳೆಯಲ್ಲಿ ಶೇ.2% ಮಾತ್ರ ಪಡೆಯುತ್ತದೆ.

4.ಭಾರತದಲ್ಲಿ ಬೇಸಿಗೆ ಕಾಲದ ಲಕ್ಷಣಗಳನ್ನು ತಿಳಿಸಿ.

- ಈ ಅವಧಿಯಲ್ಲಿ ಸೂರ್ಯನ ಲಂಬ ಕಿರಣಗಳು ಉತ್ತರಾರ್ಧ ಗೋಳದಲ್ಲಿ ಬೀಳುತ್ತವೆ. ಹೀಗಾಗಿ ಭಾರತದಲ್ಲಿ ಉಷ್ಣಾಂಶವು ಹೆಚ್ಚಾಗಿರುತ್ತದೆ.
- ಹವಾಗುಣವು ಅತಿಶಾಖ,ಶುಷ್ಕ ಮತ್ತು ಸೆಖೆಯಿಂದ ಕೂಡಿರುತ್ತದೆ.
- ಈ ಅವಧಿಯಲ್ಲಿ ದೇಶದ ಕೆಲವು ಭಾಗಗಳಲ್ಲಿ ಪರಿಸರಣ ಮಳೆ ಬೀಳುತ್ತದೆ. ಅದನ್ನು ಬೇರೆ ಬೇರೆ ಸ್ಥಳೀಯ ಹೆಸರುಗಳಿಂದ ಕರೆಯಲಾಗಿದೆ.( ಉತ್ತರ ಪ್ರದೇಶ ಆಂಧಿಸ್,ಪಶ್ಚಿಮ ಬಂಗಾಳದಲ್ಲಿ ಕಾಲಬೈಸಾಕಿ ,ಕೇರಳದಲ್ಲಿ ಮಾವಿನ ಹೂಯ್ಲು, ಕರ್ನಾಟಕದಲ್ಲಿ ಕಾಫಿಯ ಹೂ ಮಳೆ .)
- ಈ ಅವಧಿಯ ಭಾರತದ ವಾರ್ಷಿಕ ಮಳೆಯ ಹಂಚಿಕೆ ಶೇ.10%.

5.ಭಾರತದ ಮಾನ್ಸೂನ್ ಮಾರುತಗಳ ಎರಡು ಶಾಖೆಗಳ ನಡುವಿನ ವ್ಯತ್ಯಾಸ ಗಳನ್ನು ತಿಳಿಸಿ.

| ಅರಬ್ಬಿ ಸಮುದ್ರ ಶಾಖೆ | ಬಂಗಾಳಕೊಲ್ಲಿ ಶಾಖೆ |
|---|---|
| -ಅರಬ್ಬಿ ಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳಿಗೆ ಎದುರಾಗಿ ಬೀಸುತ್ತವೆ.<br>- ಅವು ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗಗಳಿಗೆ ಅಧಿಕ ಮಳೆಯನ್ನು ಸುರಿಸುತ್ತವೆ.<br>-ಮಳೆಯ ಪ್ರಮಾಣವು ಪಶ್ಚಿಮ ಘಟ್ಟಗಳ ಪೂರ್ವಭಾಗಗಳಿಗೆ ಹೋದಂತೆ ಕಡಿಮೆಯಾಗುತ್ತದೆ. ಇದರಿಂದ ಆ ಭಾಗವು ಮಳೆ ನೆರಳಿನ ಪ್ರದೇಶವಾಗಿ ಪರಿಣಮಿಸುತ್ತದೆ. | - ಬಂಗಾಳಕೊಲ್ಲಿ ಶಾಖೆಯು ಮೇಘಾಲಯ ಮತ್ತು ಅಸ್ಸಾಂ ಬೆಟ್ಟಗಳಿಂದ ತಡೆಯಲ್ಪಡುವುದರಿಂದ ಆ ಭಾಗಗಳಲ್ಲಿ ಅಧಿಕ ಮಳೆ ಬೀಳುವುದು.<br>-ಪಶ್ಚಿಮದ ಕಡೆಗೆ ಹೋದಂತೆ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ. |

6.ಭಾರತದಲ್ಲಿ ಕಡಿಮೆ ಮಳೆ ಬೀಳುವ ಪ್ರದೇಶಗಳನ್ನು ತಿಳಿಸಿ.

-ಕಛ್‌ನ ಪಶ್ಚಿಮ ಭಾಗ,-ರಾಜಸ್ಥಾನದ ಥಾರ್ ಮರುಭೂಮಿ ಮತ್ತು ಸುತ್ತಮುತ್ತಲ ಭಾಗಗಳಾದ ಪಶ್ಚಿಮ ಪಂಜಾಬ್,ಹರಿಯಾಣ ಮತ್ತು ಗುಜರಾತ್, -ಉತ್ತರ ಜಾಸ್ಕರ್ ಶ್ರೇಣಿ ಮತ್ತು ಪಶ್ವಿಮ ಘಟ್ಟಗಳ ಮಳೆನೆರಳಿನ ಪ್ರದೇಶಗಳು.

7.ಭಾರತದಲ್ಲಿ ಅಧಿಕ ಮಳೆಯಾಗುವ ಪ್ರದೇಶಗಳ ಹಂಚಿಕೆಯನ್ನು ತಿಳಿಸಿ.

- ಪಶ್ಚಿಮ ಘಟ್ಟಗಳ ಕಿರಿದಾದ ವಲಯ
- ಜಮ್ಮುವಿನಿಂದ ಆರಂಭಗೊಂಡು ಹಿಮಾಚಲ ಪ್ರದೇಶ,ಉತ್ತರ ಪ್ರದೇಶದ ಉತ್ತರ ಭಾಗ ,ಬಿಹಾರ ಮತ್ತು ಪಶ್ಚಿಮ ಬಂಗಾಳ
- ಈಶಾನ್ಯ ಭಾರತ
- ಪಶ್ಚಿಮ ಸಮುದ್ರತೀರ ಪ್ರದೇಶ.

8.ಅಕ್ಟೋಬರ್ ತಿಂಗಳ ಆರಂಭದಲ್ಲಿ ನೈಋತ್ಯ ಮಾನ್ಸೂನ್ ಮಾರುತಗಳು ಹಿಂದಿರುಗುತ್ತವೆ.ಕಾರಣವೇನು?

- ಅಕ್ಟೋಬರ್ ತಿಂಗಳ ಆರಂಭದಲ್ಲಿ ಉಷ್ಣಾಂಶವು ಕಡಿಮೆಯಾಗುವುದ ರಿಂದ ಭೂ ಭಾಗದಲ್ಲಿ ಕಡಿಮೆ ಒತ್ತಡ ಪ್ರದೇಶವು ಕ್ರಮೇಣ ಕ್ಷೀಣಗೊಂಡು ಅಲ್ಲಿ ಅಧಿಕ ಒತ್ತಡ ಪ್ರದೇಶವು ನಿರ್ಮಾಣಗೊಳ್ಳುತ್ತದೆ.
- ಬಂಗಾಲಕೊಲ್ಲಿಯಲ್ಲಿ ಕಡಿಮೆ ಒತ್ತಡ ಪ್ರದೇಶವು ನಿರ್ಮಾಣ ವಾಗುವುದು. ಇದರ ಪರಿಣಾಮವಾಗಿ ನೈಋತ್ಯ ಮಾನ್ಸೂನ್ ಮಾರುತಗಳು ಹಿಂದಿರುಗುತ್ತವೆ. ಅವು ಈಶಾನ್ಯದಿಂದ ನೈಋತ್ಯದ ಕಡೆಗೆ ಬೀಸುವವು.ಹೀಗಾಗಿ ಈ ಅವಧಿಯನ್ನು 'ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ'ಎನ್ನುವರು

## ಅಧ್ಯಾಯ-4

## ಭಾರತದ ಮಣ್ಣುಗಳು

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1.ಮೆಕ್ಕಲು ಮಣ್ಣು ಹೇಗೆ ನಿರ್ಮಿತವಾಗುತ್ತದೆ?

-ನದಿಗಳು ಮೆಕ್ಕಲು ಕಣಗಳನ್ನು ಸಂಚಯಿಸುವುದರಿಂದ

2.ಕಪ್ಪುಮಣ್ಣು ಹೇಗೆ ಉತ್ಪತ್ತಿಯಾಗುತ್ತದೆ? -ಬಸಾಲ್ಟ್ ಶಿಲಾಕಣಗಳಿಂದ

3.ದಖನ್ ಪ್ರಸ್ಥಭೂಮಿಯ ಬಸಾಲ್ಟ್ ಶಿಲಾವಲಯದಲ್ಲಿ ವ್ಯಾಪಕವಾಗಿ ಕಂಡು ಬರುವ ಮಣ್ಣು ಯಾವುದು? -ಕಪ್ಪು ಮಣ್ಣು

4.ಇತ್ತೀಚೆಗೆ ನಮ್ಮ ಜಲಾಶಯಗಳ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆ ಯಾಗುತ್ತಿದೆ.ಏಕೆ? -ಜಲಾಶಯಗಳಲ್ಲಿ ಹೂಳು ತುಂಬುವುದರಿಂದ

5.ನದಿಗಳು ಪರ್ವತ ಪ್ರದೇಶಗಳಿಂದ ಹೊತ್ತು ತಂದು ಸಂಚಯಿಸಿರುವ

ಮಣ್ಣು –ಮೆಕ್ಕಲು ಮಣ್ಣು

6.ಹತ್ತಿ ಬೆಳೆಗೆ ಸೂಕ್ತವಾದ ಮಣ್ಣು ಯಾವುದು? –ಕಪ್ಪು ಮಣ್ಣು

7.ಕೊಳೆತ ಜೈವಿಕಾಂಶಗಳನ್ನು ಅಧಿಕ ಪ್ರಮಾಣದಲ್ಲಿ ಹೊಂದಿರುವ ಮಣ್ಣು ಯಾವುದು? –ಪರ್ವತ ಮಣ್ಣು

8.ಮಣ್ಣಿನ ಸವೆತ ಅಥವಾ ಭೂ ಸವೆತ ಎಂದರೇನು?

–ಭೂ ಮೇಲ್ಮೈಯಲ್ಲಿ ಕಂಡುಬರುವ ಸಡಿಲವಾದ ಪದರವು ವಿವಿಧ ಪ್ರಾಕೃತಿಕ ಶಕ್ತಿಗಳಿಂದ ಸ್ಥಳಾಂತರ ಹೊಂದುವ ಕ್ರಿಯೆಯೇ ಭೂ ಸವೆತ

9.ಮಣ್ಣಿನ ಸಂರಕ್ಷಣೆ ಎಂದರೇನು?–ಮಣ್ಣಿನ ಸವೆತವನ್ನು ತಡೆಗಟ್ಟುವುದು ಹಾಗೂ ಅದರ ಫಲವತ್ತತೆಯನ್ನು ಕಾಪಾಡುವುದನ್ನು ಮಣ್ಣಿನ ಸಂರಕ್ಷಣೆ ಎನ್ನುವರು.

10.ಉತ್ತರದ ಮೈದಾನ ಪ್ರದೇಶದಲ್ಲಿ ಕಂಡು ಬರುವ ಮಣ್ಣು

–ಮೆಕ್ಕಲು ಮಣ್ಣು

11.ಅತ್ಯಧಿಕ ಉಷ್ಣಾಂಶ ಮತ್ತು ಮಳೆಯ ಪರಿಸ್ಥಿತಿಯುಳ್ಳ ಉಷ್ಣವಲಯದಲ್ಲಿ ಉತ್ಪತ್ತಿಯಾಗುವ ಮಣ್ಣು –ಲ್ಯಾಟರೈಟ್ ಮಣ್ಣು / ಜಂಬಿಟ್ಟಿಗೆ ಮಣ್ಣು

12.ಕಪ್ಪು ಮಣ್ಣು ಒಣ ಬೇಸಾಯಕ್ಕೆ ಸೂಕ್ತವಾಗಿರಲು ಕಾರಣವೇನು?

– ಕಪ್ಪು ಮಣ್ಣು ದೀರ್ಘಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ ಆದುದರಿಂದ ಕಪ್ಪು ಮಣ್ಣು ಒಣ ಬೇಸಾಯಕ್ಕೆ ಸೂಕ್ತವಾಗಿದೆ.

13.ಕೆಂಪು ಮಣ್ಣು ಹೇಗೆ ಉತ್ಪತ್ತಿಯಾಗಿದೆ?

– ಕೆಂಪು ಮಣ್ಣು ಗ್ರಾನೈಟ್, ನೀಸ್ ಮತ್ತು ಸ್ಪಟಿಕ ಶಿಲೆಗಳ ಶೀಥಿಲೀಕರಣದ ವಸ್ತುಗಳಿಂದ ಉತ್ಪತ್ತಿಯಾಗಿದೆ.

14.ಪರ್ವತ ಮಣ್ಣು ಯಾವ ಬೆಳೆಗಳ ಬೇಸಾಯಕ್ಕೆ ಸೂಕ್ತವಾದುದು?

–ನೆಡುತೋಟದ ಬೆಳೆಗಳ ಸಾಗುವಳಿಗೆ ಸೂಕ್ತವಾದುದು.

15.ಕೆಂಪು ಮಣ್ಣಿನಲ್ಲಿ ತೇವಾಂಶ ಸಂಗ್ರಹದ ಸಾಮರ್ಥ್ಯ ಕಡಿಮೆ ಏಕೆ?

– ಕೆಂಪು ಮಣ್ಣಿನಲ್ಲಿ ಮರಳಿನಾಂಶ ಹೆಚ್ಚು ಮತ್ತು ಜೇಡಿಯ ಪ್ರಮಾಣ ಕಡಿಮೆ ಇರುತ್ತದೆ ಆದುದರಿಂದ ಕೆಂಪು ಮಣ್ಣಿನಲ್ಲಿ ತೇವಾಂಶ ಸಂಗ್ರಹದ ಸಾಮರ್ಥ್ಯ ಕಡಿಮೆ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.:**

1.ಮಣ್ಣು ಎಂದರೇನು? ಭಾರತದ ಮಣ್ಣಿನಲ್ಲಿ ವೈವಿಧ್ಯತೆ. ಇದೆ ಏಕೆ?

- ಖನಿಜ ಮತ್ತು ಜೈವಿಕಾಂಶಗಳ ಸಂಯೋಜನೆಯುಳ್ಳ ಭೂಮೇಲ್ಭಾಗದ ತೆಳು ಪದರವೇ ಮಣ್ಣು.
- ಭಾರತದಲ್ಲಿ ವಿವಿಧ ಪ್ರಕಾರದ ಮಣ್ಣಿನ ಉತ್ಪತ್ತಿಯು ಮೂಲ ಶಿಲೆಗಳು, ಮೇಲ್ಮೈ ಲಕ್ಷಣಗಳು,ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗಗಳಿಗೆ ಸಂಬಂಧಿಸಿದೆ.ಆದ್ದರಿಂದ ವೈವಿಧ್ಯತೆ ಇದೆ.

2.ಭಾರತದ ಪ್ರಮುಖ ಮಣ್ಣಿನ ಪ್ರಕಾರಗಳು/ ವಿಧಗಳು ಯಾವುವು?

1.ಮೆಕ್ಕಲು ಮಣ್ಣು 2. ಕಪ್ಪು ಮಣ್ಣು 3.ಕೆಂಪುಮಣ್ಣು 4.ಲ್ಯಾಟರೈಟ್ ಮಣ್ಣು 5.ಮರುಭೂಮಿಮಣ್ಣು 6.ಪರ್ವತಮಣ್ಣು.

3.ಭಾರತದಲ್ಲಿ ಕಪ್ಪು ಮಣ್ಣಿನ ಹಂಚಿಕೆಯನ್ನು ಕುರಿತು ವಿವರಿಸಿ.

- ಭಾರತದ ದಖನ್ ಪ್ರಸ್ಥಭೂಮಿಯ ಬಸಾಲ್ಟ್ ಶಿಲಾವಲಯದಲ್ಲಿ ವ್ಯಾಪಕವಾಗಿ ಕಪ್ಪು ಮಣ್ಣು ಹಂಚಿಕೆಯಾಗದೆ.
- ಮಹಾರಾಷ್ಟ್ರ,ಮಧ್ಯಪ್ರದೇಶ, ತೆಲಂಗಾಣದ ಕೆಲಭಾಗಗಳು,ಉತ್ತರ ಕರ್ನಾಟಕ, ಗುಜರಾತ್ ಮತ್ತು ತಮಿಳುನಾಡಿನ ಕೆಲವು ಭಾಗಗಳಲ್ಲಿ ಹಂಚಿಕೆಯಾಗಿದೆ.
- ಇದು ಸಮಾರು 5.46 ಲಕ್ಷ ಚ.ಕಿ.ಮೀ. ವಿಸ್ತೀರ್ಣದಲ್ಲಿ ಹಂಚಿಕೆಯಾಗಿದೆ.

4.ಕೆಂಪು ಮಣ್ಣಿನ ಗುಣ ಲಕ್ಷಣಗಳಾವುವು?

- ಕೆಂಪು ಮಣ್ಣು ಗ್ರಾನೈಟ್, ನೀಸ್ ಮತ್ತು ಇತರೆ ಸ್ಪಟಿಕ ಶಿಲೆಗಳ ಶಿಥಲೀಕರಣದವಸ್ತುಗಳಿಂದ ಉತ್ಪತ್ತಿಯಾದುದು.
- ಸಾಮಾನ್ಯವಾಗಿ ಈ ಮಣ್ಣು ಕೆಂಪು ಮತ್ತು ಕೆಂಪುಕಂದು ಬಣ್ಣವುಳ್ಳದ್ದು.
- ಕೆಂಪುಮಣ್ಣಿನಲ್ಲಿ ಮರಳಿನಾಂಶ ಹೆಚ್ಚು ಮತ್ತು ಜೇಡಿಯ ಪ್ರಮಾಣ ಕಡಿಮೆ ಆದ್ದರಿಂದ ತೇವಾಂಶ ಸಂಗ್ರಹ ಸಾಮರ್ಥ್ಯ ಕಡಿಮೆ
- ಕೆಂಪು ಮಣ್ಣು ರಾಗಿ,ತೃಣಧಾನ್ಯ,ಶೇಂಗ,ತಂಬಾಕು ಮತ್ತು ಆಲೂಗಡ್ಡೆಗಳ ಬೇಸಾಯಕ್ಕೆ ಸೂಕ್ತವಾದುದು.

5.ಮಣ್ಣಿನ ಸವೆತಕ್ಕೆ ಪ್ರಮುಖ ಕಾರಣಗಳನ್ನು ತಿಳಿಸಿ.

- ಅರಣ್ಯನಾಶ
- ಅತಿಯಾಗಿ ಮೇಯಿಸುವುದು
- ವರ್ಗಾವಣೆ ಬೇಸಾಯ ಪದ್ಧತಿ
- ಅವೈಜ್ಞಾನಿಕ ಬೇಸಾಯ ಪದ್ಧತಿ
- ಮೇಲ್ಪದರದ ಮಣ್ಣನ್ನು ಇಟ್ಟಿಗೆ,ಹೆಂಚು ಇತ್ಯಾದಿ ಉದ್ದೇಶಗಳಿಗೆ ಬಳಕೆ ಮಾಡುವುದು.

6.ಮಣ್ಣಿನ ಸವೆತದ ಪ್ರಮುಖ ಪರಿಣಾಮಗಳಾವುವು? ಅಥವಾ ಮಣ್ಣಿನ ಸವೆತವು ಹಲವು ದುಷ್ಪರಿಣಾಮಗಳಿಗೆ ಕಾರಣವಾಗಿದೆ.ಹೇಗೆ?

- ಮಣ್ಣಿನ ಸಾರವು ಕಡಿಮೆಯಾಗಿ,ಕೃಷಿಯ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗುತ್ತದೆ.
- ನದಿಪಾತ್ರಗಳಲ್ಲಿ ಹೂಳು ತುಂಬಿಕೊಳ್ಳುವುದು,ಪ್ರವಾಹ ಉಂಟಾಗುವುದು, ಜಲಾಶಯಗಳಲ್ಲಿ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ.
- ಅಂತರ್ಜಲದ ಮಟ್ಟ ಕುಸಿತ ಮತ್ತು ಮಣ್ಣಿನ ತೇವಾಂಶವು ಕಡಿಮೆಯಾಗುವುದು.
- ಸಸ್ಯವರ್ಗವು ಒಣಗುತ್ತದೆ ಮತ್ತು ಬರ ಪರಿಸ್ಥಿತಿ ಹೆಚ್ಚುತ್ತದೆ.

7.ಮಣ್ಣಿನ ಸವೆತದ ನಿಯಂತ್ರಣ ಮತ್ತು ಫಲವತ್ತತೆಯನ್ನು ಕಾಪಾಡಲು ಕೈಗೊಳ್ಳಬಹುದಾದದ ಕ್ರಮಗಳನ್ನು ತಿಳಿಸಿ

**ಅಥವಾ** ಮಣ್ಣಿನ ಸಂರಕ್ಷಣೆಗಾಗಿ ಕೈಗೊಳ್ಳಬಹುದಾದ ವಿಧಾನಗಳನ್ನು ತಿಳಿಸಿ.

- –ಅರಣ್ಯಪೋಷಣೆ – ಅತಿಯಾಗಿ ಮೇಯಿಸುವುದರ ನಿಯಂತ್ರಣ
  –ಸಮೋನ್ನತಿ ಬೇಸಾಯ –ಚೆಕ್ ಡ್ಯಾಮ್‌ಗಳ ನಿರ್ಮಾಣ
  –ಬದುಗಳ ನಿರ್ಮಾಣ –ಕೊರಕಲು ನಿಯಂತ್ರಣ ಮತ್ತು ಮೆಟ್ಟಲು ಪಂಕ್ತಿ ಬೇಸಾಯ.

8.ಲ್ಯಾಟರೈಟ್ ಮಣ್ಣಿನ(ಜಂಬಿಟ್ಟಿಗೆ ಮಣ್ಣು)ಹಂಚಿಕೆಯನ್ನು ತಿಳಿಸಿ.

ಲ್ಯಾಟರೈಟ್ ಮಣ್ಣು ಪಶ್ಚಿಮ ಘಟ್ಟಗಳು,ಪೂರ್ವ ಘಟ್ಟಗಳು,ಛೋಟನಾಗಪುರ ಪ್ರಸ್ಥಭೂಮಿ, ಮೇಘಾಲಯ ಪ್ರಸ್ಥಭೂಮಿ,ರಾಜಮಹಲ್ ಬೆಟ್ಟಗಳು,ವಿಂಧ್ಯಾ ಮತ್ತು ಸಾತ್ಪುರ ಸರಣಿಗಳಲ್ಲಿ ಹಂಚಿಕೆಯಾಗಿದೆ.ಇದು 2.48 ಲಕ್ಷ ಚ.ಕಿ.ಮೀ. ಪ್ರದೇಶ ವನ್ನಾವರಿಸಿದೆ.

9.ಕಪ್ಪು ಮಣ್ಣು ಮತ್ತು ಕೆಂಪು ಮಣ್ಣುಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

| **ಕಪ್ಪು ಮಣ್ಣು** | **ಕೆಂಪು ಮಣ್ಣು** |
|---|---|
| 1. ಬಸಾಲ್ಟ್ ಶಿಲಾಕಣಗಳಿಂದ ಉತ್ಪತ್ತಿಯಾಗಿದೆ.<br>2.ಕಪ್ಪುಮಣ್ಣು ಕಡು ಬೂದು ಮತ್ತು ಕಪ್ಪು ಬಣ್ಣವನ್ನು ಹೊಂದಿದೆ<br>3.ಇದರಲ್ಲಿ ಜೇಡಿ ಮಿಶ್ರಣ ಹೆಚ್ಚು. ಒತ್ತೊತ್ತಾದ ಕಣಗಳಿಂದ ರಚನೆಯಾಗಿದ್ದು ದೀರ್ಘಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ.<br>4.ಭಾರತದ ದಖನ್ ಪ್ರಸ್ಥಭೂಮಿಯ ಬಸಾಲ್ಟ್ ಶಿಲಾವಲಯದಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ. | 1.ಗ್ರಾನೈಟ್,ನೀಸ್ ಮತ್ತು ಇತರೆ ಸ್ಫಟಿಕ ಶಿಲೆಗಳ ಶಿಥಿಲೀಕರಣದ ವಸ್ತುಗಳಿಂದ ಉತ್ಪತ್ತಿಯಾಗಿದೆ .<br>2.ಸಾಮಾನ್ಯವಾಗಿ ಈ ಮಣ್ಣು ಕೆಂಪು ಮತ್ತು ಕೆಂಪುಕಂದು ಬಣ್ಣವುಳ್ಳದ್ದು.<br>3.ಕೆಂಪುಮಣ್ಣಿನಲ್ಲಿ ಮರಳಿನಾಂಶ ಹೆಚ್ಚು ಮತ್ತು ಜೇಡಿಯ ಪ್ರಮಾಣ ಕಡಿಮೆ ಆದ್ದರಿಂದ ತೇವಾಂಶ ಸಂಗ್ರಹ ಸಾಮರ್ಥ್ಯ ಕಡಿಮೆ.<br>4.ತಮಿಳುನಾಡಿನಲ್ಲಿ ಕೆಂಪುಮಣ್ಣು ವಿಶಾಲವಾದ ಪ್ರದೇಶದಲ್ಲಿ ಹಂಚಿಕೆಯಾಗಿದೆ. |

10.ಮರುಭೂಮಿ ಮಣ್ಣು ವಿವಿಧ ಬೆಳೆಗಳನ್ನು ಬೆಳೆಯಲು ಉಪಯುಕ್ತವಲ್ಲ.ಏಕೆ? ಅಥವಾ ಮರುಭೂಮಿ ಮಣ್ಣಿನ ಲಕ್ಷಣಗಳನ್ನು ತಿಳಿಸಿ.

- ಈ ಮಣ್ಣು ಸುಲಭವಾಗಿ ಪುಡಿಯಾಗುವ ಗುಣವುಳ್ಳದ್ದು ಮತ್ತು ಇದರಲ್ಲಿ ಉಪ್ಪಿನಂಶ ಹೆಚ್ಚು
- ಇದರಲ್ಲಿ ಮರಳಿನ ಪ್ರಮಾಣ ಹೆಚ್ಚು
- ತೇವಾಂಶ ಮತ್ತು ಸಸ್ಯಾಂಶಗಳು ಕಡಿಮೆ.
- ವಿವಿಧ ಬೆಳೆ ಬೆಳೆಯಲು ಉಪಯುಕ್ತವಲ್ಲ.
- ನೀರಾವರಿ ಸೌಲಭ್ಯವಿರುವಲ್ಲಿ ಕೆಲವು ಬೆಳೆಗಳನ್ನು ಬೆಳೆಯಬಹುದು.

## ಅಧ್ಯಾಯ–5

## ಭಾರತದ ಅರಣ್ಯ ಸಂಪತ್ತು

### I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ

1.ಅರಣ್ಯ/ಕಾಡು ಎಂದರೇನು?

–ವೃಕ್ಷ ಮತ್ತು ಇತರೆ ಸಸ್ಯಸಂಕುಲಗಳಿಂದ ಆವರಿಸಿದ ವಿಶಾಲವಾದ ಭೂ ಭಾಗವನ್ನು ಅರಣ್ಯ ಎನ್ನವರು.

2.ವರ್ಷದ ಯಾವುದೇ ಕಾಲದಲ್ಲೂ ಎಲೆಗಳನ್ನು ಉದುರಿಸದೆ ಯಾವಾಗಲೂ –ಸದಾಹಸಿರಾಗಿರುವ ಅರಣ್ಯಗಳು ಯಾವುವು?

– ಉಷ್ಣವಲಯದ ನಿತ್ಯಹರಿದ್ವರ್ಣದ ಅರಣ್ಯ/ಕಾಡುಗಳು

3.ಮಾನ್ಸೂನ್ ಅರಣ್ಯಗಳನ್ನು ಈ ರೀತಿಯೂ ಕರೆಯುವರು

– ಪರ್ಣಪಾತಿ ಅರಣ್ಯ /ಉಷ್ಣವಲಯದ ಎಲೆ ಉದುರಿಸುವ ಅರಣ್ಯಗಳು

4.ಹಿಮಾಲಯ ಪರ್ವತಗಳಲ್ಲಿ ಯಾವ ವಿಧದ ಕಾಡುಗಳಿವೆ?

–ಪರ್ವತ ಕಾಡು/ಅರಣ್ಯಗಳು

5.ಭಾರತದ ಪೂರ್ವ ಕರಾವಳಿಯ ನದಿಮುಖಜ ಭೂಮಿಗಳಲ್ಲಿ ಕಂಡು ಬರುವ ಕಾಡುಗಳಾವುವು? – ಮ್ಯಾಂಗ್ರೋವ್ ಕಾಡುಗಳು

6.ಭಾರತದಲ್ಲಿ ಯಾವ ರಾಜ್ಯವು ಅತೀ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿದೆ? – ಮಧ್ಯಪ್ರದೇಶ

7.ಭಾರತದಲ್ಲಿ ಯಾವ ರಾಜ್ಯವು ಅತೀ ಕಡಿಮೆ ಅರಣ್ಯ ಪ್ರದೇಶವನ್ನು ಹೊಂದಿದೆ? – ಗೋವಾ

8.ನಾಗಾರ್ಜುನ ಸಾಗರ ವನ್ಯಜೀವಿಧಾಮವು ಯಾವ ರಾಜ್ಯದಲ್ಲಿದೆ?

– ತೆಲಂಗಾಣ

9.ವನ್ಯ ಜೀವಿಧಾಮಗಳೆಂದರೇನು?

– ವನಜೀವಿಗಳಿಗೆ ರಕ್ಷಣೆ ನೀಡುವ ಸ್ಥಳಗಳನ್ನು ವನ್ಯ ಜೀವಿಧಾಮಗಳು ಎನ್ನವರು.

10.ಜೀವಿ ಸಂರಕ್ಷಣಾವಲಯ ಎಂದರೇನು?

– ಸಂರಕ್ಷಿಸಲ್ಪಟ್ಟ ಭೂಪ್ರದೇಶಗಳ ವಿಶೇಷವಾದ ಒಂದು ಭಾಗ ಅಥವಾ ಕರಾವಳಿಯ ಪರಿಸರವನ್ನು ಜೀವಿಸಂರಕ್ಷಣಾವಲಯ ಎನ್ನವರು.

### II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.:

1.ಅರಣ್ಯಗಳ ಪ್ರಾಮುಖ್ಯತೆ / ಉಪಯೋಗಗಳನ್ನು ತಿಳಿಸಿ.

- ಅರಣ್ಯಗಳು ಭಾರತದ ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದಾಗಿವೆ.
- ಅರಣ್ಯಗಳು ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುತ್ತವೆ.
- ಅರಣ್ಯಗಳು ಜಾನುವಾರುಗಳಿಗೆ ಬೇಕಾದ ಮೇವು ಮತ್ತು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುತ್ತವೆ.

- ಅರಣ್ಯಗಳು ಪರೋಕ್ಷವಾಗಿ ಮೇಲ್ಮೈ ಲಕ್ಷಣಗಳನ್ನು ಸಂರಕ್ಷಿಸುತ್ತವೆ.
- ಹರಿಯುವ ನೀರಿನ ರಭಸವನ್ನು ಮಿತಗೊಳಿಸಿ,ಪ್ರವಾಹ ಮತ್ತು ಮಣ್ಣಿನ ಸವೆತವನ್ನು ನಿಯಂತ್ರಿಸುತ್ತವೆ.
- ಮರುಭೂಮೀಕರಣವನ್ನು ತಡೆಯುತ್ತವೆ.
- ಮಣ್ಣಿನ ಫಲವತ್ತತೆಯನ್ನು ವೃದ್ಧಿಸಲು ನೆರವಾಗುತ್ತವೆ.
- ವಾಯುಗುಣವನ್ನು ಸಮತೋಲನ ಗೊಳಿಸಲು ಸಹಾಯಕ
- ಇವು ವನ್ಯಜೀವಿಗಳಿಗೆ ಆಶ್ರಯ ನೀಡುತ್ತವೆ.( ಯಾವುದಾದರು 4)

2.ಭಾರತದ ಅರಣ್ಯಗಳ ವಿಧಗಳನ್ನು ಪಟ್ಟಿಮಾಡಿ .

ಭಾರತದಲ್ಲಿ 6 ವಿಧದ ಅರಣ್ಯಗಳನ್ನು ಕಾಣುತ್ತೇವೆ.

1.ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು 2.ಉಷ್ಣವಲಯದ ಎಲೆ ಉದುರಿಸುವ ಕಾಡುಗಳು 3.ಕುರುಚಲು ಸಸ್ಯ ಮತ್ತು ಹುಲ್ಲುಗಾವಲು 4.ಮರುಭೂಮಿ ಸಸ್ಯವರ್ಗ 5.ಪರ್ವತ ಕಾಡುಗಳು 6.ಮಾಂಗ್ರೋವ್ ಕಾಡುಗಳು.

3.ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳ ಲಕ್ಷಣಗಳನ್ನು ತಿಳಿಸಿ.

- ಈ ವಿಧದ ಅರಣ್ಯಗಳು 250 ಸೆಂ.ಮೀ. ಗಳಿಗಿಂತ ಹೆಚ್ಚು ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತವೆ.
- ಈ ಕಾಡುಗಳು ದಟ್ಟವಾಗಿವೆ ಮತ್ತು ಇಲ್ಲಿ ಮರಗಳು ಎತ್ತರಕ್ಕೆ ಬೆಳೆಯುತ್ತವೆ.
- ಮರಗಿಡಗಳು ಯಾವುದೇ ಒಂದೇ ಅವಧಿಯಲ್ಲಿ ಎಲೆಗಳನ್ನು ಉದುರಿಸುವುದಿಲ್ಲ. ಹೀಗಾಗಿ ಅವು ಸದಾಹಸಿರಾಗಿರುತ್ತವೆ.
- ಇಲ್ಲಿ ಬೆಳೆಯುವ ಪ್ರಮುಖ ಮರಗಳು :ತೇಗ, ಬೀಟೆ, ಎಬೋನಿ, ಮಹೊಗನಿ,ಗುರ್ಜಾನ್ ಮತ್ತು ಚಂಪ.

4.ಉಷ್ಣವಲಯದ ಎಲೆ ಉದುರಿಸುವ ಕಾಡುಗಳ ಲಕ್ಷಣಗಳನ್ನು ತಿಳಿಸಿ.

- ಇವುಗಳನ್ನು ಪರ್ಣಪಾತಿ ಅರಣ್ಯ ಎಂದು ಕರೆಯುವರು.
- ಇವು ವರ್ಷದಲ್ಲಿ –100–200 ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿ ಕಂಡು ಬರುತ್ತವೆ.
- ಈ ಅರಣ್ಯಗಳ ಮರಗಳು ವಸಂತ ಋತು ಮತ್ತು ಬೇಸಿಗೆಯ ಆರಂಭದಲ್ಲಿ ತಮ್ಮ ಎಲೆಗಳನ್ನು ಉದುರಿಸುತ್ತವೆ. ಹೀಗಾಗಿ ಇವುಗಳನ್ನು ಮಾನ್ಸೂನ್ ಕಾಡುಗಳು ಎನ್ನುವರು.
- ನಮ್ಮ ದೇಶದಲ್ಲಿ ಇವು ವಿಶಾಲವಾಗಿ ಹಂಚಿಕೆಯಾಗಿವೆ.
- ಇಲ್ಲಿನ ಮರಗಳು: ತೇಗ,ಸಾಲ್,ಶ್ರೀಗಂಧ, ಕೆಂದಾಳೆ, ತಪಸಿಮರ, ಮತ್ತಿ, ದೊಡ್ಡಬಾಗೆ, ಮಾವು.ಬೇವು ಇತ್ಯಾದಿ.

5.ಮಾಂಗ್ರೋವ್ ಕಾಡುಗಳ ಲಕ್ಷಣಗಳನ್ನು ತಿಳಿಸಿ.

- ಈ ಕಾಡುಗಳು ಅಧಿಕ ಮಳೆ ಬೀಳುವ ಜವುಗು ಪ್ರದೇಶ,ನದಿ ಮುಖಜ ಭೂಮಿ ಮತ್ತು ಉಬ್ಬರವಿಳಿತಗಳುಳ್ಳ ಸಮುದ್ರ ತೀರಗಳಲ್ಲಿ ಕಂಡು ಬರುತ್ತವೆ.
- ಈ ಕಾಡುಗಳು ಸಮುದ್ರದ ಕಡೆಗೆ ಬಾಗಿರುವ ಕೊಂಬೆಗಳಿಂದ ಬೆಳೆದಿರುವ ಬಿಳಿಲುಗಳು ಮರಗಳಿಗೆ ಆಧಾರವಾಗಿರುತ್ತವೆ.
- ಬಿಳಿಲುಗಳು ಸಮುದ್ರದ ನೀರಿನಲ್ಲಿ ಮುಳುಗಿರುತ್ತವೆ.
- ಭಾರತದಲ್ಲಿ ಪೂರ್ವ ಕರಾವಳಿಯ ನದಿಮುಖಜ ಭೂಮಿಗಳಲ್ಲಿ ಹೆಚ್ಚು ಕಂಡುಬರುತ್ತವೆ. ಹಾಗೂ ಅಲ್ಲಲ್ಲಿ ಚದುರಿದಂತೆ ಪಶ್ಚಿಮ ಕರಾವಳಿಯಲ್ಲಿ ಕಂಡು ಬರುವವು.
- ಇಲ್ಲಿನ ಪ್ರಮುಖ ಮರಗಳು ಸುಂದರಿ,ಬೆತ್ತ ,ಜರಿಗಿಡ,ತಾಳೆ,ಕೆಂದಾಳೆ, ಕೇದಿಗೆ.

6.ಅರಣ್ಯ ನಾಶಕ್ಕೆ ಕಾರಣಗಳೇನು? ಅಥವಾ ಇತ್ತೀಚಿನ ದಿನಗಳಲ್ಲಿ ಅರಣ್ಯಗಳ ಕ್ಷೇತ್ರವು ಕಡಿಮೆಯಾಗುತ್ತಿದೆ ಇದಕ್ಕೆ ಕಾರಣಗಳೇನು?

- ಕೃಷಿ ಕ್ಷೇತ್ರದ ವಿಸ್ತರಣೆ
- ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ
- ನೀರಾವರಿ ಯೋಜನೆಗಳ ನಿರ್ಮಾಣ
- ಕೈಗಾರಿಕೀಕರಣ,ನಗರೀಕರಣ
- ಅತಿಯಾಗಿ ಮೇಯಿಸುವಿಕೆ
- ಕಾಡ್ಗಿಚ್ಚು.

7.ಅರಣ್ಯ ಸಂರಕ್ಷಣಾ ವಿಧಾನಗಳು / ಅರಣ್ಯ ಸಂರಕ್ಷಣೆ ತೆಗೆದುಕೊಳ್ಳುವ ಕ್ರಮಗಳನ್ನು ತಿಳಿಸಿ

- ಅರಣ್ಯನಾಶದ ನಿಯಂತ್ರಣ
- ಮಿತಿಮೀರಿ ಮೇಯಿಸುವುದನ್ನು ತಡೆಗಟ್ಟುವುದು.
- ಕಾಡ್ಗಿಚ್ಚು ನಿಯಂತ್ರಣ
- ಅರಣ್ಯ ಅತಿಕ್ರಮಣದ ತಡೆ
- ಅರಣ್ಯಗಳಲ್ಲಿ ಕೀಟ ಮತ್ತು ರೋಗಗಳ ನಿಯಂತ್ರಣ
- ಮರಗಳ ಕಳ್ಳಸಾಗಾಣೆ ತಡೆ
- ಅರಣ್ಯನಾಶ ನಿಯಂತ್ರಣ ಕಾಯಿದೆಯನ್ನು ಜಾರಿಗೆ ತರುವುದು
- ಅರಣ್ಯ ಬೆಳೆಸಲು ಪ್ರೋತ್ಸಾಹ
- ಅರಣ್ಯ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ ಅರಿವನ್ನುಂಟುಮಾಡುವುದು.

8.ಜೀವಿ ಸಂರಕ್ಷಣಾ ವಲಯಗಳ ಪ್ರಮುಖ ಉದ್ದೇಶಗಳೇನು?

– ಜೀವಿಸಂರಕ್ಷಣೆ –ಸಂಶೋಧನೆ –ಶಿಕ್ಷಣ –ಸ್ಥಳೀಯರನ್ನು ಇದರಲ್ಲಿ ಭಾಗಿಯಾಗುವಂತೆ ಮಾಡುವುದು.

ಅಧ್ಯಾಯ-6

## ಭಾರತದ ಜಲಸಂಪನ್ಮೂಲಗಳು

### I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ

1.ನೀರಾವರಿ ಎಂದರೇನು?

-ವ್ಯವಸಾಯದ ಭೂಮಿಗೆ ಕೃತಕವಾಗಿ ಕಾಲುವೆ,ಬಾವಿ ಮತ್ತು ಕೆರೆಗಳಿಂದ ನೀರು ಸರಬರಾಜು ಮಾಡುವುದನ್ನು ನೀರಾವರಿ ಎನ್ನುವರು. ಅಥವಾ ಕೃಷಿಯ ಉದ್ದೇಶಕ್ಕೆ ಕೃತಕವಾಗಿ ನೀರು ಪೂರೈಕೆ ಮಾಡುವುದನ್ನು ನೀರಾವರಿ ಎನ್ನುವರು.

2.ಭೂಮಿಯ ಮೇಲಿನ ನೀರಿನ ಮೂಲಗಳು ಯಾವುವು?

- ನದಿಗಳು ಮತ್ತು ಸರೋವರಗಳು .

3.ಅಂತರ್ಜಲದ ನೀರಿನ ಮೂಲಗಳಿಗೆ ಉದಾಹರಣೆ ಕೊಡಿ.

-ಬಾವಿ ಮತ್ತು ಚಿಲುಮೆಗಳು

4.ಕಾಲುವೆ ನೀರಾವರಿಯ ಎರಡು ವಿಧಗಳು ಯಾವುವು?

-1) ಪ್ರವಾಹ ಕಾಲುವೆಗಳು 2) ಸರ್ವಕಾಲಿಕ ಕಾಲುವೆಗಳು.

5.ಸ್ವತಂತ್ರ ಭಾರತದ ಮೊದಲ ವಿವಿದೋದ್ದೇಶ ಯೋಜನೆ ಯಾವುದು? ಅಥವಾ ಅಮೆರಿಕಾ ಸಂಯುಕ್ತ ಸಂಸ್ಥಾನದ ಟೆನಿಸ್ಸಿ ಕಣಿವೆ ಯೋಜನೆ ಮಾದರಿಯಲ್ಲಿ ನಿರ್ಮಿಸಿದ ಯೋಜನೆ ಯಾವುದು?

-ದಾಮೋದರ ನದಿ ಕಣಿವೆ ಯೋಜನೆ.

6.ಹಿರಾಕುಡ್ ಯೋಜನೆ ಯಾವ ನದಿಗೆ ನಿರ್ಮಿಸಲಾಗಿದೆ.?- ಮಹಾನದಿ

7.ಭಾರತದಲ್ಲಿಯೇ ಅತ್ಯಂತ ಎತ್ತರವಾದ ಮತ್ತು ಪ್ರಮುಖವಾದ ವಿವಿದೋದ್ದೇಶ ಯೋಜನೆ - ಭಾಕ್ರಾನಂಗಲ್ ಯೋಜನೆ.(ಸಟ್ಲೇಜ್ ನದಿಗೆ ನಿರ್ಮಿಸಲಾಗಿದೆ.)

8.ಭಾಕ್ರಾನಂಗಲ್ ಯೋಜನೆಯ ಮತ್ತೊಂದು ಹೆಸರು

- ಗೋವಿಂದ ಸಾಗರ

9.ಕೋಸಿ ಯೋಜನೆಯ ಮುಖ್ಯ ಉದ್ದೇಶವೇನು?

- ಪ್ರವಾಹ ನಿಯಂತ್ರಣ.

10.ಭಾರತ ಮತ್ತು ನೇಪಾಳಗಳ ಜಂಟಿ ಯೋಜನೆ -ಕೋಸಿಯೋಜನೆ .

11.ತುಂಗಭದ್ರಾ ಯೋಜನೆಯ ಮತ್ತೊಂದು ಹೆಸರು - ಪಂಪಸಾಗರ

12.ಕರ್ನಾಟಕದ ದೊಡ್ಡ ವಿವಿದೋದ್ದೇಶ ಯೋಜನೆ ಯಾವುದು?

- ಕೃಷ್ಣಾ ಮೇಲ್ದಂಡೆ ಯೋಜನೆ

13.ರಿಹಾಂದ್ ಯೋಜನೆ ಜಲಾಶಯದ ಹೆಸರು

-ಗೋವಿಂದವಲ್ಲಭಪಂತ್ ಸಾಗರ

14.ದಕ್ಷಿಣ ಭಾರತದಲ್ಲೇ ಉದ್ದವಾದ ನದಿ ಯಾವುದು? -ಗೋದಾವರಿ

15.ಗಂಗಾ ನದಿಯ ಅತ್ಯಂತ ಉದ್ದವಾದ ಉಪನದಿ ಯಾವುದು?

- ಯಮುನ

### II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.:

1.ನೀರು/ ಜಲಸಂಪನ್ಮೂಲದ ಪ್ರಾಮುಖ್ಯತೆಯನ್ನು ತಿಳಿಸಿ.

- ನೀರು ಅತ್ಯಮೂಲ್ಯ ನೈಸರ್ಗಿಕ ಸಂಪನ್ಮೂಲ
- ನೀರಿಲ್ಲದೆ ಸುಸ್ಥಿರ ಜೀವನ ಸಾಧ್ಯವಿಲ್ಲ.
- ಮಾನವನಿಗೆ ಕುಡಿಯಲು,ಅಡಿಗೆಗೆ,ಸ್ವಚ್ಛತೆಗೆ ನೀರು ಅವಶ್ಯಕ
- ವ್ಯವಸಾಯ,ವಿದ್ಯುಚ್ಛಕ್ತಿ ತಯಾರಿಕೆ ಕೈಗಾರಿಕೆ , ನೌಕಾಯಾನ, ಮೀನುಗಾರಿಕೆಗೆ ನೀರು ಅವಶ್ಯಕ.

2.ಬ್ರಹ್ಮಪುತ್ರ ನದಿಯನ್ನು ಕುರಿತು ಬರೆಯಿರಿ

- ಇದು ಮಾನಸ ಸರೋವರದ ಸಮೀಪ ಚೆಮಯುಂಗ್‌ಡುಂಗ್ ಎಂಬಲ್ಲಿ (ಟಿಬೆಟ್) ಉಗಮ ಹೊಂದುತ್ತದೆ.
- ಆರಂಭದಲ್ಲಿ ಪೂರ್ವಾಭಿಮುಖವಾಗಿ ಹರಿದು ಅರುಣಾಚಲ ಪ್ರದೇಶದಲ್ಲಿ ಕಿರಿದಾದ ಕಂದರವೊಂದರ ಮೂಲಕ ಭಾರತವನ್ನು ಪ್ರವೇಶಿಸುತ್ತದೆ.
- ಇದರ ಉದ್ದ 2589 ಕಿಮೀ. ಬಾಂಗ್ಲದಲ್ಲಿ ಗಂಗಾನದಿಯನ್ನು ಸೇರುತ್ತದೆ.

3.ಭಾರತಕ್ಕೆ ನೀರಾವರಿಯು ಅತ್ಯಗತ್ಯ ಏಕೆ?

- ಭಾರತವು ಕೃಷಿ ಪ್ರಧಾನ ದೇಶ ಆದ್ದರಿಂದ ಕೃಷಿಗೆ ಅವಶ್ಯಕವಾದ ನೀರು ಸರಬರಾಜು ಅತ್ಯಗತ್ಯ.
- ಭಾರತದ ಕೃಷಿಯು ಬಹುಭಾಗ ಮಾನ್ಸೂನ್ ಮಳೆಯನ್ನಾಧರಿಸಿದೆ. ಆದರೆ ಮಳೆಯ ಹಂಚಿಕೆಯು ಋತುಕಾಲಿಕ,ಅಕಾಲಿಕ ಮತ್ತು ಅಸಮಾನತೆಯಿಂದ ಕೂಡಿದೆ.
- ಕೆಲವು ಬೆಳೆಗಳಿಗೆ ಹೆಚ್ಚಿನ ಪ್ರಮಾಣದ ಹಾಗೂ ನಿರಂತರವಾದ ನೀರಿನ ಪೂರೈಕೆ ಅಗತ್ಯ ಉದಾ:ಭತ್ತ,ಕಬ್ಬು
- ಅಧಿಕ ಇಳುವರಿ ಮತ್ತು ಉತ್ಪಾದನೆಗಾಗಿಯೂ ನಿರಂತರ ನೀರಿನ ಪೂರೈಕೆ ಅಗತ್ಯ.

4.ಭಾರತದಲ್ಲಿ ಬಾವಿ ನೀರಾವರಿಯು ಪ್ರಮುಖ ಸ್ಥಾನ ಪಡೆದಿದೆ.ಎಂದು ಹೇಗೆ ಹೇಳುವಿರಿ.

- ಇದು ಭಾರತದ ಅತಿ ಪ್ರಮುಖವಾದ ನೀರಾವರಿ ವಿಧಾನವಾಗಿದೆ.
- ನಮ್ಮ ದೇಶದ ಒಟ್ಟು ನೀರಾವರಿ ಕ್ಷೇತ್ರದಲ್ಲಿ ಶೇ60.7 ಭಾಗವು ಬಾವಿ ನೀರಾವರಿ ಸೌಕರ್ಯ ಹೊಂದಿದೆ.
- ಬಾವಿ ನೀರಾವರಿ ಕಡಿಮೆ ಮಳೆಯಾಗುವ ಪ್ರದೇಶದಲ್ಲಿಯೂ ಸಾಧ್ಯ, ಕಡಿಮೆ ವೆಚ್ಚದಲ್ಲಿ ಸುಲಭವಾಗಿ ಬಾವಿ ತೋಡಬಹುದು,
- ವೆಚ್ಚದಾಯಕ ತಂತ್ರಜ್ಞಾನ ಬೇಕಾಗಿಲ್ಲ ಸಣ್ಣ ಭೂ ಹಿಡುವಳಿ ರೈತರಿಗೂ ಇದು ಲಭ್ಯವಾಗಬಲ್ಲದು.

5.ಪ್ರವಾಹ ಕಾಲುವೆ ಮತ್ತು ಸಾರ್ವಕಾಲಿಕ ಕಾಲುವೆಗಳ ನಡುವಿನ ವ್ಯತ್ಯಾಸ ತಿಳಿಸಿ.

| **ಪ್ರವಾಹ ಕಾಲುವೆ** | **ಸಾರ್ವಕಾಲಿಕ ಕಾಲುವೆ** |
|---|---|
| ಯಾವುದೇ ಅಣೆಕಟ್ಟೆಯನ್ನು ನಿರ್ಮಿಸದೇ ನೇರವಾಗಿ ನದಿಯಿಂದ ಕಾಲುವೆ ತೋಡಿ ಕೃಷಿ ಭೂಮಿಗೆ ನೀರು ಪೂರೈಸುವುದು ಪ್ರವಾಹ ಕಾಲುವೆ. | ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿಸಿ ಜಲಾಶಯಗಳಲ್ಲಿ ನೀರು ಸಂಗ್ರಹಿಸಿ ಅದನ್ನು ಕಾಲುವೆ ಮೂಲಕ ನೀರು ಪೂರೈಸುವುದೇ ಸಾರ್ವಕಾಲಿಕಕಾಲುವೆ. |

6.ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶ ಅಥವಾ ಉಪಯೋಗ/ ಪ್ರಾಮುಖ್ಯತೆಗಳನ್ನು ತಿಳಿಸಿ.

– ನೀರಾವರಿಪೂರೈಕ –ಪ್ರವಾಹಗಳ ನಿಯಂತ್ರಣ– ಜಲ ವಿದ್ಯುತ್ ತಯಾರಿಕೆ. –ಮಣ್ಣಿನ ಸವೆತದ ನಿಯಂತ್ರಣ –ಒಳನಾಡಿನ ನೌಕಾಯಾನ –ಒಳನಾಡಿನ ಮೀನುಗಾರಿಕೆ. –ಮನರಂಜನಾ ಸೌಲಭ್ಯ, –ಗೃಹಬಳಕೆ –ಕೈಗಾರಿಕೆಗಳಿಗೆ ನೀರು ಪೂರೈಕೆ – ಅರಣ್ಯ ಪೋಷಣೆ –ನಿರುಪಯುಕ್ತ ಭೂಮಿಯನ್ನು ಕೃಷಿಗಾಗಿ ಪರಿವರ್ತನೆ ಮಾಡುವುದು.

7.ದಾಮೋದರ್ ನದಿ ಕಣಿವೆ/ಭಾಕ್ರ–ನಂಗಲ್ ನದಿ ಕಣಿವೆ/ಹಿರಾಕುಡ್ ಯೋಜನೆ/ಕೋಸಿ ಯೋಜನೆ/ ರಿಹಾಂದ್ ಯೋಜನೆಗಳ ಉದ್ದೇಶಗಳೇನು?ಪ್ರವಾಹ ನಿಯಂತ್ರಣ – ನೀರಾವರಿ ಪೂರೈಕೆ – ಜಲವಿದ್ಯುತ್ ತಯಾರಿಕೆ – ಮೀನುಗಾರಿಕೆ –ಮಣ್ಣಿನ ಸವೆತದ ನಿಯಂತ್ರಣ –ಅರಣ್ಯ ಪೋಷಣೆ –ಒಳನಾಡಿನ ಜಲಸಾರಿಗೆ

8.ಹಿಮಾಲಯದ ನದಿಗಳು ಮತ್ತು ಪರ್ಯಾಯ ಪ್ರಸ್ಥಭೂಮಿಯ ನದಿಗಳನ್ನು ಅಥವಾ ಉತ್ತರ ಭಾರತದ ಮತ್ತು ದಕ್ಷಿಣ ಭಾರತದ ನದಿಗಳನ್ನು ಪಟ್ಟಿ ಮಾಡಿ.

| ಹಿಮಾಲಯದ ನದಿಗಳು | ಪರ್ಯಾಯ ಪ್ರಸ್ಥಭೂಮಿಯ ನದಿಗಳು |
|---|---|
| ಸಿಂಧೂ,ಗಂಗ ಮತ್ತು ಬ್ರಹ್ಮಪುತ್ರ ನದಿಗಳು,ಝೀಲಂ,ಚೇನಾಬ್, ಬಿಯಾಸ್, ರಾವಿ,ಸಟ್ಲೇಜ್,ಯಮುನ, ಘಾಗ್ರ,ಗಂಡಕ್, ರಾಮಗಂಗಾ, ಗೋಮತಿ, ಶಾರದ, ಸೋನ್ ಮತ್ತು ಕೋಸಿ. | ಮಹಾನದಿ,ಗೋದಾವರಿ, ಕೃಷ್ಣಾ, ಕಾವೇರಿ, ನರ್ಮದಾ ಮತ್ತು ತಾಪಿ ನದಿಗಳು ,ಭೀಮ, ತುಂಗಭದ್ರಾ, ಕೋಯ್ನಾ,ಮಲಪ್ರಭ,ಘಟಪ್ರಭ, ಹೇಮಾವತಿ,ಶಿಂಷಾ,ಕಬಿನಿ, ಸಬರಮತಿ ಮಾಂಡೋವಿ, ಜುವಾರಿ, ಶರಾವತಿ, ಕಾಳಿ, ನೇತ್ರಾವತಿ ಮತ್ತು ಪೆರಿಯಾರ್ |

## ಅಧ್ಯಾಯ–7
## ಭಾರತದ ಭೂ ಸಂಪನ್ಮೂಲಗಳು

1.ಭೂ ಬಳಕೆ ಎಂದರೇನು?

–ಭೂಮಿಯನ್ನು ವ್ಯವಸಾಯ,ಅರಣ್ಯ,ಹುಲ್ಲುಗಾವಲು,ವ್ಯವಸಾಯೇತರ ಬಳಕೆ ಮುಂತಾದ ವಿವಿಧ ಉದ್ದೇಶಗಳಿಗೆ ಬಳಸುವುದನ್ನೇ ಭೂ ಬಳಕೆ ಎನ್ನುವರು.

2.ಸಾಗುವಳಿಗೆ ಬಳಕೆ ಮಾಡದ ಭೂಮಿಯನ್ನು ಏನೆಂದು ಕರೆಯುವರು?

–ಪಾಳು ಭೂಮಿ

3.ಬಳಕೆಯಾಗದ ಕೃಷಿಯೋಗ್ಯ ಭೂಮಿ ಹೇಗೆ ನಿರ್ಮಿತವಾಗುತ್ತದೆ?

–ಇದು ನಿಗದಿತ ಮಣ್ಣಿನ ಸಾರದ ಕೊರತೆಯಿಂದಾಗಿ ಕೃಷಿಗೆ ಬಳಕೆ ಮಾಡದೆ ಹಾಗೇ ಬಿಡುವುದರಿಂದ ನಿರ್ಮಿತವಾಗುತ್ತದೆ.

4.ವ್ಯವಸಾಯ ಎಂದರೇನು?

–ಮನುಷ್ಯ ತನಗೆ ಅಗತ್ಯವಾದ ಆಹಾರ ಧಾನ್ಯ ಮತ್ತು ಕಚ್ಚಾ ಪದಾರ್ಥಗಳನ್ನು ಪೂರೈಸುವ ಬೆಳೆಗಳ ಪೋಷಣೆಗಾಗಿ ಭೂಮಿಯನ್ನು ಉಳುಮೆ ಮಾಡುವುದನ್ನು ವ್ಯವಸಾಯ ಎಂದು ಕರೆಯುವರು.

5.ಭಾರತದ ರೈತರು ಹೆಚ್ಚಾಗಿ ಜೂನ್–ಜುಲೈನಲ್ಲಿ ಬಿತ್ತನೆ ಮಾಡಿ, ಅಕ್ಟೋಬರ್ ನಲ್ಲಿ ಇಳುವರಿ ಪಡೆಯುತ್ತಾರೆ.ಏಕೆ?

–ಈ ಅವಧಿಯು ನೈಋತ್ಯ ಮಾನ್ಸೂನ್ ಮಾರುತಗಳ ಅವಧಿಯಾಗಿದ್ದು ರೈತರು ವ್ಯವಸಾಯಕ್ಕೆ ಮಾನ್ಸೂನನ್ನು ಅವಲಂಬಿಸಿದ್ದಾರೆ.

6.ಏಪ್ರಿಲ್–ಮೇ ತಿಂಗಳುಗಳಲ್ಲಿ ದ್ವಿದಳ ಧಾನ್ಯ ಮತ್ತು ತರಕಾರಿಗಳನ್ನು ಬೆಳೆಯುವುದು ಈ ಬಗೆಯ ಬೇಸಾಯಕ್ಕೆ ಉದಾಹರಣೆ–ಜೇಡ್‌ಬೇಸಾಯ

7.ತ್ವರಿತ ಅಥವಾ ಸಾಂದ್ರ ಬೇಸಾಯ ಎಂದರೇನು?

–ಚಿಕ್ಕ ಭೂ ಹಿಡುವಳಿಯಲ್ಲಿ ಅಧಿಕ ಬಂಡವಾಳ ಮತ್ತು ಕಾರ್ಮಿಕರನ್ನು ತೊಡಗಿಸುವ ಬೇಸಾಯ ಪದ್ಧತಿಗೆ ಸಾಂದ್ರ ಬೇಸಾಯ ಎನ್ನವರು

8.ಜೀವನಾಧಾರ ಬೇಸಾಯ ಎಂದರೇನು?

– ರೈತ ಮತ್ತು ಆತನ ಕುಟುಂಬದ ಬಳಕೆಗಾಗಿ ಬೆಳೆ ಬೆಳೆಯುವ ಕೃಷಿ ಪದ್ಧತಿಗೆ ಜೀವನಾಧಾರ ಬೇಸಾಯ ಎನ್ನುವರು.

9.ವಾಣಿಜ್ಯ ಬೇಸಾಯ ಎಂದರೇನು?

– ವ್ಯಾಪಾರದ ಉದ್ದೇಶಕ್ಕಾಗಿ ಬೆಳೆಗಳನ್ನು ಬೆಳೆಯುವ ಕೃಷಿ ವಿಧಾನಕ್ಕೆ ವಾಣಿಜ್ಯ ಬೇಸಾಯ ಎನ್ನವರು.

10.ಮಿಶ್ರ ಬೇಸಾಯ ಎಂದರೇನು?

–ಬೆಳೆಗಳ ಸಾಗುವಳಿ ಮತ್ತು ಪಶುಪಾಲನೆ ಜೊತೆಜೊತೆಯಾಗಿ ಸಾಗುವ ಕೃಷಿವಿಧಾನವನ್ನು ಮಿಶ್ರ ಬೇಸಾಯ ಎನ್ನುವರು

11.ನೆಡುತೋಟ ಬೇಸಾಯ ಎಂದರೇನು?

–ಮಾರಾಟಕ್ಕಾಗಿ ವಿಶಾಲವಾದ ತೋಟಗಳಲ್ಲಿ ಯಾವುದಾದರೂ ಒಂದು

ಬೆಳೆಯ ಸಾಗುವಳಿಗೆ ನೆಡುತೋಟದ ಬೇಸಾಯ ಎನ್ನವರು

12.ಒಣ ಬೇಸಾಯ ಎಂದರೇನು?

–ಅತಿ ಕಡಿಮೆ ಮಳೆ ಬೀಳುವ ಹಾಗೂ ನೀರಾವರಿ ಸೌಲಭ್ಯವಿಲ್ಲದ, ಇದ್ದರೂ ಅದು ಮಿತವಾಗಿರುವ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬೇಸಾಯ ಪದ್ಧತಿಯನ್ನು ಒಣ ಬೇಸಾಯ ಎನ್ನವರು.

13.ಆರ್ದ್ರ ಬೇಸಾಯ ಎಂದರೇನು?

–ಸಾಕಷ್ಟು ಮಳೆ ಬೀಳುವ ಪ್ರದೇಶಗಳಲ್ಲಿ ನೀರಾವರಿಯ ನೆರವಿಲ್ಲದೆ ಬೆಳೆಗಳನ್ನು ಬೆಳೆಯುವುದನ್ನು ಆರ್ದ್ರ ಬೇಸಾಯ ಎನ್ನವರು.

14.ಪಶ್ಚಿಮ ಕರಾವಳಿಯ ಉದ್ದಕ್ಕೂ ಹಾಗೂ ಇತರೆ ಹೆಚ್ಚು ಮಳೆಯಾಗುವ ಭಾಗಗಳಲ್ಲಿ ಕಂಡು ಬರುವ ಬೇಸಾಯ – ಆರ್ದ್ರ ಬೇಸಾಯ

15.ವರ್ಗಾವಣೆ ಬೇಸಾಯ ಎಂದರೇನು?

–ಕಾಡಿನ ಸ್ವಲ್ಪ ಭಾಗವನ್ನು ಕತ್ತರಿಸಿ,ಸುಟ್ಟು ವಿಸ್ತರಿಸಿ ಕೆಲವು ವರ್ಷಗಳ ಕಾಲ ಬೇಸಾಯ ಮಾಡಿ, ಅಲ್ಲಿನ ಮಣ್ಣಿನ ಸಾರವು ಕಡಿಮೆಯಾದ ಮೇಲೆ ಅದನ್ನು ಬಿಟ್ಟು ಮತ್ತೊಂದೆಡೆಗೆ ವಲಸೆ ಹೋಗಿ ಅದೇ ರೀತಿಯ ಬೇಸಾಯ ಕ್ರಮ ಮುಂದುವರಿಸುವುದನ್ನು ವರ್ಗಾವಣೆ ಬೇಸಾಯ ಎನ್ನುವರು.

16.ಸ್ಥಿರ ಅಥವಾ ಸ್ಥಾಯಿ ಬೇಸಾಯ ಎಂದರೇನು?

–ಶಾಶ್ವತವಾಗಿ ಒಂದೇ ಕಡೆ ನೆಲಸಿ ಸಾಗುವಳಿ ಮಾಡುವುದನ್ನು ಸ್ಥಿರ ಅಥವಾ ಸ್ಥಾಯಿ ಬೇಸಾಯ ಎನ್ನುವರು.

17.ನೀರಾವರಿ ಬೇಸಾಯ ಎಂದರೇನು?

–ನೀರಾವರಿ ಸಹಾಯದಿಂದ ಬೆಳೆ ಬೆಳೆಯುವ ಕೃಷಿ ವಿಧಾನವನ್ನು ನೀರಾವರಿ ಬೇಸಾಯ ಎನ್ನವರು

18.ಭಾರತಕ್ಕೆ ನೀರಾವರಿ ಬೇಸಾಯ ಅತ್ಯಾವಶ್ಯಕವಾದುದು.ಏಕೆ?

–ಭಾರತದಲ್ಲಿ ಮಳೆಯ ಹಂಚಿಕೆಯು ಋತುಕಾಲಿಕ,ಅಕಾಲಿಕ ಮತ್ತು ಅಸಮಾನವಾದುದು ಆದುದರಿಂದ ನೀರಾವರಿ ಬೇಸಾಯ ಅತ್ಯಗತ್ಯ.

19.ಬೆಳೆ ಋತು ಎಂದರೇನು?

– ಕೃಷಿ ಪ್ರದೇಶವೊಂದರಲ್ಲಿ ವಿವಿಧ ಬೆಳೆಗಳನ್ನು ಸಾಗುವಳಿ ಮಾಡುವ ನಿರ್ದಿಷ್ಟ ಅವಧಿಗೆ ಬೆಳೆ ಋತು ಎನ್ನುವರು.

20.ಮುಂಗಾರು ಬೆಳೆ ಋತು ಎಂದರೇನು?

–ಮಳೆಗಾಲದಲ್ಲಿ ಬೆಳೆ ಬೆಳೆಯುವುದನ್ನು ಮುಂಗಾರು ಬೆಳೆ ಋತು ಎನ್ನುವರು.

21.ಹಿಂಗಾರು ಬೆಳೆ ಋತು ಎಂದರೇನು?

–ಹಿಂಗಾರು ಮಳೆಗಾಲವೆಂದು ಕರೆಯುವ ಈಶಾನ್ಯ ಮಾನ್ಸೂನ್ ಆರಂಭದಲ್ಲಿ, ಅಂದರೆ ಅಕ್ಟೋಬರ್–ನವೆಂಬರ್‌ಗಳಲ್ಲಿ ಬಿತ್ತನೆ ಮಾಡಿ, ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಬೆಳೆ ಕಟಾವು ಮಾಡುವುದನ್ನು ಹಿಂಗಾರು ಬೆಳೆ ಋತು ಎನ್ನುವರು.

22.ಜೇಡ್ ಬೆಳೆ ಋತು ಎಂದರೇನು?

–ಮುಂಗಾರು ಮತ್ತು ಹಿಂಗಾರು ಬೆಳೆ ಋತುಗಳ ನಡುವಣ ಅವಧಿಯಲ್ಲಿ ಬೆಳೆಯುವ ಬೆಳೆಗಳು

23.ಬೆಳೆಯಿಡುವ ಮಾದರಿ ಎಂದರೇನು?

–ಒಂದು ನಿರ್ದಿಷ್ಟ ಅವಧಿಯಲ್ಲಿ ವಿವಿಧ ಬೆಳೆಗಳಿಂದ ಆವರಿಸಿರುವ ಪ್ರದೇಶದ ಅನುಪಾತವನ್ನು ಬೆಳೆಯಿಡುವ ಮಾದರಿ ಎನ್ನುವರು.

24.ವಾಣಿಜ್ಯ ಬೆಳೆಗಳಿಗೆ ಉದಾಹರಣೆ –ಕಬ್ಬು,ಹತ್ತಿ, ತಂಬಾಕು,ಎಣ್ಣೆಕಾಳುಗಳು

25.ಅತಿ ಹೆಚ್ಚು ಭತ್ತವನ್ನು ಬೆಳೆಯುವ ರಾಜ್ಯ ಯಾವುದು?

– ಪಶ್ಚಿಮ ಬಂಗಾಳ.

26.ಗೋಧಿಯ ಕಣಜ ಎಂದು ಕರೆಯುವ ರಾಜ್ಯ ಯಾವುದು?–ಪಂಜಾಬ್

27.ಭಾರತದಲ್ಲಿ ಹೆಚ್ಚು ಕಬ್ಬು ಉತ್ಪಾದಿಸುವ ರಾಜ್ಯ – ಉತ್ತರಪ್ರದೇಶ.

28.ಸುವರ್ಣ ಕ್ರಾಂತಿ ಎಂದರೇನು?

– ತೋಟಗಾರಿಕಾ ಬೆಳೆಗಳ(ಹಣ್ಣು,ತರಕಾರಿ,ಹೂಗಳು,ಬಾಳೆ) ಉತ್ಪಾದನೆಯಲ್ಲಿ ಪ್ರಗತಿ ಸಾಧಿಸುವುದಕ್ಕೆ ಸುವರ್ಣ ಕ್ರಾಂತಿ ಎನ್ನುವರು.

29.ಫ್ಲೋರಿಕಲ್ಚರ್/ಪುಷ್ಪಕೃಷಿ ಎಂದರೇನು?

–ಮಾರಾಟಕ್ಕಾಗಿ ಹೂವುಗಳನ್ನು ಸಾಗುವಳಿ ಮಾಡುವ ಕಲೆಗೆ ಫ್ಲೋರಿಕಲ್ಚರ್ /ಪುಷ್ಪಕೃಷಿ ಎನ್ನವರು

30.ಭಾರತದಲ್ಲಿ ಸ್ಥಳಾಂತರ ಬೇಸಾಯ ಕಡಿಮೆಯಾಗಿದೆ.ಏಕೆ?

–ಸ್ಥಿರ ಬೇಸಾಯ ಹೆಚ್ಚಾಗಿರುವುದು, ಹಾಗೂ ಸರ್ಕಾರವು ಸ್ಥಳಾಂತರ ಬೇಸಾಯವನ್ನು ನಿಷೇಧಿಸಿದೆ.

31.ತೋಟಗಾರಿಕಾ ಬೇಸಾಯ ಎಂದರೇನು?

–ಹಣ್ಣು,ತರಕಾರಿ,ಹೂವು,ಔಷಧೀಯ ಮತ್ತು ಅಲಂಕಾರಿಕ ಬೆಳೆಗಳನ್ನು ತೋಟಗಳಲ್ಲಿ ಕ್ರಮಬದ್ಧವಾಗಿ ಬೆಳೆಯುವುದನ್ನು ತೋಟಗಾರಿಕಾ ಬೇಸಾಯ ಎನ್ನವರು.

32.ಭಾರತವು ವಿವಿಧ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉತ್ತಮ ಸಾಮರ್ಥ್ಯ ಹೊಂದಿದೆ.ಏಕೆ?(ಕಾರಣ ಕೊಡಿ)

–ಭಾರತವು ತನ್ನ ವೈವಿಧ್ಯ ವಾಯುಗುಣ ಮತ್ತು ಮಣ್ಣಿನ ಪ್ರಕಾರಗಳಿಂದ ವಿವಿಧ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉತ್ತಮ ಸಾಮರ್ಥ್ಯ ಹೊಂದಿದೆ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.:**

1.ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು? ಅಥವಾ ಭೂ ಬಳಕೆಯು ವಿವಿಧ ಅಂಶಗಳಿಂದ ನಿರ್ಧರಿಸಲ್ಪಡುತ್ತದೆ.ಹೇಗೆ?

- ಭೂ ಮೇಲ್ಮೈ ಲಕ್ಷಣಗಳು
- ವಾಯುಗುಣ

- ಮಣ್ಣುಗಳು
- ಜನಸಾಂದ್ರತೆ
- ಸಾಮಾಜಿಕ,ಆರ್ಥಿಕ ಮತ್ತು ತಾಂತ್ರಿಕ ಅಂಶಗಳು

2.ಭಾರತದ ಭೂ ಬಳಕೆಯ ಮಾದರಿಗಳನ್ನು ತಿಳಿಸಿ

– ನಿವ್ವಳ ಸಾಗುವಳಿ ಭೂಮಿ –ಅರಣ್ಯ ಪ್ರದೇಶ –ಕೃಷಿಗಾಗಿ ದೊರೆಯದ ಭೂಮಿ –ಪಾಳು ಭೂಮಿ – ಬಳಕೆಯಾಗದ ಕೃಷಿಯೋಗ್ಯ ಭೂಮಿ –ಖಾಯಂ ಹುಲ್ಲಗಾವಲು ಮತ್ತು ಇತರೆ ಗೋಮಾಳ –ಇತರೆ ಭೂಮಿ

3.ಕೃಷಿ/ ವ್ಯವಸಾಯದ ಪ್ರಾಮುಖ್ಯತೆಯನ್ನು ತಿಳಿಸಿ.

- ದೇಶದ ಆರ್ಥಿಕಾಭಿವೃದ್ಧಿಯು ಕೃಷಿಯ ಪ್ರಗತಿಯನ್ನಾಧಾರಿಸಿದೆ.
- ಭಾರತದಲ್ಲಿ ಕೃಷಿಯು ಜೀವನಾಧಾರಿತ ಪ್ರಮುಖ ಮೂಲವಾಗಿದೆ.
- ಜನರು ಮತ್ತು ಜಾನುವಾರುಗಳಿಗೆ ಅಗತ್ಯವಾದ ಆಹಾರವನ್ನು ಪೂರೈಸುತ್ತದೆ.
- ದೇಶದ ತೃತೀಯ ವೃತ್ತಿಗಳಾದ ಸಾರಿಗೆ,ವ್ಯಾಪಾರ,ಬ್ಯಾಂಕಿಂಗ್,ವಿಮೆ, ರಫ್ತು ಮುಂತಾದವುಗಳಿಗೆ ನೆರವಾಗುತ್ತದೆ.
- ಇದು ಹಲವು ಕೈಗಾರಿಕೆಗಳ ಪ್ರಗತಿಗೂ ನೆರವಾಗುವುದು. ಉದಾ: ಹತ್ತಿ ಮತ್ತು ಸೆಣಬು ಜವಳಿ, ಸಕ್ಕರೆ ಕೈಗಾರಿಕೆ ಇತ್ಯಾದಿ.

4.ಕೃಷಿಯು ದ್ವಿತೀಯ ಮತ್ತು ತೃತೀಯ ವಲಯಗಳ ಅಭಿವೃದ್ಧಿಗೆ ಹೇಗೆ ಸಹಾಯಕ ವಾಗಿದೆ?

- ಕೃಷಿಯು ದೇಶದ ತೃತೀಯ ವೃತ್ತಿಗಳಾದ ಸಾರಿಗೆ,ವ್ಯಾಪಾರ,ಬ್ಯಾಂಕಿಂಗ್, ವಿಮೆ, ರಫ್ತು ಮುಂತಾದವುಗಳಿಗೆ ನೆರವಾಗುತ್ತದೆ.
- ಇದು ಹಲವು ಕೈಗಾರಿಕೆಗಳ ಪ್ರಗತಿಗೂ ನೆರವಾಗುವುದು. ಉದಾ: ಹತ್ತಿ ಮತ್ತು ಸೆಣಬು ಜವಳಿ, ಸಕ್ಕರೆ ಕೈಗಾರಿಕೆ ಇತ್ಯಾದಿ.
- ಕೃಷಿಯು ರಾಸಾಯನಿಕ ಮತ್ತು ಉಪಕರಣಗಳ ಕೈಗಾರಿಕೆಗಳಿಗೆ ಮಾರುಕಟ್ಟೆ ಒದಗಿಸುತ್ತದೆ.

5.ಮುಂಗಾರು ಮತ್ತು ಹಿಂಗಾರು ಬೆಳೆ ಋತುಗಳ ನಡುವಿನ ವ್ಯತ್ಯಾಸ ತಿಳಿಸಿ.

| ಮುಂಗಾರು ಬೆಳೆ ಋತು | ಹಿಂಗಾರು ಬೆಳೆ ಋತು |
|---|---|
| 1.ಮಳೆಗಾಲದಲ್ಲಿ ಬೆಳೆ ಬೆಳೆಯುವುದನ್ನು ಮುಂಗಾರು ಬೆಳೆ ಋತು ಎನ್ನುವರು.<br>2.ಈ ಋತುವಿನಲ್ಲಿ ನೈರುತ್ಯ ಮಾನ್ಸೂನ್ ಆರಂಭದಲ್ಲಿ ಅಂದರೆ ಜೂನ್–ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿ ಸೆಪ್ಟೆಂಬರ್–ಅಕ್ಟೋಬರ್‌ಗಳಲ್ಲಿ ಬೆಳೆ ಕಟಾವು ಮಾಡಲಾಗುತ್ತದೆ.<br>3.ಈ ಅವಧಿಯ ಪ್ರಮುಖ ಬೆಳೆ:ಭತ್ತ, ರಾಗಿ,ಜೋಳ, ಹತ್ತಿ,ನೆಲಗಡಲೆ, ತಂಬಾಕು | 1.ಹಿಂಗಾರು ಮಳೆ ಕಾಲದಲ್ಲಿ ಬೆಳೆ ಬೆಳೆಯುವುದು.<br>2.ಈಶಾನ್ಯ ಮಾನ್ಸೂನ್ ಆರಂಭದಲ್ಲಿ ಅಂದರೆ ಅಕ್ಟೋಬರ್–ನವೆಂಬರ್ ಗಳಲ್ಲಿ ಬಿತ್ತನೆ ಮಾಡಿ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಬೆಳೆ ಕಟಾವು ಮಾಡಲಾಗುವುದು.<br>3.ಈ ಅವಧಿಯ ಪ್ರಮುಖ ಬೆಳೆ: ಗೋಧಿ,ಬಾರ್ಲಿ,ಕಡಲೆ,ನಾರಗಸೆ. |

6.ಭಾರತದಲ್ಲಿ ಯಾವುದೇ ಪ್ರದೇಶದ ಬೆಳೆಯಿಡುವ ಮಾದರಿಯು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಇದಕ್ಕೆ ಕಾರಣಗಳೇನು?

– ಮೇಲ್ಮೈ ಲಕ್ಷಣಗಳು – ಮಣ್ಣು –ವಾಯುಗುಣ –ಭೂಹಿಡುವಳಿಯ ಗಾತ್ರ – ನೀರಿನ ಪೂರೈಕೆ –ರೈತರ ಆರ್ಥಿಕ ಪರಿಸ್ಥಿತಿ –ತಂತ್ರ ಜ್ಞಾನ.

7.ಭತ್ತ ಬೆಳೆಗೆ ಬೇಕಾಗುವ ಪರಿಸ್ಥಿತಿಗಳು ಅಥವಾ ಭೌಗೋಳಿಕ ಅಂಶಗಳಾವುವು?

- ಭತ್ತವು ಉಷ್ಣವಲಯದ ಬೆಳೆಯಾಗಿದ್ದು ಇದರ ಬೆಳೆಗೆ $18^0$ ರಿಂದ $25^0$ ಅಧಿಕ ಉಷ್ಣಾಂಶ ಮತ್ತು 100–200 ಸೆಂ.ಮೀ. ಅಧಿಕ ಮಳೆ ಅಗತ್ಯ.
- ಮೆಕ್ಕಲು ಮಣ್ಣು,ಜೇಡಿ ಮತ್ತು ಜೇಡಿ ಮಿಶ್ರಿತ ಮರಳು ಮಣ್ಣು ಈ ಬೆಳೆಗೆ ಸೂಕ್ತ.
- ಭತ್ತ ಗಿಡದ ತಳದಲ್ಲಿ ನೀರು ನಿಂತಿರಬೇಕು.ಆದುದರಿಂದ ಭೂಮಿ ಸಮತಟ್ಟಾಗಿರಬೇಕು.
- ಕಡಿಮೆ ಮಳೆ ಪ್ರದೇಶದಲ್ಲಿ ನೀರಾವರಿ ಅತ್ಯಾವಶ್ಯಕ.

8.ಗೋಧಿ ಬೆಳೆಗೆ ಬೇಕಾಗುವ ಭೌಗೋಳಿಕ ಅಂಶ/ಲಕ್ಷಣಗಳೇನು?

- ಗೋಧಿಯು ಸಮಶೀತೋಷ್ಣ ವಲಯದ ಬೆಳೆಯಾಗಿದೆ.
- ಇದರ ಬೆಳೆಗೆ ಸಾಧಾರಣ ಉಷ್ಣಾಂಶ $10^0$ ರಿಂದ $15^0$ ಸೆ.ಉಷ್ಣಾಂಶ ಬೇಕು.
- 50 ರಿಂದ 70 ಸೆಂ.ಮೀ. ಮಳೆ ಅಗತ್ಯ.
- ಮರಳು ಮಿಶ್ರಿತ ಮತ್ತು ಕಪ್ಪು ಮಣ್ಣು ಈ ಬೆಳೆಗೆ ಸೂಕ್ತವಾದುದು.

9.ಕಬ್ಬು ಬೇಸಾಯಕ್ಕೆ ಬೇಕಾಗುವ ಭೌಗೋಳಿಕ ಪರಿಸ್ಥಿತಿ/ಲಕ್ಷಣ/ಅಂಶಗಳಾವುವು?

- ಕಬ್ಬು ವಾರ್ಷಿಕ ಬೆಳೆ.ಹೀಗಾಗಿ ಇದರ ಬೇಸಾಯಕ್ಕೆ ನೀರಾವರಿ ಅಗತ್ಯ.
- ಇದಕ್ಕೆ ಅಧಿಕ ಉಷ್ಣಾಂಶ ಅಂದರೆ $21^0$ ರಿಂದ $26^0$ **ಸೆ.** ಬೇಕು
- ಅಧಿಕ ಮಳೆ 100 ರಿಂದ 150 ಸೆಂ.ಮೀ.ಅವಶ್ಯಕ.
- ಕಬ್ಬು ಬೆಳೆಗೆ ಮೆಕ್ಕಲು ಮತ್ತು ಜೇಡಿ ಮಿಶ್ರಿತ ಮರಳು ಮಣ್ಣು ಸೂಕ್ತವಾದುದು.

10.ತಂಬಾಕು ಬೆಳೆಗೆ ಬೇಕಾಗುವ ಭೌಗೋಳಿಕ ಅಂಶಗಳೇನು?

- ತಂಬಾಕು ಉಷ್ಣವಲಯದ ಬೆಳೆ.
- ಇದರ ಬೇಸಾಯಕ್ಕೆ ಅಧಿಕ ಉಷ್ಣಾಂಶ ಅಂದರೆ $21^0$ ರಿಂದ $23^0$

ಸೆ. ಬೇಕು ಮತ್ತು ಸಾಧಾರಣ ಮಳೆ 50 ರಿಂದ 100 ಸೆಂ.ಮೀ.ಅವಶ್ಯಕ.

- ತಂಬಾಕು ಬೆಳೆಗೆ ಮರಳು ಮಿಶ್ರಿತ ಜೇಡಿ ಮಣ್ಣು ಸೂಕ್ತವಾದುದು.
- ಈ ಬೆಳೆಗೆ ಸಾಕಷ್ಟು ರಾಸಾಯನಿಕ ಗೊಬ್ಬರ ಕೊಡಬೇಕು.

11.ಹತ್ತಿ ಬೆಳೆಗೆ ಬೇಕಾಗುವ ಭೌಗೋಳಿಕ ಅಂಶ/ಸನ್ನಿವೇಶಗಳೇನು?

- ಹತ್ತಿ ಉಷ್ಣವಲಯ ಮತ್ತು ಉಪ ಉಷ್ಣವಲಯದ ಬೆಳೆ.
- ಇದರ ಬೇಸಾಯಕ್ಕೆ **21$^0$** ರಿಂದ **24$^0$ ಸೆ.** ಉಷ್ಣಾಂಶ ಬೇಕು
- 50 ರಿಂದ 100 ಸೆಂ.ಮೀ.ವಾರ್ಷಿಕ ಮಳೆ ಬೇಕು.
- ಈ ಬೆಳೆಗೆ ಕಪ್ಪು ಮಣ್ಣು ಸೂಕ್ತವಾದುದು.

12.ಚಹಾ ಬೆಳೆಗೆ ಬೇಕಾಗುವ ಭೌಗೋಳಿಕ ಅಂಶ/ಸನ್ನಿವೇಶಗಳೇನು?

- ಚಹಾ ಉಷ್ಣವಲಯ ಮತ್ತು ಉಪ ಉಷ್ಣವಲಯದ ಬೆಳೆ.
- ಇದರ ಬೇಸಾಯಕ್ಕೆ **21$^0$** ರಿಂದ **30$^0$ ಸೆ.** ಉಷ್ಣಾಂಶ ಬೇಕು
- 150 ರಿಂದ 250 ಸೆಂ.ಮೀ.ವಾರ್ಷಿಕ ಮಳೆ ಬೇಕು.
- ಹೆಚ್ಚು ಸಸ್ಯಾಂಶವುಳ್ಳ ಆಳವಾದ ಫಲವತ್ತಾದ ಮಣ್ಣು ಈ ಬೆಳೆಗೆ ಸೂಕ್ತ.
- ಸಮುದ್ರ ಮಟ್ಟಕ್ಕೆ 1200 ರಿಂದ 2400 ಮೀ.ಎತ್ತರವುಳ್ಳ ಬೆಟ್ಟಗಳ ಇಳಿಜಾರು ಅವಶ್ಯಕ.

13.ಭಾರತದಲ್ಲಿ ತೋಟಗಾರಿಕೆಯ ಮಹತ್ವವನ್ನು ಕುರಿತು ವಿವರಿಸಿ.

- ಸಮರ್ಪಕ ಭೂ ಬಳಕೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಆದರ್ಶದಾಯಕ ಬಳಕೆ ಮತ್ತು ಗ್ರಾಮೀಣ ಸಮುದಾಯಕ್ಕೆ ಪರಿಣಿತ ಉದ್ಯೋಗ ಪೂರೈಕೆ ಮಾಡುವುದರೊಂದಿಗೆ ತೋಟಗಾರಿಕೆಯು ಭಾರತದ ಕೃಷಿಯನ್ನು ಹೆಚ್ಚು ಲಾಭದಾಯಕಗೊಳಿಸಲು ಉತ್ತೇಜನ ನೀಡುತ್ತದೆ.
- ಇದು ರಫ್ತು ವ್ಯಾಪಾರವನ್ನು ವೃದ್ಧಿಸುತ್ತದೆ.
- ಆಹಾರ ಭದ್ರತೆಗೆ ನೆರವಾಗುತ್ತದೆ.

14.ಇಂದು ಭಾರತವು ಒಂದು ಪ್ರಖ್ಯಾತ ತೋಟಗಾರಿಕಾ ಬೆಳೆ ಬೆಳೆಯುವ ದೇಶವಾಗಿ ಹೊರಹೊಮ್ಮಿದೆ.ಸಮರ್ಥಿಸಿ./ಹೇಗೆ?

- ಭಾರತದಲ್ಲಿ ವೈವಿಧ್ಯ ವಾಯುಗುಣ ಮತ್ತು ಮಣ್ಣಿನ ಪ್ರಕಾರಗಳಿಂದಾಗಿ ವಿವಿಧ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉತ್ತಮ ಸಾಮರ್ಥ್ಯವನ್ನು ಹೊಂದಿದೆ. ಆದುದರಿಂದ ಒಂದು ಪ್ರಖ್ಯಾತ ತೋಟಗಾರಿಕಾ ಬೆಳೆ ಬೆಳೆಯುವ ದೇಶವಾಗಿ ಹೊರಹೊಮ್ಮಿದೆ.

## ಅಧ್ಯಾಯ-8
## ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1.ಗಣಿಗಾರಿಕೆ ಎಂದರೇನು?

–ಭೂಮಿಯಿಂದ ಖನಿಜಗಳನ್ನು ಹೊರತೆಗೆಯುವ ಕಾರ್ಯವನ್ನು ಗಣಿಗಾರಿಕೆ ಎನ್ನವರು.

2.ಖನಿಜ ಎಂದರೇನು?

–ಖನಿಜವು ಒಂದು ನೈಸರ್ಗಿಕ ಅಜೈವಿಕ ಮೂಲಧಾತುವಾಗಿದ್ದು ಅದು ನಿಗದಿತ ರಾಸಾಯನಿಕ ಸಂಯೋಜನೆ ಮತ್ತು ಭೌತಿಕ ಗುಣಧರ್ಮಗಳನ್ನು ಹೊಂದಿರುತ್ತದೆ. ಉದಾಹರಣೆ:ಕಬ್ಬಿಣದ ಅದಿರು,ಮ್ಯಾಂಗನೀಸ್,ಬಾಕ್ಸೈಟ್ ಇತ್ಯಾದಿ.

3.ಭಾರತದ ಅತ್ಯಂತ ಪ್ರಮುಖವಾದ ಮಿಶ್ರಲೋಹ – ಮ್ಯಾಂಗನೀಸ್

4.ಅಲ್ಯೂಮಿನಿಯಂ ಲೋಹ ತಯಾರಿಕೆಗೆ ಅಗತ್ಯವಾದ ಮುಖ್ಯ ಕಚ್ಚಾವಸ್ತು ಯಾವುದು? – ಬಾಕ್ಸೈಟ್

5.ಭಾರತದಲ್ಲಿ ಅತಿ ಹೆಚ್ಚು ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿರುವ ರಾಜ್ಯಗಳು – ಒಡಿಶಾ,ಛತ್ತೀಸ್‌ಗರ್,ಜಾರ್ಖಂಡ್ ಮತ್ತು ಕರ್ನಾಟಕ

6.ಭಾರತಕ್ಕೆ ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳು ಅತಿ ಮುಖ್ಯ.ಏಕೆ?

– ನಮ್ಮ ದೇಶದಲ್ಲಿ ವಿದ್ಯುತ್ತಿನ ಅಪಾರವಾದ ಕೊರತೆಯಿರು ವುದರಿಂದ ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳು (ಸೌರಶಕ್ತಿ, ಗಾಳಿಶಕ್ತಿ) ಅತಿ ಮುಖ್ಯವಾಗಿವೆ.

7.ಭಾರತದಲ್ಲಿ ಅತ್ಯಧಿಕ ಬಾಕ್ಸೈಟ್ ನಿಕ್ಷೇಪ ಮತ್ತು ಉತ್ಪಾದನೆಗಳೆರಡರಲ್ಲೂ ಪ್ರಥಮ ಸ್ಥಾನದಲ್ಲಿರುವ ರಾಜ್ಯ ಯಾವುದು?–ಒಡಿಶಾ

8.ಅಭ್ರಕವನ್ನು ಟೆಲಿಫೋನ್ ಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ.ಏಕೆ?

–ಅಭ್ರಕವು ಶಾಖ ಮತ್ತು ವಿದ್ಯುತ್ತಿನ ಮಂದವಾಹಕವಾಗಿರುವುದರಿಂದ ಇದನ್ನು ಶಾಖ ನಿರೋಧಕ ಹಾಗೂ ವಿದ್ಯುತ್ ನಿರೋಧಕ ವಸ್ತುವಾಗಿ ಟೆಲಿಫೋನ್ ಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ.

9.ಇತ್ತೀಚೆಗೆ ಭಾರತದ ಅಭ್ರಕಾದ ರಫ್ತು ಪ್ರಮಾಣವು ಕಡಿಮೆಯಾಗಿದೆ.ಏಕೆ?

–ಹಲವು ರಾಷ್ಟ್ರಗಳಲ್ಲಿ ಕೃತಕ ಅಭ್ರಕವನ್ನು ಉತ್ಪಾದಿಸಿಕೊಳ್ಳುತ್ತಿರುವುದರಿಂದ

10.ಕಲ್ಲಿದ್ದಲನ್ನು ಬಹು ಉಪಯೋಗಿ ಖನಿಜ ಎನ್ನುವರು.ಏಕೆ?

–ಕಲ್ಲಿದ್ದಲನ್ನು ಕೀಟ ನಿರೋಧಕಗಳು,ಸ್ಫೋಟಕ ವಸ್ತುಗಳು,ಕೃತಕನಾರು ಕೃತಕ ರಬ್ಬರ್,ಪ್ಲಾಸ್ಟಿಕ್,ರಾಸಾಯನಿಕ ಗೊಬ್ಬರ ಮುಂತಾದವುಗಳ ತಯಾರಿಕೆಯಲ್ಲಿ ಬಳಸುವುದರಿಂದ ಇದನ್ನು ಬಹು ಉಪಯೋಗಿ ಖನಿಜ ಎನ್ನವರು.

11.ಸಸ್ಯಾವಶೇಷವುಳ್ಳ ಇಂಧನ ಖನಿಜ ಯಾವುದು?- ಕಲ್ಲಿದ್ದಲು.

12.ಭಾರತದಲ್ಲಿ ಮೊದಲು ಪೆಟ್ರೋಲಿಯಂ ಪತ್ತೆಯಾದ ಸ್ಥಳ ಯಾವುದು?

– ಅಸ್ಸಾಂನ ಮಾಕುಂ ಎಂಬಲ್ಲಿ

13.ಭಾರತದಲ್ಲಿ ಮೊದಲ ತೈಲ ಬಾವಿಯನ್ನು ಕೊರೆಸಲಾದ ಸ್ಥಳ
–ಅಂಕಲೇಶ್ವರ

14.ಭಾರತದ ಅತಿ ದೊಡ್ಡ ತೈಲ ನಿಕ್ಷೇಪ –ಬಾಂಬೆ ಹೈ.(1976 ರಿಂದ ತೈಲೋತ್ಪಾದನೆ ಆರಂಭಿಸಲಾಯಿತು)

15.ಭಾರತದಲ್ಲಿ ಮೊಟ್ಟ ಮೊದಲಿಗೆ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರವನ್ನು ಸ್ಥಾಪಿಸಿದ್ದ ಸ್ಥಳ ಯಾವುದು? –ಪಶ್ಚಿಮ ಬಂಗಾಳದ ಡಾರ್ಜಲಿಂಗ್

16.ಪರಮಾಣುಶಕ್ತಿ ಖನಿಜಗಳಿಗೆ ಉದಾಹರಣೆ
–ಯುರೇನಿಯಂ ಮತ್ತು ಥೋರಿಯಂ

17.ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳು ಯಾವುವು?
– ಸೌರಶಕ್ತಿ,ಪವನಶಕ್ತಿ (ಗಾಳಿ),ಜೈವಿಕ ಅನಿಲ ಶಕ್ತಿ,ಭೂ ಶಾಖಶಕ್ತಿ.

18.ಭಾರತಕ್ಕೆ ಜಲವಿದ್ಯುಚ್ಛಕ್ತಿ ಉತ್ಪಾದನಾ ಅಭಿವೃದ್ಧಿ ಅತ್ಯಾವಶ್ಯಕ ಏಕೆ ?
– ಭಾರತವು ಸಾಕಷ್ಟು ಕಲ್ಲಿದ್ದಲು,ಪೆಟ್ರೋಲಿಯಂ ಮತ್ತು ನೈಸರ್ಗಿಕಾನಿಲ ಗಳಂತಹ ಪಳೆಯುಳಿಕೆ ಇಂಧನಗಳನ್ನು ಹೊಂದಿಲ್ಲ ಆದುದರಿಂದ ಭಾರತಕ್ಕೆ ಜಲವಿದ್ಯುಚ್ಛಕ್ತಿ ಉತ್ಪಾದನಾ ಅಭಿವೃದ್ಧಿ ಅತ್ಯಾವಶ್ಯಕವಾಗಿದೆ.

19.ಶಕ್ತಿ ಸಂಪನ್ಮೂಲಗಳು ಎಂದರೇನು?
–ವಿದ್ಯುಚ್ಛಕ್ತಿ ಉತ್ಪಾದನೆಗೆ ಅಗತ್ಯವಾಗಿರುವ ಸಂಪನ್ಮೂಲಗಳನ್ನು ಶಕ್ತಿ ಸಂಪನ್ಮೂಲಗಳು ಎನ್ನುವರು.

20.ಭಾರತದ ಪ್ರಮುಖವಾದ ಅಲೋಹ ಖನಿಜ– ಅಭ್ರಕಾ

21.ಶಿವನಸಮುದ್ರ ಜಲವಿದ್ಯುತ್ ಕೇಂದ್ರ ಇರುವ ರಾಜ್ಯ – ಕರ್ನಾಟಕ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.:**

1.ಖನಿಜ ಸಂಪನ್ಮೂಲಗಳ ಪ್ರಾಮುಖ್ಯತೆಯನ್ನು ತಿಳಿಸಿ.

- ಖನಿಜಗಳು ಪ್ರಕೃತಿಯ ಕೊಡುಗೆ ಹಾಗೂ ದೇಶವೊಂದರ ಸಮೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ
- ಅವು ಕೈಗಾರಿಕೆ,ನಿರ್ಮಾಣಕಾರ್ಯಕ್ಕೆ ಉಪಯುಕ್ತ.
- ಸಾರಿಗೆ ಮತ್ತು ಸಂಪರ್ಕಗಳ ಪ್ರಗತಿಗೆ ಸಹಕಾರಿ.
- ವ್ಯಾಪಾರ ಮತ್ತು ವಾಣಿಜ್ಯೋದ್ಯಮಗಳ ಪ್ರಗತಿಗೆ ಹೆಚ್ಚು ಉಪಯುಕ್ತ.
- ಕೆಲವು ಖನಿಜಗಳು ಆರ್ಥಿಕ ಮೌಲ್ಯಗಳನ್ನುಳ್ಳವು. ಉದಾ: ಚಿನ್ನ,ವಜ್ರ.

2.ಮ್ಯಾಂಗನೀಸ್ ಅದಿರಿನ ಪ್ರಮುಖ ಉಪಯೋಗಗಳೇನು?

- ಮ್ಯಾಂಗನೀಸ್ ಅತ್ಯಂತ ಪ್ರಮುಖವಾದ ಮಿಶ್ರಲೋಹವಾಗಿದ್ದು ಹೆಚ್ಚಾಗಿ ಉಕ್ಕು ತಯಾರಿಸಲು ಉಪಯೋಗಿಸಲಾಗುವುದು.
- ಬ್ಯಾಟರಿ,ಬಣ್ಣ,ಗಾಜು,ಪಿಂಗಾಣಿ ವಸ್ತು ಮತ್ತು ಕ್ಯಾಲಿಕೋಪ್ರಿಂಟಿಂಗ್ ಗಾಗಿಯೂ ಬಳಸಲಾಗುವುದು.

3.ಭಾರತದಲ್ಲಿ ಬಾಕ್ಸೈಟ್ ಉತ್ಪಾದಿಸುವ ಪ್ರಮುಖ ರಾಜ್ಯಗಳನ್ನು ಹೆಸರಿಸಿ.
– ಒಡಿಶಾ –ಗುಜರಾತ್ –ಜಾರ್ಖಂಡ್ –ಮಹಾರಾಷ್ಟ್ರ –ಛತ್ತೀಸ್‌ಗಡ್ –ತಮಿಳುನಾಡು –ಮಧ್ಯಪ್ರದೇಶ.

4.ಭಾರತದಲ್ಲಿ ಶಕ್ತಿ ಸಂಪನ್ಮೂಲಗಳ ಪ್ರಾಮುಖ್ಯತೆಯನ್ನು ವಿವರಿಸಿ.

- ನಮ್ಮ ದೇಶದ ಆರ್ಥಿಕಾಭಿವೃದ್ಧಿ ಮತ್ತು ಜನರ ಜೀವನಮಟ್ಟದ ಸುಧಾರಣೆಗೆ ಶಕ್ತಿ ಸಂಪನ್ಮೂಲಗಳು ಅತ್ಯಗತ್ಯ.
- ಕೈಗಾರಿಕೆಗಳು,ಕೃಷಿ,ವಾಣಿಜ್ಯೋದ್ಯಮ,ಸಾರಿಗೆ ಮತ್ತು ಸಂಪರ್ಕಗಳ ಪ್ರಗತಿಗೆ ಶಕ್ತಿ ಸಂಪನ್ಮೂಲಗಳ ಪಾತ್ರ ಮುಖ್ಯವಾದುದು

5.ಪೆಟ್ರೋಲಿಯಂನ ಉಪಯೋಗ/ಪ್ರಾಮುಖ್ಯತೆಯನ್ನು ವಿವರಿಸಿ.

- ಪೆಟ್ರೋಲಿಯಂ ಪ್ರಮುಖವಾಗಿ ಹೈಡ್ರೋಕಾರ್ಬನ್‌ವುಳ್ಳ ಖನಿಜತೈಲ.
- ಇದು ಅತಿ ಪ್ರಮುಖ ಇಂಧನ ಹಾಗೂ ಹಲವು ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುವ ಮೂಲವಾಗಿದೆ.
- ವಾಣಿಜ್ಯ ದೃಷ್ಠಿಯಲ್ಲಿ ಮುಖ್ಯ ಶಕ್ತಿಯ ಮೂಲ ಮತ್ತು ಇದನ್ನು ಹೆಚ್ಚಾಗಿ ಸಾರಿಗೆಯಲ್ಲಿ ಬಳಸಲಾಗುವುದು.
- ಕೃತಕ ರಬ್ಬರ್,ಕೃತಕ ರೇಷ್ಮೆ,ಔಷಧಿ,ರಾಸಾಯನಿಕ ಗೊಬ್ಬರ,ಬಣ್ಣ ತಯಾರಿಕೆ ಮೊದಲಾದ ಕೈಗಾರಿಕೆಗಳಿಗೆ ಬೇಕಾದ ಕಚ್ಚಾಪದಾರ್ಥಗಳನ್ನು ಪೂರೈಸುವುದು.

6.ಭಾರತದಲ್ಲಿ ಪೆಟ್ರೋಲಿಯಂ ಹಂಚಿಕೆಯನ್ನು ಕುರಿತು ವಿವರಿಸಿ.

- ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವು ಹೆಚ್ಚಾಗಿ ಬಾಂಬೆ ಹೈ ಹಾಗೂ ಗುಜರಾತ್,ಅಸ್ಸಾಂ,ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹಂಚಿಕೆಯಾಗಿದೆ.
- ಬಾಂಬೆ ಹೈ ಭಾರತದಲ್ಲಿ ಹೆಚ್ಚು ಕಚ್ಚಾ ತೈಲ ಉತ್ಪಾದಿಸುವ ಪ್ರದೇಶವಾಗಿದೆ.
- ಎರಡನೇ ತೈಲ ಉತ್ಪಾದಿಸುವ ಪ್ರದೇಶಗಳು ಗುಜರಾತಿನ ಅಂಕಲೇಶ್ವರ, ಕ್ಯಾಂಬೆ,ಕಲೋಲ್,ನೌಗಾಂ,ಮಹ್ಸೇನ.
- ಮೂರನೇ ಸ್ಥಾನದಲ್ಲಿರುವ ತೈಲ ಪ್ರದೇಶಗಳು ಅಸ್ಸಾಂನ ಮಾಕುಂ, ದಿಗ್ಬಾಯಿ,ನಹರ್ಕಾತಿಯ,ಮೊರಾನ್,ಹುಕ್ರಿಜನ್,ಸಿಬ್ಸಾಗರ್ ಮತ್ತು ರುದ್ರಸಾಗರ
- ದೇಶದ ಇತರ ತೈಲ ಪ್ರದೇಶಗಳು ಗೋದಾವರಿ,ಕೃಷ್ಣ ಮತ್ತು ಕಾವೇರಿ ನದಿ ಕಣಿವೆ ಮತ್ತು ಮುಖಜ ಭೂಮಿಗಳಲ್ಲಿ ಕಂಡುಬರುತ್ತವೆ.

7.ಭಾರತದ ಪರಮಾಣು ವಿದ್ಯುತ್ ತಯಾರಿಕಾ ಕೇಂದ್ರಗಳನ್ನು ಹೆಸರಿಸಿ.

- ತಾರಾಪುರ ಮುಂಬಯಿ ಸಮೀಪ –ಮಹಾರಾಷ್ಟ್ರ
- ರಾಣಪ್ರತಾಪಸಾಗರ ಕೋಟಾದ ಬಳಿ –ರಾಜಸ್ತಾನ
- ಕಲ್ಪಾಕಂ ಚೆನ್ನೈ ಬಳಿ–ತಮಿಳುನಾಡು
- ನರೋರ – ಉತ್ತರ ಪ್ರದೇಶ
- ಕಾಕ್ರಪಾರ –ಗುಜರಾತ್
- ಕೈಗಾ ಕಾರವಾರದ ಬಳಿ – ಕರ್ನಾಟಕ

- ಕುಂದನ್ ಉಲಂ –ತಮಿಳುನಾಡು.

8.ತಮಿಳುನಾಡಿನ ಪ್ರಮುಖ ಜಲವಿದ್ಯುತ್ ಕೇಂದ್ರಗಳನ್ನು ತಿಳಿಸಿ.

– ಮೆಟ್ಟೂರು –ಪೈಕಾರ –ಪಾಪನಾಸಂ –ಪೆರಿಯಾರ್ –ಮೊಯಾರ್ –ಕುಂದ್ಹಾ –ಶೋಲಯಾರ್ –ಕೊಡಯಾರ್

9.ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಅಭಾವ ಭಾರತದ ಒಂದು ಪ್ರಮುಖ ಸಮಸ್ಯೆಯಾಗಿದೆ.ಏಕೆ? ಅಥವಾ ಭಾರತದಲ್ಲಿ ವಿದ್ಯುತ್ ಅಭಾವಕ್ಕೆ ಕಾರಣಗಳೇನು?

- ಭಾರತದಲ್ಲಿ ಬೇಡಿಕೆಗೆ ತಕ್ಕಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿಲ್ಲ.
- ದೇಶದಲ್ಲಿ ಕಡಿಮೆ ಪೆಟ್ರೋಲಿಯಂ ನಿಕ್ಷೇಪ ಮತ್ತು ತೈಲದ ಕೊರತೆ
- ಕಡಿಮೆ ದರ್ಜೆಯ ಕಲ್ಲಿದ್ದಲು
- ಅಕಾಲಿಕ ಮಳೆ ಮತ್ತು ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ನೀರಿನ ಕೊರತೆ
- ಪ್ರಸರಣ ಪ್ರಕ್ರಿಯೆಯಲ್ಲಾಗುವ ವಿದ್ಯುತ್‌ನ ನಷ್ಟ
- ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಕಡಿಮೆ ಬಳಕೆ .

10.ಭಾರತವು ಎದುರಿಸುತ್ತಿರುವ ವಿದ್ಯುಚ್ಛಕ್ತಿ ಅಭಾವಕ್ಕೆ ಪರಿಹಾರಗಳೇನು?

- ದೇಶದಲ್ಲಿ ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳ ಉತ್ಪಾದನೆಯನ್ನು ಹೆಚ್ಚಿಸುವುದು.
- ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳಿಗೆ ಬದಲಾಗಿ ಇತರೆ ಪರ್ಯಾಯ ಶಕ್ತಿ ಸಂಪನ್ಮೂಲಗಳನ್ನು ಬಳಸಲು ಕ್ರಮಕೈಗೊಳ್ಳುವುದು
- ಹೆಚ್ಚೆಚ್ಚು ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ಪ್ರಾಮುಖ್ಯತೆ ನೀಡುವುದು.
- ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಕೆ ಮಾಡುವುದು.

## ಅಧ್ಯಾಯ-9
## ಭಾರತದ ಸಾರಿಗೆ ಮತ್ತು ಸಂಪರ್ಕ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1.ಸಾರಿಗೆ ಎಂದರೇನು?

–ಸರಕು,ಸೇವೆ ಮತ್ತು ಪ್ರಯಾಣಿಕರನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದನ್ನು ಸಾರಿಗೆ ಎನ್ನುವರು.

2.ಪ್ರಧಾನಮಂತ್ರಿಗಳ ಗ್ರಾಮಸಡಕ್ ಯೋಜನೆಯನ್ನು ಏಕೆ ಜಾರಿಗೆ ತರಲಾಗಿದೆ?

– ಗ್ರಾಮೀಣ ಪ್ರದೇಶಗಳಲ್ಲಿರುವ ಕಚ್ಚಾ ರಸ್ತೆಗಳನ್ನು ಸುಧಾರಣೆ ಮಾಡಲು

3.ಗಡಿ ರಸ್ತೆಗಳು ಎಂದರೇನು?

–ದೇಶದ ಗಡಿಪ್ರದೇಶದಲ್ಲಿ ರಕ್ಷಣಾ ಪಡೆಯ ಬಳಕೆಗಾಗಿಯೇ ನಿರ್ಮಿಸಿದ ರಸ್ತೆಗಳನ್ನು ಗಡಿ ರಸ್ತೆಗಳು ಎನ್ನುವರು.

4.ಭಾರತೀಯ ರೈಲ್ವೆಯನ್ನು ಎಷ್ಟು ವಲಯಗಳನ್ನಾಗಿ ವಿಂಗಡಿಸಲಾಗಿದೆ?

– 16 ವಲಯ

5.ಭಾರತದ ಪ್ರಥಮ/ಮೊಟ್ಟ ಮೊದಲ ರೈಲು ಮಾರ್ಗ ಯಾವ ನಗರಗಳ ನಡುವೆ ನಿರ್ಮಾಣವಾಯಿತು?

–ಭಾರತದ ಪ್ರಥಮ/ಮೊಟ್ಟ ಮೊದಲ ರೈಲು ಮಾರ್ಗ 1853 ರಲ್ಲಿ ಮುಂಬಯಿ ಮತ್ತು ಥಾಣೆಗಳ ನಡುವೆ ನಿರ್ಮಾಣವಾಯಿತು.

6.ಭಾರತದ ಹೆಬ್ಬಾಗಿಲು ಎಂದು ಯಾವ ಬಂದರನ್ನು ಕರೆಯುವರು?

–ಮುಂಬಯಿ ಬಂದರು

7.ಭಾರತದ ಅತ್ಯಂತ ಹಳೆಯ ಮತ್ತು ಈಗಲೂ ಅಸ್ತಿತ್ವದಲ್ಲಿರುವ ವೃತ್ತಪತ್ರಿಕೆ ಯಾವುದು? – ಬಾಂಬೆ ಸಮಾಚಾರ

8. ಬಾಂಬೆ ಸಮಾಚಾರ ವೃತ್ತ ಪತ್ರಿಕೆಯು ಆರಂಭವಾದ ವರ್ಷ–1822

9.ಸಂಪರ್ಕ ಮಾಧ್ಯಮ ಎಂದರೇನು?

–ಒಬ್ಬರಿಂದ ಮತ್ತೊಬ್ಬರಿಗೆ ಅಥವಾ ಸ್ಥಳದಿಂದ ಸ್ಥಳಕ್ಕೆ ಸಮಾಚಾರವನ್ನು ವಿನಿಮಯ ಮಾಡಿಕೊಳ್ಳುವುದನ್ನು ಸಂಪರ್ಕ ಮಾಧ್ಯಮ ಎನ್ನುವರು.

10.ಭೌಗೋಳಿಕ ಮಾಹಿತಿ ವ್ಯವಸ್ಥೆ(GIS)ಎಂದರೇನು?

– ಭೌಗೋಳಿಕ ಮಾಹಿತಿ ವ್ಯವಸ್ಥೆಯು ಭೂಮಿಯ ಮೇಲ್ಭಾಗದ ವಿವರಣಾ ಸ್ಥಳಗಳ ಮಾಹಿತಿ ಸಂಗ್ರಹಿಸುವ ಮತ್ತು ತಿಳಿಸುವ ಒಂದು ಕಂಪ್ಯೂಟರ್ ವ್ಯವಸ್ಥೆಯಾಗಿದೆ.

11.ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ(GPS)ಎಂದರೇನು?

– ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆಯು ಸಂಕೇತ ಆಧಾರಿತವಾಗಿದ್ದು ಪೃಥ್ವಿಯ ಮೇಲಿನ ಚರ,ಸ್ಥಿರ ವಸ್ತು ಅಥವಾ ವ್ಯಕ್ತಿಯ ಸ್ಥಾನ ನಿರ್ಧರಿಸುವ ವ್ಯವಸ್ಥೆಯಾಗಿದೆ.

12.ದೂರ ಸಂವೇದಿ ತಂತ್ರಜ್ಞಾನ(RS)ಎಂದರೇನು?

–ಒಂದು ವಸ್ತು,ಸ್ಥಳ ಅಥವಾ ಲಕ್ಷಣಗಳನ್ನು ನೇರ ಸಂಪರ್ಕ ಹೊಂದದೆ ಪೃಥ್ವಿಯ ಮೇಲಿನ ಮಾಹಿತಿಯನ್ನು ಸಂವೇದನೆಯ ಮೂಲಕ ಸಂಗ್ರಹಿಸುವ ಮಾಧ್ಯಮವೇ ದೂರ ಸಂವೇದಿ ತಂತ್ರಜ್ಞಾನ

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.:**

1.ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ.

- ಸಾರಿಗೆಯು ಸಂಪನ್ಮೂಲಗಳು ಮತ್ತು ಕೃಷಿಯ ಅಭಿವೃದ್ಧಿಗೆ ಸಹಕಾರಿ.
- ಕೈಗಾರಿಕಾ ಪ್ರಗತಿಗೆ ಉತ್ತೇಜನ
- ಮಾರುಕಟ್ಟೆಯ ವಿಸ್ತರಣೆಗೆ ಸಹಕಾರಿ
- ದೇಶೀಯ ಮತ್ತು ವಿದೇಶಿ ವ್ಯಾಪಾರದ ವೃದ್ಧಿಗೆ ಸಹಾಯಕ.
- ಉದ್ಯೋಗ ಸೃಷ್ಟಿ
- ಜನರ ಆದಾಯ ಮತ್ತು ಜೀವನ ಮಟ್ಟದ ಸುಧಾರಣೆ
- ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ
- ರಕ್ಷಣಾ ಪಡೆಗೂ ನೆರವಾಗುತ್ತದೆ.

2.ರಸ್ತೆ ಸಾರಿಗೆಯ ಪ್ರಾಮುಖ್ಯತೆ ಅಥವಾ ಉಪಯೋಗಗಳನ್ನು ತಿಳಿಸಿ.

**ಅಥವಾ** ರಸ್ತೆ ಸಾರಿಗೆಯು ರೈಲು ಸಾರಿಗೆಗಿಂತ ಉತ್ತಮವಾಗಿದೆ.ಸ್ಪಷ್ಟೀಕರಿಸಿ.

- ದೇಶದ ಕೃಷಿ ಮತ್ತು ಗ್ರಾಮೀಣ ಕೈಗಾರಿಕೆಗಳ ಪ್ರಗತಿಗೆ ಸಹಕಾರಿ
- ರಸ್ತೆಗಳನ್ನು ಅರಣ್ಯ ಮತ್ತು ಗುಡ್ಡಗಾಡುಗಳಲ್ಲಿಯೂ ನಿರ್ಮಿಸಬಹುದು.
- ಮನೆ ಮನೆಗೆ ಸೇವೆ ಕಲ್ಪಿಸಲು ಸಹಕಾರಿ
- ರೈಲು ಸಂಚಾರ, ಬಂದರು ಮತ್ತು ವಿಮಾನ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸುತ್ತವೆ.
- ರಸ್ತೆಗಳು ಪ್ರವಾಸೋದ್ಯಮ,ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿಗೆ ಹಾಗೂ ಕೈಗಾರಿಕಾಭಿವೃದ್ಧಿಗೆ ಹೆಚ್ಚು ನೆರವಾಗುತ್ತವೆ.
- ರಕ್ಷಣಾ ಇಲಾಖೆಯಲ್ಲಿ, ಅದರಲ್ಲೂ ಗಡಿಪ್ರದೇಶಗಳಲ್ಲಿ ರಸ್ತೆಗಳು ಹೆಚ್ಚು ಉಪಯುಕ್ತ.

3.ಕೊಳವೆ ಮಾರ್ಗಗಳನ್ನು ವಿವರಿಸಿ./ ಕೊಳವೆ ಮಾರ್ಗಗಳ ಮಹತ್ವವೇನು?

- ಇದು ಹೊಸ ಭೂ ಸಾರಿಗೆಯ ವಿಧಾನವಾಗಿದೆ.
- ಕೊಳವೆ ಮಾರ್ಗಗಳನ್ನು ನೆಲದೊಳಗೆ ಹಾಸಲಾಗಿರುತ್ತದೆ.
- ವಿಶೇಷವಾಗಿ ಕಚ್ಚಾ ತೈಲವನ್ನು ತೈಲ ಶುದ್ಧೀಕರಣ ಕೇಂದ್ರಗಳಿಗೆ ಸಾಗಿಸಲು
- ನೈಸರ್ಗಿಕಾನಿಲ ಹಾಗೂ ಕೆಸರು ರೂಪದಲ್ಲಿ ಖನಿಜಗಳನ್ನು ಸಾಗಿಸಲು ಕೊಳವೆ ಮಾರ್ಗಗಳನ್ನು ಬಳಸಲಾಗುವುದು.
- ಭಾರತದಲ್ಲಿ 35,676 ಕಿ.ಮೀ. ಉದ್ದದ ಕೊಳವೆ ಮಾರ್ಗಗಳಿವೆ.

4.ಸಂಪರ್ಕದ ಪ್ರಾಮುಖ್ಯತೆಯನ್ನು ವಿವರಿಸಿ.

- ಸರ್ಕಾರದ ನೀತಿ ನಿಯಮ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಹಕಾರಿ.
- ನೈಸರ್ಗಿಕ ವಿಪತ್ತು ಮತ್ತು ವಿನಾಶಗಳು, ಹವಾಗುಣದ ಮುನ್ಸೂಚನೆ ಗಳನ್ನು ತಿಳಿಯಲು ಸಹಾಯಕ.
- ವ್ಯಾಪಾರ ವಾಣಿಜ್ಯ, ಕೃಷಿ,ಕೈಗಾರಿಕೆಗಳ ಅಭಿವೃದ್ಧಿಗೆ
- ಮನರಂಜನೆಗೆ ಸಹಕಾರಿ
- ಪ್ರಪಂಚದ ದಿನನಿತ್ಯದ ಮಾಹಿತಿಗಳನ್ನು ಪೂರೈಸುತ್ತದೆ.
- ದೇಶದ ಏಕತೆ ಮತ್ತು ಸಮಗ್ರತೆ ನಿರ್ವಹಣೆಗೆ ಸಹಕಾರಿ.

5.ಭಾರತದ ವಿವಿಧ ಸಂಪರ್ಕ ಮಾಧ್ಯಮಗಳನ್ನು ತಿಳಿಸಿ.

- ವೈಯಕ್ತಿಕ ಸಂಪರ್ಕ ಮಾಧ್ಯಮಗಳು – ಅಂಚೆ,ಟೆಲಿಗ್ರಾಫ್,ಟೆಲಿಫೋನ್, ಫ್ಯಾಕ್ಸ್,ಇ-ಮೇಲ್,ಅಂತರ್ಜಾಲ ಮತ್ತು ಸೆಮಿನಾರ್
- ಸಮುದಾಯ ಸಂಪರ್ಕ ಮಾಧ್ಯಮಗಳು – ವೃತ್ತ ಪತ್ರಿಕೆ ಮತ್ತು ನಿಯತಕಾಲಿಕೆಗಳು, ಆಕಾಶವಾಣಿ, ದೂರದರ್ಶನ,ಪುಸ್ತಕಗಳು.

6.ವಾಯುಸಾರಿಗೆಯ ಪ್ರಾಮುಖ್ಯತೆಯನ್ನು ತಿಳಿಸಿ.

- ವಾಯು ಸಾರಿಗೆಯು ವೇಗಯುತ ಸಾರಿಗೆ ಮಾಧ್ಯಮ
- ಪ್ರಯಾಣಿಕರು ಮತ್ತು ಟಪಾಲು ಸಾಗಿಸಲು ಬಹಳ ಸಮರ್ಪಕವಾದ ಸಾರಿಗೆ ಸೌಲಭ್ಯ .
- ಸಮರ,ಪ್ರವಾಹ,ಭೂಕಂಪಗಳಂತಹ ತುರ್ತುಪರಿಸ್ಥಿತಿ ಪರಿಹಾರ ಕ್ರಮಕ್ಕೆ ಬಹು ಉಪಯುಕ್ತ.

7.ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳನ್ನು ಕುರಿತು ವಿವರಿಸಿ.

- ಸುವರ್ಣ ಚತುಷ್ಕೋನ ಯೋಜನೆಯು ನಾಲ್ಕರಿಂದ ಆರು ಪಥಗಳ ಉತ್ತಮ ರಸ್ತೆಗಳ ರಚನಾ ಯೋಜನೆಯಾಗಿದೆ. ಈ ಹೆದ್ದಾರಿ ಜಾಲವು ದೇಶದ ಪ್ರಮುಖ ನಗರ,ಸಾಂಸ್ಕೃತಿಕ ಮತ್ತು ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸುತ್ತದೆ.ಇದು ದೆಹಲಿ–ಜೈಪುರ–ಅಹ್ಮದಾಬಾದ್–ಸೂರತ್– ಮುಂಬಯಿ–ಪುಣೆ–ಬೆಂಗಳೂರು–ಚೆನ್ನೈ–ವಿಶಾಖಪಟ್ಟಣ– ಭುವನೇಶ್ವರ –ಕೊಲ್ಕತಾ–ಅಲಹಾಬಾದ್–ಕಾನ್ಪುರ–ದೆಹಲಿಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ.
- ಸೂಪರ್ ಹೆದ್ದಾರಿಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ. (1)ಉತ್ತರ–ದಕ್ಷಿಣ ಕಾರಿಡಾರ್ –ಇದು ಶ್ರೀನಗರದಿಂದ ಕನ್ಯಾಕುಮಾರಿ ವರಗೆ ವಿಸ್ತರಿಸಿದೆ. (2)ಪೂರ್ವ–ಪಶ್ಚಿಮ ಕಾರಿಡಾರ್ –ಇದು ಅಸ್ಸಾಂನ ಸಿಲ್ಚಾರ್‌ನಿಂದ ಗುಜರಾತಿನ ಪೋರ್‌ಬಂದರಿನವರೆಗೆ ಹಬ್ಬಿದೆ.

8.ಭಾರತದ ಪಶ್ಚಿಮ ಮತ್ತು ಪೂರ್ವದ ಬಂದರುಗಳನ್ನು ಪಟ್ಟಿಮಾಡಿ.

| ಪಶ್ಚಿಮದ ಬಂದರುಗಳು | ಪೂರ್ವದ ಬಂದರುಗಳು |
|---|---|
| ಕಾಂಡ್ಲಾ, ಮುಂಬಯಿ,ನವಶೇವಾ, ಮರ್ಮಗೋವಾ, ಮಂಗಳೂರು, ಕೊಚ್ಚಿನ್ | ತುತಕುಡಿ,ಚೆನ್ನೈ,ಎನ್ನೋರ್, ವಿಶಾಖಪಟ್ಟಣ,ಪಾರಾದೀಪ್, ಹಾಲ್ದಿಯಾ,ಕೊಲ್ಕತ ಬಂದರು. |

## ಅಧ್ಯಾಯ–10
## ಭಾರತದ ಕೈಗಾರಿಕೆಗಳು

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1.ಕೈಗಾರಿಕೆ ಎಂದರೇನು?– ಕಚ್ಚಾ ವಸ್ತುಗಳನ್ನು ಹೆಚ್ಚು ಉಪಯುಕ್ತ ವಸ್ತುಗಳಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ಕೈಗಾರಿಕೆ ಎನ್ನುವರು

2.ಮೂಲ ಕೈಗಾರಿಕೆ ಎಂದು ಕರೆಯುವ ಕೈಗಾರಿಕೆ ಯಾವುದು?

– ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ

3.ಭಾರತದ ಮೊದಲ ಉಕ್ಕಿನ ಕೈಗಾರಿಕೆ – 1870 ರಲ್ಲಿ ಬಂಗಾಳದ ಕುಲ್ಟಿಯಲ್ಲಿ ಆರಂಭವಾಯಿತು.(ಬೆಂಗಾಲ್ ಐರನ್ ಲಿಮಿಟೆಡ್ )

4.ವಿವಿಧ ಬಗೆಯ ನಾರುಗಳಿಂದ ಬಟ್ಟೆ ತಯಾರಿಸುವುದನ್ನು ಏನೆಂದು ಕರೆಯುವರು? – ಜವಳಿ ಕೈಗಾರಿಕೆ

5.ಮುಂಬೈಯನ್ನು ಭಾರತದ ಮ್ಯಾಂಚೆಸ್ಟರ್ ಎಂದು ಕರೆಯುವರು.ಏಕೆ?
– ಮುಂಬಯಿಯಲ್ಲಿ ಅತಿ ಹೆಚ್ಚು ಹತ್ತಿ ಗಿರಣಿಗಳಿರುವುದರಿಂದ ಭಾರತದ ಮ್ಯಾಂಚೆಸ್ಟರ್ ಎಂದು ಕರೆಯುವರು.

6.ಕರ್ನಾಟಕದ ಪ್ರಮುಖವಾದ ಹತ್ತಿ ಬಟ್ಟೆ ಕೈಗಾರಿಕಾ ಕೇಂದ್ರಗಳು
– ದಾವಣಗೆರೆ ಮತ್ತು ಬೆಂಗಳೂರು.

7.ಭಾರತದ ಮೊದಲ ಆಧುನಿಕ ಕಾಗದದ ಕೈಗಾರಿಕೆ ಎಲ್ಲಿ ಸ್ಥಾಪನೆ ಯಾಯಿತು? – ಪಶ್ಚಿಮ ಬಂಗಾಳದ ಸೆರಾಂಪುರದಲ್ಲಿ ಸ್ಥಾಪನೆಗೊಂಡಿತು.

8.ಕಾಗದ ಕೈಗಾರಿಕೆಯ ಕಚ್ಚಾವಸ್ತು – ಬಿದಿರು,ಮರದ ತಿರುಳು,ಹುಲ್ಲು

9.ಜ್ಞಾನಾಧಾರಿತ ಕೈಗಾರಿಕೆ ಎಂದರೆ – ಮಾಹಿತಿ ತಂತ್ರಜ್ಞಾನ ಕೈಗಾರಿಕೆ

10.ಜ್ಞಾನಾಧಾರಿತ ಕೈಗಾರಿಕೆಯ ಪ್ರಮುಖ ಅಂಗಗಳು
–ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ಗಳು

11.ಸಿಲಿಕಾನ್ ವ್ಯಾಲಿ ಎಂದು ಕರೆಯುವ ನಗರ–ಬೆಂಗಳೂರು.

12.ಕೈಗಾರಿಕಾ ವಲಯ ಎಂದರೇನು?
–ಒಂದೇ ಬಗೆಯ ಅಥವಾ ವಿವಿಧ ಬಗೆಯ ಕೈಗಾರಿಕೆಗಳು ಅಧಿಕ ಸಂಖ್ಯೆಯಲ್ಲಿ ಕೇಂದ್ರೀಕೃತಗೊಂಡ ಪ್ರದೇಶವನ್ನು ಕೈಗಾರಿಕಾ ವಲಯ ಎನ್ನುವರು.

13.ಬೆಂಗಳೂರನ್ನು ಸಿಲಿಕಾನ್ ಸಿಟಿ (ವ್ಯಾಲಿ)ಎಂದು ಕರೆಯಲು ಕಾರಣ
–ಬೆಂಗಳೂರು ಮಾಹಿತಿ ತಂತ್ರಜ್ಞಾನದ ಕೇಂದ್ರವಾಗಿರುವುದು (ಬೆಂಗಳೂರು ಸಾಫ್ಟ್‌ವೇರ್ ಕೈಗಾರಿಕೆಗಳಲ್ಲಿ ಅತ್ಯಂತ ಮಹತ್ವವುಳ್ಳದ್ದು)

14.ಅಲ್ಯೂಮಿನಿಯಂಗೆ ನಿರ್ಮಾಣ ಕಂಪನಿಗಳಿಂದ ಹೆಚ್ಚಿನ ಬೇಡಿಕೆ ಇದೆ. ಏಕೆ? –ಅಲ್ಯೂಮಿನಿಯಂ ಅನ್ನು ನಿರ್ಮಾಣ ಕಂಪನಿಗಳಲ್ಲಿ ಉಕ್ಕು ಮತ್ತು ತಾಮ್ರಗಳ ಬದಲಿ ವಸ್ತುವಾಗಿ ಬಳಕೆ ಮಾಡಲಾಗುತ್ತಿದೆ.ಆದುದರಿಂದ ಅಲ್ಯೂಮಿನಿಯಂಗೆ ನಿರ್ಮಾಣ ಕಂಪನಿಗಳಿಂದ ಹೆಚ್ಚಿನ ಬೇಡಿಕೆ ಇದೆ.

15.ಭಾರತದ ಅರಣ್ಯಾಧಾರಿತ ಕೈಗಾರಿಕೆ ಯಾವುದು?–ಕಾಗದ ಕೈಗಾರಿಕೆ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.:**

1.ಕೈಗಾರಿಕೆಗಳ ಪ್ರಾಮುಖ್ಯತೆ ಅಥವಾ ಉಪಯೋಗಗಳೇನು?
ಅಥವಾ ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕೈಗಾರಿಕೆಗಳು ಹೇಗೆ ಸಹಾಯಕವಾಗಿವೆ.ವಿವರಿಸಿ.

- ಕೈಗಾರಿಕೆಗಳು ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ
- ಕೈಗಾರಿಕೆಗಳ ಅಭಿವೃದ್ಧಿಯಿಂದ ಪ್ರಾಥಮಿಕ ಸರಕುಗಳ ಅವಲಂಬನೆ ಮತ್ತು ಆಮದು ಕಡಿಮೆಯಾಗುತ್ತದೆ.
- ರಾಷ್ಟ್ರಾದಾಯ ಮತ್ತು ತಲಾದಾಯ ಹೆಚ್ಚಾಗುತ್ತದೆ.
- ವಿದೇಶೀ ವಿನಿಮಯ ಗಳಿಕೆಯಲ್ಲಿ ವೃದ್ಧಿ
- ಉದ್ಯೋಗಾವಕಾಶವನ್ನು ಒದಗಿಸುವುದು.
- ಜಿಡಿಪಿ ಮತ್ತು ಜನರ ಜೀವನ ಮಟ್ಟದಲ್ಲಿ ಸುಧಾರಣೆ.

2.ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು ಅಥವಾ ಕೈಗಾರಿಕೆಗಳ ಸ್ಥಾನೀಕರಣವನ್ನು ನಿರ್ಧರಿಸುವ ಅಂಶಗಳಾವುವು?

- ಕಚ್ಚಾ ವಸ್ತುಗಳ ಸರಬರಾಜು
- ಶಕ್ತಿ ಸಂಪನ್ಮೂಲಗಳ ಪೂರೈಕೆ
- ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆ
- ಮಾರುಕಟ್ಟೆ ಸೌಲಭ್ಯಗಳು
- ಬಂಡವಾಳ
- ಕಾರ್ಮಿಕರು ಮತ್ತು ನೀರು ದೊರೆಯುವಿಕೆ
- ಸೂಕ್ತ ವಾಯುಗುಣ
- ಸರ್ಕಾರದ ನೀತಿಗಳು

3.ಭಾರತದ ಪ್ರಮುಖ ಕೈಗಾರಿಕಾ ವಲಯ/ಪ್ರದೇಶಗಳನ್ನು ಪಟ್ಟಿ ಮಾಡಿ.

- ಹೂಗ್ಲಿ–ಕೊಲ್ಕತ್ತಾ ಪ್ರದೇಶ
- ಮುಂಬಯಿ–ಪುಣೆ ಪ್ರದೇಶ
- ಅಹ್ಮದಾಬಾದ್–ವಡೋದರ ಪ್ರದೇಶ
- ಮಧುರೈ–ಕೊಯಮತ್ತೂರು–ಬೆಂಗಳೂರು ಪ್ರದೇಶ
- ಛೋಟಾನಾಗಪುರ ಪ್ರಸ್ಥಭೂಮಿ ಪ್ರದೇಶ
- ದೆಹಲಿ–ಮೀರತ್ ಪ್ರದೇಶ
- ವಿಶಾಖಪಟ್ಟಣ–ಗುಂಟೂರು ಪ್ರದೇಶ
- ಕೊಲ್ಲಂ–ತಿರುವನಂತಪುರ ಪ್ರದೇಶ

4.ಭಾರತದಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ಸ್ಥಾಪನೆಗೆ ಉತ್ತಮ ಅವಕಾಶಗಳಿವೆ.ಈ ಹೇಳಿಕೆಯನ್ನು ಸಮರ್ಥಿಸಿ.**ಅಥವಾ**
ಪಶ್ಚಿಮ ಬಂಗಾಳ ಮತ್ತು ಒಡಿಸಾಗಳಲ್ಲೇ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಕೇಂದ್ರೀಕೃತವಾಗಿದೆ.ಏಕೆ?

- ಮೂಲ ಕಚ್ಚಾವಸ್ತುವಾದ ಕಬ್ಬಿಣದ ಅದಿರು ಪೂರೈಕೆ
- ಮುಖ್ಯ ಶಕ್ತಿ ಸಂಪನ್ಮೂಲವಾದ ಕೋಕಿಂಗ್ ಕಲ್ಲಿದ್ದಲು ಹಾಗೂ ಜಲವಿದ್ಯುತ್ ಪೂರೈಕೆ
- ರೈಲು ಸಾರಿಗೆ ಮತ್ತು ಬಂದರು ಸೌಲಭ್ಯ
- ನೀರು ಪೂರೈಕೆ
- ಕಡಿಮೆ ಕೂಲಿಗೆ ದುಡಿಯುವ ನುರಿತ ಕಾರ್ಮಿಕರು
- ಬಂಡವಾಳ ಮತ್ತು ಸ್ಥಳೀಯ ಮಾರುಕಟ್ಟೆ ಸೌಲಭ್ಯ.

5. ಭಾರತದ ಪ್ರಮುಖ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳನ್ನು ಪಟ್ಟಿಮಾಡಿ.
ಅಥವಾ ಭಾರತದ ಸರ್ಕಾರಿ ವಲಯದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳನ್ನು ಪಟ್ಟಿಮಾಡಿ.

- ಭಾರತೀಯ ಕಬ್ಬಿಣ ಮತ್ತು ಉಕ್ಕು ಕಂಪನಿ ಬರ್ನಾಪುರ ಪಶ್ಚಿಮಬಂಗಾಳ

- ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಂಪನಿ ಭದ್ರಾವತಿ, ಕರ್ನಾಟಕ
- ಹಿಂದೂಸ್ತಾನ್ ಉಕ್ಕು ಲಿಮಿಟಡ್ ಬಿಲಾಯಿ ಛತ್ತೀಸ್‌ಘರ್
- ಹಿಂದೂಸ್ತಾನ್ ಉಕ್ಕು ಲಿಮಿಟೆಡ್ ರೂರ್ಕೆಲಾ,ಸುಂದರ್‌ಗಡಜಿಲ್ಲೆ ಒಡಿಶಾ
- ಹಿಂದೂಸ್ತಾನ್ ಉಕ್ಕು ಲಿಮಿಟೆಡ್ ದುರ್ಗಾಪುರ ಪಶ್ಚಿಮ ಬಂಗಾಳ
- ಬೊಕಾರೊ ಉಕ್ಕು ಸ್ಥಾವರ ಬೊಕಾರೊ ಜಾರ್ಖಂಡ್
- ಸೇಲಂ ಉಕ್ಕು ಸ್ಥಾವರ ಸೇಲಂ ತಮಿಳುನಾಡು
- ವಿಶಾಖಪಟ್ಟಣಂ ಉಕ್ಕು ಸ್ಥಾವರ ವಿಶಾಖಪಟ್ಟಣ ಆಂಧ್ರಪ್ರದೇಶ
- ದಾಯಿತರಿ ಉಕ್ಕು ಸ್ಥಾವರ ಪಾರಾದೀಪದ ಸಮೀಪ ಒಡಿಶಾ
- ಟಾಟಾ ಉಕ್ಕು ಸ್ಥಾವರ ಕಳಿಂಗ ನಗರ ಒಡಿಶಾ.

6.ಅಲ್ಯೂಮಿನಿಯಂ ಕೈಗಾರಿಕೆಯ ಪ್ರಾಮುಖ್ಯತೆ / ಉಪಯೋಗಗಳೇನು?

- ಅಲ್ಯೂಮಿನಿಯಂ ಒಂದು ಪ್ರಮುಖ ಕಬ್ಬಿಣೇತರ ಲೋಹ.
- ಇದು ಬಹು ಉಪಯೋಗಿ ಲೋಹವಾಗಿದೆ.
- ವಿಮಾನ,ರೈಲುಸಾರಿಗೆ ಸ್ವಯಂಚಾಲಿತ ವಾಹನ,ರೈಲುಸಾರಿಗೆ, ಹಡಗು ತಯಾರಿಕೆಯಲ್ಲಿ ಬಳಕೆ
- ಬಣ್ಣ ತಯಾರಿಕೆ ಮತ್ತು ಗೃಹಬಳಕೆ ವಸ್ತುಗಳ ತಯಾರಿಕೆಗೆ ಸಹಕಾರಿ
- ವಿವಿಧ ಕೈಗಾರಿಕೆಗಳಲ್ಲಿ ಬಳಕೆ
- ವಿದ್ಯುತ್ ಕೇಬಲ್ ತಯಾರಿಕೆ ಹಾಗೂ ಇದರ ರೇಕುಗಳನ್ನು ಪ್ಯಾಕಿಂಗ್ ಮಾಡಲು ಸಹಾಯಕ.
- ಇದನ್ನು ಉಕ್ಕು ಮತ್ತು ತಾಮ್ರಗಳ ಬದಲಿ ವಸ್ತುವಾಗಿ ಬಳಕೆ ಮಾಡಲಾಗುತ್ತದೆ.

7.ಮುಂಬೈ ನಗರವು ಇಂದಿಗೂ ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾಕೇಂದ್ರವಾಗಿದೆ. ಏಕೆ? ಅಥವಾ ಹತ್ತಿ ಬಟ್ಟೆ ಕೈಗಾರಿಕೆಯ ಸ್ಥಾನೀಕರಣವನ್ನು ನಿರ್ಧರಿಸುವ ಅಂಶಗಳಾವುವು?

- ಮೂಲ ಕಚ್ಚಾವಸ್ತುವಾದ ಕಚ್ಚಾಹತ್ತಿಯ ಸರಬರಾಜು
- ವಿಶಾಲವಾದ ಮಾರುಕಟ್ಟೆ
- ವಿದ್ಯುತ್ ಪೂರೈಕೆ
- ಬಂಡವಾಳ
- ನುರಿತ ಕಾರ್ಮಿಕರ ಪೂರೈಕೆ
- ತೇವಾಂಶಭರಿತ ವಾಯುಗುಣ.

8.ಸಕ್ಕರೆ ಕೈಗಾರಿಕೆಯ ಸ್ಥಾನೀಕರಣವನ್ನು ನಿರ್ಧರಿಸುವ ಅಂಶಗಳಾವುವು?

- ಮೂಲ ಕಚ್ಚಾವಸ್ತುವಾದ ಕಬ್ಬು ಸರಬರಾಜು
- ಸುಲಭ ದರದ ಮತ್ತು ಸಮರ್ಪಕ ಸಾರಿಗೆ ಸೌಲಭ್ಯ
- ಸರ್ಕಾರದ ಪ್ರೋತ್ಸಾಹ
- ವಿದ್ಯುತ್ ಪೂರೈಕೆ
- ಬಂಡವಾಳ
- ಮಾರುಕಟ್ಟೆ ಸೌಲಭ್ಯಗಳು .

## ಅಧ್ಯಾಯ-11
## ಭಾರತದ ನೈಸರ್ಗಿಕ ವಿಪತ್ತುಗಳು

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1.ಭಾರತದಲ್ಲಿ ಉಷ್ಣವಲಯದ ಆವರ್ತಮಾರುತಗಳು ಎಲ್ಲಿ ಸಂಭವಿಸುತ್ತವೆ?
-ಬಂಗಾಳಕೊಲ್ಲಿ

2.ಆವರ್ತ ಮಾರುತ ಎಂದರೇನು?
-ಕಡಿಮೆ ಒತ್ತಡವುಳ್ಳ ಕೇಂದ್ರದ ಕಡೆಗೆ ಮಾರುತಗಳು ಚಕ್ರಾಕಾರದಲ್ಲಿ ಚಲಿಸುವುದನ್ನು ಆವರ್ತ ಮಾರುತ ಎನ್ನುವರು.

3.ನದಿ ಪ್ರವಾಹ ಎಂದರೇನು?
-ಕೆಲವೊಮ್ಮೆ ನದಿಗಳು ತಮ್ಮ ದಂಡೆಗಳಾಚೆಗೂ ಉಕ್ಕಿ ಹರಿದಾಗ ಪಕ್ಕದ ಭಾಗಗಳು ಜಲಾವೃತಗೊಳ್ಳುತ್ತವೆ ಇದನ್ನು ಪ್ರವಾಹ ಎನ್ನುವರು.

4.ಭೂಕುಸಿತ ಎಂದರೇನು?
-ಬೆಟ್ಟ ಅಥವಾ ಪರ್ವತಗಳ ಕಡಿದಾದ ಇಳಿಜಾರಿನಲ್ಲಿ ಕೆಳಗೆ ಚಲಿಸುವ ಭೂರಾಶಿಗಳಿಗೆ ಭೂಕುಸಿತ ಎನ್ನುವರು.

5.ಭೂಕಂಪ ಎಂದರೇನು?
-ಭೂಚಿಪ್ಪಿನಲ್ಲಾಗುವ ರಭಸವಾದ ಕಂಪನವನ್ನು ಭೂಕಂಪ ಎನ್ನುವರು.

6.ಭಾರತದ ಪೂರ್ವಕರಾವಳಿಯ ತೀವ್ರ ಸವೆತಕ್ಕೆ ಪ್ರಮುಖ ಕಾರಣವೇನು?
-ಉಷ್ಣವಲಯದ ಆವರ್ತಮಾರುತಗಳು.(ತಮಿಳುನಾಡು,ಆಂಧ್ರ ಮತ್ತು ಒಡಿಶಾ)

7.ಸುನಾಮಿ ಎಂದರೇನು?
-ಸಮುದ್ರ ತಳದಲ್ಲಿ ಸಂಭವಿಸುವ ಭೂಕಂಪನದಿಂದಾಗುವ ದೈತ್ಯಾಕಾರದ ಅಲೆಗಳಿಗೆ ಸುನಾಮಿ ಎನ್ನುವರು.

8.ಭಾರತದಲ್ಲಿ ಈವರೆಗೆ ಸಂಭವಿಸಿರುವ ಭೂಕಂಪಗಳಿಗೆ ಪ್ರಮುಖ ಕಾರಣ
- ಭೂ ಫಲಕಗಳ ಚಲನೆ

9.ಭಾರತದ ಪರ್ಯಾಯ ದ್ವೀಪ ವಲಯವನ್ನು 'ಕನಿಷ್ಠ ಭೂಕಂಪ ತೀವ್ರತೆಯ ವಲಯ' ಎಂದು ಪರಿಗಣಿಸಲಾಗಿದೆ.ಏಕೆ?
-ಭಾರತದ ಪರ್ಯಾಯ ದ್ವೀಪವು ಅಚಲವಾದ ಭೂಭಾಗವೆಂದು ಪರಿಗಣಿಸಲಾಗಿದ್ದು, ಈ ವಲಯದಲ್ಲಿ ಭೂಕಂಪಗಳು ಸಂಭವಿಸುವುದು ಕಡಿಮೆ. ಆದುದರಿಂದ ಭಾರತದ ಪರ್ಯಾಯ ದ್ವೀಪ ವಲಯವನ್ನು 'ಕನಿಷ್ಠ ಭೂಕಂಪ ತೀವ್ರತೆಯ ವಲಯ' ಎಂದು ಪರಿಗಣಿಸಲಾಗಿದೆ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.:**

1.ಆವರ್ತ ಮಾರುತಗಳಿಗೆ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.

**ಕಾರಣಗಳು:**

–ಅಧಿಕ ಉಷ್ಣಾಂಶ –ಪ್ರಶಾಂತ ವಾಯು –ಹೆಚ್ಚು ತೇವಾಂಶ ಭರಿತ ವಾಯು

**ಪರಿಣಾಮಗಳು:** –ಇವು ಬಹಳ ವಿನಾಶಕಾರಿಯಾದವುಗಳು
–ಅಪಾರ ಸಾವುನೋವು ಮತ್ತು ಆಸ್ತಿಗಳಿಗೆ ಹಾನಿಯನ್ನುಂಟುಮಾಡುತ್ತವೆ.
–ಕಟ್ಟಡಗಳು,ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳನ್ನು ಅಸ್ತವ್ಯಸ್ತಗೊಳಿಸುತ್ತವೆ. –ವಿದ್ಯುತ್ ಸರಬರಾಜಿಗೆ ಅಡಚಣೆ
–ಬೆಳೆಗಳು,ಸ್ವಾಭಾವಿಕ ಸಸ್ಯವರ್ಗ, ಪ್ರಾಣಿ ಸಂಕುಲಗಳಿಗೆ ಹಾನಿಯುಂಟಾಗುತ್ತದೆ.

2.ಪ್ರವಾಹಗಳು ಸಂಭವಿಸಲು ನೈಸರ್ಗಿಕ ಪರಿಸ್ಥಿತಿಗಳು ಮತ್ತು ಮಾನವ ಕೃತ್ಯಗಳೂ ಕಾರಣವಾಗಿವೆ.ಹೇಗೆ?

**ನೈಸರ್ಗಿಕ ಪರಿಸ್ಥಿತಿಗಳು:** –ಅತ್ಯಧಿಕ ಮಳೆ –ಹಿಮಕರಗುವಿಕೆ –ಆವರ್ತ ಮಾರುತಗಳು –ಮೇಘಸ್ಫೋಟ –ನದಿಗಳು ಸರಾಗವಾಗಿ ಹರಿಯಲಾರದಷ್ಟು ಅಡಚಣೆ –ನದಿಪಾತ್ರದಲ್ಲಿ ಹೂಳುತುಂಬುವಿಕೆ

**ಮಾನವ ಕೃತ್ಯಗಳು:** –ಅರಣ್ಯನಾಶ –ಅವೈಜ್ಞಾನಿಕ ನೀರಾವರಿ ಮತ್ತು ಕೃಷಿ ಪದ್ಧತಿ –ಒಡ್ಡು ಮತ್ತು ಅಣೆಕಟ್ಟುಗಳು ಒಡೆದು ಹೋಗುವುದು.– ಶೀಘ್ರಗತಿಯ ನಗರೀಕರಣ

3.ಪ್ರಪಂಚದಲ್ಲಿ ಸಂಭವಿಸುತ್ತಿರುವ ಭೂಕುಸಿತಗಳಿಗೆ ನೈಸರ್ಗಿಕ ಮತ್ತು ಮಾನವ ಕೃತ್ಯಗಳು ಕಾರಣವಾಗಿವೆ.ಹೇಗೆ?

**ನೈಸರ್ಗಿಕ ಕಾರಣಗಳು**: –ಕಡಲ ಕಡಿದಾದ ಬಂಡೆಯ ತಳವನ್ನು ಸಮುದ್ರದ ಅಲೆಗಳು ಸವೆಸುವಂತಹ ಇಳಿಜಾರಿನ ಅಡಿಭಾಗದ ಸವೆತ –ಅತ್ಯಧಿಕ ಮಳೆ –ಭೂಕಂಪಗಳು

**ಮಾನವನ ಕೃತ್ಯಗಳು:** –ಅರಣ್ಯನಾಶ –ರೈಲು ಮತ್ತು ರಸ್ತೆ ಮಾರ್ಗಗಳ ನಿರ್ಮಾಣ –ಅಣೆಕಟ್ಟುಗಳ ನಿರ್ಮಾಣ –ಜಲಾಶಯ ಮತ್ತು ಜಲವಿದ್ಯುತ್ ಯೋಜನೆಗಳ ನಿರ್ಮಾಣ –ತೀವ್ರ ಗತಿಯ ಗಣಿಗಾರಿಕೆ –ಕಲ್ಲುಗಣಿಗಾರಿಕೆಗಳು

4.ಚಂಡಮಾರುತ/ಪ್ರವಾಹ/ಭೂಕುಸಿತ/ಭೂಕಂಪ/ಕಡಲಕೊರೆತ(ಸಮುದ್ರತೀರದ ಸವೆತ)ಗಳ ಪರಿಣಾಮಗಳೇನು?

1)ಅಪಾರ ಸಾವುನೋವು ಸಂಭವಿಸುತ್ತವೆ 2)ಬೆಳೆಗಳು ನಾಶವಾಗುತ್ತವೆ. 3)ಜನಜೀವನ ಅಸ್ತವ್ಯಸ್ತವಾಗುತ್ತದೆ 4)ವಿದ್ಯುತ್ ಕೊರತೆಯುಂಟಾಗುತ್ತದೆ. 5)ಸಾರಿಗೆ ಸಂಪರ್ಕ ಅಸ್ತವ್ಯಸ್ತವಾಗುತ್ತದೆ. 6)ಪ್ರಾಣಿ ಸಂಕುಲಗಳ ನಾಶ

5.ಭೂಕಂಪಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.

ಕಾರಣಗಳು:

1)ಭೂಫಲಕಗಳ ಚಲನೆ 2)ಜ್ವಾಲಾಮುಖಿ 3)ಶಿಲಾಸ್ತರಭಂಗ ಮತ್ತು ಮಡಿಕೆ 4)ಭೂಕುಸಿತ 5)ಅಂತರ್ಗುಹೆ ಮಾಳ್ಗಾವಣಿ ಕುಸಿತ 6)ಮಾನವ ನಿರ್ಮಿತ ಜಲಾಶಯಗಳ ನೀರಿನ ಭಾರ

ಪರಿಣಾಮಗಳು:

1)ನೆಲದ ಮೇಲಿನ ಬಿರುಕು 2)ಕಟ್ಟಡ, ರೈಲು ಮಾರ್ಗ, ರಸ್ತೆಗಳ ನಾಶ 3)ವಿದ್ಯುತ್ ಸಂಚಾರದಲ್ಲಿ ವ್ಯತ್ಯಾಯ 4)ಸಂಪರ್ಕ ಮಾಧ್ಯಮಗಳ ನಾಶ 5)ಸೇತುವೆ ಮತ್ತು ಅಣೆಕಟ್ಟುಗಳ ನಾಶ 6) ಮಾನವ ಮತ್ತು ಜಾನುವಾರುಗಳ ಸಾವು ಮತ್ತು ಆಸ್ತಿಗಳಿಗೆ ಹಾನಿ 7)ಭೂ ಕುಸಿತ 8)ಅಂತರ್ಜಲ ಮಟ್ಟದಲ್ಲಿ ವ್ಯತ್ಯಾಸ ಮತ್ತು ನದಿ ವ್ಯವಸ್ಥೆಗೆ ಅಡಚಣೆ.

6.ಭೂಕಂಪಗಳಿಂದಾಗುವ ಪರಿಣಾಮಗಳನ್ನು ಮಿತಗೊಳಿಸಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ

– ಭೂಕಂಪನಾ ವಲಯಗಳಲ್ಲಿ ಜನವಸತಿಗಳ ನಿರ್ಮಾಣ ನಿಷೇಧಿಸುವುದು.
–ಭೂಕಂಪನಾ ನಿರೋಧಕ ಕಟ್ಟಡಗಳ ನಿರ್ಮಾಣ – ಬಹುಮಹಡಿ ಕಟ್ಟಡಗಳ ನಿರ್ಮಾಣದ ನಿಷೇಧ – ಉತ್ತಮ ದರ್ಜೆ ಕಟ್ಟಡಗಳ ನಿರ್ಮಾಣ – ಆಳವಾದ ಬಾವಿಗಳನ್ನು ಕೊರೆಯುವುದನ್ನು ನಿಷೇಧಿಸುವುದು.
–ಬಹುದೊಡ್ಡ ಅಣೆಕಟ್ಟೆ ಮತ್ತು ಜಲಾಶಯಗಳ ನಿರ್ಮಾಣಕ್ಕೆ ನಿಷೇಧ
–ಅರಣ್ಯನಾಶ ಮತ್ತು ಗಣಿಗಾರಿಕೆಯನ್ನು ತಡೆಯುವುದು

7.ಸಮುದ್ರ ತೀರದ ಸವೆತದ (ಕಡಲಕೊರೆತದ) ಪರಿಣಾಮಗಳು ಮತ್ತು ಇವುಗಳ ನಿಯಂತ್ರಣಾ ಕ್ರಮಗಳನ್ನು ತಿಳಿಸಿ

ಪರಿಣಾಮಗಳು : 1)ಕರಾವಳಿ ಪ್ರದೇಶದ ಕಟ್ಟಡ ಮತ್ತು ಮರಗಳು ಕೊಚ್ಚಿ ಹೋಗುವುದು. 2)ಕರಾವಳಿಯ ರಸ್ತೆ ಮತ್ತು ರೈಲು ಮಾರ್ಗಗಳಿಗೆ ಧಕ್ಕೆ 3)ಹೆಚ್ಚು ಕಾಲಕರಾವಳಿಯಲ್ಲಿ ನೀರು ತುಂಬಿಕೊಳ್ಳುವುದರಿಂದ ಅಲ್ಲಿನ ಜನರಿಗೆ ಪುನರ್ವಸತಿ ಕಲ್ಪಿಸುವ ಸಮಸ್ಯೆ

ನಿಯಂತ್ರಣ ಕ್ರಮಗಳು 1)ಸಮುದ್ರದ ಅಲೆಗಳ ಹೊಡೆತವನ್ನು ನಿಯಂತ್ರಿಸಲು ಸಮುದ್ರ ಗೋಡೆ,ತಡೆಗಟ್ಟುವಿಕೆ ಮತ್ತು ಅಲೆ ತಡೆಗಳ ನಿರ್ಮಾಣ

2)ತೀರಗಳಲ್ಲಿ ಮರಳು ಮತ್ತು ಗಣಿಗಾರಿಕೆ ನಿಷೇಧ 3)ಸಮುದ್ರ ದಡ ಮತ್ತು ಮರಳು ರಾಶಿಗಳನ್ನು ಉಳಿಸುವ ಮತ್ತು ಸುಸ್ಥಿರತೆಗಾಗಿ ಮರಗಳನ್ನು ಬೆಳೆಸುವುದು.

8.ಭಾರತದ ಪ್ರವಾಹ ಪೀಡಿತ ಪ್ರದೇಶಗಳನ್ನು ಮತ್ತು ಪ್ರವಾಹದ ನಿಯಂತ್ರಣ ಕ್ರಮಗಳನ್ನು ತಿಳಿಸಿ

ಪ್ರವಾಹ ಪೀಡಿತ ಪ್ರದೇಶಗಳು : 1)ಗಂಗಾ ಮತ್ತು ಬ್ರಹ್ಮ ಪುತ್ರ ನದಿ ಬಯಲುಗಳು

2)ಸಟ್ಲೇಜ್,ಬಿಯಾಸ್,ರಾವಿ ಮತ್ತು ಚೇನಾಬ್ ಬಯಲು 3)ಪರ್ಯಾಯ ಪ್ರಸ್ಥಭೂಮಿ ಮತ್ತು ನದಿಮುಖಜ ಭೂಮಿಗಳು 4)ನರ್ಮದಾ ಮತ್ತು ತಾಪಿ ನದಿಗಳ ತಗ್ಗು ಭಾಗಗಳು.

ಪ್ರವಾಹ ನಿಯಂತ್ರಣ ಕ್ರಮಗಳು:

1) ಜಲಾನಯನ ಪ್ರದೇಶದಲ್ಲಿ ಅರಣ್ಯ ಬೆಳೆಸುವುದು
2)ವೇಗವಾದ ನೀರಿನ ಹರಿವು ನಿಯಂತ್ರಣ 3)ಅಣೆಕಟ್ಟುಗಳನ್ನು ನಿರ್ಮಿಸಿ ಜಲಾಶಯಗಳಲ್ಲಿ ನೀರು ಸಂಗ್ರಹಿಸಿ ನದಿ ನೀರಿನ ಪ್ರಮಾಣವನ್ನು ಕಡಿಮೆ ಮಾಡುವುದು. 4)ಜನವಸತಿ ಪ್ರದೇಶ ಮತ್ತು ಕೃಷಿ ಭೂಮಿಯನ್ನು ಕಾಪಾಡಲು ಒಡ್ಡುಗಳ ನಿರ್ಮಾಣ 5)ಪ್ರವಾಹದ ಬಗ್ಗೆ ಸಕಾಲಿಕವಾಗಿ ಮುನ್ನೆಚ್ಚರಿಕೆ ನೀಡುವುದು.

## ಅಧ್ಯಾಯ-12
## ಭಾರತದ ಜನಸಂಖ್ಯೆ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1.ಜನಸಂಖ್ಯೆ ಎಂದರೇನು?
-ನಿಗದಿತ ಪ್ರದೇಶವೊಂದರಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆಗೆ ಜನಸಂಖ್ಯೆ ಎನ್ನುವರು.

2.1901 ರಿಂದ 1921 ರವರಗೆ ಭಾರತದ ಜನಸಂಖ್ಯಾ ಬೆಳವಣಿಗೆಯು ನಿಧಾನಗತಿಯಲ್ಲಿತ್ತು.ಏಕೆ?
-ಅಧಿಕ ಮರಣ ದರ,ಮಾರಣಾಂತಿಕ ಕಾಯಿಲೆ ಮತ್ತು ವೈದ್ಯಕೀಯ ಸೌಲಭ್ಯಗಳ ಕೊರತೆಯಿಂದಾಗಿ

3.ಅಧಿಕ ಜನನ ದರಕ್ಕೆ ಕಾರಣ -ಬಾಲ್ಯವಿವಾಹ,ಧಾರ್ಮಿಕ ಮತ್ತು ಸಾಮಾಜಿಕ ಮೂಢನಂಬಿಕೆಗಳು, ಬಹುಪತ್ನಿತ್ವ,ಬಡತನ, ಅನಕ್ಷರತೆ.

4.ಭಾರತದಲ್ಲಿ ಜನಸಂಖ್ಯೆಯು ಹಂಚಿಕೆ ಎಲ್ಲೆಡೆಯೂ ಸಮನಾಗಿಲ್ಲ. ಕಾರಣವೇನು?
-ವಿವಿಧ ಭೌಗೋಳಿಕ ಮತ್ತು ಸಾಂಸ್ಕೃತಿಕ ಅಂಶಗಳು

5.ಭಾರತದಲ್ಲಿ ಅಧಿಕ ಜನಸಂಖ್ಯೆಯುಳ್ಳ ರಾಜ್ಯ ಯಾವುದು?
-ಉತ್ತರ ಪ್ರದೇಶ

6.ಭಾರತದಲ್ಲಿ ಅತಿ ಕಡಿಮೆ ಜನಸಂಖ್ಯೆಯುಳ್ಳ ರಾಜ್ಯ -ಸಿಕ್ಕಿಂ

7.ಭಾರತದಲ್ಲಿ ಅಧಿಕ ಜನಸಂಖ್ಯೆಯನ್ನು ಹೊಂದಿರುವ ಕೇಂದ್ರಾಡಳಿತ ಪ್ರದೇಶ -ದೆಹಲಿ

8.ಅತಿ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಕೇಂದ್ರಾಡಳಿತ ಪ್ರದೇಶ -ಲಕ್ಷ ದ್ವೀಪ

9.2011 ರ ಜನಗಣತಿಯಂತೆ ಭಾರತದ ಸರಾಸರಿ ಜನಸಾಂದ್ರತೆ -382

10.ಜನಸಾಂದ್ರತೆ ಎಂದರೇನು?
-ಪ್ರತಿ ಚದರ ಕಿ.ಮೀ.ನಲ್ಲಿ ವಾಸಿಸುವ ಜನರ ಸಂಖ್ಯೆಗೆ ಜನಸಾಂದ್ರತೆ ಎನ್ನುವರು.

11.ಅತಿ ಹೆಚ್ಚು ಜನ ಸಾಂದ್ರತೆಯನ್ನು ಹೊಂದಿದ ರಾಜ್ಯ -ಬಿಹಾರ

12.ಅತಿ ಕಡಿಮೆ ಜನ ಸಾಂದ್ರತೆಯನ್ನು ಹೊಂದಿದ ರಾಜ್ಯ -ಅರುಣಾಚಲ ಪ್ರದೇಶ

13.ಕೇಂದ್ರಾಡಳಿತ ಪ್ರದೇಶಗಳಲ್ಲಿ ಅತಿ ಹೆಚ್ಚು ಜನ ಸಾಂದ್ರತೆಯನ್ನು ಹೊಂದಿದ ರಾಜ್ಯ-ದೆಹಲಿ.

14.ಕೇಂದ್ರಾಡಳಿತ ಪ್ರದೇಶಗಳಲ್ಲಿ ಅತಿ ಕಡಿಮೆ ಜನಸಾಂದ್ರತೆಯುಳ್ಳ ಪ್ರದೇಶ -ಅಂಡಮಾನ್ ಮತ್ತು ನಿಕೋಬರ್

15.ಮೇಲ್ಮೈ ಲಕ್ಷಣಗಳು ಜನಸಂಖ್ಯೆಯ ಹಂಚಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತವೆ?
-ಪರ್ವತ ಬೆಟ್ಟ ಗುಡ್ಡಗಳಲ್ಲಿ ಜನಸಂಖಯೆ ವಿರಳವಾಗಿರುತ್ತದೆ ಆದರೆ ಉತ್ತರದ ಮೈದಾನಗಳು ನದಿ ಮುಖಜ ಭೂಮಿಗಳಲ್ಲಿ ಜನಸಾಂದ್ರತೆ ಹೆಚ್ಚಾಗಿರುತ್ತದೆ.

16.ಕಡಿಮೆ ಜನಸಾಂದ್ರತೆಗೆ ಕಾರಣಗಳೇನು?
-ಪರ್ವತ,ಬೆಟ್ಟಗಳು, ಅರಣ್ಯ ಪ್ರದೇಶಗಳು,ಕನಿಷ್ಠ ಉಷ್ಣಾಂಶವುಳ್ಳ ಅಥವಾ ಅರೆ ಮರುಭೂಮಿ ವಾಯುಗುಣಗಳು ಕಡಿಮೆ ಜನಸಾಂದ್ರತೆಗೆ ಕಾರಣ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.:**

1.ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಗೆ ಪ್ರಮುಖ ಕಾರಣಗಳನ್ನು ತಿಳಿಸಿ.

- ಅಧಿಕ ಜನನ ದರ: -ಬಾಲ್ಯ ವಿವಾಹ - ಧಾರ್ಮಿಕ ಮತ್ತು ಸಾಮಾಜಿಕ ಮೂಢನಂಬಿಕೆಗಳು -ಬಹುಪತ್ನಿತ್ವ -ಅನಕ್ಷರತೆ -ಉಷ್ಣವಲಯದ ವಾಯುಗುಣ -ಇವು ಅಧಿಕ ಜನನದರಕ್ಕೆ ಕಾರಣ.
- ಕಡಿಮೆ ಮರಣ ದರ: -ವೈದ್ಯಕೀಯ ಸೌಲಭ್ಯಗಳ ಸುಧಾರಣೆ -ಪ್ರಾಣಾಂತಿಕ ಸಾಂಕ್ರಾಮಿಕ ಪಿಡುಗುಗಳ ನಿಯಂತ್ರಣ -ಶಿಶುಮರಣದಲ್ಲಿ ಕುಸಿತ -ಶೀಕ್ಷಣದ ಪ್ರಗತಿ -ಇವು ಕಡಿಮೆ ಮರಣದರಕ್ಕೆ ಕಾರಣವಾಗಿವೆ.

2.ಭಾರತದ ಜನಸಂಖ್ಯೆಯ ಬೆಳವಣಿಗೆಯಿಂದಾಗುವ ಪರಿಣಾಮಗಳೇನು? ಅಥವಾ ಜನಸಂಖ್ಯೆಯ ಶೀಘ್ರಗತಿಯ ಬೆಳವಣಿಗೆಯಿಂದಾಗಿ ಹಲವು ಸಮಸ್ಯೆಗಳು ಉಂಟಾಗುತ್ತವೆ.ಹೇಗೆ?

- ನಿರುದ್ಯೋಗ ಸಮಸ್ಯೆ
- ಆಹಾರದ ಕೊರತೆ ಮತ್ತು ಅಪೌಷ್ಟಿಕತೆ
- ಹೆಚ್ಚು ಸಾಮಾಜಿಕ ಹೊಣೆ ಮತ್ತು ಮೂಲ ಸೌಲಭ್ಯಗಳ ಕೊರತೆ
- ಕಡಿಮೆ ತಲಾದಾಯ
- ನಿಧಾನಗತಿಯ ಆರ್ಥಿಕಾಭಿವೃದ್ಧಿ
- ಬಡತನ, ಜೀವನ ಮಟ್ಟದಲ್ಲಿ ಕುಸಿತ,
- ಪರಿಸರ ಮಾಲಿನ್ಯ
- ರಾಜಕೀಯ ಅರಾಜಕತೆ

3.ಜನಸಂಖ್ಯಾ ಬೆಳವಣಿಗೆಯ ನಿಯಂತ್ರಣ ಕ್ರಮಗಳನ್ನು ತಿಳಿಸಿ

- ಕುಟುಂಬ ಯೋಜನೆ

- ಮಹಿಳಾ ಕಲ್ಯಾಣ ಯೋಜನೆ
- ಪ್ರಚಾರ ಮತ್ತು ಜಾಹಿರಾತು
- ಗ್ರಾಮೀಣ ಪ್ರದೇಶದ ಜನರಲ್ಲಿ ಜನಸಂಖ್ಯಾ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು.

4. ಭಾರತದ ಜನಸಂಖ್ಯೆಯ ಹಂಚಿಕೆಯನ್ನು ನಿಯಂತ್ರಿಸುವ ಪ್ರಮುಖ ಅಂಶಗಳನ್ನು ತಿಳಿಸಿ.

- ಮೇಲ್ಮೈ ಲಕ್ಷಣಗಳು
- ವಾಯುಗುಣ
- ಮಣ್ಣು
- ಸಂಪನ್ಮೂಲಗಳು
- ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳು

5. ಭಾರತದ ಕೆಲವು ಭಾಗಗಳ ಕಡಿಮೆ ಜನಸಾಂದ್ರತೆಗೆ ಕಾರಣಗಳೇನು?

- ಪರ್ವತ, ಬೆಟ್ಟ ಗುಡ್ಡಗಳ ಭಾಗಗಳು
- ಅರಣ್ಯ ಪ್ರದೇಶ
- ಕನಿಷ್ಠ ಉಷ್ಣಾಂಶವುಳ್ಳ ಅಥವಾ ಅರೆಮರುಭೂಮಿ ವಾಯುಗುಣಗಳು.

6. ಭಾರತದ ವಿರಳ (ಕಡಿಮೆ) ಜನಸಂಖ್ಯೆಯುಳ್ಳ ಪ್ರದೇಶಗಳನ್ನು ಪಟ್ಟಿಮಾಡಿ.

- ಹಿಮಾಲಯ ಪರ್ವತ ಪ್ರದೇಶ
- ಕೇಂದ್ರದ ಎತ್ತರ ಪ್ರದೇಶ
- ಥಾರ್ ಮರುಭೂಮಿ
- ದ್ವೀಪಗಳು

7. ಭಾರತದ ಜನಭರಿತ (ಅಧಿಕ ಜನಸಂಖ್ಯೆ) ಪ್ರದೇಶಗಳಾವುವು?

- ಗಂಗಾನದಿ ಬಯಲು
- ಕರಾವಳಿ ಪ್ರದೇಶಗಳು
- ಕೈಗಾರಿಕಾ ನಗರ ಪ್ರದೇಶಗಳು

8. 1921 ರಿಂದ 1951 ರ ಅವಧಿಯನ್ನು ಸಾಧಾರಣಾ ಜನಸಂಖ್ಯೆ ಬೆಳವಣಿಗೆಯ ಕಾಲವೆಂದು ಪರಿಗಣಿಸಲಾಗಿದೆ. ಇದಕ್ಕೆ ಕಾರಣಗಳೇನು?

- ಭಯಂಕರ ಪಿಡುಗುಗಳ ನಿಯಂತ್ರಣ
- ವೈದ್ಯಕೀಯ ಸೌಲಭ್ಯಗಳಲ್ಲಿ ಸುಧಾರಣೆ
- ನೈರ್ಮಲ್ಯೀಕರಣ ನಿರ್ವಹಣೆಯಿಂದಾಗಿ ಮರಣ ದರದಲ್ಲಿ ಇಳಿಕೆ.

*****

## ಅರ್ಥಶಾಸ್ತ್ರ

### ಅಧ್ಯಾಯ-1 ಅಭಿವೃದ್ಧಿ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

1. ಅಭಿವೃದ್ಧಿ ಎಂದರೇನು?
– ಒಂದು ದೇಶದ ಎಲ್ಲರ ಆಶೋತ್ತರಗಳನ್ನು ಈಡೇರಿಸುವ ಸಾಮರ್ಥ್ಯವನ್ನು ವಿಸ್ತರಿಸುವ ಪ್ರಕ್ರಿಯೆಯನ್ನು ಪ್ರಕ್ರಿಯೆಯನ್ನು ಅಭಿವೃದ್ಧಿ ಎನ್ನುವರು.

2. ಆರ್ಥಿಕ ಅಭಿವೃದ್ಧಿ ಎಂದರೇನು?
– ಒಂದು ರಾಷ್ಟ್ರದ ಜನರ ಆರ್ಥಿಕ ಆಶೋತ್ತರಗಳನ್ನು ಪೂರೈಸುವ ಸಾಮರ್ಥ್ಯ ಹೆಚ್ಚಿಸಿ, ಬಡತನ, ನಿರುದ್ಯೋಗ, ಅಸಮಾನತೆ, ಹಣದುಬ್ಬರಗಳಂಥ ಆರ್ಥಿಕ ಸಮಸ್ಯೆಗಳನ್ನು ನಿಯಂತ್ರಿಸುವುದನ್ನು ಆರ್ಥಿಕ ಅಭಿವೃದ್ಧಿ ಎಂದು ಕರೆಯುವರು.

**ಅಥವಾ** ಒಂದು ರಾಷ್ಟ್ರದ ನೈಜ ರಾಷ್ಟ್ರೀಯ ವರಮಾನವು ದೀರ್ಘಾವಧಿಯವರೆಗೆ ಹೆಚ್ಚಳವಾಗುವ ಪ್ರಕ್ರಿಯೆಯೇ ಆರ್ಥಿಕ ಅಭಿವೃದ್ಧಿಯಾಗಿದೆ

3. ರಾಷ್ಟ್ರೀಯ ವರಮಾನ (ಆದಾಯ) ಎಂದರೇನು?
– ಒಂದು ವರ್ಷದ ಅವಧಿಯಲ್ಲಿ ದೇಶದಲ್ಲಿ ಉತ್ಪಾದಿಸಿದ ಎಲ್ಲ ಸರಕು ಸೇವೆಗಳ ಒಟ್ಟು ಮೌಲ್ಯವನ್ನು ರಾಷ್ಟ್ರೀಯ ವರಮಾನ ಎನ್ನುವರು.

4. ತಲ ವರಮಾನ (ತಲಾದಾಯ) ಎಂದರೇನು?
– ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿದಾಗ ದೊರಕುವ ಸರಾಸರಿ ಮೊತ್ತವನ್ನು ತಲ ವರಮಾನ ಎಂದು ಕರೆಯುವರು.

5. ಆರ್ಥಿಕ ಪ್ರಗತಿಯ ಮುಖ್ಯ ಉದ್ದೇಶವೇನು?
– ಜನರ ಕಲ್ಯಾಣವನ್ನು ಹೆಚ್ಚಿಸುವುದು.

6. ಮಾನವ ಅಭಿವೃದ್ಧಿ ಸೂಚಿ ಎಂದರೇನು?
–ವ್ಯಕ್ತಿಗಳ ಜೀವಿತಾವಧಿ, ಸಾಕ್ಷರತೆಯ ಪ್ರಮಾಣ ಮತ್ತು ತಲ ವರಮಾನ ಇವುಗಳ ಸರಾಸರಿಯನ್ನು ಮಾನವ ಅಭಿವೃದ್ಧಿ ಸೂಚಿ ಎನ್ನುವರು.

7. ನಿರೀಕ್ಷಿತ ಜೀವಿತಾವಧಿ ಎಂದರೇನು?
–ಒಂದು ದೇಶದಲ್ಲಿರುವ ಜನರು ಜೀವಿಸುವ ಸರಾಸರಿ ಆಯುಸ್ಸನ್ನು ನಿರೀಕ್ಷಿತ ಜೀವಿತಾವಧಿ ಎನ್ನುವರು.

8. ರಾಷ್ಟ್ರದ ಶಿಕ್ಷಣದ ಸಾಧನೆಯನ್ನು ಹೇಗೆ ಮಾಪನ ಮಾಡಲಾಗುತ್ತದೆ?
– 25 ವರ್ಷಕ್ಕಿಂತ ಹೆಚ್ಚಿನ ವಯೋಮಾನದವರು ಪೂರ್ಣಗೊಳಿಸಿದ ಶಿಕ್ಷಣದ ಅವಧಿ ಹಾಗೂ 5 ವರ್ಷದ ಮಕ್ಕಳು ಪಡೆಯಬಹುದಾದ ಶಿಕ್ಷಣದ ಅವಧಿಯನ್ನು ಬಳಸಿ ರಾಷ್ಟ್ರದ ಶಿಕ್ಷಣದ ಸಾಧನೆಯನ್ನು ಮಾಪನ ಮಾಡಲಾಗುತ್ತದೆ.

9. ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ ಯಾವುದು? – ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ

10. 2014 ರಲ್ಲಿ ಭಾರತವು ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಎಷ್ಟನೆಯ

ಸ್ಥಾನ ಹೊಂದಿತ್ತು ? – 135 ನೇ ಸ್ಥಾನ

11. 2011 ನೇ ಸಾಲಿನಲ್ಲಿ ಭಾರತದ ಲಿಂಗಾನುಪಾತ ಎಷ್ಟು? – 945

12.ಲಿಂಗಾನುಪಾತ ಎಂದರೇನು?

– ಪ್ರತಿ 1000 ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯನ್ನು ಲಿಂಗಾನುಪಾತ ಎಂದು ಕರೆಯುವರು.

13.ಭಾರತದಲ್ಲಿ ಲಿಂಗಾನುಪಾತ ಕುಸಿಯುತ್ತಿದೆ.ಕಾರಣವೇನು?

– ತಾಯಿಯ ಗರ್ಭದಲ್ಲಿರುವಾಗಲೇ ಹೆಣ್ಣು ಭ್ರೂಣಗಳನ್ನು ಪತ್ತೆಹಚ್ಚಿ ಹತ್ಯೆ ಮಾಡುವ ಕೆಟ್ಟ ಪರಂಪರೆ ಬೆಳೆಯುತ್ತಿದೆ. ಆದ್ದರಿಂದ ಲಿಂಗಾನುಪಾತ ಕುಸಿಯುತ್ತಿದೆ.

14.ಸ್ವಸಹಾಯ ಸಮೂಹಗಳನ್ನು ಏಕೆ ಸ್ಥಾಪಿಸಲಾಗಿದೆ?

– ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅವರ ಸಬಲೀಕರಣವನ್ನು ಸಾಧಿಸಲು ಸ್ವಸಹಾಯ ಸಮೂಹಗಳನ್ನು ಸ್ಥಾಪಿಸಲಾಗಿದೆ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಅಭಿವೃದ್ಧಿಯನ್ನು ವ್ಯಾಖ್ಯಾನಿಸಿ ಮತ್ತು ಅಭಿವೃದ್ಧಿ ಪ್ರಕ್ರಿಯೆಯ ವಿವರಣೆ ನೀಡಿ.

- ಯಾವುದೇ ಒಂದು ಕ್ಷೇತ್ರ ಇಲ್ಲವೇ ವ್ಯಕ್ತಿಗಳ ಪ್ರಗತಿಯನ್ನು ಸೂಚಿಸಲು ಅಭಿವೃದ್ಧಿ ಪದವನ್ನು ಬಳಸುತ್ತೇವೆ.
- ಇಲ್ಲಿ ಪ್ರಕ್ರಿಯೆ ಎಂಬ ಪದವು ಉತ್ಪಾದನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಗಳನ್ನು ಸೂಚಿಸುತ್ತದೆ.
- ಉತ್ಪಾದನಾಂಗಗಳ ಪೂರೈಕೆಯು ಹೊಸ ಸಂಪನ್ಮೂಲಗಳ ಶೋಧ,ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ,ಬಂಡವಾಳ ಸಂಚಯನ, ಜನಸಂಖ್ಯಾ ಬೆಳವಣಿಗೆ, ಉತ್ತಮ ತಾಂತ್ರಿಕತೆಯ ಕಾರಣಗಳಿಂದ ಬದಲಾವಣೆಯಾಗುತ್ತವೆ.
- ಅದೇ ರೀತಿ ಜನಸಂಖ್ಯಾ ಬೆಳವಣಿಗೆ ಮತ್ತು ಅದರ ಲಕ್ಷಣಗಳ ಬದಲಾವಣೆ, ವರಮಾನದ ಮಟ್ಟ ಹಾಗೂ ಅದರ ಹಂಚಿಕೆಯಲ್ಲಿನ ಬದಲಾವಣೆ, ಜನರ ಅಭಿರುಚಿಯಲ್ಲಿನ ಬದಲಾವಣೆ ಮುಂತಾದವುಗಳಿಂದಾಗಿ ಸರಕುಗಳ ಬೇಡಿಕೆಯಲ್ಲಿ ಬದಲಾವಣೆ ಉಂಟಾಗುತ್ತದೆ.
- ಈ ಬದಲಾವಣೆಗಳು ರಾಷ್ಟ್ರೀಯ ವರಮಾನದ ಹೆಚ್ಚಳಕ್ಕೆ ಪೂರಕವಾಗುತ್ತವೆ.

2.ಅನಾಭಿವೃದ್ಧಿ ಎಂದರೇನು? ಅದಕ್ಕೆ ಕಾರಣಗಳೇನು?

- ಅನಾಭಿವೃದ್ಧಿ ಎಂಬ ಶಬ್ದವು ಹಿಂದುಳಿದ, ಅಭಿವೃದ್ಧಿ ಹೊಂದದೇ ಇರುವ ನಿಶ್ಚಲ ಸ್ಥಿತಿಯನ್ನು ಸೂಚಿಸುತ್ತದೆ.

  **ಅನಾಭಿವೃದ್ಧಿಗೆ ಕಾರಣಗಳು–**

- ದೇಶದಲ್ಲಿ ಉತ್ಪಾದನೆ ಕಡಿಮೆ ಇರುವುದು.
- ಅಪಾರ ಜನಸಂಖ್ಯೆ
- ಕಡಿಮೆ ತಲಾ ವರಮಾನ
- ಬಡತನ
- ನಿರುದ್ಯೋಗ
- ಅಸಮಾನತೆ
- ಸಂಪನ್ಮೂಲಗಳ ಸದ್ಬಳಕೆಯ ಕೊರತೆ
- ಉತ್ತಮ ಆರೋಗ್ಯದ ಕೊರತೆ

3.ಮಾನವ ಅಭಿವೃದ್ಧಿ ಸೂಚ್ಯಾಂಕ ಎಂದರೇನು? ಅದನ್ನು ಹೇಗೆ ಲೆಕ್ಕ ಹಾಕುತ್ತೀರಿ?

- ವ್ಯಕ್ತಿಗಳ ಜೀವಿತಾವಧಿ, ಸಾಕ್ಷರತೆಯ ಪ್ರಮಾಣ ಮತ್ತು ತಲ ವರಮಾನ ಇವುಗಳ ಸರಾಸರಿಯನ್ನು ಮಾನವ ಅಭಿವೃದ್ಧಿ ಸೂಚ್ಯಾಂಕ ಎನ್ನುವರು.
- ಆರೋಗ್ಯವನ್ನು ವ್ಯಕ್ತಿಗಳ ಜೀವಿತಾವಧಿ,ಶಿಕ್ಷಣವನ್ನು ಸಾಕ್ಷರತೆಯ ಪ್ರಮಾಣ ಮತ್ತು ಖರೀದಿ ಶಕ್ತಿಯನ್ನು ತಲಾ ವರಮಾನ ಬಳಸಿ ಅಳೆಯುತ್ತೇವೆ.

4.ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಾಂಕ ಕಡಿಮೆ ಇರುವುದಕ್ಕೆ ಕಾರಣ ನೀಡಿರಿ.

- ಅಪಾರ ಜನಸಂಖ್ಯೆ
- ತಲವರಮಾನ ಕಡಿಮೆ ಇರುವುದು
- ಕಡಿಮೆ ಪ್ರಮಾಣದ ನಿರೀಕ್ಷಿತ ಜೀವಿತಾವಧಿ
- ದೇಶದ ಒಟ್ಟು ಉತ್ಪಾದನೆ ಕಡಿಮೆ ಇರುವುದು.
- ಕಡಿಮೆ ಸಾಕ್ಷರತಾ ಪ್ರಮಾಣ

5.ಲಿಂಗ ಸಮಾನತೆಯನ್ನು ಹೇಗೆ ಸಾಧಿಸುವುದು?

- ಮಹಿಳೆಯರಿಗೆ ಸಾಮಾಜಿಕ,ಆರ್ಥಿಕ,ಶೈಕ್ಷಣಿಕ ಹಾಗೂ ರಾಜಕೀಯ ಸಮಾನತೆಯನ್ನು ಒದಗಿಸಿ ಕೊಡುವುದು.
- ಮಹಿಳಾ ಸಬಲೀಕರಣ
- ಮಹಿಳೆಯರ ವಿರುದ್ಧದ ಹಿಂಸೆಯನ್ನು ತಡೆಯುವುದು.
- ಚುನಾಹಿತ ಸಂಸ್ಥೆಗಳಲ್ಲಿ ಮೀಸಲಾತಿ
- ಸಮಾನ ವೇತನವನ್ನು ಜಾರಿಗೆ ತರುವುದು.

6.ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ. ಸಮರ್ಥಿಸಿ.

- ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅವರ ಸಬಲೀಕರಣವನ್ನು ಸಾಧಿಸಲು ಸ್ವಸಹಾಯ ಸಮೂಹಗಳನ್ನು ಸ್ಥಾಪಿಸಲಾಗಿದೆ.

- ಒಂದು ಸ್ವಸಹಾಯ ಸಮೂಹವು 20 ಸಮಾನ ಮನಸ್ಕ ಮಹಿಳೆಯರ ಒಂದು ಸಂಘವಾಗಿದ್ದು, ಸದಸ್ಯರು ತಮ್ಮಲ್ಲಿರುವ ಅಲ್ಪ ಪ್ರಮಾಣದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಬಾಹ್ಯ ಸಹಾಯವನ್ನು ಪಡೆದು, ವ್ಯವಹಾರ ಆರಂಭಿಸಿ, ವರಮಾನ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾರೆ.
- ಲೆಕ್ಕ ನಿರ್ವಹಣೆ, ಬ್ಯಾಂಕಿನ ಜೊತೆ ವ್ಯವಹರಿಸುವುದಲ್ಲದೇ ವರಮಾನ ಸೃಷ್ಟಿಸುವಂಥ ಉದ್ಯೋಗಗಳ ಕುರಿತು ಅವರಿಗೆ ತರಬೇತಿಯನ್ನೂ ನೀಡಲಾಗುತ್ತದೆ.
- ಸ್ವಸಹಾಯ ಸಮೂಹಗಳು ಮಹಿಳೆಯರ ವರಮಾನ ಹಾಗೂ ಉಳಿತಾಯಗಳ ವೃದ್ಧಿಗೆ ಕಾರಣವಾಗಿವೆಯಲ್ಲದೇ, ಅವರು ತಮ್ಮ ಇಚ್ಛಾನುಸಾರ ಖರ್ಚು ಮಾಡುವುದಕ್ಕೂ ಅನುವು ಮಾಡಿಕೊಟ್ಟಿವೆ.
- ಇದರಿಂದಾಗಿ ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿದೆ.

7. ನಿರೀಕ್ಷಿತ ಜೀವಿತಾವಧಿಯನ್ನು ನಿರ್ಧರಿಸುವ ಅಂಶಗಳಾವುವು? **ಅಥವಾ** ನಿರೀಕ್ಷಿತ ಜೀವಿತಾವಧಿಯನ್ನು ಹೆಚ್ಚಿಸಲು ಸಹಾಯಕವಾಗುವ ಅಂಶಗಳಾವುವು?

- ಪೌಷ್ಠಿಕ ಆಹಾರ
- ಆರೋಗ್ಯ ಮತ್ತು ನೈರ್ಮಲ್ಯ
- ಸ್ವಚ್ಛ ಪರಿಸರ
- ಶುದ್ಧ ಕುಡಿಯುವ ನೀರು

8. ತಲಾ ವರಮಾನವನ್ನು ಹೇಗೆ ಕಂಡುಹಿಡಿಯಲಾಗುತ್ತದೆ?

- ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸುವ ಮೂಲಕ ತಲಾ ವರಮಾನವನ್ನು ಕಂಡುಹಿಡಿಯಲಾಗುತ್ತದೆ.

9. ವಿಭಿನ್ನ ವರಮಾನ ಮತ್ತು ಜನಸಂಖ್ಯೆಗಳುಳ್ಳ ರಾಷ್ಟ್ರಗಳ ಅಭಿವೃದ್ಧಿಯ ಹೋಲಿಕೆ ಮಾಡುವುದಕ್ಕೆ ರಾಷ್ಟ್ರೀಯ ವರಮಾನವು ಸೂಕ್ತವಾಗುವುದಿಲ್ಲ. ಏಕೆ?

- ರಾಷ್ಟ್ರೀಯ ವರಮಾನದ ಜೊತೆ ಜೊತೆಗೆ ಜನಸಂಖ್ಯೆಯ ಹೆಚ್ಚಳವೂ ಕಂಡು ಬಂದರೆ ಅದು ಆರ್ಥಿಕ ಪ್ರಗತಿಯ ವಾಸ್ತವ ಚಿತ್ರಣ ನೀಡುವುದಿಲ್ಲ.
- ಆದ್ದರಿಂದ ವಿಭಿನ್ನ ವರಮಾನ ಮತ್ತು ಜನಸಂಖ್ಯೆಗಳುಳ್ಳ ರಾಷ್ಟ್ರಗಳ ಅಭಿವೃದ್ಧಿಯ ಹೋಲಿಕೆ ಮಾಡುವುದಕ್ಕೆ ರಾಷ್ಟ್ರೀಯ ವರಮಾನವು ಸೂಕ್ತವಾಗುವುದಿಲ್ಲ.

10. ಆರ್ಥಿಕಾಭಿವೃದ್ಧಿಯನ್ನು ಅಳೆಯಲು ತಲಾ ವರಮಾನವು ಸೂಕ್ತ/ ನೈಜವಾದುದಲ್ಲ. ಏಕೆ?

- ತಲಾ ವರಮಾನವು ಒಂದು ಬಹು ಜನಪ್ರಿಯ ಮಾನದಂಡವಾಗಿದ್ದರೂ ಅದು ಜನರ ನಡುವಿನ ವರಮಾನ ಹಂಚಿಕೆಯನ್ನು ಅದು ತೋರಿಸುವುದಿಲ್ಲ, ಅಲ್ಲದೇ ಅದು ಆಹಾರ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಇತರ ಸಾಮಾಜಿಕ ಅಂಶಗಳ ಲಭ್ಯತೆಯನ್ನು ಪರಿಗಣಿಸುವುದಿಲ್ಲ.

## ಅಧ್ಯಾಯ-2 ಗ್ರಾಮೀಣ ಅಭಿವೃದ್ಧಿ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1. ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದ ಸಂವಿಧಾನದ ತಿದ್ದುಪಡಿ – 73 ನೇ ತಿದ್ದುಪಡಿ

2. ಭಾರತದ ಆಡಳಿತ ವ್ಯವಸ್ಥೆಯಲ್ಲಿ 73 ನೇ ಸಂವಿಧಾನಾತ್ಮಕ ತಿದ್ದುಪಡಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಏಕೆ?

–ಏಕ ರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು.

3. ವಿಕೇಂದ್ರೀಕರಣ ಎಂದರೇನು?

–ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವುದನ್ನು ವಿಕೇಂದ್ರೀಕರಣ ಎನ್ನುವರು.

4. ಭಾರತದ ನೈಜ ಅಭಿವೃದ್ಧಿಯೆಂದರೆ, ಗ್ರಾಮಗಳ ಅಭಿವೃದ್ಧಿ ಎಂದು ಹೇಳಿದವರು –ಮಹಾತ್ಮ ಗಾಂಧೀಜಿ

5. ವಸತಿಯೋಜನೆಗಳನ್ನು ತಿಳಿಸಿ.

– ಪ್ರಧಾನಮಂತ್ರಿ ಆವಾಸ್ ಯೋಜನೆ, ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ, ಆಶ್ರಯ ಯೋಜನೆ

6. ಗ್ರಾಮೀಣ ಪ್ರದೇಶಗಳ ಹಿಂದುಳಿದಿರುವಿಕೆಗೆ ಮುಖ್ಯ ಕಾರಣವೇನು?

–ಕೃಷಿಯ ಸ್ಥಗಿತತೆ ಮತ್ತು ನಿಧಾನಗತಿಯ ಬೆಳವಣಿಗೆ

7. ಗ್ರಾಮೀಣಾಭಿವೃದ್ಧಿ ಎಂದರೇನು?

–ಗ್ರಾಮೀಣ ಜನರ ಜೀವನದ ಗುಣಮಟ್ಟವನ್ನು ಉತ್ತಮಪಡಿಸುವ ಗ್ರಾಮ ಪ್ರದೇಶಗಳ ಏಳ್ಗೆಯನ್ನು ಗ್ರಾಮೀಣಾಭಿವೃದ್ಧಿ ಎನ್ನುವರು.

8. ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಸ್ವಸಹಾಯ ಸಂಘಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಇದರ ಉದ್ದೇಶವೇನು?

–ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸುವುದು ಮತ್ತು ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು.

9. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಹಿರಿದಾದುದು. ಏಕೆಂದರೆ –ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಗಳ ಜನರು ಪಾಲ್ಗೊಳ್ಳುವಂತೆ ಮಾಡುತ್ತದೆ.

10. ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಸಭೆಗಳು ಮಹತ್ವದ ಪಾತ್ರ ವಹಿಸುತ್ತವೆ ಏಕೆ?

ಗ್ರಾಮ ಸಭೆಗಳಲ್ಲಿ ಗ್ರಾಮದ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಯೋಜನೆಗಳನ್ನು ನಿರ್ಣಯಿಸಲಾಗುತ್ತದೆ.

11.ಕರ್ನಾಟಕದಲ್ಲಿರುವ ಜಿಲ್ಲಾಪಂಚಾಯತಿಗಳೆಷ್ಟು?

–ಕರ್ನಾಟಕದಲ್ಲಿ 30 ಜಿಲ್ಲಾಪಂಚಾಯತಿಗಳಿವೆ.

12.ಕರ್ನಾಟಕದಲ್ಲಿರುವ ಒಟ್ಟು ತಾಲ್ಲೂಕು ಪಂಚಾಯತಿಗಳೆಷ್ಟು?

–ಕರ್ನಾಟಕದಲ್ಲಿರುವ ಒಟ್ಟು ತಾಲ್ಲೂಕು ಪಂಚಾಯತಿಗಳು 176

13.ಕರ್ನಾಟಕದಲ್ಲಿರುವ ಒಟ್ಟು ಗ್ರಾಮ ಪಂಚಾಯತಿಗಳೆಷ್ಟು?

–ಕರ್ನಾಟಕದಲ್ಲಿರುವ ಒಟ್ಟು ಗ್ರಾಮ ಪಂಚಾಯತಿಗಳು 6022

14.1993 ರಲ್ಲಿ ಸಂವಿಧಾನದ 73 ನೆಯ ತಿದ್ದುಪಡಿ ಕಾಯ್ದೆಯನ್ನು ಏಕೆ ಜಾರಿಗೊಳಿಸಲಾಯಿತು?

–ಏಕ ರೂಪದ ಪಂಚಾಯತ್ ರಾಜ್ಯ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರಲು

15.ಗ್ರಾಮೀಣ ಹಿಂದುಳಿಯುವಿಕೆ ಮತ್ತು ಗ್ರಾಮೀಣ ಬಡತನಕ್ಕೆಪ್ರಮುಖ ಕಾರಣವೇನು?

–ಕೃಷಿಯ ಸ್ಥಗಿತತೆ ಮತ್ತು ನಿಧಾನಗತಿಯ ಬೆಳವಣಿಗೆಯು ಗ್ರಾಮೀಣ ಹಿಂದುಳಿಯುವಿಕೆ ಮತ್ತು ಗ್ರಾಮೀಣ ಬಡತನಕ್ಕೆ ಪ್ರಮುಖ ಕಾರಣವಾಗಿದೆ

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.

- ಗ್ರಾಮಪಂಚಾಯತ್
- ತಾಲ್ಲೂಕು ಪಂಚಾಯತ್
- ಜಿಲ್ಲಾಪಂಚಾಯತ್

2.ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?

- ಬಹುತೇಕ ಕೃಷಿಯೊಂದನ್ನೇ ಅವಲಂಬಿಸಿರುವ ಗ್ರಾಮೀಣ ಜನರಲ್ಲಿ ಬಡತನ ಹೆಚ್ಚಾಗಿದೆ.
- ಶೇ.60 ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದು ರಾಷ್ಟ್ರೀಯ ವರಮಾನಕ್ಕೆ ಈ ವಲಯದ ಕೊಡುಗೆ ಬಹಳ ಕಡಿಮೆಯಿದ್ದು ಅದು ನಿರಂತರವಾಗಿ ಇಳಿಕೆಯಾಗುತ್ತಿದೆ.
- ಇದರಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರ ದಿನೇ ದಿನೇ ಹೆಚ್ಚುತ್ತಿದೆ.

3.ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.

- ಗ್ರಾಮೀಣ ಅಭಿವೃದ್ಧಿಯು ಕೃಷಿ ಹಾಗೂ ಕೃಷಿಯೇತರ ವಲಯಗಳ ಅಭಿವೃದ್ಧಿಯನ್ನು ಒಳಗೊಂಡಿರುವುದರಿಂದ ಒಟ್ಟಾರೆ ರಾಷ್ಟ್ರದ ಅಭಿವೃದ್ಧಿಯಾಗುತ್ತದೆ.
- ಅಧಿಕ ಕೃಷಿ ವರಮಾನದ ಪರಿಣಾಮವಾಗಿ, ಔದ್ಯೋಗಿಕ ಸರಕು–ಸೇವೆಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ತನ್ಮೂಲಕ ಅಧಿಕ ಉದ್ಯೋಗ ಸೃಷ್ಟಿಯಾಗಿ ಆ ಚಟುವಟಿಕೆಗಳು ಸಹ ವಿಸ್ತಾರ ಹೊಂದುತ್ತವೆ.
- ಅಧಿಕ ಶಿಕ್ಷಣ ಮತ್ತು ಕೌಶಲ್ಯಗಳಿಂದಾಗಿ ಹೆಚ್ಚಿನ ಉತ್ಪಾದನೆಯನ್ನು ಸಾಧಿಸಬಹುದು.
- ಉತ್ತಮ ಆರೋಗ್ಯದಿಂದ ಜನರ ಕೆಲಸದ ಸಹಭಾಗಿತ್ವದ ಪ್ರಮಾಣ ಹೆಚ್ಚಾಗಿ,ರಾಷ್ಟ್ರೀಯ ಉತ್ಪನ್ನ ಹೆಚ್ಚಾಗುತ್ತದೆ.
- ಕೃಷಿ ಸಂಸ್ಕರಣೆ, ಸಣ್ಣ ಕೈಗಾರಿಕೆಗಳು ಅಭಿವೃದ್ಧಿ ಹೊಂದಿ ಒಟ್ಟಾರೆ ಗ್ರಾಮೀಣ ಪರಿವರ್ತನೆಗೆ ನಾಧಿಯಾಗುತ್ತದೆ.

4.ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ತಿಳಿಸಿ.

- ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿ ಕೊಡುವುದನ್ನು ವಿಕೇಂದ್ರೀಕರಣ ಎನ್ನುವರು.
- ಇದು ಅಧಿಕಾರ ಹಂಚಿಕೆಯ ಒಂದು ಪ್ರಕ್ರಿಯೆಯಾಗಿದ್ದು ನಿರ್ಧಾರ ಕೈಗೊಳ್ಳುವಲ್ಲಿ ಜನರ ಪಾಲುದಾರಿಕೆ ಹೆಚ್ಚಳವಾಗುತ್ತದೆ
- ತಳಮಟ್ಟದಿಂದ ಯೋಜನೆ ನಿರೂಪಿಸುವಿಕೆ ಮತ್ತು ಅಭಿವೃದ್ಧಿ ಸಾಧನೆಯ ಪ್ರಕ್ರಿಯೆಯೂ ಇದಾಗಿದೆ ಗಾಂಧೀಜಿಯವರು ಇದನ್ನೇ ಗ್ರಾಮ ಸ್ವರಾಜ್ಯ ಎಂದು ಕರೆದರು.
- ವಿಕೇಂದ್ರೀಕರಣವು ಎಲ್ಲಾ ರೀತಿಯ ಶೋಷಣೆಗಳನ್ನು ತಡೆಯುತ್ತದೆ
- ಮಾನವ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆಯಲ್ಲದೇ ಸಹಾನುಭೂತಿ ಮತ್ತು ಸಹಕಾರದಂತಹ ಮಾನವೀಯ ಮೌಲ್ಯಗಳನ್ನ ವೃದ್ಧಿಸುತ್ತದೆ.

5.ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ವೇನು?

- ಗ್ರಾಮೀಣ ಜನರು ಗ್ರಾಮೀಣಾಭಿವೃದ್ಧಿಯಲ್ಲಿ ತೊಡಗುವಂತೆ ಮಾಡುವುದು.
- ಬಡತನ ನಿರ್ಮೂಲನೆ,ಭದ್ರತೆ ಹಾಗೂ ಸಾರ್ವಜನಿಕ ಸೌಕರ್ಯ ಗಳನ್ನು ಒದಗಿಸುವುದು.
- ಗ್ರಾಮಗಳ ರಸ್ತೆ,ಚರಂಡಿ,ಕುಡಿಯುವ ನೀರು,ಬೀದಿದೀಪ, ಶೌಚಾಲಯ,ಶಾಲೆ, ಆಸ್ಪತ್ರೆ,ಮಾರುಕಟ್ಟೆಮುಂತಾದ ಮೂಲ ಸೌಕರ್ಯಗಳನ್ನು ಒದಗಿಸುವುದು.
- ಗ್ರಾಮಸಭೆಗಳಲ್ಲಿ ಗ್ರಾಮದ ಜನರು ಪಾಲ್ಗೊಳ್ಳುವಂತೆಮಾಡುವುದು.
- ಉದ್ಯೋಗ ನಿರ್ಮಾಣ –ಬಡತನ ನಿರ್ಮೂಲನೆ ವಸತಿಹೀನರಿಗೆ ವಸತಿ ಒದಗಿಸುವುದು ಉದಾಹರಣೆಗೆ:ಪ್ರಧಾನಮಂತ್ರಿ ಆವಾಸ್ ಯೋಜನೆ , ಅಂಬೇಡ್ಕರ್–ವಾಲ್ಮೀಕಿ ವಸತಿಯೋಜನೆ,ಆಶ್ರಯ ಯೋಜನೆ ಇತ್ಯಾದಿ.
- ಪಡಿತರ ಸೌಲಭ್ಯ ಒದಗಿಸುವುದು.
- ಗ್ರಾಮದ ವಯೋವೃದ್ಧರು, ಅಂಗವಿಕಲರಿಗೆ, ವಿಧವೆಯರಿಗೆ, ಮಾನಸಿಕ ಅಸ್ವಸ್ಥರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಒದಗಿಸುವುದು.

- ಮಹಿಳಾ ಸಂಘಟನೆಗಳಿಗೆ ಪ್ರೋತ್ಸಾಹ – ಗ್ರಾಮೀಣ ಉತ್ಪಾದಕ ಚಟುವಟಿಕೆಗಳಾದ ಕೃಷಿ,ಪಶುಪಾಲನೆ, ಕೋಳಿಸಾಕಾಣೆ, ಮೀನುಗಾರಿಕೆ, ಸಾಮಾಜಿಕ ಅರಣ್ಯಗಳ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವುದು.

6.ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳನ್ನು ತಿಳಿಸಿ.

- ಗ್ರಾಮಪಂಚಾಯತ್,ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾಪಂಚಾಯತ್‌ಗಳುಳ್ಳ 3 ಹಂತದ ಪಂಚಾಯತ್ ವ್ಯವಸ್ಥೆ.
- ನೇರ ಹಾಗೂ ನಿಯಮಿತ ಚುನಾವಣೆಗಳು
- ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಸ್ಥಾನ ಮೀಸಲಾತಿ.
- ಹಣಕಾಸು,ಆಡಳಿತ,ಮುಂಗಡ ಪತ್ರ ಮಂಡಿಸುವ ಮತ್ತು ಲೆಕ್ಕ ಪರಿಶೋಧಿಸುವ ಜವಾಬ್ದಾರಿ
- ಕಾರ್ಯನಿರ್ವಾಹಕ ಮತ್ತು ಇತರೆ ಸಿಬ್ಬಂದಿ ನೀಡಿಕೆ,
- ನಿಯಮಿತ ಚುನಾವಣೆಗಳನ್ನು ನಡೆಸುವುದು.

7.ಗ್ರಾಮೀಣಾಭಿವೃದ್ಧಿಗೆ ಇರುವ ಅವಶ್ಯಕ ಕ್ರಮಗಳುಯಾವುವು?

- ಮಾನವ ಸಂಪನ್ಮೂಲ ಅಭಿವೃದ್ಧಿ
- ಸಾಕ್ಷರತೆ, ಮಹಿಳಾ ಸಾಕ್ಷರತೆ,
- ನೈರ್ಮಲ್ಯ ಮತ್ತು ಸಾರ್ವಜನಿಕ ಆರೋಗ್ಯದ ಸುಧಾರಣೆ
- ಭೂಸುಧಾರಣೆ
- ಸ್ಥಳೀಯ ಉತ್ಪಾದಕ ಸಂಪನ್ಮೂಲಗಳ ಅಭಿವೃದ್ಧಿ.
- ವಿದ್ಯುತ್ –ನೀರಾವರಿ–ಹಣಕಾಸು–ಮಾರುಕಟ್ಟೆ–ಸಾರಿಗೆ ಅಭಿವೃದ್ಧಿ ಮತ್ತು ಕೃಷಿ ಸಂಶೋಧನೆ ಮತ್ತು ವಿಸ್ತರಣೆ
- ಬಡತನ ನಿರ್ಮೂಲನೆಯ ನಿರ್ದಿಷ್ಟ ಯೋಜನೆಗಳು.

## ಅಧ್ಯಾಯ–3.ಹಣ ಮತ್ತು ಸಾಲ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1.ಸಾಟಿ ಪದ್ಧತಿಯಲ್ಲಿ ವಸ್ತುಗಳ ಬದಲಿಗೆ ವಿನಿಮಯ ಮಾಡಲಾಗುತ್ತಿದ್ದದ್ದು
– ವಸ್ತು

2.ಚೆಕ್‌ಗಳು ಈ ಹಣದ ಸಾಧನವಾಗಿವೆ – ಬ್ಯಾಂಕ್‌ಹಣ

3.ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯಾಗಿದ್ದು ಯಾವಾಗ?
–1935 ಏಪ್ರಿಲ್ 1

4.ಭಾರತೀಯ ರಿಸರ್ವ್ ಬ್ಯಾಂಕ್ ರಾಷ್ಟ್ರೀಕರಣಗೊಂಡದ್ದು ಯಾವಾಗ?
–1949 ಜನವರಿ 1

5.ಬ್ಯಾಂಕ್ ಹಣಕ್ಕೆ ಉದಾಹರಣೆ –ಚೆಕ್ಕುಗಳು,ಡ್ರಾಫ್ಟ್,ಠೇವಣಿ ರಸೀದಿ

6.ಜಪಾನಿನ ಕರೆನ್ಸಿ(ಹಣದ)ಯ ಹೆಸರೇನು?– ಯೆನ್

7.ಪ್ಲಾಸ್ಟಿಕ್ ಹಣವನ್ನು ಇ–ಹಣ ಎಂತಲೂ ಕರೆಯುವರು ಏಕೆ?
–ಇದರಿಂದ ವಿದ್ಯುನ್ಮಾನ ಸಾಧನಗಳ ಮೂಲಕ ವ್ಯವಹಾರ ನಡೆಸುವುದರಿಂದ ಇ–ಹಣವೆಂದು ಕರೆಯುವರು.

8.ಹಣ ಎಂದರೇನು?
–ಸರಕುಗಳಿಗಾಗಿ ಸಂದಾಯ ಮಾಡುವಲ್ಲಿ ಅಥವಾ ಇತರೆ ವಾಣಿಜ್ಯಕ ಸಾಲಗಳನ್ನು ತೀರಿಸುವಲ್ಲಿ ವ್ಯಾಪಕವಾಗಿ ಸ್ವೀಕರಿಸಲ್ಪಟ್ಟ ಯಾವುದೇ ವಸ್ತು ಹಣವಾಗಿದೆ.

9.ಸಾಟಿ ವಿನಿಮಯ ಪದ್ಧತಿ ಎಂದರೇನು?
–ಸರಕುಗಳಿಗೆ ಬದಲಾಗಿ ಸರಕುಗಳನ್ನು ವಿನಿಮಯ ಮಾಡಿಕೊಳ್ಳುವುದನ್ನು ಸಾಟಿ ವಿನಿಮಯ ಪದ್ಧತಿ ಎನ್ನುವರು.

10.ಹಣದುಬ್ಬರವು ಯಾವಾಗ ಸಂಭವಿಸುತ್ತದೆ?
–ಹಣದ ಪೂರೈಕೆಯು ಸರಕು–ಸೇವೆಗಳ ಪೂರೈಕೆಗಿಂತ ಅಧಿಕವಾಗಿದ್ದಾಗ ಹಣದುಬ್ಬರ ಸಂಭವಿಸುತ್ತದೆ.

11.ಭಾರತ ಸರ್ಕಾರವು 14 ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದು ಯಾವಾಗ? –1969 ರಲ್ಲಿ.

12.ಹಣಕಾಸು ನೀತಿ ಎಂದರೇನು?
– ಹಣದ ಪೂರೈಕೆ ಮತ್ತು ಸಾಲದ ಪ್ರಮಾಣ ಮತ್ತು ಬಡ್ಡಿದರದ ನಿಯಂತ್ರಣಕ್ಕಾಗಿ ಇರುವ ಕ್ರಮಗಳನ್ನು ಒಟ್ಟಾಗಿ ಹಣಕಾಸುನೀತಿ ಎನ್ನುವರು

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಹಣದ ವಿಕಾಸದ ವಿವಿಧ ಹಂತಗಳನ್ನು ತಿಳಿಸಿ.

- ಸಾಟಿ/ವಸ್ತು ವಿನಿಮಯ ಪದ್ಧತಿ
- ವಸ್ತು ರೂಪದ ಹಣ
- ಲೋಹದ ಹಣ
- ಕಾಗದದ ಹಣ
- ಬ್ಯಾಂಕ್ ಹಣ
- ಪ್ಲಾಸ್ಟಿಕ್ ಹಣ

2.ಹಣದ ಕಾರ್ಯಗಳನ್ನು ತಿಳಿಸಿ.

1.ಪ್ರಾಥಮಿಕ ಕಾರ್ಯಗಳು :
–ವಿನಿಮಯ ಮಾಧ್ಯಮ ಅಥವಾ ಸಂದಾಯ ಸಾಧನವಾಗಿ ಬಳಕೆ
– ಮೌಲ್ಯ ನಿರ್ಣಯ

2.ಪೂರಕ ಕಾರ್ಯಗಳು:
–ವಿಳಂಬಿತ ಸಂದಾಯದ ಪ್ರಮಾಣವಾಗಿ ಬಳಕೆ
–ಮೌಲ್ಯ ಅಥವಾ ಖರೀದಿ ಶಕ್ತಿಯ ಸಂಗ್ರಾಹ
– ಮೌಲ್ಯ ವರ್ಗಾವಣೆ ಅಥವಾ ಖರೀದಿ ಶಕ್ತಿಯ ವರ್ಗಾವಣೆ.

3.ಭಾರತೀಯ ರಿಸರ್ವ್‌ಬ್ಯಾಂಕನ ಕಾರ್ಯಗಳನ್ನು ತಿಳಿಸಿ.

- ನೋಟು ಚಲಾವಣೆಯ ಏಕಸ್ವಾಮ್ಯ
- ಸರ್ಕಾರದ ಬ್ಯಾಂಕಾಗಿ ಖಾರ್ಯನಿರ್ವಹಣೆ
- ಬ್ಯಾಂಕುಗಳ ಬ್ಯಾಂಕಾಗಿ ಕಾರ್ಯ ನಿರ್ವಹಣೆ
- ರಾಷ್ಟ್ರೀಯ ಸಂದಾಯದ ಕೇಂದ್ರವಾಗಿ ಕಾರ್ಯನಿರ್ವಹಣೆ
- ಸಾಲ ಪ್ರಮಾಣದ ನಿಯಂತ್ರಕ
- ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ
- ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ

4.RBI ಬಳಸುವ ಸಾಲ ನಿಯಂತ್ರಣ ಕ್ರಮಗಳನ್ನು ತಿಳಿಸಿ

- 1.ಪರಿಮಾಣಾತ್ಮಕ ಸಾಲ ನಿಯಂತ್ರಣ ಕ್ರಮಗಳು
  - ಬ್ಯಾಂಕ್ ದರ - ಮುಕ್ತ ಮಾರುಕಟ್ಟೆ ಕಾರ್ಯಾಚರಣೆ - ಮೀಸಲು ಅನುಪಾತದ ಅವಶ್ಯಕತೆಯನ್ನುಏರಿಳಿತಗೊಳಿಸುವುದು.
- ಗುಣಾತ್ಮಕ ಸಾಲ ನಿಯಂತ್ರಣ ಕ್ರಮಗಳು
  - ಮಾರ್ಜಿನ್ ಪ್ರಮಾಣದ ಬದಲಾವಣೆ
  -ಸಾಲದ ಗರಿಷ್ಟ ಮಿತಿ ನಿಗದಿ ಅಥವಾ ಸಾಲದ ಪಡಿತರ
  - ನೈತಿಕ ಒತ್ತಡ
  - ನೇರ ಕ್ರಮ ಇವುಗಳಿಗೆ ಸಂಬಂಧಿಸಿದಂತೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

5.ಭಾರತದಲ್ಲಿ ಬಳಸಲಾಗುತ್ತಿರುವ ಹಣದ ಪೂರೈಕೆಯ ವಿವಿಧ ಪರಿಕಲ್ಪನೆಗಳನ್ನು ವಿವರಿಸಿ.

- ದೇಶದ ಹಣಕಾಸು ಪ್ರಾಧಿಕಾರ ನೀಡಿದ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು ಆ ದೇಶದ ಹಣದ ಪೂರೈಕೆಯಾಗಿವೆ.
- ಭಾರತದಲ್ಲಿ ಹಣ ಪೂರೈಕೆಯ 4 ಪರಿಕಲ್ಪನೆಗಳನ್ನು ಬಳಸಲಾಗುತ್ತದೆ. M1,M2,M3, M4
- M1=ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು + ವಾಣಿಜ್ಯ ಬ್ಯಾಂಕುಗಳಲ್ಲಿರುವ ಬೇಡಿಕೆ ಠೇವಣಿಗಳು
- M2= M1 + ಅಂಚೆ ಕಛೇರಿಗಳಲ್ಲಿರುವ ಉಳಿತಾಯ ಠೇವಣಿಗಳು
- M3= M1 + ವಾಣಿಜ್ಯ ಬ್ಯಾಂಕುಗಳಲ್ಲಿರುವ ಮುದ್ದತ್ತು ಠೇವಣಿಗಳು
- M4= M3 + ಅಂಚೆ ಕಛೇರಿಗಳಲ್ಲಿರುವ ಒಟ್ಟು ಠೇವಣಿಗಳು
- ಹಣಕಾಸು ನಿರ್ವಹಣೆಯ ದೃಷ್ಟಿಯಿಂದ M1 ಮತ್ತು M2 ಕಿರಿದಾದ ಹಣವೆಂದು, M3 ಮತ್ತು M4 ಗಳನ್ನು ವಿಶಾಲ ಹಣವೆಂದು ಪರಿಗಣಿತವಾಗುತ್ತವೆ.

## ಅಧ್ಯಾಯ-4.ಸಾರ್ವಜನಿಕ ಹಣಕಾಸು ಮತ್ತು ಆಯವ್ಯಯ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1.ಸರ್ಕಾರವು ಸಾರ್ವಜನಿಕ ಹಣಕಾಸನ್ನು ಹೇಗೆ ನಿರ್ವಹಿಸುತ್ತದೆ?

-ಕೋಶೀಯ ನೀತಿಯ ಮೂಲಕ

2.ಸರ್ಕಾರವು ತನ್ನ ಎಲ್ಲಾ ಖರ್ಚು ವೆಚ್ಚಗಳಿಗೆ ಬಳಸಲು ಸಂಗ್ರಹಿಸುವ ಆದಾಯದ ಮೂಲ - - ಸಾರ್ವಜನಿಕ ಕಂದಾಯ .

3.ವಿತ್ತೀಯ ಕೊರತೆಯನ್ನು ಸೂತ್ರ ರೂಪದಲ್ಲಿ ಬರೆಯಿರಿ.

-ವಿತ್ತೀಯ ಕೊರತೆ =(ಕಂದಾಯ ವರಮಾನ + ಸಾಲೇತರ ಬಂಡವಾಳ ವರಮಾನ )-ಒಟ್ಟು ವೆಚ್ಚ

4.ಕೊರತೆಯ ಆಯವ್ಯಯ ಎಂದರೇನು?

-ಆಯವ್ಯಯ ಪತ್ರದಲ್ಲಿ ಸರ್ಕಾರದ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದನ್ನು ಕೊರತೆಯ ಆಯವ್ಯಯ ಎನ್ನವರು

5.ಉಳಿತಾಯ ಆಯವ್ಯಯ ಎಂದರೇನು?

-ಆಯವ್ಯಯ ಪತ್ರದಲ್ಲಿ ಸರ್ಕಾರದ ಆದಾಯವು ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದನ್ನು ಉಳಿತಾಯ ಆಯವ್ಯಯ ಎನ್ನವರು

6.ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ - ಆಯವ್ಯಯ.

7.ಪ್ರತ್ಯಕ್ಷ ತೆರಿಗೆ ಎಂದರೇನು?

-ಸರ್ಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ಹೊರೆಯನ್ನು ಹೊರುವಂತಿರುವುದು ಪ್ರತ್ಯಕ್ಷ ತೆರಿಗೆ.

8.ಭಾರತದ ಹಣಕಾಸು ವರ್ಷದ ಅವಧಿಯನ್ನು ತಿಳಿಸಿ.

-ಏಪ್ರಿಲ್ 1 ರಿಂದ ಮಾರ್ಚ್ 31 ರವರಗೆ

9.ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕಸಭೆಯಲ್ಲಿ ಮಂಡಿಸುವವರು - ಕೇಂದ್ರ ಹಣಕಾಸು ಮಂತ್ರಿಗಳು

10.ಪ್ರತ್ಯಕ್ಷ ತೆರಿಗೆಗೆ ಉದಾಹರಣೆ ಕೊಡಿ.

-ವರಮಾನ ತೆರಿಗೆ,ಕಂಪನಿ,ಸಂಪತ್ತಿನ ತೆರಿಗೆ,ಸ್ಟಾಂಪು ತೆರಿಗೆ

11.ಪರೋಕ್ಷ ತೆರಿಗೆ ಎಂದರೇನು?

-ಸರ್ಕಾರವು ವಿಧಿಸುವ ತೆರಿಗೆಯ ಹೊರೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಿದ್ದರೆ ಅಂತಹ ತೆರಿಗೆ ಪರೋಕ್ಷ ತೆರಿಗೆ.

12.ಸರ್ಕಾರವು ಒಂದೇ ಸರಕು ಮತ್ತು ಸೇವಾ ತೆರಿಗೆಯನ್ನು (GST)ಜಾರಿಗೆ ತಂದುದ್ದು ಯಾವಾಗ? - ಜುಲೈ 1 2017

13.ಪರೋಕ್ಷ ತೆರಿಗೆಗಳಿಗೆ ಉದಾಹರಣೆ ಕೊಡಿ.

- ಕೇಂದ್ರ ಅಬಕಾರಿ ತೆರಿಗೆ , ಮೌಲ್ಯವರ್ಧಿತ ತೆರಿಗೆ,ಆಮದು ರಫ್ತು ತೆರಿಗೆಗಳು ಸೇವಾ ತೆರಿಗೆ

14.ಸಾರ್ವಜನಿಕ ಹಣಕಾಸು ಎಂದರೇನು?

–ಸರ್ಕಾರದ ವರಮಾನ,ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದನ್ನು ಸಾರ್ವಜನಿಕ ಹಣಕಾಸು ಎನ್ನುವರು.

15.ತೆರಿಗೆ ಎಂದರೇನು?

– ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆಯನ್ನು ತೆರಿಗೆ ಎನ್ನುವರು.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಸಾರ್ವಜನಿಕ ವೆಚ್ಚದ ಪ್ರಮುಖ ಉದ್ದೇಶಗಳನ್ನು ತಿಳಿಸಿ.

- ಆರ್ಥಿಕ ಬೆಳವಣಿಗೆಯನ್ನು ಸಾಧಿಸುವುದು
- ಉದ್ಯಮ, ವ್ಯವಹಾರ ಮತ್ತು ವಾಣಿಜ್ಯಗಳನ್ನು ಪ್ರೋತ್ಸಾಹಿಸುವುದು
- ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು.
- ಸಮತುಲಿತ ಪ್ರಾದೇಶಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು. –
- ಸಾಮಾಜಿಕ,ಆರ್ಥಿಕ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದು.
- ಸಂಪೂರ್ಣ ಉದ್ಯೋಗ ಸಾಧಿಸುವುದು.
- ಸಾಮಾಜಿಕ ಕಲ್ಯಾಣವನ್ನು ಅಧಿಕಗೊಳಿಸುವುದು.

2.ಸರ್ಕಾರದ ತೆರಿಗೆಯೇತರ ವರಮಾನದ(ಆದಾಯ)ಮೂಲಗಳನ್ನು ತಿಳಿಸಿ.

- ಭಾರತೀಯ ರಿಸರ್ವ್ ಬ್ಯಾಂಕು ಗಳಿಸುವ ನಿವ್ವಳ ಲಾಭ
- ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭ
- ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ಆದಾಯ
- ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ
- ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ
- ವಿವಿಧ ರೀತಿಯ ಶುಲ್ಕಗಳು ಮತ್ತು ದಂಡಗಳು

3.ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ.

- ಆರ್ಥಿಕ ಅಭಿವೃದ್ಧಿ ಮತ್ತು ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಸರ್ಕಾರವು ತನ್ನ ವರಮಾನ, ವೆಚ್ಚ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಅನುಸರಿಸುವ ನೀತಿಗೆ ಕೋಶೀಯ ನೀತಿ/ ವಿತ್ತೀಯ ನೀತಿ ಎನ್ನುತ್ತಾರೆ.
- ಆರ್ಥಿಕ ಬೆಳವಣಿಗೆ ಮತ್ತು ಸ್ಥಿರತೆ ಸಾಧಿಸಿ ವರಮಾನದ ಸಮಾನ ಹಂಚಿಕೆಯನ್ನು ಸಾಧಿಸುವುದು ವಿತ್ತೀಯ ನೀತಿಯ ಪ್ರಮುಖ ಉದ್ದೇಶವಾಗಿದೆ.
- ಸರ್ಕಾರವು ಸಾಮಾನ್ಯವಾಗಿ ತಾನು ಸಂಗ್ರಹಿಸಿದ ವರಮಾನವನ್ನು ಅಥವಾ ಸಾಲದ ಮೊತ್ತವನ್ನು ಅಭಿವೃದ್ಧಿ ಕಾರ್ಯಗಳ ಮೇಲೆ ವ್ಯಯಿಸುತ್ತದೆ. ಇದು ಬೆಳವಣಿಗೆ ದರವನ್ನು ವೃದ್ಧಿಸಿ ಎಲ್ಲರಿಗೂ ಪ್ರಯೋಜನ ದೊರಕುತ್ತದೆ.
- ಅದೇರೀತಿ ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ ವೆಚ್ಚವನ್ನು ಹಿಗ್ಗಿಸಿ,ಆರ್ಥಿಕ ಹಿಗ್ಗುವಿಕೆಯ ಸಂದರ್ಭದಲ್ಲಿ ವೆಚ್ಚವನ್ನು ಕುಗ್ಗಿಸಿ, ಸರ್ಕಾರವು ಆರ್ಥಿಕ ಸ್ಥಿರತೆಯನ್ನು ಸಾಧಿಸುತ್ತದೆ.

4.ಸರ್ಕಾರವು ಯಾವ ಯಾವ ವಿಧದ ತೆರಿಗೆಗಳನ್ನು ವಿಧಿಸುತ್ತದೆ ?

- ಪ್ರತ್ಯಕ್ಷ ತೆರಿಗೆಗಳು : 1)ವರಮಾನ ತೆರಿಗೆ 2)ಕಂಪನಿ ತೆರಿಗೆ 3)ಸಂಪತ್ತಿನ ತೆರಿಗೆ 4)ಸ್ಟಾಂಪ್ ಶುಲ್ಕ
- ಪರೋಕ್ಷ ತೆರಿಗೆಗಳು: 1)ಕೇಂದ್ರ ಅಬಕಾರಿ ತೆರಿಗೆ 2)ಮೌಲ್ಯವರ್ಧಿತ ತೆರಿಗೆ 3)ಆಮದು ರಫ್ತು ಸುಂಕ 4) ಸೇವಾ ತೆರಿಗೆ 5) ಒಂದೇ ಸರಕು ಮತ್ತು ಸೇವಾ ತೆರಿಗೆ (GST)

5.ಕೊರತೆಯ ಹಣಕಾಸು ಎಂದರೇನು? ಅದರ ವಿಧಗಳನ್ನು ವಿವರಿಸಿ.

- ಸರ್ಕಾರವು ತನ್ನ ವರಮಾನಕ್ಕಿಂತ ವೆಚ್ಚ ಅಧಿಕ ಮಾಡುವುದು ಕೊರತೆಯ ಹಣಕಾಸು.
- ಭಾರತದಲ್ಲಿ 4 ವಿಧದ ಕೊರತೆಯ ಪರಿಕಲ್ಪನೆಯನ್ನು ಬಳಸಲಾಗುತ್ತದೆ.
- 1.ವಿತ್ತೀಯ ಕೊರತೆ: ಆಯ–ವ್ಯಯದಲ್ಲಿ ಸರ್ಕಾರದ ಕಂದಾಯ ವರಮಾನ ಮತ್ತು ಸಾಲೇತರ ಬಂಡವಾಳ ವರಮಾನಗಳಿಗಿಂತ ಸರ್ಕಾರದ ಒಟ್ಟು ವೆಚ್ಚ ಹೆಚ್ಚಾಗಿದ್ದರೆ ಅದನ್ನು ವಿತ್ತೀಯ ಕೊರತೆ ಎನ್ನವರು. ಅದವನ್ನು ಹೀಗೆ ಕಂಡು ಹಿಡಿಯುವರು. ವಿತ್ತೀಯ ಕೊರತೆ=(ಕಂದಾಯ ವರಮಾನ+ಸಾಲೇತರ ಬಂಡವಾಳ ವರಮಾನ)– ಒಟ್ಟು ವೆಚ್ಚ.
- 2.ರೆವಿನ್ಯೂ ಕೊರತೆ: ರೆವಿನ್ಯೂ ಖಾತೆಯ ವೆಚ್ಚವು ರೆವಿನ್ಯೂ ಖಾತೆಯ ವರಮಾನಕ್ಕಿಂತ ಹಚ್ಚಾಗಿದ್ದಾಗ ರೆವಿನ್ಯೂ ಕೊರತೆ ಉಂಟಾಗುತ್ತದೆ.ಇದರ ಸೂತ್ರ ರೆವಿನ್ಯೂ ಕೊರತೆ=ರೆವಿನ್ಯೂ ಖಾತೆಯ ವರಮಾನ–ರೆವಿನ್ಯೂ ಖಾತೆಯ ವೆಚ್ಚ
- 3.ಪ್ರಾಥಮಿಕ ಕೊರತೆ:ಚಾಲ್ತಿ ವರ್ಷದ ವಿತ್ತೀಯಕೊರತೆಯಿಂದ ಕಳೆದ ವರ್ಷದ ಬಡ್ಡಿ ಪಾವತಿಯನ್ನು ವಜಾಗೊಳಿಸಿದಾಗ ಪ್ರಾಥಮಿಕ ಕೊರತೆ ಉಂಟಾಗುತ್ತದೆ. ಪ್ರಾಥಮಿಕ ಕೊರತೆ=ವಿತ್ತೀಯಕೊರತೆ–ಬಡ್ಡಿ ಪಾವತಿ
- **4.**ಮುಂಗಡ/ಆಯ–ವ್ಯಯ ಕೊರತೆ: ಇದು ಒಟ್ಟಾರೆ ವರಮಾನ ಹಾಗೂ ವೆಚ್ಚಗಳ ನಡುವಿನ ಅಂತರ. ಮುಂಗಡಪತ್ರ ಅಥವಾ ಆಯ–ವ್ಯಯ ಕೊರತೆ=ಒಟ್ಟು ವರಮಾನ–ಒಟ್ಟು ವೆಚ್ಚ

*****

## ಅಧ್ಯಾಯ– 1 ಬ್ಯಾಂಕು ವ್ಯವಹಾರಗಳು

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

1.ಬ್ಯಾಂಕ್ ಎಂಬ ಪದವು ಫ್ರೆಂಚಿನ ಯಾವ ಶಬ್ದದಿಂದ ಬಂದಿದೆ?–"ಬ್ಯಾಂಕ್"

2.ಬ್ಯಾಂಕುಗಳ ಬ್ಯಾಂಕ್ ಎಂದು ಕರೆಯುವ ಬ್ಯಾಂಕ್ – ರಿಸರ್ವ್ ಬ್ಯಾಂಕ್

3.ರಾಷ್ಟ್ರೀಕೃತ ಬ್ಯಾಂಕಿಗೆ ಉದಾಹರಣೆ – ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

4.ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಯಾವ ಇಲಾಖೆಯು ನೀಡುತ್ತದೆ – ಅಂಚೆ ಇಲಾಖೆ

5.ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿ ಬೇಕಾದರೂ ವ್ಯವಹರಿಸಬಹುದಾದ ಖಾತೆ – ಚಾಲ್ತಿ ಖಾತೆ.

6.ಠೇವಣಿಯನ್ನು ನಿಗಧಿತ ಅವಧಿಗೆ ಯಾವ ಖಾತೆಯಲ್ಲಿಇಡಬಹುದಾಗಿದೆ? – ನಿಶ್ಚಿತ ಠೇವಣಿ ಖಾತೆ.

7.ಭವಿಷ್ಯದ ಅವಶ್ಯಕತೆಗಳಾದ ಮಕ್ಕಳ ಮದುವೆ,ಬೆಲೆ ಬಾಳುವ ವಸ್ತುಗಳ , ಭೂಮಿ ,ವಾಹನಗಳ ಖರೀದಿ ಮುಂತಾದವುಗಳಿಗೆ ಉತ್ತಮವಾದ ಬ್ಯಾಂಕು ಖಾತೆ. – ಆವರ್ತ ಠೇವಣಿ ಖಾತೆ.

8.ವ್ಯಾಪಾರಿಗಳು,ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಗಳಿಗೆ ಸೂಕ್ತವಾದ ಬ್ಯಾಂಕೆ ಖಾತೆ –ಚಾಲ್ತಿ ಖಾತೆ.

9.ಬ್ಯಾಂಕು ಎಂದರೇನು?

–ಬ್ಯಾಂಕು ಹಣಕಾಸಿನ ಸಂಸ್ಥೆಯಾಗಿದ್ದು ಠೇವಣಿಗಳನ್ನು ಸ್ವೀಕರಿಸಿ, ಆ ಠೇವಣಿಗಳನ್ನು ಸಾಲಗಳ ರೂಪದಲ್ಲಿ ಬೇರೆ ಬೇರೆ ಸೇವೆಗಳಿಗಾಗಿ ಕೊಡುತ್ತದೆ.

10.ಬ್ಯಾಂಕು ವ್ಯವಹಾರಗಳೆಂದರೇನು?

–ಯಾವುದೇ ಒಂದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಬ್ಯಾಂಕು ವ್ಯವಹಾರಗಳು ಎನ್ನುವರು.

11.ರಿಸರ್ವ್‌ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕ್ ಅಥವಾ ಬ್ಯಾಂಕುಗಳ ತಾಯಿ ಎಂದು ಕರೆಯುವರು.ಏಕೆ?

– ಭಾರತದಲ್ಲಿ ಬ್ಯಾಂಕುಗಳ ಎಲ್ಲ ಚಟುವಟಿಕೆಗಳು ರಿಸರ್ವ್ ಬ್ಯಾಂಕಿನ ಹತೋಟಿಯಲ್ಲಿರುವುದರಿಂದ ರಿಸರ್ವ್‌ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕ್ ಅಥವಾ ಬ್ಯಾಂಕುಗಳ ತಾಯಿ ಎಂದು ಕರೆಯುವರು.

12.ಬ್ಯಾಂಕ್ ಸಾಲ ಎಂದರೇನು?

–ಬ್ಯಾಂಕುಗಳು ಗ್ರಾಹಕರ ಹಣವನ್ನು ಠೇವಣಿಗಳಾಗಿ ಇಟ್ಟುಕೊಳ್ಳುತ್ತವೆ ಮತ್ತು ಈ ಠೇವಣಿಗಳಿಂದ ಸಂಗ್ರಹವಾದ ಹಣವನ್ನು ಗಿರಾಕಿಗಳಿಗೆ ಸಾಲವಾಗಿ ಕೊಡುತ್ತವೆ. ಈ ಸಾಲವನ್ನು ಬ್ಯಾಂಕ್ ಸಾಲ ಎನ್ನುತ್ತೇವೆ.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಗಮನಿಸಬಹುದಾದ ಗುಣಲಕ್ಷಣಗಳನ್ನು ಪಟ್ಟಿಮಾಡಿ.

- ಹಣದ ವಹಿವಾಟು
- ವ್ಯಕ್ತಿ/ಸಂಸ್ಥೆ/ಕಂಪನಿ
- ಠೇವಣಿಗಳನ್ನು ಅಂಗೀಕರಿಸುತ್ತವೆ.
- ಸಾಲಗಳನ್ನು ಕೊಡುವುದು.
- ಪಾವತಿ ಮತ್ತು ಹಿಂದಕ್ಕೆ ಪಡೆಯುವುದು.
- ಏಜೆಂಟ್ ಅಥವಾ ಏಜೆಂಟ್ ನಿಯೋಜನೆ ಮತ್ತು ಉಪಯುಕ್ತ ಸೇವೆಗಳು
- ಲಾಭ ಮತ್ತು ಸೇವಾ ಭಾವನೆ
- ನಿರಂತರ ವಿಸ್ತರಿಸುತ್ತಾ ಹೋಗುವ ಕಾರ್ಯಗಳು
- ಸಂಬಂಧ ಕಲ್ಪಿಸುವ ಕೊಂಡಿ
- ಬ್ಯಾಂಕಿಂಗ್ ವ್ಯವಹಾರ • ಹೆಸರಿನ ಗುರುತು.

2.ಬ್ಯಾಂಕ್ ನಿರ್ವಹಿಸುವ ಕಾರ್ಯಗಳು ಯಾವುವು?/ಬ್ಯಾಂಕಿನಕಾರ್ಯಗಳೇನು?

- ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುವುದು.
- ಸಾರ್ವಜನಿಕರಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು
- ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಹಿಸುವುದು.
- ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣವನ್ನು ವಸೂಲಿ ಮಾಡುವುದು.
- ಹುಂಡಿಗಳನ್ನು ಸೋಡಿ ಮಾಡುವುದು.
- ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
- ವಿದೇಶಿ ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುವುದು.
- ಬೆಲೆ ಬಾಳುವ ವಸ್ತುಗಳನ್ನು ತಮ್ಮ ಸುಪರ್ಧಿಗಳಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು.
- ಸಾಲಪತ್ರಗಳನ್ನು ಮತ್ತು ಜವಾಬ್ದಾರಿ ಪತ್ರಗಳನ್ನು ಕೊಡುವುದು
- ಸರ್ಕಾರದ ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವುದು.

3.ಬ್ಯಾಂಕ್ ಮತ್ತು ಗ್ರಾಹಕರ ಸಂಬಂಧವನ್ನು ತಿಳಿಸಿ.

**ಸಾಮಾನ್ಯ ಸಂಬಂಧ**

- ಪ್ರಾಥಮಿಕ ಸಂಬಂಧ (ಸಾಲಿಗ ಮತ್ತು ಸಾಲಗಾರರ ಸಂಬಂಧ)
- ಸಹಾಯಕ ಅಥವಾ ಉಪಕಾರ ಸಂಬಂಧ
- ಕಾರಬಾರಿ ಅಥವಾ ನಿಯೋಗಿ ಮತ್ತು ಮುಖ್ಯಸ್ಥನ ಸಂಬಂಧ

**ವಿಶೇಷ ಸಂಬಂಧ**

- ಚೆಕ್ಕುಗಳನ್ನು ಮನ್ನಣೆ ಮಾಡುವುದು.

- ಗ್ರಾಹಕರ ಲೆಕ್ಕಗಳ ಗೋಪ್ಯತೆ ಕಾಪಾಡುವುದು.

4.ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ.ಕಾರಣ ಕೊಡಿ.

- ಸಾಮಾನ್ಯವಾಗಿ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವ ಜನರಿಂದ ಉಳಿತಾಯ ಖಾತೆ ತೆರೆಯಲ್ಪಡುತ್ತದೆ.
- ಈ ಸೌಲಭ್ಯವನ್ನು ವಿದ್ಯಾರ್ಥಿಗಳು,ಹಿರಿಯ ನಾಗರಿಕರು,ಪಿಂಚಣಿದಾರರು ತೆರೆಯಲು ಅವಕಾಶವಿದೆ.
- ಈ ಖಾತೆಯು ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ.
- ಉಳಿತಾಯ ಖಾತೆಯ ಖಾತೆಯ ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ.
- ಬ್ಯಾಂಕಿನಿಂದ ಹಣ ಹಿಂದಕ್ಕೆ ಪಡೆಯಲು ಚೆಕ್ಕು ಪುಸ್ತಕ ಅಥವಾ ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಸಾಧ್ಯವಿದೆ.

5.ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದಾಗುವ ಅನುಕೂಲಗಳಾವುವು?

- ಬ್ಯಾಂಕು ಖಾತೆಯು ಹಣದ ಭದ್ರತೆಯನ್ನು ಕಾಪಾಡುತ್ತದೆ.
- ಬ್ಯಾಂಕು ಖಾತೆಯು ಹಣದ ಪಾವತಿಯನ್ನು ಮಾಡಲು ಸಹಾಯ ಮಾಡುತ್ತದೆ.
- ಬ್ಯಾಂಕು ಖಾತೆಯು ಹಣವನ್ನು ವಸೂಲಿ ಮಾಡಲು ಸಹಾಯ ಮಾಡುತ್ತದೆ.
- ಬ್ಯಾಂಕು ಖಾತೆಯನ್ನು ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ.
- ಬ್ಯಾಂಕು ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯವಾಗುತ್ತದೆ.
- ಬ್ಯಾಂಕು ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯ ಬಹುದು.

6.ಬ್ಯಾಂಕು ಖಾತೆಯನ್ನು ತೆರೆಯುವ ವಿಧಾನಗಳನ್ನು ತಿಳಿಸಿ.

1)ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು.

2)ನಮಗೆ ಅನುಕೂಲವಾದ ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು.

3)ಪ್ರಸ್ತಾವನೆ ಅರ್ಜಿಯನ್ನು ತುಂಬುವುದು.

4)ಪರಿಚಿತರ ಉಲ್ಲೇಖವನ್ನು ಕೊಡುವುದು.

5)ಬ್ಯಾಂಕು ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು. 6) ಅಧಿಕಾರಿಯ ಒಪ್ಪಿಗೆ

7)ಪ್ರಾರಂಭಿಕ ಠೇವಣಿಯನ್ನು ತುಂಬುವುದು.

7.ಅಂಚೆ ಇಲಾಖೆಯು ನಿರ್ವಹಿಸುವ ಕಾರ್ಯಗಳೇನು? ಅಥವಾ ಭಾರತೀಯ ಅಂಚೆ ಇಲಾಖೆಯು ಹಲವು ಬ್ಯಾಂಕಿಂಗ್ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಸಮರ್ಥಿಸಿ.

- ಭಾರತೀಯ ಅಂಚೆ ಇಲಾಖೆಯು ಭಾರತೀಯ ಅಂಚೆ ಬ್ಯಾಂಕ್ ಜಾಲವನ್ನು ಅಂಚೆ ಕಚೇರಿಯೊಡನೆ ದೇಶದಾದ್ಯಂತ ಪ್ರಾರಂಭ ಮಾಡಲು ಯೋಜನೆಯನ್ನು ರೂಪಿಸಿದೆ.
- ರಾಷ್ಟ್ರೀಯ ಉಳಿತಾಯ ಪತ್ರಗಳು
- ಅಂಚೆ ಉಳಿತಾಯ ಖಾತೆಗಳು
- ಕಿಸಾನ್ ವಿಕಾಸ ಪತ್ರಗಳು
- ಮಾಹೆಯಾನ ತೀರು ಠೇವಣಿಗಳು
- ಅಂಚೆ ವಿಮೆ
- ನಿವೃತ್ತಿ ವೇತನ
- ಹಣವನ್ನು ವರ್ಗಾಯಿಸುವುದು. ಮುಂತಾದ ಅನೇಕ ಹಣಕಾಸಿನ ವ್ಯವಹಾರಗಳನ್ನು ಅಂಚೆ ಇಲಾಖೆಯು ಕೈಗೊಂಡಿದೆ.

8.ಬ್ಯಾಂಕುಗಳು ಸಲ್ಲಿಸುವ ಸೇವೆಗಳನ್ನು ತಿಳಿಸಿ.

(1) ಖರ್ಚು ಕಾರ್ಡು ಮತ್ತು ಜಮಾಕಾರ್ಡುಗಳನ್ನು ಕೊಡುವುದು.

(2)ಖಾಸಗಿ ಮತ್ತು ವ್ಯಾಪಾರಕ್ಕೆ ಸಾಲಗಳು

(3)ಮನೆ ಕಟ್ಟಲು ಮತ್ತು ವಾಹನ ಖರೀದಿಸಲು ಸಾಲ ಕೊಡುವುದು.

(4)ಪರಸ್ಪರ ನಿಧಿಗಳನ್ನು ನಿರ್ವಹಿಸುವುದು.

(5)'E'ಬ್ಯಾಂಕಿಂಗ್ ಸೇವೆಗಳು

(6)ಭದ್ರತಾ ಕಪಾಟುಗಳನ್ನು ಕೊಡುವುದು

(7)ಭರವಸೆಯ ಸೇವೆಗಳು

(8) ಸಹಿಗಳಿಗೆ ಜವಾಬ್ದಾರಿ ಹಾಕುವುದು.

9.ಬ್ಯಾಂಕುಗಳ ವಿಧಗಳನ್ನು ತಿಳಿಸಿ.

- ಕೇಂದ್ರ ಬ್ಯಾಂಕ್ ಅಥವಾ ಭಾರತೀಯ ರಿಸರ್ವ್ ಬ್ಯಾಂಕ್
- ವಾಣಿಜ್ಯ ಬ್ಯಾಂಕುಗಳು
- ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು
- ಭೂ ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು
- ಸ್ಥಳೀಯ ಬ್ಯಾಂಕುಗಳು
- ಸಹಕಾರಿ ಬ್ಯಾಂಕುಗಳು

10.ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು ಯಾವುವು?

- ಉಳಿತಾಯ ಖಾತೆ
- ಚಾಲ್ತಿಖಾತೆ
- ಆವರ್ತ ಠೇವಣಿ ಖಾತೆ
- ನಿಶ್ಚಿತ ಠೇವಣಿ ಖಾತೆ

11.ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

| ಉಳಿತಾಯ ಖಾತೆ | ಚಾಲ್ತಿ ಖಾತೆ |
|---|---|
| 1.ಸಾಮಾನ್ಯವಾಗಿ ವೇತನ ಪಡೆಯುವವರು/ನಿಯಮಿತ ಆದಾಯವನ್ನು ಹೊಂದಿರುವ ಜನರು ಈ ಖಾತೆಯನ್ನು ತೆರೆಯುತ್ತಾರೆ. | 1.ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ಈ ಖಾತೆ ತೆರೆಯುತ್ತಾರೆ. |
| 2.ಈ ಖಾತೆಯು ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ. | ಈ ಖಾತೆಯಲ್ಲಿ ಮರು ಪಾವತಿ, ಬೇಡಿಕೆ ಠೇವಣಿಗಳು ಉಪಸರ್ಗ ವ್ಯವಹಾರಗಳ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಿದೆ. |
| 3.ಚೆಕ್ ಪುಸ್ತಕ ಹಣವನ್ನು ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಿದೆ. | 3.ಈ ಖಾತೆಯಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸ ಬಹುದು. |
| 4.ಈ ಖಾತೆಯ ಠೇವಣಿಗಳಿಗೆ ಬಡ್ಡಿಯನ್ನು ನೀಡಲಾಗುತ್ತದೆ | 4.ಈ ಖಾತೆ ಠೇವಣಿಗಳಿಗೆ ಬಡ್ಡಿಯನ್ನು ನೀಡುವುದಿಲ್ಲ. |

## ಅಧ್ಯಾಯ-2. ಉದ್ಯಮಗಾರಿಕೆ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

1.ಉದ್ಯಮಗಾರಿಕೆ ಎಂದರೇನು?

-ಒಬ್ಬ ಉದ್ಯಮಿಯು ತನ್ನ ಉದ್ದಿಮೆಯನ್ನು ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಯನ್ನು ಉದ್ಯಮಗಾರಿಕೆ ಎನ್ನುವರು

2.ಉದ್ಯಮಿ ಎಂದರೇನು?

- ಯಾವುದಾದರೂ ಒಂದು ಪ್ರತಿಫಲ ಕೊಡುವ ಉದ್ದಿಮೆಯನ್ನು ಸ್ಥಾಪಿಸುವ ಅವಕಾಶಕ್ಕೆ ಕೈ ಹಾಕುವವನೆ ಉದ್ಯಮಿ.

3.ಫ್ರೆಂಚ್‌ನ ಎಂಟ್ರಪ್ರೆಂಡೆ ಎಂಬ ಪದ ಅರ್ಥವೇನು?

- ಒಂದು ಚಟುವಟಿಕೆಯನ್ನು ಕೈಗೆತ್ತಿಕೊಳ್ಳುವವ.

4.ಉದ್ಯಮಿ ಎಂಬ ಪದವು ಫ್ರೆಂಚ್‌ನ ಯಾವ ಪದದಿಂದ ಬಂದಿದೆ?

-ಎಂಟ್ರಪ್ರೆಂಡೆ ಎಂಬ ಪದದಿಂದ ಬಂದಿದೆ.

5.ಅಪೋಲೋ ವೈದ್ಯಶಾಲೆಗಳನ್ನು ಸ್ಥಾಪಿಸಿದವರು - ಡಾ. ಪ್ರತಾಪರೆಡ್ಡಿ

6.ಜೆಟ್ ವಿಮಾನ ಮಾರ್ಗಗಳನ್ನು ಹುಟ್ಟು ಹಾಕಿದವರು

- ನರೇಶ್ ಗೋಯಲ್

7.1999 ರಲ್ಲಿ ಇನ್ಫೋಸಿಸ್ ತಂತ್ರ ಜ್ಞಾನ ನಿಗಮವನ್ನು ಪ್ರಾರಂಭಿಸಿದವರು

- ನಾರಾಯಣ ಮೂರ್ತಿ

8.ಬಿಳಿಕ್ರಾಂತಿಯ ಪಿತಾಮಹ ಎಂದು ಪ್ರಸಿದ್ಧರಾದವರು

- ವರ್ಗಿಸ್ ಕುರಿಯಾನ್

9.ರಿಲಯನ್ಸ್ ಸಂಸ್ಥೆಯ ಸ್ಥಾಪಕರು - ಧೀರುಭಾಯಿ ಅಂಬಾನಿ

10.ವಿಪ್ರೋ ತಂತ್ರ ಜ್ಞಾನ ಸಂಸ್ಥೆಯ ಸ್ಥಾಪಕರು- ಅಜೀಮ್ ಪ್ರೇಮ್ ಜಿ

11.ಭಾರತದ ದೂರದರ್ಶನ ಕ್ಷೇತ್ರದಲ್ಲಿ ಅಧಿಪತ್ಯ ಸಾಧಿಸಿದ ರಾಣಿ ಎಂದು ಖ್ಯಾತರಾದವರು - ಏಕ್ತಾಕಪೂರ್

12.ಬಯೋಕಾನ್ ನಿಗಮದ ಅಧ್ಯಕ್ಷರು ಹಾಗೂ ನಿರ್ದೇಶಕರು

- ಕಿರಣ್ ಮುಜಮ್ ದಾರ್ .

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಉದ್ಯಮಗಾರಿಕೆಯ ಗುಣಲಕ್ಷಣಗಳನ್ನು ತಿಳಿಸಿ.

- ಸೃಜನಾತ್ಮಕತೆ -ಕ್ರಿಯಾತ್ಮಕ -ತಂಡವನ್ನು ಕಟ್ಟುವುದು. -ಸಮಸ್ಯೆಯ ಪರಿಹಾರ - ನಷ್ಟಭರಿತಕ್ಕೆ ಸಿದ್ಧ - ವಚನ ಬದ್ಧತೆ -ನಾಯಕತ್ವ

-ಹೊಸ ಪದ್ಧತಿಯನ್ನು ರೂಢಿಗೆ ತರುವುದು. -ಪ್ರಚೋದನೆಯ ಸಾಧನೆ

- ಗುರಿಮುಟ್ಟುವಿಕೆ -ನಿರ್ಧಾರಗಳನ್ನು ಕೈಗೊಳ್ಳುವುದು. -ಆತ್ಮವಿಶ್ವಾಸ.

2.ಉದ್ಯಮಿಯ ಕಾರ್ಯಗಳನ್ನು ಪಟ್ಟಿಮಾಡಿ/ತಿಳಿಸಿ/ವಿವರಿಸಿ.

- ಉದ್ಯಮಿಯು ವ್ಯಾಪಾರ ಚಟುವಟಿಕೆಗಳನ್ನು ಅನೇಕ ಯೋಜನೆಗಳ ಮೂಲಕ ಪ್ರಾರಂಭಿಸುತ್ತಾನೆ.
- ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ.
- ಉದ್ಯಮಗಾರನು ಉತ್ಪಾದಿಸುವ ವಸ್ತುಗಳ ಬಗ್ಗೆ,ತಾಂತ್ರಿಕತೆ ಬಗ್ಗೆ, ಮಾರುಕಟ್ಟೆ ಮತ್ತು ಉದ್ಯೋಗ ಮುಂತಾದವುಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ.
- ಉದ್ಯಮಿಯು ಎಲ್ಲ ಅಂಶಗಳನ್ನು ಸಮಂಜಸವಾಗಿ ಸಂಯೋಜಿಸುತ್ತಾನೆ.
- ಉದ್ಯಮಿಯು ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
- ತನ್ನ ಉದ್ಯಮದ ಹಣಕಾಸಿನ ಆಯವ್ಯಯವನ್ನು ನಿಭಾಯಿಸುತ್ತಾನೆ.
- ಉದ್ಯಮಿಯು ಕಷ್ಟನಷ್ಟಗಳನ್ನು ಮತ್ತು ಅನಿಶ್ಚಿತೆಗಳನ್ನು ಎದುರಿಸುತ್ತಾನೆ.
- ಉದ್ಯಮಿಯು ವ್ಯಾಪಾರದ ಮಾರ್ಗಗಳನ್ನು ತಿಳಿಸಿ, ಸರಿಯಾದ ಮಾರ್ಗದರ್ಶನ ನೀಡುತ್ತಾನೆ.

3.ಉದ್ಯಮಿಯ ಪ್ರಾಮುಖ್ಯತೆಯನ್ನು ವಿವರಿಸಿ.

- ಉದ್ಯಮಿಗಳು ಮಾರುಕಟ್ಟೆಯ ಆರ್ಥಿಕ ವ್ಯವಸ್ಥೆಯಲ್ಲಿ ಕೇಂದ್ರ ಸ್ಥಾನ ವನ್ನು ಅಲಂಕಾರಿಸಿದ್ದಾರೆ.
- ಉದ್ಯಮಿಗಳು ಆರ್ಥಿಕತೆಯ ಚಟುವಟಿಕೆಗಳಿಗೆ ಚೇತನ ಕೊಡುವ

ಸಾಧಕರಾಗಿದ್ದಾರೆ.

- ಉದ್ಯಮಿಗಳು ಮತ್ತು ಅವರ ಚಟುವಟಿಕೆಗಳು ದೇಶದ ಯಶಸ್ಸು, ಅಭಿವೃದ್ಧಿಯಲ್ಲಿ ಸಹಕಾರಿಯಾಗಿವೆ.
- ಉದ್ಯಮಿಗಳು ಜನರ ಪ್ರಯೋಜನಕಾರಿಯಲ್ಲಿರದ ಉಳಿತಾಯ ಗಳಿಂದ ಬಂಡವಾಳವನ್ನು ಬೆಳೆಸುತ್ತಾರೆ.
- ಅವರು ತಮ್ಮದೇ ಆದ ಮತ್ತು ಎರವಲು ಪಡೆದ ಸಂಪನ್ಮೂಲಗಳ ಮೂಲಕ ಉದ್ಯಮವನ್ನು ಸ್ಥಾಪಿಸುತ್ತಾರೆ.
- ಈ ರೀತಿಯ ಉದ್ಯಮಗಳು ಒಂದು ದೇಶದ ಮೌಲ್ಯಾಧಾರಿತ ಸಂಪತ್ತನ್ನು ಸೃಜಿಸುತ್ತವೆ.
- ಆರ್ಥಿಕ ಮತ್ತು ಕೈಗಾರಿಕಾಭಿವೃದ್ಧಿಗೆ ಬೇಕಾದ ಹೊಸ ವಸ್ತುಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸಿ ಮಾರಾಟಕ್ಕೆ ಸಹಾಯ ಮಾಡುತ್ತಾರೆ

4. ಉದ್ಯಮಿಗಳು ಆರ್ಥಿಕ ಕ್ಷೇತ್ರದ ಅಭಿವೃದ್ಧಿಗೆ ಹೇಗೆ ಶ್ರಮಿಸುತ್ತಾರೆ? ಅಥವಾ ಆರ್ಥಿಕ ಕ್ಷೇತ್ರದ ಅಭಿವೃದ್ಧಿಯಲ್ಲಿ ಉದ್ಯಮಿಗಳ ಪಾತ್ರವೇನು?

- ಉದ್ಯಮಿಗಳು ಜನರ ಅನುಪಯುಕ್ತ ಉಳಿತಾಯಗಳನ್ನು ಬಂಡವಾಳ ರೂಪದಲ್ಲಿ ಸಂಗ್ರಹಿಸುತ್ತಾರೆ.
- ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸುವುದರ ಮೂಲಕ ಕುಶಲ ಕರ್ಮಿಗಳಿಗೆ, ತಾಂತ್ರಿಕ ಯೋಗ್ಯತೆ ಉಳ್ಳವರಿಗೆ ಮತ್ತು ಕಸುಬುದಾರರಿಗೆ ಉದ್ಯೋಗಗಳನ್ನು ಒದಗಿಸುತ್ತಾರೆ.
- ಉದ್ಯಮಿಗಳು ಒಂದು ದೇಶದ ನಿವ್ವಳ ದೇಶೀಯ ಉತ್ಪನ್ನ ಮತ್ತು ಜನರ ತಲಾವರಮಾನ ಹೆಚ್ಚಿಸುತ್ತಾರೆ.
- ಇವರು ಹೊಸ ವಸ್ತುಗಳನ್ನು ಮತ್ತು ಸೇವೆಗಳನ್ನು ರೂಢಿಗೆ ತಂದು ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.
- ಉದ್ಯಮಿಗಳು ಉತ್ತಮ ವಸ್ತುಗಳನ್ನು ಕಡಿಮೆದರದಲ್ಲಿ ಜನರಿಗೆ ಒದಗಿಸಿ ಅವರ ಜೀವನಮಟ್ಟ ಉತ್ತಮಗೊಳ್ಳಲು ಶ್ರಮಿಸುತ್ತಾರೆ.
- ಇವರು ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.
- ಉದ್ಯಮಿಗಳು ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.
- ಉದ್ಯಮಿಗಳು ಹೊಸ ಬದಲಾವಣೆಗಳನ್ನು ರೂಢಿಗೆ ತಂದು ತಾಂತ್ರಿಕತೆಯನ್ನು ಬದಲಾಯಿಸಿ ಹೆಚ್ಚು ಲಾಭದಾಯಕವಾಗಲು ಶ್ರಮಿಸುತ್ತಾರೆ.

5. ಯಾರೇ ಒಬ್ಬ ಮನುಷ್ಯ ಸ್ವಂತ ಉದ್ಯೋಗ ಉದ್ದಿಮೆಯನ್ನು ಸ್ಥಾಪಿಸಲು ಇಷ್ಟಪಟ್ಟಲ್ಲಿ ಯಾವ ವ್ಯವಹಾರ ಸಂಸ್ಥೆಗಳನ್ನು ಆರಿಸಿಕೊಂಡು ಸ್ಥಾಪಿಸಲು ಅನುಕೂಲಗಳಿವೆ?

- ಜಾಹಿರಾತು ಸಂಸ್ಥೆಗಳು
- ಮಾರುಕಟ್ಟೆ ಸಲಹಾ ಸಂಸ್ಥೆಗಳು
- ಕೈಗಾರಿಕಾ ಸಲಹ ಸಂಸ್ಥೆಗಳು
- ವಸ್ತುಗಳನ್ನು ಬಾಡಿಗೆ ಮತ್ತು ಗುತ್ತಿಗೆ ನೀಡುವ ಸಂಸ್ಥೆಗಳು
- ಛಾಯಾಪ್ರತಿ ತೆಗೆಯುವ ಕೇಂದ್ರಗಳು
- ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳು
- ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು
- ಅಂತರ್ಜಾಲ ಮತ್ತು ಸಂವಹನ ಅಂಗಡಿಗಳು
- ದೂರದರ್ಶನ ಜಾಲಬಂಧದ ಸೇವಾಕ್ಷೇತ್ರಗಳು
- ಕ್ರೆಚ್ ಮತ್ತು ಬ್ಯೂಟಿಪಾರ್ಲರ್‌ಗಳು

6. ಉದ್ಯಮಗಾರಿಕೆಗೆ ಸಹಾಯ ಮಾಡುವ ಹಣಕಾಸಿನ ಸಂಸ್ಥೆಗಳಾವುವು?

- ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
- ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು
- ಆಮದು ಮತ್ತು ರಫ್ತು ಬ್ಯಾಂಕು
- ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
- ಭಾರತೀಯ ಕೈಗಾರಿಕಾ ಹಣಕಾಸು ನಿಗಮ
- ಭಾರತೀಯ ಕೈಗಾರಿಕೆಗೆ ಹಣಕಾಸಿನ ಹೂಡಿಕೆ ಮತ್ತು ಸಾಲದ ನಿಗಮ (ICICI)
- ಭಾರತೀಯ ಕೈಗಾರಿಕಾ ಮರು ನಿರ್ಮಾಣ ಬ್ಯಾಂಕು
- ರಾಜ್ಯ ಹಣಕಾಸು ನಿಗಮಗಳು
- ಭಾರತೀಯ ಜೀವ ವಿಮಾ ನಿಗಮ
- ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ

7. ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳನ್ನು ಪಟ್ಟಿಮಾಡಿ.

- ಜಿಲ್ಲಾ ಕೈಗಾರಿಕಾ ಕೇಂದ್ರಗಳು
- ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ
- ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ
- ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆ
- ಸಣ್ಣ ಪ್ರಮಾಣದ ಕೈಗಾರಿಕಾ ಸೇವಾ ಸಂಸ್ಥೆ
- ಕೈಗಾರಿಕಾ ಪ್ರದೇಶಗಳು
- ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ
- ತಾಂತ್ರಿಕ ಸಲಹಾ ಸಂಸ್ಥೆಗಳು

## ಅಧ್ಯಾಯ-3. ವ್ಯವಹಾರದ ಜಾಗತೀಕರಣ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1.ಭಾರತದ ಮಾರುಕಟ್ಟೆಯಲ್ಲಿ ಬೇರೆ ದೇಶಗಳ ವಸ್ತುಗಳು ಲಭ್ಯವಿರಲು ಕಾರಣವೇನು? - ಜಾಗತೀಕರಣ

2.ಜಾಗತೀಕರಣದಿಂದ ಸರಕುಗಳ ಬೆಲೆ ಕಡಿಮೆಯಾಗುತ್ತದೆ.ಹೇಗೆ?

-ಸ್ಥಳೀಯ ವ್ಯಾಪಾರ ಸಂಸ್ಥೆಗಳ ನಡುವೆ ಪೈಪೋಟಿ ಉಂಟಾಗುವುದರಿಂದ

3.ಜಾಗತೀಕರಣವು ಮುಕ್ತ ವ್ಯಾಪಾರ ವಲಯ ಸೃಷ್ಟಿಸುವುದು.ಹೇಗೆ?

-ಆಮದು ಮತ್ತು ರಫ್ತುಗಳ ಸುಂಕಗಳನ್ನು ನಿರ್ಮೂಲನೆ ಮಾಡುವ ಮೂಲಕ

4.ಜಾಗತೀಕರಣದ ಪರಿಣಾಮವಾಗಿ ಪ್ರಪಂಚದ ದೇಶಗಳ ಮಧ್ಯ ನಿಕಟ ಸಂಬಂಧ ಪರಸ್ಪರ ಅನ್ಯೋನ್ಯತೆ ಉಂಟಾಗಿ ರೂಪುಗೊಂಡಿರುವುದು

-ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳು

5.ವಿಶ್ವ ವ್ಯಾಪಾರ ಸಂಘಟನೆಯ ಕೇಂದ್ರ ಕಚೇರಿ ಎಲ್ಲದೆ?

-ಸ್ವಿಟ್ಜರ್‌ಲ್ಯಾಂಡಿನ ಜಿನೇವಾದಲ್ಲಿ

6.ಜಾಗತೀಕರಣದಿಂದ ಜನರಿಗೆ ವಸ್ತುಗಳ ಆಯ್ಕೆಯಲ್ಲಿ ವಿಶಾಲತೆ ಕಂಡು ಬರುತ್ತದೆ.ಏಕೆ?

-ಬೇರೆ ಬೇರೆ ದೇಶಗಳ ವಸ್ತುಗಳು ಮಾರುಕಟ್ಟೆಯಲ್ಲಿ ದೊರಕುವುದರಿಂದ

7.ಜಾಗತೀಕರಣದ ಪರಿಣಾಮವಾಗಿ ಯಾವ ಅಂಶವು ಸಾರಿಗೆ ವೆಚ್ಚವನ್ನು ಕಡಿಮೆ ಮಾಡಿದೆ?

-ಸಾರಿಗೆ ವೆಚ್ಚವನ್ನು ಸಮುದ್ರಯಾನದಲ್ಲಿ ಕಂಟೈನರ್ ಸೇವೆಯ ಅಳವಡಿಕೆ ಯಿಂದ ಕಡಿಮೆ ಮಾಡಿದೆ.

8.ಜಾಗತೀಕರಣದಿಂದ ಯಾವ ಸಂಸ್ಥೆಗಳ ಪಾತ್ರ ಹೆಚ್ಚಾಗಿದೆ?

-ವಿಶ್ವ ವ್ಯಾಪಾರ ಸಂಘಟನೆ (WTO)ಮತ್ತು ಅಂತರ ರಾಷ್ಟ್ರೀಯ ಹಣಕಾಸು ನಿಧಿ(IMF)

9.ಜಾಗತೀಕರಣ ಎಂದರೇನು?

-ಇಡೀ ವಿಶ್ವವನ್ನೇ ಒಂದು ಮಾರುಕಟ್ಟೆಯಾಗಿಸಿಕೊಂಡು ಕಚ್ಚಾವಸ್ತುಗಳು ಮತ್ತು ಇತರ ಸಂಪನ್ಮೂಲಗಳನ್ನು ವಿಶ್ವದ ಅಗ್ಗವಾದ ಮಾರುಕಟ್ಟೆಯಿಂದ ಪಡೆಯುವುದೇ ಜಾಗತೀಕರಣ

10.ಜಾಗತೀಕರಣದಿಂದ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಗುಲಾಮಿ ತನ ಹಾಗೂ ಬಾಲಕಾರ್ಮಿಕ ಪದ್ಧತಿಗಳು ಉಂಟಾಗುವ ಸಾಧ್ಯತೆ ಇದೆ.ಏಕೆ?

- ವೆಚ್ಚಗಳನ್ನು ಕಡಿಮೆಮಾಡುವ ದಿಸೆಯಲ್ಲಿ ಅಭಿವೃದ್ಧಿ ಹೊಂದಿರುವ ದೇಶಗಳು ತಮ್ಮ ಉತ್ಪಾದನೆಗಳನ್ನು ಹೊರ ಮೂಲಗಳಿಂದ ರೂಢಿಗೆ ತಂದು ನೌಕರಶಾಹಿ ಕೆಲಸಗಳನ್ನು ಉತ್ತೇಜಿಸುತ್ತದೆ.ಆದುದರಿಂದ

11.ಜಾಗತೀಕರಣವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ನಿರುದ್ಯೋಗ ಸಮಸ್ಯೆಗೆ ಕಾರಣವಾಗುತ್ತದೆ.ಹೇಗೆ?

-ಜಾಗತೀಕರಣದಿಂದ ಅಗ್ಗದ ವಸ್ತುಗಳ ಆಮದಿನಿಂದಾಗಿ ಅಭಿವೃದ್ಧಿ ಹೊಂದು ತ್ತಿರುವ ರಾಷ್ಟ್ರಗಳಲ್ಲಿ ಉತ್ಪಾದನೆ ಕಡಿಮೆಯಾಗಿ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತದೆ.

12.ಜಾಗತೀಕರಣದಿಂದ ಸರಕುಗಳ ಬೆಲೆಕಡಿಮೆಯಾಗುತ್ತದೆ ಕಾರಣವೇನು?

-ಸ್ಥಳೀಯ ವ್ಯಾಪಾರ ಸಂಸ್ಥೆಗಳ ಮಧ್ಯೆ ಪೈಪೋಟಿ ಉಂಟಾಗುವುದರಿಂದ

13.ಜಾಗತೀಕರಣ ದೇಶಗಳ ನಡುವೆ ಸಾಮಾಜಿಕ ಮತ್ತು ರಾಜಕೀಯ ಸಾಮರಸ್ಯ ಉಂಟಾಗಲು ಕಾರಣವಾಗುತ್ತದೆ.ಸಮರ್ಥಿಸಿ

-ಜಾಗತೀಕರಣದಿಂದ ಪ್ರಪಂಚದ ದೇಶಗಳ ನಡುವೆ ಆರ್ಥಿಕ ಅವಲಂಬನೆ ಉಂಟಾಗಿ ದೇಶಗಳ ನಡುವೆ ಸಾಮಾಜಿಕ ಮತ್ತು ರಾಜಕೀಯ ಸಾಮರಸ್ಯ ಉಂಟಾಗಲು ಕಾರಣವಾಗುತ್ತದೆ

14.ವಿಶ್ವ ವ್ಯಾಪಾರ ಸಂಘಟನೆ ಅಸ್ತಿತ್ವಕ್ಕೆ ಬಂದದ್ದು ಯಾವಾಗ?

-1995 ಜನವರಿ 1.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಜಾಗತೀಕರಣದ ಲಕ್ಷಣಗಳನ್ನು ಪಟ್ಟಿಮಾಡಿ

- ಜಾಗತೀಕರಣವು ಅಂತರರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುತ್ತದೆ,
- ಇದು ಅಂತರರಾಷ್ಟ್ರೀಯ ಬಂಡವಾಳವನ್ನು ವೃದ್ಧಿಸುತ್ತದೆ.
- ವಿಶ್ವ ಹಣಕಾಸು ನೀತಿಯನ್ನು ಅಭಿವೃದ್ಧಿ ಪಡಿಸುತ್ತದೆ.
- ಅಂತರ ರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯಗಳನ್ನು ಹೆಚ್ಚು ಮಾಡುತ್ತದೆ.
- ಇದು ಅಂತರರಾಷ್ಟ್ರೀಯ ಸಂಚಾರ ಮತ್ತು ಪರ್ಯಟನೆಗೆ ಅವಕಾಶಗಳನ್ನು ಒದಗಿಸುತ್ತದೆ.
- ಇದರಿಂದ ಸ್ಥಳೀಯ ಆಹಾರ ಪದಾರ್ಥಗಳು ಬೇರೆ ದೇಶಗಳಿಗೆ ಹಬ್ಬಲು ಸಾಧ್ಯವಾಗುತ್ತದೆ.
- ದೇಶಗಳ ನಡುವೆ ವಲಸೆ ಹೋಗುವುದನ್ನು ಹೆಚ್ಚಿಸುತ್ತದೆ.
- ವಿಶ್ವವ್ಯಾಪಿ ಸಂವಹನ ಸಂದೇಶ, ಅಂತರ್ಜಾಲ ಮತ್ತು ಸಂಪರ್ಕ ಸಾಧನಗಳು ತಮ್ಮ ಮೂಲಭೂತ ಸಾಧನೆಗಳೊಂದಿಗೆ ಗಡಿಗಳನ್ನು ದಾಟಿ ಹೋಗಲು ಸಹಾಯ ಮಾಡುತ್ತದೆ.

2.ಜಾಗತೀಕರಣದಿಂದಾಗುವ ಅನುಕೂಲಗಳು/ಸಕಾರಾತ್ಮಕ ಪರಿಣಾಮಗಳು

- ಜಾಗತೀಕರಣವು ಆರ್ಥಿಕ ಬೆಳವಣಿಗೆಗೆ ಸಹಕಾರಿ
- ಇದು ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಸಹಕಾರಿ
- ಜಾಗತೀಕರಣದಿಂದ ಪ್ರಪಂಚದಾದ್ಯಂತ ಒಂದೇ ರೀತಿಯ ವಸ್ತುಗಳು ದೊರಕಲು ಸಹಕಾರಿ
- ಇದು ದೇಶದ ರಾಷ್ಟ್ರೀಯ ಉತ್ಪನ್ನವನ್ನು ಹೆಚ್ಚಿಸುತ್ತದೆ.
- ಇದು ಒಂದು ದೇಶದ ಜನರ ವರಮಾನವನ್ನು ಹೆಚ್ಚಿಸುತ್ತದೆ.

- ಜಾಗತೀಕರಣದಿಂದ ಸ್ಥಳೀಯ ವ್ಯಾಪಾರದ ಮಧ್ಯೆ ಪೈಪೋಟಿ ಉಂಟಾಗಿ ಸರಕುಗಳ ಬೆಲೆ ಕಡಿಮೆಯಾಗುತ್ತದೆ.

3. ಜಾಗತೀಕರಣದಿಂಗಾಗುವ ಅನಾನುಕೂಲ/ನಕಾರಾತ್ಮಕ/ ದುಷ್ಪರಿಣಾಮಗಳನ್ನು ತಿಳಿಸಿ.

- ಜಾಗತೀಕರಣದಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಗುಲಾಮಿತನ ಮತ್ತು ಬಾಲಕಾರ್ಮಿಕ ಪದ್ಧತಿಗಳು ಉಂಟಾಗುವ ಸಾಧ್ಯತೆ ಇದೆ.
- ಇದು ಭಯೋತ್ಪಾದನೆ ಮತ್ತು ಪಾತಕಿಗಳಿಗೆ ಸಹಾಯ ಮಾಡುತ್ತದೆ.
- ಇದರಿಂದ ನಗರಗಳು ಕಸದ ತೊಟ್ಟಿಗಳಾಗುತ್ತವೆ.
- ಇದು ಅನೇಕ ರೋಗಗಳಿಗೆ ದಾರಿ ಮಾಡಿಕೊಡುತ್ತದೆ.
- ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗುತ್ತದೆ.
- ಇದು ನಿರುದ್ಯೋಗ ಸಮಸ್ಯೆಗೆ ಕಾರಣವಾಗುತ್ತದೆ.

4. ಜಾಗತೀಕರಣದಿಂದ ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ. ಹೇಗೆ? ಅಥವಾ ಜಾಗತೀಕರಣವು ಮಾನವನ ಆಹಾರ ಪದ್ಧತಿ ಮತ್ತು ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.ಹೇಗೆ?

- ಜಾಗತೀಕರಣದಿಂದಾಗಿ ಶೀಘ್ರ ಆಹಾರ ಸರಪಳಿಗಳು ಹೆಚ್ಚಾಗಿ ಹರಡುತ್ತವೆ. ಉದಾ: K.F.C. McDonald ಮುಂತಾದವು .
- ಇದರಿಂದಾಗಿ ಪ್ರಯೋಜನಕಾರಿಯಲ್ಲದ ಆಹಾರ ಸೇವನೆ ಜಾಸ್ತಿಯಾಗುತ್ತದೆ.
- ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ.
- ಇದು ಜನರ ಆರೋಗ್ಯದ ಅವನತಿಗೆ ಕಾರಣವಾಗುತ್ತದೆ.
- ಅಲ್ಲದೆ ಅನೇಕ ರೋಗ ರುಜಿನಗಳಿಗೆ ಎಡೆಮಾಡಿಕೊಡುತ್ತದೆ.

5. ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗುತ್ತದೆ.ಹೇಗೆ?

- ಜಾಗತೀಕರಣದಿಂದ ಪಟ್ಟಣಗಳು ಅಭಿವೃದ್ಧಿ ಹೊಂದಿ ಕಸದ ತೊಟ್ಟಿಗಳಾಗಿ ಮಾರ್ಪಾಡಾಗುವ ಸಾಧ್ಯತೆ
- ಕೈಗಾರಿಕಾ ತ್ಯಾಜ್ಯಗಳು ಶೇಖರಣೆ ಹೊಂದಿ ಮಾಲಿನ್ಯ ಉಂಟಾಗುವುದು.
- ಅನೇಕ ಮಾರಣಾಂತಿಕ ವೈರಾಣುಗಳಿಂದ ಹಬ್ಬುವ ರೋಗಗಳು ವಿಶ್ವದಾದ್ಯಂತ ಹಬ್ಬುತ್ತವೆ.
- ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾಪದಾರ್ಥಗಳನ್ನು ನೈಸರ್ಗಿಕ ಸಂಪನ್ಮೂಲಗಳಿಂದ ಪಡೆಯುವುದರಿಂದ ಭೂಖಂಡದಲ್ಲಿ ಮಾಲಿನ್ಯ ಹೆಚ್ಚಾಗುವುದು.

6. ವಿಶ್ವವ್ಯಾಪಾರ ಸಂಘಟನೆಯ ಉದ್ದೇಶಗಳು ಯಾವುವು?

- ಬಹು ಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ವಿಶ್ವದಾದ್ಯಂತ ಜಾರಿಗೆ ತರುವುದು.
- ಬಹುಪಕ್ಷೀಯ ವ್ಯಾಪಾರ ವ್ಯವಹಾರಗಳ ನಡುವೆ ಮಧ್ಯವರ್ತಿಯಾಗಿ ಕೆಲಸ ಮಾಡುವುದು.
- ವಿಶ್ವದಾದ್ಯಂತ ಮುಕ್ತ ಹಾಗೂ ಸ್ವತಂತ್ರ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಒತ್ತು ನೀಡುವುದು.
- ವಿವಿಧ ದೇಶಗಳ ನಡುವಿನ ವ್ಯಾಪಾರ ಸಂಬಂಧಿ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದು.
- ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆಗಳನ್ನು ಕಡಿಮೆ ಮಾಡುವುದು.
- ಅಂತರರಾಷ್ಟ್ರೀಯ ವ್ಯಾಪಾರವನ್ನು ಕಾನೂನಿನ ಚೌಕಟ್ಟಿಗೆ ಒಳಪಡಿಸುವುದು.

## ಅಧ್ಯಾಯ-4.ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1. ಭಾರತದಲ್ಲಿ ಮೊದಲ ಬಾರಿಗೆ ಗ್ರಾಹಕರ ರಕ್ಷಣೆಗೆ 1965 ರಲ್ಲಿ ಮುಂಬೈನಲ್ಲಿ ಆರಂಭವಾದ ಸಂಸ್ಥೆ -ಅವೇರ್ (AWARE)

2. ಬಳಕೆದಾರ/ಗ್ರಾಹಕ ಎಂದರೆ ಯಾರು?

- ಸೇವೆ ಮತ್ತು ವಸ್ತುಗಳನ್ನು ಬಳಸುವವನು.

3. ಪೂರೈಕೆದಾರನೆಂದರೆ ಯಾರು?

-ಬಳಕೆದಾರರಿಂದ ಹಣ ಪಡೆದು ವಸ್ತು/ಸೇವೆ ನೀಡುವವನು

4. ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯಿದೆ ಜಾರಿಗೆ ಬಂದದ್ದು-1986 ರಲ್ಲಿ

5. ಪ್ರತಿ ವರ್ಷ ವಿಶ್ವ ಗ್ರಾಹಕರ ದಿನವನ್ನು ಆಚರಿಸುವುದು-ಮಾರ್ಚ್ 15

6. ಗ್ರಾಹಕರ ರಕ್ಷಣೆ ಎಂದರೇನು?

-ಗ್ರಾಹಕರನ್ನು ಉತ್ಪಾದಕರು ಮತ್ತು ವ್ಯಾಪಾರಿಗಳ ಶೋಷಣೆಯಿಂದ ರಕ್ಷಿಸಲು ಕೈಗೊಂಡಿರುವ ಕಾರ್ಯವೇ ಗ್ರಾಹಕ ರಕ್ಷಣೆ.

7. ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ವೇದಿಕೆಯ ಅಧ್ಯಕ್ಷರು ಯಾರು?

-ಕೇಂದ್ರ ಸರ್ಕಾರದ ಗ್ರಾಹಕರ ಕಲ್ಯಾಣ ಇಲಾಖೆಯ ಮಂತ್ರಿಗಳು

8. ಮಾರುಕಟ್ಟೆಯ ರಾಜ ಎಂದು ಯಾರನ್ನು ಕರೆಯುತ್ತಾರೆ?

-ಗ್ರಾಹಕ ಅಥವಾ ಬಳಕೆದಾರರನ್ನು ಮಾರುಕಟ್ಟೆಯ ರಾಜ ಎನ್ನುವರು.

9. ಗ್ರಾಹಕರ ಆಂದೋಲನದ ಮೂಲ ಆಶಯ ಯಾವುದು?

- ಗ್ರಾಹಕರನ್ನು ನಿರಂತರ ಶೋಷಣೆಯಿಂದ ರಕ್ಷಣೆ ಮಾಡುವುದು.

10. ಪ್ರತಿಯೊಬ್ಬ ಗ್ರಾಹಕನಿಗಿರುವ ಹಕ್ಕು ಯಾವುದು?

-ಗ್ರಾಹಕರ ಜೀವನ ಮತ್ತು ಆಸಕ್ತಿಗೆ ಅಪಾಯಕಾರಿಯೆನಿಸುವ ಸರಕುಗಳ ವಿಕ್ರಯದ ವಿರುದ್ಧ ರಕ್ಷಿಸಲ್ಪಡುವ ಹಕ್ಕು.

**II.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಗ್ರಾಹಕನು ಮಾರುಕಟ್ಟೆಯ ರಾಜ ಎನಿಸಿಕೊಂಡರೂ, ಎಲ್ಲೆಡೆ ಶೋಷಣೆಗೆ ಒಳಗಾಗುತ್ತಾನೆ.ಈ ಹೇಳಿಕೆಯನ್ನು ಸಮರ್ಥಿಸಿ.

- ಗ್ರಾಹಕನು ಮಾರುಕಟ್ಟೆಯ ರಾಜ ಎನಿಸಿಕೊಂಡರು ಸಹ ಅನೇಕ ಸಂದರ್ಭಗಳಲ್ಲಿ ಮಾರಾಟಗಾರರು ಗ್ರಾಹಕರನ್ನು ನಿರ್ಲಕ್ಷ್ಯ ಮಾಡುತ್ತಾರೆ.
- ಮಾರಾಟಗಾರರಿಂದ ಶೋಷಣೆಗೆ ಒಳಗಾಗುತ್ತಾನೆ
- ಮಾರಾಟಗಾರರಿಂದ ಮೋಸಕ್ಕೆ ಒಳಗಾಗುತ್ತಾನೆ
- ಮಧ್ಯವರ್ತಿಗಳಿಂದ ಶೋಷಣೆಗೆ ಒಳಗಾಗುತ್ತಾನೆ ಮತ್ತು ಬೆಲೆ ನಿರ್ಧರಿಸುವ ಅವಕಾಶವಿರುವುದಿಲ್ಲ.

2.ಮಾರ್ಚ್ 15 ರಂದು ವಿಶ್ವಗ್ರಾಹಕರ ದಿನಾಚರಣೆಯನ್ನು ಏಕೆ ಮಾಡಲಾಗುತ್ತದೆ?

- ಮಾರ್ಚ್ 15,1962 ರಂದು ಅಂದಿನ ಅಮೆರಿಕಾದ ಅಧ್ಯಕ್ಷರಾಗಿದ್ದ ಜಾನ್.ಎಫ್.ಕೆನಡಿಯವರು ಅಲ್ಲಿನ ನಾಗರಿಕರಿಗೆ ಸಂರಕ್ಷಣೆ,ಮಾಹಿತಿ ನಿವೇದನೆ ಮತ್ತು ಪರಿಹಾರ ಎಂಬ ನಾಲ್ಕು ಹಕ್ಕುಗಳನ್ನು ನೀಡುವ ವಿಧೇಯಕವನ್ನು ಅಂಗೀಕರಿಸಿದರು.
- ಈ ಕಾರಣದಿಂದ ಪ್ರತಿ ವರ್ಷವು ಮಾರ್ಚ್ 15 ರಂದು ವಿಶ್ವಗ್ರಾಹಕರ ಹಕ್ಕುಗಳ ದಿನವನ್ನು ಆಚರಿಸಲಾಗುತ್ತದೆ.

3.ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳೇನು?

- ಪದಾರ್ಥಗಳಿಗೆ ಅಧಿಕ ಬೆಲೆ ವಿಧಿಸುವುದು.
- ತೂಕ ಮತ್ತು ಅಳತೆಯಲ್ಲಿ ಮೋಸ
- ಕಲಬೆರಕೆ ವಸ್ತುಗಳ ಮಾರಾಟ
- ಅಕ್ರಮ ದಾಸ್ತಾನು ಮಾಡಿ ಕೃತಕ ಅಭಾವ ಪರಿಸ್ಥಿತಿಯನ್ನು ಉಂಟುಮಾಡಿ ಅಧಿಕ ಲಾಭಗಳಿಸುವುದು.

4.ಬಳಕೆದಾರರ ಶೋಷಣೆಗೆ ಕಾರಣಗಳೇನು?

- ಗ್ರಾಹಕ ಮತ್ತು ಪೂರೈಕೆದಾರರ ನಡುವಿನ ಅಂತರ ಹೆಚ್ಚಾಗಿರುವುದು.
- ಉತ್ಪಾದಕರು ಹಾಗೂ ಗ್ರಾಹಕರು ಕೂಡಿ ನಿರ್ಧರಿಸಬೇಕಾದ ಬೆಲೆಯನ್ನು ಮಧ್ಯವರ್ತಿಗಳೇ ನಿರ್ಧರಿಸುತ್ತಿರುವುದು.

5.ಗ್ರಾಹಕ ಸಂರಕ್ಷಣಾ ಕಾಯ್ದೆಯ ಉದ್ದೇಶಗಳನ್ನು ತಿಳಿಸಿ.

- ಗ್ರಾಹಕರ ಸಂರಕ್ಷಣಾ ಕಾಯ್ದೆಯು ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಮೊದಲ ಪ್ರಾಶಸ್ತ್ಯ ನೀಡುವುದು.
- ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟವನ್ನು ತಪ್ಪಿಸುವುದು.
- ಮಾರುಕಟ್ಟೆಯಲ್ಲಿ ನಡೆಯಬಹುದಾದ ಅನುಚಿತ ವ್ಯವಹಾರ ಪದ್ಧತಿಗಳನ್ನು ತಡೆಗಟ್ಟುವುದು.
- ಗುಣಮಟ್ಟ,ಅಳತೆ,ತೂಕ,ಬೆಲೆ ಇತ್ಯಾದಿಗಳ ಮೇಲೆ ನಿಗಾವಹಿಸುವುದು.
- ಬಳಕೆದಾರರು ತಾವು ಖರೀದಿಸುವ ವಸ್ತು ಅಥವಾ ಸೇವೆಗಳಿಂದ ತೊಂದರೆಗೆ ಒಳಗಾದಲ್ಲಿ ಅವರಿಗೆ ಸೂಕ್ತ ಪರಿಹಾರ ಕೊಡಿಸುವುದು.
- ಗ್ರಾಹಕರ ಶಿಕ್ಷಣ ನೀಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು.

5.ಗ್ರಾಹಕರ ಹಕ್ಕುಗಳನ್ನು ಪಟ್ಟಿಮಾಡಿ.

- ಗ್ರಾಹಕರ ಜೀವನ ಮತ್ತು ಆಸಕ್ತಿಗೆ ಅಪಾಯಕಾರಿಯೆನಿಸುವ ಸರಕುಗಳ ವಿಕ್ರಯದ ವಿರುದ್ಧ ರಕ್ಷಿಸಲ್ಪಡುವ ಹಕ್ಕು.
- ಮಾಹಿತಿಯನ್ನು ಪಡೆಯುವ ಹಕ್ಕು
- ವಸ್ತುಗಳ ಆಯ್ಕೆಯ ಹಕ್ಕು
- ವಸ್ತುಗಳ ಬಗ್ಗೆ ಆಲಿಸುವ ಹಕ್ಕು
- ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು
- ಗ್ರಾಹಕ ಶಿಕ್ಷಣದ ಹಕ್ಕು
- ವಂಚನೆ ಅಥವಾ ಮೋಸದ ವಿರುದ್ಧದ ಹಕ್ಕು
- ಗ್ರಾಹಕರಿಗೆ ಉತ್ತಮ ಆರೋಗ್ಯಕರ ಮತ್ತು ಭೌತಿಕ ಪರಿಸರಗಳನ್ನು ಉಂಟುಮಾಡಿ ಅವರ ಜೀವನರೀತಿಗಳನ್ನು ಉತ್ತಮ ಪಡಿಸಿಕೊಳ್ಳುವ ಹಕ್ಕು

6.ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳು ಯಾವುವು?

- ದೂರುಗಳು ಕೈಬರಹದ ಅಥವಾ ಬೆರಳಚ್ಚಿನ ಮಾದರಿಯಲ್ಲಿರಬೇಕು.
- ಈ ಮಾಹಿತಿಯಲ್ಲಿ ದೂರು ಕೊಡುವವನ ಹೆಸರು, ವಿಳಾಸ ಮತ್ತು ದೂರವಾಣಿಯ ಸಂಖ್ಯೆ ಸರಿಯಾಗಿ ನಮೂದಿಸಿರಬೇಕು.
- ಯಾವ ವ್ಯಾಪಾರಿ ಅಥವಾ ಪೂರೈಕೆದಾರನ ವಿರುದ್ಧ ದೂರು ಕೊಡಬೇಕೆಂಬುದನ್ನು ಪೂರ್ಣವಾಗಿ ನಮೂದಿಸಿರಬೇಕು.
- ಯಾವ ವಸ್ತುವಿನಿಂದ ನಷ್ಟವಾಗಿದೆ ಅಥವಾ ಮೋಸವಾಗಿದೆ ಎಂಬುದು ಮತ್ತು ನಷ್ಟ ಹೊಂದಿರುವ ಮೊಬಲಗೆಷ್ಟೆಂಬುದನ್ನು ಸರಿಯಾಗಿ ನಮೂದಿಸಿರಬೇಕು.
- ನಷ್ಟದ ಸೂಕ್ತ ಪರಿಹಾರದ ಮೊಬಲಗು ಹಾಗೂ ಇದಕ್ಕೆ ಸಂಬಂಧಪಟ್ಟ ರಸೀತಿ ಅಥವಾ ಬಿಲ್ಲನ್ನು ಲಗತ್ತಿಸಬೇಕು.
- ದೂರಿಗೆ ಯಾವುದೇ ಶುಲ್ಕ ಅಥವಾ ನೋಂದಣಿ ಶುಲ್ಕ ಇರುವುದಿಲ್ಲ
- ಗ್ರಾಹಕನೇ ನೇರವಾಗಿ ತನ್ನ ದೂರನ್ನು ಅಧ್ಯಕ್ಷರ ಮುಂದೆ ವಾದಿಸಬಹುದು ವಕೀಲರು ಬೇಕಾಗಿಲ್ಲ.

*****